ಆದುದರಿಂದ ನಮ್ಮೆಲ್ಲರಿಗೂ ನಾಶವುಂಟಾಗುವುದರೊಳಗೆ ಅರಮನೆಯನ್ನು ಬಿಟ್ಟು ಕಾಡಿಗೆ ಹೋಗೋಣ.

ಬಳಿಕ ಮದೋನ್ಮತ್ತಗಳಾದ ಕಪಿಗಳು ಅದರ ಮಾತನ್ನು ಕೇಳಿ ನಂಬದೆ ನಕ್ಕು ಇಂತೆಂದುವು :—ಎಲೈ! ನಿನಗೆವಯಸ್ಸಾದುದರಿಂದ ಬುದ್ಧಿ ವೈಕಲ್ಯವುಂಟಾಗಿರುವುದು. ಅದರಿಂದಲೆ ಇಂತುನುಡಿವೆ. ಇದು ಯುಕ್ತ :—

[illegible] |
[illegible] ||
[illegible] |
[illegible] ॥ ೭೦ ॥

[illegible]

[illegible] |
[illegible] ||
[illegible] |
[illegible] ॥ ೭೨ ॥

[illegible]

ಹೊರಳಾಡಿತು. ನಾಲ್ಕುಕಡೆಯಲ್ಲಿಯೂ ಹೊತ್ತಿಕೊಂಡು ಉರಿಯುಜ್ವಾಲೆಗಳು ವ್ಯಾಪಿಸಿದುವು. ಅದರಿಂದ ಕೆಲವು ಕುದುರೆಗಳು ಕಣ್ಣುಗುಡ್ಡೆಯೊಡೆದು ಸತ್ತುವು. ಕೆಲವು ಕುದುರೆಗಳು ಕಟ್ಟುಗಳನ್ನು ಕಿತ್ತುಕೊಂಡು ಅರ್ಧಶರೀರ ಬೆಂದು ಅತ್ತಿತ್ತ ಕೂಗುತ್ತ ಓಡುತ್ತ ಜನಗಳೆಲ್ಲರೂ ವ್ಯಾಕುಲರಾಗುವಂತೆ ಮಾಡಿದುವು. ಇಷ್ಟರಲ್ಲಿ ರಾಯನು ವ್ಯಸನಗೊಂಡು ಅಶ್ವಶಾಸ್ತ್ರವಂ ಬಲ್ಲ ವೈದ್ಯರನ್ನು ಕರೆಯಿಸಿ, ಎಲೈ ವಿದ್ವಾಂಸರಿರಾ! ಈ ಕುದುರೆಗಳಿಗುಂಟಾಗಿರುವ ಉರಿಯ ತಾಪವು ಉಪಶಾಂತವಾಗಲು ಯಾವುದಾದರೂ ಒಂದುಪಾಯವನ್ನು ಹೇಳಿ—ಎನಲು, ಅವರು ಶಾಸ್ತ್ರಗಳನ್ನು ವಿಮರ್ಶಿಸಿ ಇಂತೆಂದರು :—ಸ್ವಾಮಿಯೆ! ಈವಿಷಯದಲ್ಲಿ ಪೂಜ್ಯನಾದ ಶಾಲಿಹೋತ್ರನು ಇಂತು ಹೇಳಿರುವನು :—

ಕುದುರೆಗೆ ವಹ್ನಿಯ ದಾಹದಿ |
ನೊದವಿದ ದೋಷಂ ವಿನಾಶಮಾಂಪುದು ಕಪಿಯಾ ||
ಹೃದಯದ ಬಸೆಯಿಂ ಭಾಸ್ಕರ |
ನುದಯದೆ ಕತ್ತಲೆ ವಿನಾಶಮೊಂದುವತೆಱದಿಂ ॥ ೭೧ ॥

ಆದುದರಿಂದ ಕುದುರೆಗಳು ಉರಿಯನ್ನು ತಾಳಲಾರದೆ ಸತ್ತುಹೋಗುವುದರೊಳಗೆ ಈ ಚಿಕಿತ್ಸೆಯನ್ನು ಬೇಗ ಮಾಡಿಸು.

ಆ ರಾಯನು ಆ ಮಾತನ್ನು ಕೇಳಿ ಕಪಿಕುಲವನೆಲ್ಲವನ್ನೂ ಧ್ವಂಸಮಾಡುವಂತೆ ಆಜ್ಞೆಮಾಡಿದನು ಹೆಚ್ಚುಮಾತಿನಿಂದೇನು? ಆ ಕಪಿಗಳೆಲ್ಲವೂ ಒತನೆಯೆ ಬಗೆಬಗೆಯ ಆಯುಧಗಳಿಂದಲೂ ದೊಣ್ಣೆಗಳಿಂದಲೂ ಕಲ್ಲುಮುಂತಾದುವುಗಳಿಂದಲೂ ಕೊಲ್ಲಲ್ಪಟ್ಟುವು.

ಆ ಕಪಿಯೂಥಾಧಿಪತಿಯೂ ಮಕ್ಕಳು ಮೊಮ್ಮಕ್ಕಳು ಮುಂತಾದ ಬಂಧುವರ್ಗದ ವಿನಾಶವನ್ನು ತಿಳಿದು ಬಹುವಾಗಿ ವಿಷಾದಗೊಂಡು ಆಹಾರವನ್ನು ಬಿಟ್ಟು ಕಾಡಿಂದ ಕಾಡಿಗೆ ಅಲೆಯುತಿದ್ದಿತು. ಮತ್ತು ಇಂತು ಚಿಂತಿಸಿತು :—ಎಂತು ನಾನು ಈ ರಾಜಾಧಮನಿಗೆ ಕೇಡನುಂಟುಮಾಡಿ ಆನೃಣ್ಯವನ್ನು ಪಡೆವೆನು? ತನ್ನ ಕುಲಕ್ಕೆ ತಿರಸ್ಕಾರವುಂಟಾಗಿರಲು ಪ್ರತೀಕಾರವಮಾಡದೆ ಸಹಿಸುವನು ಪುರುಷಾಧಮನೇ ಸರಿ. ಇಂತುಹೇಳಿಯೂ ಇದೆ :—

ಪೆಱನಸ್ತ್ರಣಿಸೊದವಿದ ಕುಲ |
ಸಂಭವವಂ ಕಂಡು ಭಯದಿನೋ ಕಾಮದಿನೋ ||
ನರನಾವಂ ಸೈಸಿದಪಂ |
ಧುರುನಾಥಮನೆಂದು ತಿಳಿವುದವನಂ ಜಗದೊಳ್ || ೭೩ ||

ಎಂದು ಚಿಂತಿಸಿ ಆ ಮುದಿಕೋತಿ ಬಾಯಾರಿಕೆಯಿಂದ ಬಳಲಿ ಅಲೆಯುತ್ತ ಒಂದು ಪದ್ಮಸರೋವರವನ್ನು ಸೇರಿ ಸೂಕ್ಷ್ಮದೃಷ್ಟಿಯಿಂದ ನೋಡುವಷ್ಟರೊಳಗೆ ಅಲ್ಲಿ ವನಚರಗಳ ಮತ್ತು ಮನುಷ್ಯರ ಹಜ್ಜೆಗುರುತುಗಳು ಒಳಗೆ ಪ್ರವೇಶಿಸಿದ್ದಂತೆ ಕಂಡುದಲ್ಲದೆ ಹಿಂದಿರುಗಿದಂತೆ ಕಾಣಲಿಲ್ಲ. ಬಳಿಕ ನಿಶ್ಚಯವಾಗಿ ಇಲ್ಲಿ ನೀರೊಳಗೆ ದುಷ್ಟಗ್ರಾಹವಿರಬೇಕು ; ಆದುದರಿಂದ ಪದ್ಮದ ನಾಳವನ್ನು ತೆಗೆದುಕೊಂಡು ದೂರದಿಂದಲೆ ನೀರನ್ನು ಕುಡಿವೆನು—ಎಂದು ಆಲೋಚಿಸಿತು.

ಆ ಸರೋವರದ ಮಧ್ಯದಿಂದ ಒಬ್ಬ ರಾಕ್ಷಸನು ರತ್ನಮಾಲಾಲಂಕೃತನಾಗಿ ಬಂದು ಆ ಕಪಿಯನ್ನು ಕುರಿತು—ಎಲೆ ಕಪಿಯೆ! ಇಲ್ಲಿ ಯಾವ [illegible] ನೀರೊಳಗೆ ಪ್ರವೇಶಿಸುತ್ತಾನೋ ಅವನನ್ನು ನಾನು ತಿನ್ನುವೆನು. [illegible] ನೀರನ್ನು [illegible] ಇರುವೆನು. [illegible] ಅದಕ್ಕೆ [illegible] ಬೆಸಗೊಳಲು, [illegible] ಹೊರಗೆ [illegible]

[illegible]

[illegible] ಈ ರತ್ನಹಾರ [illegible]

[illegible] ಕಪಿಯು— [illegible]

ಕಪಿಯೂ ರತ್ನಹಾರವನ್ನು ಕೊರಲಲ್ಲಿ ಧರಿಸಿಕೊಂಡು ರಂಜಿಸುತ್ತ ಮರಗಳ ಮೇಲೆಯೂ ಪ್ರಾಸಾದಗಳ ಮೇಲೆಯೂ ಹಾರಾಡುತ್ತ ಜನಗಳ ದೃಷ್ಟಿಗೆ ಗೋಚರವಾಯಿತು. ಜನಗಳು ಅದನ್ನು ಕುರಿತು—ಎಲೆ ಕಪಿ ಯೂಥಾಧಿಪತಿಯೆ ! ನೀನು ಇದುವರೆಗೂ ಎಲ್ಲಿ ಇದ್ದೆ ? ನೀನು ಇಂತಹ ರತ್ನಹಾರವನ್ನು ಎಲ್ಲಿ ಪಡೆದೆ ? ಇದು ಪ್ರಕಾಶದಿಂದ ಸೂರ್ಯನನ್ನೂ ಧಿಕ್ಕರಿಸುತಿರುವುದು—ಎನಲು, ಕಪಿ—ಅದೊಂದು ಕಾಡಿನಲ್ಲಿ ಗುಪ್ತವಾದ ಒಂದು ಮಹಾಸರೋವರವಿರುವುದು, ಅದು ಕುಬೇರನಿಂದ ನಿರ್ಮಿತವಾದುದು. ಭಾನುವಾರದಂದು ಸೂರ್ಯನು ಅರ್ಧೋದಿತನಾಗಿರುವಾಗ ಯಾವನು ಆ ಸರೋವರದೊಳಗೆ ಮುಳುಗುವನೋ ಅವನು ಕುಬೇರನ ಅನುಗ್ರಹದಿಂದ ಕೊರಲಲ್ಲಿ ಇಂತಹ ರತ್ನಹಾರವನ್ನು ತಳೆದು ಕಂಗೊಳಿಸುತ್ತ ಹೊರಗೆ ಬರುವನು—ಎಂದಿತು

ರಾಜನು ಈ ವೃತ್ತಾಂತವನ್ನು ಕೇಳಿ ಕಪಿಯನ್ನು ಕರೆಯಿಸಿ—ಎಲೆ ಯೂಥಾಧಿಪ ! ಏನು ಈ ವೃತ್ತಾಂತವು ದಿಟವೇ ? ರತ್ನಹಾರಗಳನ್ನು ಒಳಕೊಂಡ ಸರೋವರವೆಲ್ಲಿಯಾದರೂ ಉಂಟೇ ?—ಎಂದು ಬೆಸಗೊಳಲು, ಆ ಕಪಿ—ಎಲೆ ಮಹಾರಾಜನೆ ! ಇದೊ ಪ್ರತ್ಯಕ್ಷವಾಗಿ ನನ್ನ ಕೊರಲಲ್ಲಿ ಕಾಣುವ ರತ್ನಹಾರದಿಂದ ನೀನು ನಂಬಬಹುದು. ನಿನಗೆ ರತ್ನಹಾರದಿಂದ ಪ್ರಯೋಜನವಿದ್ದರೆ ನನ್ನೊಡನೆ ಯಾವನನ್ನಾದರೂ ಕಳುಹು, ತೋರಿಸುವೆನು—ಎಂದಿತು. ರಾಜನು ಅದನ್ನು ಕೇಳಿ—ಇಂತಿರುವುದಾದರೆ ನಿಜಪರಿಜನಸಹಿತನಾಗಿ ನಾನೇ ಬರುವೆನು. ಏಕೆಂದರೆ ಅನೇಕವಾದ ರತ್ನಹಾರಗಳು ದೊರೆವುವು—ಎಂದನು. ಕಪಿ--ಇಂತು ಮಾಡಬಹುದು—ಎಂದಿತು. ಬಳಿಕ ರತ್ನಹಾರದ ಆಸೆಯಿಂದ ರಾಜನೊಡನೆ ಅವನ ಎಲ್ಲಾ ರಾಣಿಯರೂ ಎಲ್ಲಾ ಸೇವಕರೂ ಹೊರಟರು. ರಾಜನು ಆಂದೋಳಿಕಾರೂಢನಾಗಿ ಆ ಕಪಿಯನ್ನು ತನ್ನ ತೊಡೆಯಮೇಲೆ ಪ್ರೀತಿಯಿಂದ ಕುಳ್ಳಿರಿಸಿಕೊಂಡು ಸುಖದಿಂದ ಕರೆದುತಂದನು. ಅಹಹ! ಆಸೆಯೆಂಬುದು ಮಹಾಪ್ರಭಾವವುಳ್ಳದು. ಇಂತು ಹೇಳಿಯೂ ಇದೆ:—

ಎತ್ತಾನಿತ್ವರೆನಿಪರುಮಂ |
ಚಿತ್ತಂಗೊಳಿಸುತ್ತ ಕಾರ್ಯಜಾಲದೊಳೆತ್ತಂ ||

ಮತ್ತಂ ದುರ್ಗವನೇಱಿಸಿ |
ಸುತ್ತಿಸುತುಂ ಮೆರೆವ ಕೃಷ್ಣ ದೇವಿ ನವಿುಪ್ಪಂ || || ೭೪ ||

ಅಂತಲ್ಲದೆ—

ಸಾಸಿರಮುಂ ನೂಱ್ಗಳ್ಗಂ |
ಸಾಸಿರವುಳ್ಗಂ ನಮಂತು ಲಕ್ಷಮನದಱಿಂ ||
ಭಾಸಿಸುವಾತಂ ರಾಜ್ಯಮ |
ನಾಸಿಸುವಂ ರಾಜನಂತು ಸಗ್ಗದ ಸಿರಿಯುಂ || ೭೫ ||

[illegible] |
[illegible] ||
[illegible]
[illegible] || ೭೬ ||

[illegible]

ಗೆಯೆ ಪಡಿಗೆಯವೇೞ್ಕುಂ ಹಿಂ |
ಸೆಯನಿತ್ತೊಡೆ ಮಗುೞ್ದು ಹಿಂಸೆಯಿಾಯಲ್ವೇೞ್ಕುಂ ||
ನಯವಿದು ದೋಷಮನಱಿಯೆಂ |
ಗೆಯವೇೞ್ಕುಂ ದುಷ್ಟನಲ್ಲಿ ದೌಷ್ಟ್ಯಮನೆಂದುಂ || ೭೭ ||

ನೀನು ನನ್ನ ವಂಶವನ್ನು ಹಾಳುಮಾಡಿದೆ. ನಾನು ನಿನ್ನ ವಂಶವನ್ನು ಹಾಳುಮಾಡಿದೆನು—ಎಂದಿತು.

ಬಳಿಕ ರಾಜನು ಈ ಮಾತನ್ನು ಕೇಳಿ ಕ್ರೋಧಾಗ್ನಿಯಿಂದ ಪ್ರಜ್ವಲಿಸುತ್ತ ಏನನ್ನೂ ಮಾಡಲಾರದೆ ಬಂದ ದಾರಿಯನ್ನು ಹಿಡಿದು ಬಬ್ಬನೇ ಕಾಲ್ನಡೆಯಿಂದ ಹೊರಟುಹೋದನು.

ಬಳಿಕ ರಾಜನು ಹೊರಟು ಹೋಗುವುದೂ ರಾಕ್ಷಸನು ತೃಪ್ತನಾಗಿ ನೀರಿನಿಂದ ಹೊರಗೆ ಬಂದು ಆನಂದಭರಿತನಾಗಿ ಇಂತೆಂದನು :—

ಪದುಮದ ಸೊಳದೆ ನೀರಿಂ |
ಟಿದ ನೀಂ ಸದೆಬಡಿದೆ ಪಗೆಯನೆಸಗಿದೆ ಕೆಳೆಯಂ ||
ಚದುರಿಂದೆ ರತ್ನಮಾಲೆಯ |
ನಿದನೆಂತುಂ ನೀಗದಿರ್ಪೆ ಭಳಿರೆ ಕಪೀಂದ್ರಾ || || ೭೮ ||

ಇದರಿಂದ ನಾನು ಹೇಳುವೆನು :—

ಆವಂ ಮುಂದಣ ಫಲಮಂ |
ಭಾವಿಸದೆಯೆ ಲೋಭದಿಂದೆ ಕಜ್ಜಮನೆಸಪಂ ||
ಏವೇೞ್ದಪೆನಾತಂ ನಗೆ |
ಗಾವಗಮೆಡೆಯೆನಿಪನಲ್ತೆ ಚಂದ್ರನೃಪಂಬೊಲ್ || ಎಂದು.

ಇಂತೆಂದು ಅವನು ಮತ್ತೆ ಚಕ್ರಧರನನ್ನು ಕುರಿತು-ಎಲೆ ಮಿತ್ರನೆ! ನನ್ನ ಸ್ಥಲಕ್ಕೆ ನಾನು ಹೋಗುವೆನು ; ನನ್ನನ್ನು ಕಳುಹಿಸಿ ಕುಡು—ಎನಲು, ಚಕ್ರಧರನು ಇಂತೆಂದನು :—ಪ್ರಿಯನೆ! ಆಪತ್ಕಾಲದಲ್ಲಿ ನೆರವಾಗಲೆಂದು ಧನವನ್ನೂ ಮಿತ್ರರನ್ನೂ ಸಂಗ್ರಹಿಸಿರುವರು. ಇಂತಹ ದುರವಸ್ಥೆಯಲ್ಲಿ ರುವ ನನ್ನನ್ನು ಬಿಟ್ಟು ನೀನು ಎಲ್ಲಿಹೋಗುವೆ? ಇಂತು ಹೇಳಿಯೂ ಇದೆ. ಕೇಳು :—

ಕಟ್ಟಿದ[illegible]ಡಸಿದ ಸಖನಂ |
ಬಿಟ್ಟಾವಂ ಕಠಿನಹೃದಯ.ನಿವನೆನಿಸುವನಾ ||
ಕೆಟ್ಟ[illegible] ವಾಸದೆ |
ಕೊಟ್ಟನೆ ಕಷ್ಟದೆ ದಲೆಯ್ವುವಂ ನಾರಕಮಂ || || ೭೯ ||

ಸುವರ್ಣಸಿದ್ಧಿಯಿಂತೆಂದನು :—ಅಯ್ಯಾ ! ನೀನು ಹೇಳಿದುದು ಸತ್ಯ ; ಸಾಧ್ಯವಾದ ಸ್ಥಳದಲ್ಲಿ ಶಕ್ತಿಯಿದ್ದರೆ [illegible]ದು ; ಈ ಸ್ಥಳ ವು ಮನುಷ್ಯರಿಗೆ ಅಸಾಧ್ಯವಾದುದು ; ನಿನ್ನನ್ನು ಈ ಕಷ್ಟದಿಂದ ಉದ್ಧರಿಸ ಲು ಯಾವನಿಗೂ ಶಕ್ತಿಯಿಲ್ಲ ; ಅಲ್ಲದೆ ಈ ಚಕ್ರಭ್ರಮಣದ ಯಾತನೆ ಯಿಂದ ನಿನ್ನ ಮುಖದಲ್ಲಿ [illegible] ಹೆಚ್ಚುವುದೋ ಅಂತು “ [illegible] ; ಇಲ್ಲದಿದ್ದರೆ ನನಗೂ ಏನಾದ ರೂ ಅನರ್ಥ[illegible]” ಎಂಬ ಭಯವು ನನಗೆ ಹೆಚ್ಚುತಿರುವುದು ; ಆದುದರಿಂದ ನನಗೆ ಅನುಜ್ಞೆ[illegible] ; ನನ್ನ ಸ್ಥಳಕ್ಕೆ ಹೋಗುವೆನು. ನೀನು ಇಲ್ಲಿಯೇ ಇದ್ದು [illegible] ಅನುಭವಿಸು.

ಚಕ್ರಧರನಿಂತೆಂದನು :—ಅಯ್ಯಾ ! [illegible] ನುಡಿ ದೆ. [illegible] ಉಂಟಾಗುವು ವು. ಕೇಳು :—

[illegible] |
[illegible] ||
[illegible] |
[illegible] || || ೮೦ ||

ಅಲ್ಲದೆ,—

[illegible] |
[illegible] |
[illegible] |
[illegible] || || ೮೧ ||

“ [illegible] ಬೆಸಗೊ ಳ್ಳದು ” ಎಂದು [illegible]
[illegible] ?

ಸುವರ್ಣಸಿದ್ಧಿ :—ಮಿತ್ರನೆ ! ವಿಚಾರವಮಾಡುವುದರಿಂದಲೂ ವಿಷಯಗ ಳನ್ನು ಬೆಸಗೊಳ್ಳುವುದರಿಂದಲೂ ಕೊರತೆಯಿಲ್ಲ. ವಿಚಾರವಮಾಡುವುದರಿಂದ ಬುದ್ಧಿಗೂ ಪ್ರಸನ್ನತೆಯುಂಟು. ಕೇಳು :—

ಅವಿರತವಾರ್ ಬೆಸಗೊಳ್ವರೊ |
ಕಿವಿಯೊಳ್ ಕೇಳ್ದಪರೊ ಮನದೊಳವಧರಿಪರೊ ಅಂ |
ತವರ ಮತಿ ವಿಕಾಸಮನೊಂ |
ದುವುದು ದಿವಾಕರನ ಕದಿರ್ಗಳಿಂ ತಾವರೆವೊಲ್ || || ೮೨ ||

ಅಲ್ಲದೆ,—

[illegible]ವೃಳ್ಳಂ ಪೂರುಷನೋ |
ಸರಿಸದೆ ಬೆಸಗೊಳಲೆವೇಳ್ಕುಮೆಂದ.ಂ ಧರಣೀ ||
ಸುರನೊರ್ವ್ವಂ ಮುನ್ನಸುರೇ |
ಶ್ವರನಿಂ ಪಿಡಿದಿರ್ದೊಡಂ ಒ[illegible]ವಾಂಕಂ || || ೮೩ ||

ಚಕ್ರಧರನು ಇದೆಂತೆನಲು, ಅವನಿಂತೆಂದನು :—

ಕಥೆ ೧೦

ಅದೊಂದು ಅಡವಿಯ ಪ್ರಾಂತದಲ್ಲಿ ಚಂಡಕರ್ಮನೆಂಬ ಒಬ್ಬ ರಾಕ್ಷ ಸೇಂದ್ರನು ವಾಸಿಸುತಿದ್ದನು. ಒಂದು ದಿವಸ ಅವನು ಅಡವಿಯಲ್ಲಿ ಸುತ್ತು ತಿರುವಾಗ ಒಬ್ಬ ಬ್ರಾಹ್ಮಣನು ಸಿಕ್ಕಿದನು. ಆತನ ಹೆಗಲನೇರಿ ರಾಕ್ಷಸನು- ಎಲೆ ಬ್ರಾಹ್ಮಣ ! ಮುಂದೆ ಹೊರಡು—ಎನಲು, ಬ್ರಾಹ್ಮಣನು ಭಯಗೊಂಡು ರಾಕ್ಷಸನನ್ನು ಹೊತ್ತುಕೊಂಡು ಹೊರಟನು. ಎಲೈ ! ಇದೇನು ನಿನ್ನ ಪಾದಗಳು ಇಂತು ಅತ್ಯಂತಕೋಮಲಗಳಾಗಿರುವುವು ?—ಎಂದು ಬೆಸಗೊ ಳಲು, ರಾಕ್ಷಸನು—ಎಲೆ ಬ್ರಾಹ್ಮಣ ! ನನಗೆ ವ್ರತವುಂಟು ನಾನು ಆರ್ದ್ರ ಪಾದನಾಗಿದ್ದಾಗ ಭೂಮಿಯನ್ನು ತುಳಿಯುವುದಿಲ್ಲ—ಎಂದನು. ಬ್ರಾಹ್ಮಣನು ಆ ಮಾತನ್ನು ಕೇಳಿ ತಾನು ಬಿಡುಗಡೆ ಹೊಂದಲು ಉಪಾಯವನ್ನು ಚಿಂ ತಿಸುತ್ತ ಸರೋವರದ ಬಳಿಗೆ ಬಂದನು. ಬಳಿಕ ರಾಕ್ಷಸನು—ಎಲೈ ! ನಾನು ಸ್ನಾನವನ್ನು ಮಾಡಿ ದೇವತಾರ್ಚನೆಯನ್ನು ಮಾಡಿಕೊಂಡು ಬರುವ ವರೆಗೆ ನೀನು ಈ ಸ್ಥಳವನ್ನು ಬಿಟ್ಟು ಇನ್ನೆಲ್ಲಿಗೂ ಹೋಗಕೂಡದು— ಎಂದು ಹೇಳಿ ತನ್ನ ಕೆಲಸಕ್ಕೆ ಹೋಗಲು, ಬ್ರಾಹ್ಮಣನು—ಈ ರಾಕ್ಷಸನು

ದೇವರ ಪೂಜೆಯನ್ನು ಮಾಡಿಕೊಂಡು ಬಂದಮೇಲೆ ಬಿಡದೆ ನನ್ನನ್ನು ಭಕ್ಷಿಸುವನು ; ಆದುದರಿಂದ ಥಟ್ಟನೆ ಹೊರಟುಹೋಗುವೆನು. ಇವನು ಅದ್ರೂಪಾದನಾಗಿ ನನ್ನ ಬೆನ್ನಂಟಿ ಬರುವುದಿಲ್ಲ.—ಎಂದು ಚಿಂತಿಸಿ ಅದೇ ರೀತಿ ಮಾಡಲು, ರಾಕ್ಷಸನು ವ್ರತಭಂಗಭಯದಿಂದ ಅವನನ್ನು ಅಟ್ಟಿಕೊಂಡು ಹೋಗಲಿಲ್ಲ ; ಆದುದರಿಂದ ಹೇಳಿದೆನು:—

ಅಪೃಚ್ಛಂ ಪೂರುಷನೋ |
[illegible] ॥ ಎಂದು.

ಈಗ ಏನುಮಾಡಲಾಗುವುದು ? ನೀನು ನನ್ನ ಮಾತನ್ನು ಮೀರಿದುದರಿಂದ ಈ ದುರವಸ್ಥೆಗೆ ಗುರಿಯಾದೆ. ನಿನ್ನ ದುರವಸ್ಥೆಯನ್ನು ನೋಡಿ ನಾನೂ ಸಂಕಟಪಡುವಂತಾಯಿತು. ಹಿತವನ್ನು ಕೇಳದವರು [illegible]ಗಾಗುವರು. [illegible]:—

[illegible] |
[illegible] ॥
[illegible] |
[illegible] ॥ ॥ ೭೪ ॥

ಚಕ್ರಧರನು ಇಂತೆಂದನು [illegible]:—

[illegible]

[illegible]

ಸ್ವಲ್ಪ ಜಿಹ್ವಾಸೌಖ್ಯವನ್ನು ಅನುಭವಿಸುವೆನು—ಎಂದಿತು. ಮೊದಲನೆಯ ಮುಖವು ಆ ಮಾತನ್ನು ಕೇಳಿ ನಕ್ಕು—ನಮಗಿಬ್ಬರಿಗೂ ಹೊಟ್ಟೆಯೊಂದೇ ; ತೃಪ್ತಿಯೆಂಬುದೂ ಒಂದೇ. ಆದಕಾರಣ ಬೇರೆ ತಿನ್ನುವುದರಿಂದೇನು ? ಉಳಿದುದನ್ನು ಪ್ರಿಯೆಗೆ ಕೊಟ್ಟು ಅವಳನ್ನು ಸಂತೋಷಪಡಿಸುವೆನು—ಎಂದು ನುಡಿದು ಉಳಿದಫಲವನ್ನು ಪ್ರೇಯಸಿಗೆ ಕೊಟ್ಟಿತು. ಅದು ಆ ಫಲವನ್ನು ಸವಿದು ಸಂತೋಷಗೊಂಡು ಬಹುವಾದ ಸರಸವಿನೋದಗಳಿಂದ ನಲ್ಮೆ ತೋರಿತು. ಎರಡನೆಯ ಮುಖವು ಅಂದುಮೊದಲ್ಗೊಂಡು ದುಗುಡದಿಂದ ವ್ಯಾಕುಲವಾಗಿದ್ದಿತು. ಮತ್ತೊಂದುದಿವಸ ಎರಡನೆಯ ಮುಖಕ್ಕೆ ಒಂದು ವಿಷಫಲವು ಸಿಕ್ಕಿತು. ಅದು ಅದನ್ನು ತೆಗೆದುಕೊಂಡು ಮೊದಲನೆಯ ಮುಖವನ್ನು ಕುರಿತು-ಎಲೆಕ್ರೂರ ! ಅಧಮ ! ಇದೊ ನೋಡು ; ನನಗೆ ವಿಷಫಲವು ದೊರೆತಿರುವುದು, ನೀನು ಮಾಡಿದ ಅಪಮಾನದಿಂದ ಈಗ ಇದನ್ನು ನಾನು ತಿನ್ನುವೆನು—ಎನಲು, ಮೊದಲನೆಯ ಮುಖವು ಎಲೆ ಮೂರ್ಖ! ಇಂತು ಅಕಾರ್ಯವನ್ನು ಮಾಡಬೇಡ. ಇಂತು ನೀನು ಮಾಡುವುದರಿಂದ ಇಬ್ಬರಿಗೂ ವಿನಾಶವುಂಟಾಗುವುದು—ಎಂದಿತು. ಆದರೂ ಎರಡನೆಯ ಮುಖವು ತನಗುಂಟಾದ ಅಪಮಾನದಿಂದ ಆಫಲವನ್ನು ಭಕ್ಷಿಸಿತು. ಹೆಚ್ಚು ಮಾತೇನು ? ಒಡನೆಯೆ ಎರಡೂ ನಾಶಹೊಂದಿದುವು. ಇದರಿಂದ ನಾನು ಹೇಳುವೆನು—

ಕುಕ್ಷಿಯೊನೊಂದಂ ಕೊರಲೆರ |
ಡಂ ಕ್ಷಿತಿಯೊಳ್ ತಾಳ್ದು ಬೇಱೆವೇಱೆಯ ಫಲಮಂ |
ಭಕ್ಷಿಸಿದಾಭಾರಂಡಕ |
ಪಕ್ಷಿಗಳಂತಱಿವರೈಕಮತ್ಯವಿಹೀನರ್ ॥ ಎಂದು

ಚಕ್ರಧರನೆ—ಇಂತೆಂದನು:—ಇದು ಸತ್ಯ ; ನನ್ನ ವಿಧಿಯೋಗಕ್ಕೆ ನೀನು ಏನ ಮಾಡುವೆ ? ನೀನು ನಿನ್ನ ಸ್ಥಳಕ್ಕೆ ಹೋಗು ; ಆದರೆ ಏಕಾಂಗಿಯಾಗಿ ಹೋಗಬಾರದು. ಇಂತು ಹೇಳಿಯೂ ಇದೆ:—

ತಿನಬಾರದೊರ್ವನಿನಿದಂ |
ಜನವೊಱಗಿರೆಯೊರ್ವನೆಚ್ಚಱರಬಾರದದೊ ॥
ವ್ರ್ಗನೆ ಗಮಿಸಬಾರದಧ್ವದೆ |
ಘನಕೃತಿಗಳ ಬಗೆಯಬಾರದೊರ್ವನೆ ಜಗದೊಳ್ ॥ ೭೫ ॥

ಅಲ್ಲದೆ—

ಸರಣಿಯೊಳ್‌ವಾಸಿಸನೆನಿ |
ಪೆರಡನೆಯವಸಿರೆಯುಮವಸಿನಕ್ಕುಂ ಪದುಳಂ ||
ಎರಡನೆಯದಾದ ನಳ್ಳಿಯು |
ದಿರೆಯುದಱ್‌ಂದಾಯ್ತು ರಕ್ಷಣಂ ಜೀವಿತದಾ ||೮೬||

ಸುವರ್ಣಸಿದ್ಧಿ ಇದೆಂತೆನಲು, ಚಕ್ರಧರನಿಂತೆಂದನು:—

ಕಥೆ ೧೫

ಒಂದೂರಿನಲ್ಲಿ ಬ್ರಹ್ಮದತ್ತನೆಂಬ ಬ್ರಾಹ್ಮಣನಿದ್ದನು. ಅವನು ಕಾರ್ಯವಶದಿಂದ ಮತ್ತೊಂದು ಗ್ರಾಮಕ್ಕೆ ಹೊರಡಲು, ಅವನ ತಾಯಿ—ವತ್ಸ! [illegible]

ವಾಗಿರುವುದೆಂದು ತಿಳಿದು ಸಂತೋಷಗೊಂಡು ಇಂತೆಂದನು:—ಅಹಹ! ಮನುಷ್ಯನು ಯಾವ ಜತೆಯನ್ನಾದರೂ ಮಾಡಿಕೊಂಡು ಹೊರಡಬೇಕೆಂದು ನಮ್ಮ ಜನನಿ ಹೇಳಿದ ಮಾತು ಸತ್ಯ. ಏಕಾಕಿಯಾಗಿ ಪ್ರಯಾಣಮಾಡ ಬಾರದು. ನಾನು ನಮ್ಮ ಜನನಿಯ ಮಾತನ್ನು ಶ್ರದ್ಧೆಯಿಂದ ನಡೆಯಿಸಿದ ಕಾರಣ ಸರ್ಪದಂಶವು ನನಗೆ ನಳ್ಳಿಯಿಂದ ತಪ್ಪಿತು ನಳ್ಳಿಯು ತಾನು ಕಷ್ಟಪಟ್ಟು ದೈವದಿಂದ ರಕ್ಷಿತವಾಗಿ ನನಗೆ ಸುಖವನ್ನುಂಟುಮಾಡಿತು. ಇದು ಯುಕ್ತ; ಇಂತು ಹೇಳಿಯೂ ಇದೆ:—

ಕುಂದಿರ್ಪಿಂದುಗೆ ರವಿ ಕಳೆ |
ಯೊಂದಿಪನಾಯಿಂದುವಿಂ ಕಡಲ್ ವರ್ಧಿಸುಗುಂ ||
ದಂದುಗವೊದಿಂದವಂಗೊ |
ಳ್ಪಂ ದೊರೆಯಿಪರನ್ಯರನ್ಯರವನಿಂ ಸುಖಿಸರ್ ||೮೭||

ಇಂತು ನುಡಿದು ಆ ಬ್ರಾಹ್ಮಣನು ತನ್ನ ಉದ್ದಿಷ್ಟವಾದ ಸ್ಥಲವನ್ನು ಕುರಿತು ಪ್ರಯಾಣಮಾಡಿದನು. ಆದಕಾರಣ ನಾನು ಹೇಳಿದೆನು:—

ಸರಣಿಯೊಳಟ್‌ವಾಸಿಸನೆನಿ | ಪೆರಡನೆಯವಸಿರೆಯುಮವಸಿನಕ್ಕುಂಪದುಳಂ ||
ಎರಡನೆಯದಾದ ನಳ್ಳಿಯು | ದಿರೆಯುದಱ್‌ಂದಾಯ್ತು ರಕ್ಷಣಂ ಜೀವಿತದಾ ||

ಸುವರ್ಣಸಿದ್ಧಿ ಈ ನುಡಿಯನಾಲಿಸಿ ಅವನ ಅನುಜ್ಞೆಯಂ ಪಡೆದು ತನ್ನ ಸ್ಥಲಕ್ಕೆ ಹೊರಟನು.

ಇಂತು ಮಹೀಶೂರಪುರೀಸೀತಾರಾಮಕವಿಯಿಂ ವಿರಚಿತಮಾದ
ಕರ್ನಾಟಪಂಚತಂತ್ರದೊಳ್ ಅಪರೀಕ್ಷಿತಕಾರಕವೆಂಬ
ಐದನೆಯ ತಂತ್ರಂ
ಸಂಪೂರ್ಣಂ

॥ ಮಂಗಳಮಸ್ತು ॥

THE
KARNATAKA CHANDRIKE
SERIES NO. 66.

ಕರ್ಣಾಟಕಪಂಚತಂತ್ರಂ

ಅಪರೀಕ್ಷಿತಕಾರಕವೆಂಬ

ಐದನೆಯ ತಂತ್ರಂ.

ಮೈಸೂರ್ ಸೀತಾರಾಮಶಾಸ್ತ್ರಿಗಳಿಂದ
ವಿರಚಿತವಾದುದು

ಮೈಸೂರ್
ಜಿ. ಟಿ. ಎ. ಮುದ್ರಾಕ್ಷರಶಾಲೆಯಲ್ಲಿ
ಮುದ್ರಿಸಲ್ಪಟ್ಟಿತು.
೧೯೨೦.

ಪೀಠಿಕೆ.

ಇದು ಅಪರೀಕ್ಷಿತಕಾರಕವೆಂಬ ಐದನೆಯ ತಂತ್ರವು; ಇದುವರೆಗೆ ಮೂರು ತಂತ್ರಗಳು ಮುದ್ರಿತವಾದುವು. ಕಾಕೋಲೂಕೀಯ ಲಬ್ಧಪ್ರಣಾಶಗಳೆಂಬ ಮೂರನೆಯ ನಾಲ್ಕನೆಯ ತಂತ್ರಗಳು ಮುಂದೆ ಮುದ್ರಿತವಾಗಬೇಕು. ಪೀಠಿಕೆಯಲ್ಲಿ ತಿಳಿಯಬೇಕಾದ ವಿಶೇಷಾಂಶವು ಮುದ್ರಿತವಾಗಿರುವ ಮಿತ್ರಭೇದ ಮಿತ್ರಸಂಪ್ರಾಪ್ತಿಗಳೆಂಬ ಪ್ರಥಮದ್ವಿತೀಯತಂತ್ರಗಳಲ್ಲಿ ವಿಶದವಾಗಿ ಬರೆಯಲ್ಪಟ್ಟಿರುವುದರಿಂದ ಅದನ್ನು ಮತ್ತೆ ಇಲ್ಲಿ ಬರೆವುದು ಅನಾವಶ್ಯಕವು. ಎರಡನೆಯ ತಂತ್ರದ ಪ್ರತಿಗಳು ಈಗ ದೊರೆವುದಿಲ್ಲವಾದುದರಿಂದ ಅದರ ದ್ವಿತೀಯಮುದ್ರಣವು ಶೀಘ್ರದಲ್ಲಿ ಆಗಬೇಕಾಗಿದೆ. ಐದು ತಂತ್ರಗಳೂ ಎಂದಿಗೆ ಸಿದ್ಧವಾಗಿ ಮಹಾಶಯರಾದ ಕನ್ನಡಿಗರ ಕೈಗೆ ಬರುವುವೋ ಎಂದು [illegible]. ಮಿತ್ರಭೇದವೆಂಬ ಪ್ರಥಮ ತಂತ್ರವು ಟಿಪ್ಪಣಿಸಹಿತವಾಗಿ ಸಿದ್ಧವಾಗಿದೆ. ಇದು ಈ ಸಂವತ್ಸರದ "ಬಿ. ಎ" ಪರೀಕ್ಷೆಯ ತರಗತಿಗೆ ಪಾಠ್ಯವಾಗಿ ಮೈಸೂರು ವಿಶ್ವವಿದ್ಯಾನಿಲಯಸಭೆಯವರಿಂದ ಪರಿಗ್ರಹಿಸಲ್ಪಟ್ಟಿದೆ.

ಈ ಐದನೆಯ ತಂತ್ರದಲ್ಲಿ ಇರುವುವು [illegible] ಕಥೆಗಳು. ಇವುಗಳಲ್ಲಿ—

[illegible]

[illegible] ॥

ಎಂದು [illegible]

[illegible] ।

[illegible] ॥

[illegible]

[illegible]

ii

ಾದ ಮೆ॥ ಎಂ. ಎಸ್. ರಾವ್. ಕಂಪೆನಿಯವರು ಕಳುಹಿಸಿರುವ ಕ್ಯಾಲೆಂ
ು ದೂರದಲ್ಲಿದ್ದರೂ ಸ್ಪಷ್ಟವಾಗಿ ಕಾಣುವಂತೆ ದಪ್ಪಅಕ್ಷರಗಳಿಂದ ಕೂಡಿ,
ದಿನಗಳಲ್ಲಿ ನೆನಪಿಟ್ಟುಕೊಳ್ಳಬಹುದಾದ ವಿಷಯಗಳನ್ನು ಗುರುತಿಸು
ಪ್ರದಕ್ಕೆ ಅನುಕೂಲವಾಗಿ ಹನ್ನೆರಡು ತಿಂಗಳೂ ಬೇರೆ ಬೇರೆ ಕಾಗದಗಳಲ್ಲಿ
ಮುದ್ರಿತವಾಗಿರುವುದು. ಮೈಸೂರು ಪುಸ್ತಕ ವ್ಯಾಪಾರಿಗಳಾದ ಮೆ॥ ಎಂ.
. ಅಂಡ್ ಸನ್ಸ್ ಅವರೂ, ಮೆ॥ ಬಿ. ಗುಂಡೂರಾವ್ ಅವರೂ,
ಮೆ॥ ಗುರುರಾವ್ ಅವರೂ ವಿಶ್ವಾಸಪೂರ್ವಕವಾಗಿ ಕಳುಹಿಸಿರುವ
ಲೆಂಡರುಗಳೂ, ಸತ್ಯವಾದಿ ಪತ್ರದ ಕ್ಯಾಲೆಂಡರೂ ಭಾವಗರ್ಭಿತವಾದ
ತ್ರಗಳಿಂದ ಕೂಡಿ ರಮ್ಯವಾಗಿರುವುವು. ಇವುಗಳನ್ನೆಲ್ಲ ಆದರಾತಿಶಯ
ದ ಪರಿಗ್ರಹಿಸಿ ನಮ್ಮ ಮಿತ್ರವರ್ಗರಾದ ಆ ಮಹನೀಯರುಗಳಿಗೆ
ಭ್ಯುದಯವನ್ನು ಬಯಸುತ್ತಿರುವೆವು.

ನಮ್ಮ ಭಾಂಡಾಗಾರವನ್ನಲಂಕರಿಸಿರುವ "ಭಾರತ ಮಹಿಳೆಯರ
ಣಪದಕ", "ಪನ್ನಾಮತಿ", "ಮದುವೆಯ ಗಲಿಬಿಲಿ" ಎಂಬ ಪುಸ್ತಕ
ಾನುವಾದವನ್ನು ಮುಂದಣ ಸಂಚಿಕೆಯು ತಿಳಿಸುವುದು.

"ಸಂಪಾದಕ"

DHARWAR
30 JAN 22
3.15 PM

ಕರ್ನಾಟಕ ವಿದ್ಯಾವರ್ಧಕ ಸ...
ಧಾರವಾಡ.

ಶ್ರೀ

ಅಪೂರ್ವಸನ್ಮಾಯ!

ಕರ್ನಾಟಕಚಂದ್ರಿಕೆ.

ಈ ಮಾಸಪತ್ರಿಕೆಯು ಹನ್ನೆರಡನೆಯ ಸಂಪುಟ... ...ಯುವರ ತಿಂಗಳಿಂದ ಪ್ರಕಟವಾಗುತ್ತದೆ. ಇದರಲ್ಲಿ... [illegible] ... 1922ನೇ ... [illegible]

1. [illegible]
2. [illegible]
3. [illegible]
4. [illegible]

[illegible]

[illegible]

[illegible]

ಮಾಸಪ[illegible]ಕಾರೂಪವಾಗಿ ಪ್ರಚುರಿಸಲ್ಪಡುತ್ತಿರುವ

[illegible]ರ್ಣಾಟಕ ಕಥಾಸರಿತ್ಸಾಗರ

೩

[illegible]ತ್ತಿ ಸಂ॥ [illegible]ಷಾಢ	ಸಂಚಿಕೆ ೧	1921 ಜುಲೈ

ಇದಂ ಗುರುಗಿರೀಂದ್ರಜಾಪ್ರಣಯಮಂದರಾಂದೋಲನಾ |
ತ್ಪುರಾಕಿಲ ಕಥಾಮೃತಂ ಹರಮುಖಾಂಬುದೇರುದ್ಗತಮ್ ||
ಪ್ರಸಹ್ಯ ರಸಯನ್ತಿ ಯೇ ವಿಗತ ವಿಘ್ನಲಬ್ಧರ್ದ್ಧಯೋ |
ಧುರಂ ದಧತಿವೈಬುಧೀಂ ಭುವಿ ಭವಪ್ರಸಾದೇನ ತೇ ||

ಸಂಪಾದಕ ಮತ್ತು ಪ್ರಕಾಶಕ,

ಟಿ. ಚಿದಂಬರಪಂಡಿತ,

ಬಿರೂರ. (ಡಿಸ್ಟ್ರಿಕ್ಟ ಕಡೂರ.)

ಆನಂದವನ-ಅಗಡಿಯ ಶ್ರೀ ಶೇಷಾಚಲ ಪ್ರಿಂಟಿಂಗ ಪ್ರೆಸ್ಸಿನಲ್ಲಿ
ಭಿ. ಪ. ಕಾಳೆ, ಇವರಿಂದ ಮುದ್ರಿಸಲ್ಪಟ್ಟಿತು.

1921

ವಾರ್ಷಿಕ ಚಂದಾ 2-8-0

ಆಯುರ್ವೇದಿಕ್ ಮೆಡಿಕಲ್ ಸ್ಟೋರ್ಸ್

ಬಿ ರೂ ರ.

ನಾಗವಲ್ಲಭಕಸ್ತೂರೀ ಮಾತ್ರೆ—ಅವ್ವಲ್, ಶೀತಜ್ವರ, ನೆಗಡಿ ಶೀತಜ್ವರ, ಕೆಮ್ಮು ನೆಗಡಿ, ಶೀತವಾಯು ಬಹುಮೂತ್ರ· ಇವೇ ಮೊದಲಾದ ರೋಗಗಳಿಗೆ ಸಿದ್ಧೌಷಧ ಕ್ರಯ ಶೀಸೆ ೧ ಕ್ಕೆ ೮ ಆಣೆ

ದುಗ್ಧ—ತಾಂಬೂಲದೊಡನೆ ಸೇವಿಸುತ್ತ ಬಂದಲ್ಲಿ ಅಗ್ನಿಮಾಂದ್ಯವನ್ನು ಪರಿಹರಿಸಿ ರಕ್ತವೃದ್ಧಿಯನ್ನುಂಟುಮಾಡುತ್ತದೆ. ಕ್ರಯ ಶೀಸೆ ೧ ಕ್ಕೆ ೪ ಆಣೆ

[illegible]

ಕನ್ನಡಿಗರ ಕೂಟ
ಧಾರವಾಡ

ಶ್ರೀ

ಕರ್ಣಾಟಕ ಕಥಾಸರಿತ್ಸಾಗರ

ಕಥಾ ಪೀಠ ಲಂಬಕ—ಒಂದನೆಯ ತರಂಗ.

ಪ್ರಸಿದ್ಧವಾದ ಹಿಮಾಲಯ ಪರ್ವತವು ಕಿನ್ನರ, ಗಂಧರ್ವ, ವಿದ್ಯಾಧರರೇ ಮೊದಲಾದ ದೇವತೆಗಳಿಗೆ ವಿಹಾರಭೂಮಿಯಾಗಿ, ಸಕಲ ಪರ್ವತಗಳಿಗೂ ಚಕ್ರವರ್ತಿಯೆಂಬ ಬಿರುದನ್ನು ಪಡೆದು ಕಂಗೊಳಿಸುತ್ತಿರುವದು. ತ್ರಿಲೋಕಮಾತೆಯಾದ ಭವಾನಿಯೇ ಮಗಳಾಗಿ ಅವತರಿಸಿರುವುದರಿಂದಲೇ ಈ ಪರ್ವತಕ್ಕೆ ಇಂಥಾ ದೊಡ್ಡ ಸಾರ್ವಭೌಮಪದವಿಯು ಲಭಿಸಿರಬಹುದು. ಇದರ ಉತ್ತರ ಶಿಖರವು ಸಾವಿರಾರು ಯೋಜನಗಳನ್ನೊಳಕೊಂಡು ಕೈಲಾಸಪರ್ವತವೆಂಬ ಹೆಸರಿನಿಂದ ಶೋಭಿಸುತ್ತಿರುವದು.

ದೇವದಾನವರು ಅಮೃತೋತ್ಪಾದನೆಗಾಗಿ ಕ್ಷೀರಸಮುದ್ರವನ್ನು ಕಡೆದಾಗ ಮಂದರ ಪರ್ವತವು ಕಡಗೋಲಾಗಿದ್ದರೂ ಅದಕ್ಕೆ ಅಮೃತಸಮಾನವಾದ ಶುಭ್ರ ವರ್ಣವು ಬರಲಿಲ್ಲ; ನನಗಾದರೋ ಯಾವ ಪ್ರಯತ್ನವೂ ಇಲ್ಲದೆಯೇ ಶುಭ್ರವರ್ಣವುಂಟಾಗಿರುವುದೆಂದು ತನ್ನ ಕಾಂತಿಯಿಂದ ನಗುತ್ತಿರುವುದೋ ಎಂಬಂತೆ ಕಂಗೊಳಿಸುತ್ತಿರುವ ಆ ಕೈಲಾಸಪರ್ವತದಲ್ಲಿ ಪಾರ್ವತೀಸಮೇತನಾದ ಪರಮೇಶ್ವರನು ಸಿದ್ಧ, ವಿದ್ಯಾಧರರಿಂದಲೂ ಪ್ರಮಥ ಗಣಗಳಿಂದಲೂ ಸೇವಿತನಾಗಿ ವಾಸಿಸುತ್ತಿರುವನು. ಯಾವ ಪರಮೇಶ್ವರನ ಅತ್ಯುನ್ನತ ಮತ್ತು ಪಿಂಗಳ ಜಟಾಜೂಟದಲ್ಲಿ ಸೇರಿರುವ ಬಾಲಚಂದ್ರನು ತನ್ನ ಜನ್ಮದಲ್ಲಿ ಅಸಂಭಾವಿತವಾದ ಸಂಜೆಯ ಸಮಯದಲ್ಲಿ ಹೊಂಬಣ್ಣವಾಗಿ ಹೊಳೆಯುತ್ತಿರುವ ಉದಯಶೈಲಶೃಂಗಸಂಗಸುಖವನ್ನು, ಅನುಭವಿಸುತ್ತಿರುವನೋ, ಅಂಧಕನೆಂಬೊಬ್ಬ ರಾಕ್ಷಸಾಧಿಪತಿಯ ಎದೆಗೆ ತನ್ನ ಶೂಲಾಯುಧವನ್ನು ನೆಟ್ಟ ಮಾತ್ರದಿಂದಲೇ ಮೂರು ಲೋಕದ ಜನರ ಹೃದಯಶೂಲವನ್ನೂ ಕಿತ್ತುಹಾಕಿದ ಯಾವ ಮಹನೀಯನ ಚರಿತ್ರವು ಆಶ್ಚರ್ಯ

ಕರವಾಗಿರುವದೋ, ಮತ್ತು ಯಾವನ ಪಾದಗಳಿಗೆ ನಮಸ್ಕರಿಸುತ್ತಿರುವ ದೇವದಾನವರೂ ಸಹ ತಮ್ಮ ರತ್ನ ಕಿರೀಟಗಳಲ್ಲಿ ಪ್ರಕಾಶಿಸುವ ನಖಾಗ್ರಪ್ರತಿಬಿಂಬಗಳನ್ನು ಅನುಗ್ರಹಾರ್ಥವಾಗಿ ಕೊಟ್ಟ ಅರ್ಧಚಂದ್ರಬಿಂಬವೆಂದು ಭಾವಿಸುವರೋ ಆ ಚರಾಚರಗುರುವಾದ ಪರಮೇಶ್ವರನು ಪಾರ್ವತೀಸಮೇತನಾಗಿ ಒಂದಾನೊಂದು ದಿನ ಏಕಾಂತದಲ್ಲಿರುವಾಗ ಪಾರ್ವತಿಯು ಸಕಲೇಶ್ವರನಾದ ಪತಿಯನ್ನು ಸ್ತೋತ್ರಮಾಡಿ ಸಂತೋಷಪಡಿಸಿದಳು.

ಆ ಸ್ತೋತ್ರದಿಂದ ಸಂತೋಷವನ್ನು ಹೊಂದಿದ ಪರಮೇಶ್ವರನು ತನ್ನ ಪ್ರಿಯಪತ್ನಿಯನ್ನು ತೊಡೆಯಮೇಲೆ ಕೂಡಿಸಿಕೊಂಡು "ಪ್ರಿಯೆ, ನಿನ್ನ ಸಂತೋಷಕ್ಕಾಗಿ ಯಾವ ಕಾರ್ಯವನ್ನು ಮಾಡಲಿ!" ಎಂಬುದಾಗಿ ಕೇಳಲು ಪಾರ್ವತಿಯು "ಪ್ರಿಯನೇ, ನಿಜವಾಗಿಯೂ ನೀನು ನನ್ನಲ್ಲಿ ಪ್ರಸನ್ನನಾಗಿದ್ದರೆ ಮನೋಹರವಾಗಿಯೂ, ಹೊಸದಾಗಿಯೂ, ಇರುವ ಯಾವದಾದರೂ ಒಂದು ಕಥೆಯನ್ನು ಹೇಳುವವನಾಗು" ಎನಲು "ಪ್ರಿಯಳೆ, ಲೋಕದಲ್ಲಿ ಭೂತಭವಿಷ್ಯದ್ವರ್ತಮಾನವೆಂಬ ಮೂರು ಕಾಲಗಳಲ್ಲಿಯೂ, ನಿನಗೆ ತಿಳಿಯದಿರುವ ವಿಚಾರವಾವುದಿರುವುದು! ಆಗ ನಾನು ಯಾವ ಹೊಸ ಅಂಶವನ್ನು ನಿನಗೆ ಹೇಳಬಹುದು!" ಎಂದು ಆಕೆಯನ್ನೇ ಪ್ರಶ್ನೆ ಮಾಡಿದನು. ಆದರೆ ಮಹಾಪತಿವ್ರತೆಯರಾದ ಸ್ತ್ರೀಯರ ಮಹತ್ವ [illegible] ತನ್ನ ಪ್ರಿಯನೊಡನೆ ಸ್ವಾತಂತ್ರ್ಯ [illegible] ಪರಮೇಶ್ವರನನ್ನು ಕಥೆ [illegible] ಪ್ರಾರ್ಥಿಸುತ್ತಿರುವ [illegible] ಒಂದು ಸಣ್ಣ ಕಥೆಯನ್ನು [illegible]—

[illegible]

ಕೆಂದು ತನ್ನ ಯೋಗ್ಯತೆಗೆ ಮೀರಿದವರವಂ ಕೇಳಿದುದರಿಂದ ಆ ದುರಾಶಾಫಲ ರೂಪವಾಗಿ ನನ್ನಿಂದ ನಿಂದಿಸಲ್ಪಟ್ಟು ಲೋಕದಲ್ಲಿ ಪೂಜಾಹೀನನಾದನು. ಆದಕೆ ನಾರಾಯಣನು "ಯಾವಾಗಲೂ ನಿನ್ನಸೇವಾತತ್ಪರನಾಗಿರುವಂತೆ ಅನುಗ್ರಹಿಸು" ಎಂದು ಕೇಳಿದುದರಿಂದ ಆ ನಾರಾಯಣನೇ ನನ್ನ ಅರ್ಧಾಂಗಿಯಾದ ನಿನ್ನ ರೂಪದಿಂದ ಅವತರಿಸಿರುವನು. ಶಕ್ತನಾದ ನನಗೆ ಶಕ್ತಿಸ್ವರೂಪಿಣಿಯಾದ ನೀನೇ ಆ ನಾರಾಯಣನಾಗಿರುತ್ತೀ. ಇದೂ ಅಲ್ಲದೆ, ನೀನು ಪೂರ್ವದಲ್ಲಿಯೂ ನನ್ನ ಪತ್ನಿಯಾಗಿದ್ದೆ' ಎಂದನು. ಆಗ ಪಾರ್ವತಿಯು—"ಏನು? ! ಪೂರ್ವಪತ್ನಿಯೇ ಅದು ಹೇಗೆ ? " ಎಂದಳು. ಅದಕ್ಕೆ ಪರಮೇಶ್ವರನು—"ಪಾರ್ವತಿಯೇ, ಕೇಳು—ಪೂರ್ವದಲ್ಲಿ ದಕ್ಷನೆಂಬ ಪ್ರಜಾಪತಿಗೆ ನೀನು ಮತ್ತು ಇನ್ನೂ ಅನೇಕ ಕನ್ನಿಕೆಯರು ಹುಟ್ಟಿದಿರಿ. ಅವನು ದಾಕ್ಷಾಯಿಣಿಯಾದ ನಿನ್ನನ್ನು ನನಗೂ ಉಳಿದವರನ್ನು ಧರ್ಮನೇ ಮೊದಲಾದವರಿಗೂ ಕೊಟ್ಟು ವಿವಾಹ ಮಾಡಿದನು. ಆತನು ಒಂದಾನೊಂದು ಕಾಲದಲ್ಲಿ ಒಂದು ಯಜ್ಞವನ್ನು ನಡಿಸುವುದಕ್ಕಾಗಿ ಪ್ರಯತ್ನಪಟ್ಟು ನನ್ನನ್ನು ಹೊರತಾಗಿ ಎಲ್ಲ ಅಳಿಯಂದಿರನ್ನೂ ಕರೆಯಿಸಿಕೊಂಡು ಕಾರ್ಯೋಪಕ್ರಮ ಮಾಡಿದ್ದನ್ನು ಕಂಡು ನೀನು ತಂದೆಯನ್ನು ಕುರಿತು "ನನ್ನ ಪತಿಯನ್ನು ಏಕೆ ಯಜ್ಞಕ್ಕೆ ಕರೆಸಲಿಲ್ಲ?" ಎಂದು ಕೇಳಿದುದಕ್ಕೆ ಅವನು ನಿನಗುತ್ತರವಾಗಿ "ಕಪಾಲಮಾಲಿಯಾದ ನಿನ್ನ ಗಂಡನನ್ನು ಹೇಗೆ ತಾನೇ ಯಜ್ಞಕ್ಕೆ ಕರೆಸಲಾದೀತು?" ಎಂದನು. ಅದನ್ನು ಕೇಳಿ ನೀನು ವಿಷದಿಂದ ಕೂಡಿದ ಸೂಜಿಯಿಂದ ಚುಚ್ಚಿಸಿಕೊಂಡವಳಂತೆ, ಖತಿಗೊಂಡು 'ಈ ಪಾಪಿಯಾದ ತಂದೆಯಿಂದುಂಟಾದ ಈ ಶರೀರವು ಪತಿಸೇವೆಗೆ ಯೋಗ್ಯವಲ್ಲ'ವೆಂದು ತಿಳಿದು ತಕ್ಷಣವೇ ಶರೀರವನ್ನು ತ್ಯಜಿಸಿ ಕ್ಷೀರಸಮುದ್ರದಲ್ಲಿ ಚಂದ್ರನು ಉದಯಿಸಿದಂತೆ ಈ ಹಿಮಾಲಯದಲ್ಲಿ ಉತ್ಪನ್ನಳಾಗಿರುತ್ತೀಯೆ. ಆಗ ನಾನು ಅದೇ ಕ್ರೋಧದಿಂದ ದಕ್ಷನ ಯಜ್ಞವನ್ನು ನಾಶಗೊಳಿಸಿ ತಪಸ್ಸಿಗಾಗಿ ಈ ಹಿಮಾಚಲಕ್ಕೆ ಬರಲು ಅತಿಥಿಯಾದ ನನ್ನ ಶುಶ್ರೂಷೆಗಾಗಿ ನಿನ್ನನ್ನು ನಿನ್ನ ತಂದೆಯು ನೇಮಿಸಿದನು. ನನ್ನ ಮಗನ ಹೊರತು ಇನ್ನು ಯಾರಿಂದಲೂ ಸಂಹರಿಸಲಸಾಧ್ಯನಾದ ತಾರಕಾಸುರನ ಬಾಧೆಯನ್ನು ಸಹಿಸಲಾರದ ದೇವತೆಗಳ ಇಷ್ಟಸಿದ್ಧಿಗೆ ನಮ್ಮಿಬ್ಬರ ದಾಂಪತ್ಯಾನುಕೂಲವಾದ ಹೊರತು ಅವಕಾಶವಿರಲಿಲ್ಲ. ಇದನ್ನು ತಿಳಿದು ನನ್ನ ತಪಸ್ಸನ್ನು ಕೆಡಿಸಿ ನಾನು ನಿನ್ನನ್ನು ಮದುವೆಮಾಡಿ

ಕೊಳ್ಳುವಂತೆ ಪ್ರೇರಿಸುವದಕ್ಕಾಗಿ ನನ್ನಲ್ಲಿಗೆ ಮನ್ಮಥನನ್ನು ಕಳುಹಿಸಿದರು.
ಆಗಲಾ ಮನ್ಮಥನು ನೀನು ಪುಷ್ಪ[illegible]ಮಾಡಿಕೊಂಡು ಸಮೀಪದಲ್ಲಿರುತ್ತಿದ್ದು
ದರಿಂದ ಸಮಯ ಸಿಕ್ಕಿತೆಂದು ತಿಳಿದು ನನ್ನ ಮೇಲೆ ತನ್ನ ಕುಸುಮಬಾಣವನ್ನು
ಪ್ರಯೋಗಿಸಿ ನನ್ನ ಹಣೆಗಣ್ಣಿನಿಂದಾದ ಅಗ್ನಿಯಿಂದ ಸುಟ್ಟುಹೋದದ್ದೂ ಸಹ
ನಿನಗೆ ನೆನಪಿನಲ್ಲಿರುವದಿಲ್ಲವೇ? ಆಗ ಮನ್ಮಥನ ದಹನದಿಂದಲೂ ಕಾತರಳಾ
ಗದೆ ಧೀರಳಾದ ನಿನ್ನ ತಪಸ್ಸಿನಿಂದ ಈ ನಿನ್ನ ಪ್ರಿಯನು ಕ್ರೀತನಾಗಿದ್ದಾನೆಂದು
ತಿಳಿ. ಪ್ರಿಯಳೇ, ನಿನ್ನಲ್ಲಿ ತಪೋಧನವು ಅಭಿವೃದ್ಧಿ ಹೊಂದಬೇಕೆಂಬುದಕ್ಕಾ
ಗಿಯೇ ಈ ಸುಕುಮಾರ ದೇಹದಿಂದ ಕಠೋರವಾದ ತಪಸ್ಸು ನಡೆಯುತ್ತಿದ್ದ
ದನ್ನು [illegible] ನೀನು ನನ್ನ ಪೂರ್ವಪತ್ನಿಯಾಗಿದ್ದ ರೀತಿಯ
ನ್ನು [illegible] ಇನ್ನೇನು ಹೇಳಲಿ? ಎಂದು ಪರಮೇಶ್ವರನು ತನ್ನ
ಕಥೆಯನ್ನು [illegible] ಕಥೆಯನ್ನು ಹೇಳ
[illegible] ಕಥೆಯನ್ನು ಕೇಳಿ
[illegible] ಗಂಗೆಯನ್ನು
[illegible]

ಕರ್ನಾಟಕ ವಿದ್ಯಾವರ್ಧಕ ಸಂಘ

ವುಳ್ಳವನಾಗಿ ತನ್ನ ಯೋಗಮಾಯಾ ಬಲದಿಂದ ಯಾರಿಗೂ ಕಾಣದಂತೆ
ಒಳಗೆ ಪ್ರವೇಶಿಸಿದನು. ಈ ರೀತಿ ಒಳಗೆ ಪ್ರವೇಶಿಸಿದ ಪುಷ್ಪದಂತನು ಪರ
ಮೇಶ್ವರನಿಂದ ಹೇಳಲ್ಪಟ್ಟ ಅತ್ಯಾಶ್ಚರ್ಯಕರವಾದ ಮತ್ತು [illegible] ಹೊಸದಾದ
ಏಳುಜನ ವಿದ್ಯಾಧರರ ಚರಿತ್ರೆಯನ್ನೂ ಕೇಳಿದ ಮೇಲೆ ತನ್ನ ಮನೆಗೆ ಹೋಗಿ
ಆ ಕಥೆಗಳನ್ನೆಲ್ಲಾ ತನ್ನ ಹೆಂಡತಿಯಾದ ಜಯಾದೇವಿಗೆ ಹೇಳಿದನು. ಪ್ರಪಂ
ಚದಲ್ಲಿ ತನಗೆ ತಿಳಿದ ರಹಸ್ಯವನ್ನೂ ಮತ್ತು ತಾನು ಸಂಪಾದಿಸಿದ ದ್ರವ್ಯವ
ನ್ನೂ ತನ್ನ ಹೆಂಡತಿಗೆ ತಿಳಿಸದಂತೆ ಮರೆಮಾಡುವದು ಯಾವ ಪುರುಷನಿಗೆ
ತಾನೇ ಸಾಧ್ಯವಾದೀತು? ಈ ಕಥೆಗಳನ್ನು ಕೇಳಿ ಪರಮಾಶ್ಚರ್ಯವನ್ನು
ಹೊಂದಿದ ಜಯಾದೇವಿಯು ತನ್ನ ಒಡತಿಯಾದ ಪಾರ್ವತಿಯ ಬಳಿಗೆ ಹೋಗಿ
ಆಕೆಯ ಮುಂದೆ ಇವನ್ನೆಲ್ಲಾ ವಿವರವಾಗಿ ಹೇಳಿದಳು. ಹೆಂಗಸರ ಬಾಯಲ್ಲಿ
ಮಾತು ನಿಲ್ಲುವುದುಂಟೇ? ಆಗ ಅಂಬಿಕೆಯು ಕುಪಿತಳಾಗಿ "ಈ ಕಥೆಯು
ನಮ್ಮ ದ್ವಾರಪಾಲಿಕಿಯಾದ ಜಯೆಗೂ ತಿಳಿದಿದೆ ಇದರಲ್ಲಿ ಅಪರೂಪವೇನು!"
ಎಂದು ಪತಿಯನ್ನು ಮೂದಲಿಸಿದಳು. ಹೆಂಡತಿಯ ಸಿಟ್ಟಿನ ಮಾತುಗಳನ್ನು
ಕೇಳಿದ ಶಂಕರನು ಯೋಗದೃಷ್ಟಿಯಿಂದ ಪುಷ್ಪದಂತನ ಚೇಷ್ಟೆಯನ್ನು ತಿಳಿದು
ಗುಟ್ಟಾದ ಕಥೆಯು ಹೊರಬಿದ್ದ ರೀತಿಯನ್ನು ಪಾರ್ವತಿಗೆ ತಿಳಿಸಿದನು.
ಆಗ ಪಾರ್ವತಿಯು ತನ್ನ ಆಜ್ಞಾಭಂಗವಾದುದಕ್ಕಾಗಿ ಅತ್ಯಾಗ್ರಹಗೊಂಡು
ಪುಷ್ಪದಂತನನ್ನು ಕರೆಯಿಸಿ ಅವಿಧೇಯನಾದ ನೀನು ಮನುಷ್ಯನಾಗೆಂದು
ಶಪಿಸಿದಳು. ಈ ಶಾಪವನ್ನು ಕೇಳಿದ ಪುಷ್ಪದಂತನ ಸ್ನೇಹಿತನಾದ ಮಾಲ್ಯ
ವಂತನೆಂಬೊಬ್ಬ ಗಣನು ಅವನ ಅಪರಾಧವನ್ನು ಕ್ಷಮಿಸಿ ಅನುಗ್ರಹಿಸಬೇ
ಕೆಂದು ದೇವಿಯನ್ನು ಪ್ರಾರ್ಥಿಸಲು, ಆತನಿಗೂ ಆಕೆಯು ಅದೇ ಶಾಪವನ್ನು
ಕೊಟ್ಟಳು. ಪುಷ್ಪದಂತ-ಮಾಲ್ಯವಂತರೂ ಮತ್ತು ಜಯೆಯೂ ಪುನಃ
ಪುನಃ ಪ್ರಾರ್ಥಿಸಲಾಗಿ ದೇವಿಯ ಕೋಪವು ಕ್ರಮವಾಗಿ ಶಾಂತವಾಗುತ್ತ
ಬಂದಿತು. ಕಡೆಗೆ ದೇವಿಯು ಪ್ರಸನ್ನಳಾಗಿ ಶಾಪಾವಸಾನವನ್ನು ಹೀಗೆ
ನಿರೂಪಿಸಿದಳು:—ಎಲೈ ಪ್ರಮಥರೇ, ಕೇಳಿ, ಸುಪ್ರತೀಕನೆಂಬ ಯಕ್ಷನು
ಕುಬೇರನ ಶಾಪದಿಂದ ಪಿಶಾಚತ್ವವನ್ನು ಹೊಂದಿ ಕಾಣಭೂತಿಯೆಂಬ ಹೆಸರಿ
ನಿಂದ ವಿಂಧ್ಯಾಟವಿಯಲ್ಲಿ ವಾಸಮಾಡುತ್ತಿರುವನು. ಎಲೋ ಪುಷ್ಪದಂತ
ನೇ, ನೀನು ಅವನನ್ನು ನೋಡಿದ ಮಾತ್ರದಿಂದಲೇ ಜನ್ಮಾಂತರ ಸ್ಮರಣೆಯ
ನ್ನು ಹೊಂದಿ ಈ ಕಥೆಯನ್ನು ಅವನಿಗೆ ತಿಳಿಸುವದರಿಂದ ಶಾಪವಿಮೋಚನೆ

ಯನ್ನು ಪಡೆದು ಪೂರ್ವಸ್ಥಿತಿಯನ್ನು ಹೊಂದುವೆ. ಮಾಲ್ಯವಂತನೂ ಕಾಣಭೂತಿಯಿಂದ ಕಥೆಯನ್ನು ತಿಳಿದು ಲೋಕದಲ್ಲಿ ಪ್ರಚಾರಪಡಿಸುವುದರಿಂದ ಕೃತಕೃತ್ಯನಾಗಲಿ. ಕಾಣಭೂತಿಯು ಮಾಲ್ಯವಂತನಿಗೆ ಈ ಕಥೆಯನ್ನು ತಿಳಿಸುವುದರಿಂದ ಕುಬೇರನ ಶಾಪದಿಂದ ಬಿಡುಗಡೆಯನ್ನು ಹೊಂದಲಿ! ಎಂದು ಹೇಳಿ ಸುಮ್ಮನಾದಳು. ಅವರಿಬ್ಬರೂ ತಕ್ಷಣದಲ್ಲಿಯೇ ಮಿಂಚಿನ ರಾಶಿಯಂತೆ ನೋಡುತ್ತಿದ್ದ ಹಾಗೆಯೇ ಮಾಯವಾದರು.

ಅನಂತರದಲ್ಲಿ ಸ್ವಲ್ಪಕಾಲ ಕಳೆದ ಮೇಲೆ ದಯಾವಂತೆಯಾದ ಪಾರ್ವತಿಯು ತನ್ನ ಪ್ರಾಣಕಾಂತನನ್ನು ಕುರಿತು "ಎಲೌ ನಾಥನೇ, ಹಿಂದೆ ಕೋಪ ಪರವಶಳಾದ ನನ್ನ ಶಾಪಕ್ಕೆ ಈಡಾದ ಗಣಶ್ರೇಷ್ಠರು ಈಗ ಎಲ್ಲಿ ಹುಟ್ಟಿದ್ದಾರೆ?" ಎಂದು ಪ್ರಶ್ನೆ ಮಾಡಿದಳು. ಅದಕ್ಕಾ ಪರಮೇಶ್ವರನು ಪ್ರಿಯಳೇ, ಈಗ ಪುಷ್ಪದಂತನು ಪ್ರಸಿದ್ಧವಾದ ಕೌಶಾಂಬೀನಗರದಲ್ಲಿ ವರರುಚಿಯೆಂಬ ಹೆಸರಿನಿಂದ ಹುಟ್ಟಿರುತ್ತಾನೆ. ಮಾಲ್ಯವಂತನು ಸುಪ್ರತೀಕನಗರದಲ್ಲಿ ಗುಣಾಢ್ಯನೆಂಬ ಹೆಸರಿನಿಂದ ಜನಿಸಿರುವನು, ಎಂದು ಹೇಳಿದನು. ಇದನ್ನು ಕೇಳಿ [illegible] ಭೃತ್ಯರಿಗೆ ಉಂಟಾದ [illegible] ಪ್ರಿಯಪತ್ನಿಯನ್ನು ಪರಮೇಶ್ವರನು [illegible] ವಿನೋದಾರ್ಥವಾಗಿ [illegible] ಕ್ರೀಡಾವಿಹಾರಗಳಿಂದ [illegible].

[illegible]

ಎರಡನೆಯ ತರಂಗವು.

[illegible]

ವಾಗಿ ಮಾಡಿದನು. ಅಷ್ಟರಲ್ಲಿಯೇ ನಾನು ಸೃಷ್ಟಿಮಾಡಿದ ಪ್ರಕೃತಿಯ ಸಹಾಯವನ್ನು ಹೊಂದಿ ಆ ಪುರುಷನು ಅನೇಕ ಪ್ರಜಾಪತಿಗಳನ್ನು ಸೃಜಿಸಿದನು. ಪ್ರಜಾಪತಿಗಳು ಪ್ರಜೆಗಳನ್ನೆಲ್ಲಾ ಸೃಷ್ಟಿಮಾಡಿದರು. ಆದುದರಿಂದ ಆ ಪುರುಷನಿಗೆ ಪಿತಾಮಹನೆಂಬ ಹೆಸರು ಪ್ರಸಿದ್ಧವಾಯಿತು. ಹೀಗೆ ಆ ಪುರುಷನು ಚರಾಚರಾತ್ಮಕವಾದ ಪ್ರಪಂಚವೆಲ್ಲವನ್ನೂ ನಿರ್ಮಿಸಿದುದರಿಂದ ಗರ್ವಿತನಾದನು. ಹೀಗೆ ಅಹಂಕಾರದಿಂದ ಮೆರೆಯುತ್ತಿದ್ದ ಪಿತಾಮಹನ ತಲೆಗಳಲ್ಲೊಂದನ್ನು [illegible] ಮೇಲೆ ನನಗೆ ಅನು [illegible] ಕಪಾಲವನ್ನೇ ಕೈಯಲ್ಲಿ [illegible] ವ್ರತವನ್ನು ಕೈಗೊಂಡೆನು'' ಎಂದು ಹೇಳಿದ ಪರಮೇಶ್ವರನ ಮಾತನ್ನು ಕೇಳಿ ಪಾರ್ವತಿಗೆ ಹಿಂದೆ ತನ್ನ ಶಾಪಕ್ಕೆ [illegible] ಪತಿಯನ್ನು ಕುರಿತು, ''[illegible] ನಮ್ಮನ್ನು [illegible]'' ಎಂದು [illegible]. ಆದಕ್ಕಾ ಪರಮೇಶ್ವರನು [illegible]

[illegible]

೯]

ರುದ್ರನ ಅಪರಾವತಾರವೇ ಆಗಿರುತ್ತೀ. ನನ್ನ ಶಾಪವು ನಿನ್ನ ದಯೆಯಿಂದ ಕಳೆದು ಹೋದಂತೆಯೇ ಆಗಿರುವದು'' ಎಂಬಿವೇ ಮೊದಲಾದ ವಾಕ್ಯಗಳಿಂದ ಕಾಣಭೂತಿಯು ವರರುಚಿಯನ್ನು ಸ್ತೋತ್ರಮಾಡಿ ವಿನಯದಿಂದ ''ಎಲೈ ಮಹಾತ್ಮನೇ, ನನ್ನಂಥವರಲ್ಲಿ ಗೋಪ್ಯವಲ್ಲದಿದ್ದರೆ ನಿನ್ನ ಜನ್ಮ ವೃತ್ತಾಂತವನ್ನು ಕೇಳಬೇಕೆಂದು ಕುತೂಹಲವುಳ್ಳವನಾಗಿದ್ದೇನೆ. ದಯವಿಟ್ಟು ತಿಳಿಸಿ ನನ್ನನ್ನು ಪವಿತ್ರನನ್ನಾಗಿ ಮಾಡಬೇಕು'' ಎಂದು ಮರಳಿ ಪ್ರಾರ್ಥಿಸಿದನು. ವರರುಚಿಯು ನಮಸ್ಕಾರ ಮಾಡಿ ಬೇಡಿಕೊಳ್ಳುತ್ತಿರುವ ಕಾಣಭೂತಿಯ ಇಷ್ಟದಂತೆ ತನ್ನ ಜನ್ಮವೃತ್ತಾಂತವನ್ನು ಹೇಳಲು ಉಪಕ್ರಮಿಸಿದನು.

ವರರುಚಿಯ ಕಥೆ.

ಕಾಣಭೂತಿಯೇ, ಕೇಳು. ಕೌಶಾಂಬಿಯೆಂಬ ಪಟ್ಟಣದಲ್ಲಿ ಸೋಮದತ್ತ ಅಥವಾ ಅಗ್ನಿಶಿಖನೆಂದು ಪ್ರಸಿದ್ಧನಾದೊಬ್ಬ ಬ್ರಾಹ್ಮಣನು ವಸುದತ್ತೆಯೆಂಬ ಬ್ರಾಹ್ಮಣಿಯೊಂದಿಗೆ ಸಂಸಾರಿಯಾಗಿದ್ದನು. ಈ ವಸುದತ್ತೆಯು ಪೂರ್ವದಲ್ಲಿ ದೇವ ಮುನಿಕುಮಾರಿಯಾಗಿದ್ದು ಶಾಪದಿಂದ ಮನುಷ್ಯ ಜನ್ಮವನ್ನೆತ್ತಿದ್ದಳು. ನಾನು ವಸುದತ್ತೆಯ ಗರ್ಭದಲ್ಲಿ ಸೋಮದತ್ತನಿಂದ ಜನ್ಮಪರಿಗ್ರಹ ಮಾಡಿದೆನು. ನಿರ್ಭಾಗ್ಯನಾದ ನಾನು ಬಾಲ್ಯದಲ್ಲಿರುವಾಗಲೇ ತಂದೆಯನ್ನು ಕಳೆದುಕೊಂಡೆನು. ಆಗ ನನ್ನ ತಾಯಿಯು ನನ್ನ ರಕ್ಷಣೆಗೋಸ್ಕರ ಬಹು ಕಷ್ಟವಾದ ಕೆಲಸಗಳನ್ನು ಮಾಡುತ್ತಾ ಜೀವಿಸುತ್ತಿದ್ದಳು. ಹೀಗೆ ಕೆಲವು ಕಾಲ ಕಳೆದ ಮೇಲೆ ಒಂದು ದಿನ ಸಾಯಂಕಾಲದಲ್ಲಿ ನಮ್ಮ ಮನೆಗೆ ಇಬ್ಬರು ಅತಿಥಿಗಳು ಬಂದರು. ಆಗ ಒಂದಾನೊಂದು ಮೃದಂಗದ ಧ್ವನಿ ಕೇಳಿಬಂತು. ಆ ಮುರಜಧ್ವನಿಯನ್ನು ಕೇಳಿ ಪತಿಯ ಸ್ಮರಣೆಯನ್ನು ಹೊಂದಿ ಶೋಕಾಕುಲಳಾದ ನನ್ನ ತಾಯಿಯು ಗದ್ಗದ ಕಂಠದಿಂದ ನನ್ನನ್ನು ಕುರಿತು, ''ಎಲೈ ಮಗನೇ! ನಿನ್ನ ತಂದೆಯ ಮಿತ್ರನಾದ ನಂದನೆಂಬ ನಟನು ನರ್ತನ ಮಾಡುತ್ತಾನೆ'' ಎಂದಳು. ಅದನ್ನು ಕೇಳಿ ನಾನು ''ಅಮ್ಮಾ ಅಳುವುದೇಕೆ? ನಾನು ಈಗಲೇ ಹೋಗಿ ಅದನ್ನು ನೋಡಿಕೊಂಡು ಬಂದು ಯಥಾವತ್ತಾಗಿ ಎಲ್ಲವನ್ನೂ ತೋರಿಸುವೆನು'' ಎಂದು ಹೇಳಿದ ಮಾತನ್ನು ಆ ಅಭ್ಯಾಗತರು ಕೇಳಿ ವಿಸ್ಮಯ ಹೊಂದಿದರು. ಆಗ ನನ್ನತಾಯಿಯು ಅಭ್ಯಾಗತರನ್ನು ಕುರಿತು, ''ಎಲೈ ಮಕ್ಕಳಿರಾ, ಇದರಲ್ಲೇನೂ ಆಶ್ಚರ್ಯವಿಲ್ಲ. ಈ ಬಾಲಕನು ಒಂದಾವೃತ್ತಿ ಕಿವಿಯಲ್ಲಿ

ಕೇಳಿದ ಮಾತ್ರಕ್ಕೆ ಹೃದಯದಲ್ಲಿ ಧಾರಣೆ ಮಾಡುತ್ತಾನೆ''ಂದು ಹೇಳಿದಳು. ಇದನ್ನು ಕೇಳಿ ಅತಿಥಿಗಳು ಇದರ ನಿಜಸ್ಥಿತಿಯನ್ನು ತಿಳಿಯುವುದಕ್ಕಾಗಿ ನನ್ನ ಸಮೀಪದಲ್ಲಿ ಪ್ರಾತಿ ಶಾಖ್ಯೆಯನ್ನು [ವೇದಕ್ಕೆ ಸಂಬಂಧಪಟ್ಟ ಸೂತ್ರ] ಪಠಿಸಿದರು. ನಾನು ಅದನ್ನು ಹಿಂತಿರುಗಿ ಹೇಳಿದೆನಲ್ಲದೆ, ಅವರನ್ನೂ ಕರೆದುಕೊಂಡು ಹೋಗಿ ನಂದನ ನಾಟ್ಯವನ್ನು ನೋಡಿ ಬಂದು ಸಮಗ್ರವಾಗಿಯೂ, ಯಥಾವತ್ತಾಗಿಯೂ ತಾಯಿಗೆ ತೋರಿಸಿದೆನು. ಇದನ್ನು ಕಂಡು ನಾನು ಏಕಶ್ರುತಿಧರನೆಂದು ನಿಶ್ಚಯಿಸಿ ಅವರಲ್ಲಿ ವ್ಯಾಡಿಯೆಂಬುವನು ನನ್ನ ತಾಯಿಗೆ ನಮಸ್ಕಾರಮಾಡಿ ಈ ರೀತಿ ಹೇಳಲುಪಕ್ರಮಿಸಿದನು.

''ಎಲೌ [illegible] ಕೇಳು, [illegible] ಎಂಬ ಗ್ರಾಮದಲ್ಲಿ ದೇವಸ್ವಾಮಿ ಮತ್ತು [illegible] ಬ್ರಾಹ್ಮಣ ಸಹೋದರರು ಪರಸ್ಪರ ಪ್ರೀತಿಯಿಂದ [illegible]. ಇವರಲ್ಲಿ ಈ ಇಂದ್ರದತ್ತನು [illegible] ಮಗನು. [illegible] ಮಗನು. ಸ್ವಲ್ಪ ಕಾಲದಲ್ಲಿಯೇ [illegible]. ಇದನ್ನು ನೋಡಿ ಸಹೋದರ[illegible] ಇಂದ್ರದತ್ತನ [illegible] ಅವನನ್ನೇ [illegible]. ಈ [illegible] ಪರಲೋಕ[illegible] [illegible]

ಗಳಾವವೂ ಇಲ್ಲದೆ ಸಕಲ ಆಪತ್ತಿಗೂ ಉತ್ಪತ್ತಿ ಸ್ಥಾನವೋ ಎಂಬಂತಿರುವ ವರ್ಷನ ಮನೆಯನ್ನು ನೋಡಿದೆವು. ಹೀಗಿದ್ದರೂ ಕುಮಾರ ಸ್ವಾಮಿಯ ಆಜ್ಞಾನುವರ್ತಿಗಳಾಗಿದ್ದ ನಾವು ಒಳಗೆ ಪ್ರವೇಶಿಸಿ ನೋಡಲು ವರ್ಷನು ಧ್ಯಾನಾಸಕ್ತನಾಗಿದ್ದನು. ಇನ್ನೂ ಒಳಗೆ ಹೋಗಿ ನೋಡಲಾಗಿ ಯೋಗ್ಯವಾದ ಆಹಾರಪಾನಾದಿಗಳ ಅಭಾವದಿಂದ ಧೂಸರವರ್ಣವುಳ್ಳವಳಾಗಿಯೂ, ಕೇವಲ ಕೃಶಳಾಗಿಯೂ, ಮಲಿನವಾಗಿಯೂ, ಹರಕು ಚಿಂದಿಯನ್ನುಟ್ಟು ವರ್ಷನ ಗುಣಗಳಿಂದುಂಟಾದ ಅನುರಾಗದಿಂದ ಪರವಶಳಾಗಿ ದಾರಿದ್ರ್ಯವೇ ನಿಜಸ್ವರೂಪವಾಗಿ ಬಂದಿದೆಯೋ ಎಂಬಂತೆ ಇರುವ ಆತನ ಧರ್ಮಪತ್ನಿಯು ಯಥಾವಿಧಿಯಾಗಿ ಅತಿಥಿಗಳಾದ ನಮ್ಮನ್ನು ಸತ್ಕರಿಸಿದಳು. ನಾವು ಆಕೆಗೆ ನಮಸ್ಕಾರಮಾಡಿ ನಾವು ಬಂದ ಕಾರ್ಯೋದ್ದೇಶವನ್ನೂ ಆ ಊರು ಜನರಿಂದ ತಿಳಿಯಬಂದ ವರ್ಷನ ಸಮಾಚಾರವನ್ನೂ ತಿಳಿಸಿದೆವು. ಇದನ್ನು ಕೇಳಿದ ಆ ಸಾಧ್ವಿಯು ''ಅಪ್ಪಾ, ನೀವು ಮಕ್ಕಳು ನಿಮ್ಮಲ್ಲಿ ಹೇಳುವದಕ್ಕೆ ನನಗೆ ನಾಚಿಕೆಯೇನು. ಹೇಳುತ್ತೇನೆ ಕೇಳಿ—ಈ ಊರಿನಲ್ಲಿ ಶಂಕರಸ್ವಾಮಿ ಎಂಬ ಒಬ್ಬಾನೊಬ್ಬ ಬ್ರಾಹ್ಮಣಶ್ರೇಷ್ಠನಿದ್ದನು. ಈ ನನ್ನ ಪತಿಯು ಮತ್ತು ಆತನ ತಮ್ಮ ಉಪವರ್ಷನೂ ಆತನ ಮಕ್ಕಳು. ಇವರಲ್ಲಿ ನನ್ನ ಪತಿಯು ಮೂರ್ಖನು ಮತ್ತು ದರಿದ್ರನು. ಇವನ ತಮ್ಮನು ಪಂಡಿತನು ಮತ್ತು ಧನಿಕನು. ಇದರಿಂದ ಉಪವರ್ಷನು ತನ್ನ ಪತ್ನಿಗೆ ನಮ್ಮ ಗೃಹಕೃತ್ಯವನ್ನು ನೋಡಿಕೊಳ್ಳುವ ಭಾರವನ್ನು ವಹಿಸಿದ್ದನು. ಈ ದೇಶದ ಹೆಂಗಸರು ಚಳಿ, ಮಳೆ ಮತ್ತು ಬೇಸಿಗೆಕಾಲಗಳಲ್ಲಿ ಸ್ನಾನದ ಆಯಾಸವನ್ನು ಪರಿಹರಿಸುವದೆಂದು ತಂಬಿಟ್ಟಿನಿಂದ ಏನೋ ಒಂದು ಗುಹ್ಯಾಕೃತಿಯನ್ನು ಮಾಡಿ ದಾನ ಮಾಡುವ ವಾಡಿಕೆಯಿರುವದು. ಇದರಿಂದ ಕೊಟ್ಟಿದ್ದನ್ನು ಪುನಃ ಹೊಂದುವದಿಲ್ಲವೆಂದು ಪ್ರತೀತಿಯಿರುವದು. ಇಂಥ ದಾನವನ್ನು ಮೂಢಮನುಷ್ಯರಲ್ಲದೆ ಮತ್ತಾರು ತೆಗೆದುಕೊಂಡಾರು? ಆದುದರಿಂದ ನನ್ನ ಮೈದುನನ ಹೆಂಡತಿಯು ಆ ತಂಬಿಟ್ಟಿನ ದಾನವನ್ನು ಒಂದು ಸಾರಿ ಮೂಢನಾದ ನನ್ನ ಗಂಡನಿಗೆ ದಕ್ಷಿಣಾಸಹಿತವಾಗಿ ಕೊಟ್ಟಿದ್ದಳು. ಇದನ್ನು ತೆಗೆದುಕೊಂಡು ಮನೆಗೆ ಬಂದ ಗಂಡನನ್ನು ನೋಡಿ ನಾನು ಆತನ ಮೂರ್ಖತೆಗಾಗಿ ಬಹಳ ಹೀಯಾಳಿಸಿದೆನು. ಆಗ ನನ್ನ ಪತಿಯು ತನ್ನ ಮೌರ್ಖ್ಯದಿಂದುಂಟಾದ ಅವಮಾನದಿಂದ ಮನಸಿನಲ್ಲಿಯೇ ಸಂಕಟಪಟ್ಟು ತನ್ನ ದಡ್ಡತನವನ್ನು ನೀಗಿ ವಿದ್ಯಾವಂತನಾಗಬೇಕೆಂದು ಅರಣ್ಯಕ್ಕೆ ಹೋಗಿ ತಪ

ಸ್ಸು ಮಾಡಿದನು. ತಪಸ್ಸಿನಿಂದ ಸಂತುಷ್ಟನಾದ ಕುಮಾರಸ್ವಾಮಿಯು ಎಲ್ಲಾ ವಿದ್ಯೆಗಳನ್ನೂ ಉಪದೇಶಿಸಿ ಏಕಶೃತಧರ (ಒಂದು ಸಾರಿ ಕೇಳಿದ ಮಾತ್ರಕ್ಕೆ ಗ್ರಹಿಸತಕ್ಕವನು)ನಾದ ಶಿಷ್ಯನು ಬಂದೊದಗಿದಾಗ ವಿದ್ಯೆಗಳನ್ನೆಲ್ಲಾ ಉಪದೇಶಿಸಿ ಪ್ರಕಾಶಗೊಳಿಸೆಂದು ಅನುಗ್ರಹಮಾಡಿದನು. ಷಣ್ಮುಖನ ಆಜ್ಞೆಯನ್ನು ಶಿರಸಾವಹಿಸಿ ಸಂತೋಷಚಿತ್ತನಾಗಿ ಮನೆಗೆ ಬಂದು ಎಲ್ಲಾ ವೃತ್ತಾಂತವನ್ನೂ ನನಗೆ ತಿಳಿಸಿ ಆ ಮೊದಲು ಯಾವಾಗಲೂ ಜಪಧ್ಯಾನಾದಿಗಳನ್ನು ಮಾಡುತ್ತಲಿರುತ್ತಾನೆ. ಆದುದರಿಂದ ನೀವು ಎಲ್ಲಿಯಾದರೂ ಏಕಶೃತಿಧರನನ್ನು ಹುಡುಕಿ ತಂದರೆ ನಿಮ್ಮ ಕೋರಿಕೆಗಳು ನೆರವೇರುವದರಲ್ಲಿ ಸಂಶಯವಿಲ್ಲ'' ಎಂದು ತಿಳಿಸಿದಳು. ಆಗ ನಾವು ಆಕೆಯು ಜೀವನವು ನೀಗಿ ಸುಖವಾಗಿರಲೆಂದು ಆಕೆಗೆ ಸೂರು ವರಹಗಳನ್ನು ಕೊಟ್ಟು ಅಲ್ಲಿಂದ ಹೊರಟು ಏಕಶೃತಿಧರನನ್ನು ಹುಡುಕುತ್ತಾ [illegible] ನಿಮ್ಮ [illegible] ಬಾಲಕನು ಏಕಶೃತಧರ [illegible] ನಮ್ಮೊ [illegible] ಕೇಳಿ ಮಾ [illegible] ವ್ಯಾಡಿಯೇ, ನೀನು ಹೇಳು [illegible] ಈ ಬಾಲಕನು ಏಕ [illegible] ವಿದ್ಯೆಗಳನ್ನು ಕಲಿಯು [illegible] [illegible]

ಯೋಗ್ಯನಲ್ಲವೆಂದು ಯೋಚಿಸಿ ನನ್ನ ಉಪನಯನ ಮಹೋತ್ಸವಕ್ಕಾಗಿ ತಮ್ಮಲ್ಲಿದ್ದ ದ್ರವ್ಯವನ್ನೆಲ್ಲಾ ನಮ್ಮ ತಾಯಿಗೆ ಕೊಟ್ಟು ವ್ಯಾಡಿಯೇ ನನಗೆ ಉಪನಯನವನ್ನು ಮಾಡಿಸಿದನು. ಆ ಮೇಲೆ ಮಾತೆಯು ಏಕಪುತ್ರನಾದ ನನ್ನನ್ನು ಅಗಲುವುದರಲ್ಲಿ ಉಂಟಾದ ಮನೋವ್ಯಥೆಯನ್ನೆಲ್ಲಾ ನನ್ನ ಉತ್ಸಾಹವನ್ನು ನೋಡಿ ಮರೆತಾಗ್ಯೂ ಉಕ್ಕಿಬರುವ ಕಣ್ಣೀರನ್ನು ಪ್ರಯಾಸಪಟ್ಟು ತಡೆದು ನಾನವರ ಜತೆಯಲ್ಲಿ ವಿದ್ಯಾಭ್ಯಾಸಕ್ಕೆ ಹೊರಡಲು ಅಪ್ಪಣೆಯನ್ನಿತ್ತಳು.

ನನ್ನ ಲಾಭದಿಂದ ಕುಮಾರಸ್ವಾಮಿಯ ಅನುಗ್ರಹ ವೃಕ್ಷವು ಪುಷ್ಪಿತವಾದಂತೆ ಭಾವಿಸಿದ ಆ ವ್ಯಾಡಿ ಮತ್ತು ಇಂದ್ರದತ್ತ ಇವರು ಆ ಊರನ್ನು ಬಿಟ್ಟು ಜಾಗ್ರತೆಯಾಗಿ ಹೊರಟರು ಆಮೇಲೆ ಕ್ರಮವಾಗಿ ನಾವು ಪಾಟಲಿಪುರವನ್ನು ಸೇರಿ ವರ್ಷನ ಮನೆಗೆಹೋದೆವು. ಆಗ ವರ್ಷನು ನನ್ನನ್ನು ನೋಡಿ ಸ್ವಾಮೀ, ಷಣ್ಮುಖನ ಅನುಗ್ರಹವೇ ಪ್ರತ್ಯಕ್ಷವಾಗಿ ಬಂದಿರುವದೆಂದು ತಿಳಿದನು. ಅನಂತರ ಒಂದು ಶುಭದಿನದಲ್ಲಿ ಪರಿಶುದ್ಧವಾದ ಒಂದು ಸ್ಥಳದಲ್ಲಿ ನಮ್ಮನ್ನು ಮುಂದಿರಿಸಿಕೊಂಡು ಸುಖೋಪವಿಷ್ಟನಾದ ವರ್ಷೋಪಾಧ್ಯಾಯನು ದಿವ್ಯ ಧ್ವನಿಯಿಂದ ಓಂಕಾರವನ್ನುಚ್ಚರಿಸಿದನು. ಆಗ ಅವನಿಗೆ ಶಿಕ್ಷಾ ವ್ಯಾಕರಣ, ಛಂದಸ್ಸು, ನಿರುಕ್ತ, ಕಲ್ಪ, ಜ್ಯೋತಿಷಗಳೆಂಬ ಆರು ಅಂಗಗಳಿಂದ ಸಮೇತವಾದ ಸಕಲ ವೇದಗಳೂ ಸ್ಮರಣೆಗೆ ಬಂದವು. ಬಳಿಕ ಆತನು ಕ್ರಮವಾಗಿ ಎಲ್ಲವನ್ನೂ ನಮಗೆ ಉಪದೇಶಿಸುತ್ತಾ ಬಂದನು. ಗುರುವು ಒಂದು ಸಾರಿ ಹೇಳಿದ್ದನ್ನು ನಾನು ಗ್ರಹಣಮಾಡಿ ಪುನಃ ಹೇಳುತ್ತಾ ಬಂದೆನು. ಹೀಗೆ ಎರಡುಸಾರಿ ಹೇಳಿದ್ದನ್ನು ಕೇಳಿ ವ್ಯಾಡಿಯು ಹೇಳಿದನು. ಹೀಗೆ ಮೂರು ಸಾರಿ ಹೇಳಿದ್ದನ್ನು ಇಂದ್ರದತ್ತನು ಗ್ರಹಿಸಿದನು. ಈರೀತಿಯಾಗಿ ನಾವುಎಲ್ಲಾ ವಿದ್ಯೆಗಳನ್ನೂ ಕಲಿತೆವು. ಈವರಿವಿಗೆ ವರ್ಷನು ಮೂರ್ಖನೆಂದು ತಿಳಿದಿದ್ದ ಸುತ್ತುಮುತ್ತಲಿದ್ದ ಬ್ರಾಹ್ಮಣರೆಲ್ಲರೂ ಈ ಅಪೂರ್ವವಾದ ಅಧ್ಯಯನ ಧ್ವನಿಯನ್ನು ಕೇಳಿ ಇದೇನಿರಬಹುದೋ ತಿಳಿಯಬೇಕೆಂದು ಅಲ್ಲಿಗೆ ಬಂದು ವರ್ಷೋಪಾಧ್ಯಾಯನ ಪಾಂಡಿತ್ಯವನ್ನು ನೋಡಿ ಸಂತೋಷಪಟ್ಟು ಆತನಿಗೆ ನಮಸ್ಕರಿಸಿ ಸ್ತೋತ್ರಮಾಡಿದರು. ಈ ವಾರ್ತೆಯು ಎಲ್ಲೆಲ್ಲಿಯೂ ಹರಡಿತು. ಇದನ್ನು ತಿಳಿದ ಪಾಟಲೀಪುತ್ರದ ಸಕಲ ಪ್ರಜೆಗಳೂ ಸಂತೋಷದಿಂದ ಉತ್ಸವ ಮಾಡುತ್ತಿರುವಾಗ ಈತನ ತಮ್ಮನಾದ ಉಪವರ್ಷನು ಸಂತೋಷದಿಂದ ಉತ್ಸವಗಳನ್ನು ಮಾಡಿದನೆಂದು ಹೇಳುವದು ಅಷ್ಟೇನು ಆಶ್ಚರ್ಯವಲ್ಲ. ತನ್ನ ರಾಜ್ಯ

ದಲ್ಲಿ ಮೂರ್ಖನಾಗಿದ್ದ ವರ್ಷನು ಪರಮೇಶ್ವರನ ಮಗನಾದ ಕಾರ್ತಿಕೇಯನ ಅನುಗ್ರಹದಿಂದ ವಿದ್ವಾಂಸನಾಗಿರುವದನ್ನು ತಿಳಿದು ಮಹದೈಶ್ವರ್ಯವಂತನಾದ ರಾಜನು ಅವನಲ್ಲಿ ಪರಮಪ್ರೀತನಾಗಿ ಆಗಲೇ ನಮ್ಮ ಗುರುಗಳ ಬಡತನವನ್ನು ಹೋಗಲಾಡಿಸಿದನು.

ಎಂಬಲ್ಲಿಗೆ ಮಹಾಕವಿ ಶ್ರೀ ಸೋಮದೇವಭಟ್ಟ ವಿರಚಿತವಾದ ಕಥಾಸರಿತ್ಸಾಗರದೋಳ್ ಕಥಾಪೀಠಕ ಲಂಬಕದ ಎರಡನೆಯ ತರಂಗವು ಮುಗಿದುದು.

ಮೂರನೆಯ ತರಂಗವು.

ವರರುಚಿ ಕಥಾಂತರ್ಗತವಾದ ಪಾಟಲೀಪುತ್ರ ಕಥಾ.

ಕಾಣಭೂತಿಯು ಒಂದೇ ಮನಸ್ಸಿನಿಂದ ಕೇಳುತ್ತಿರಲು ವರರುಚಿಯು ಪುನಃ ಹೇಳಲುಪಕ್ರಮಿಸಿದನು "ಕಾಣಭೂತಿಯೇ ಕೇಳು, ಒಂದಾನೊಂದು ದಿನ ನಮ್ಮ ಪಾಠಪ್ರವಚನಗಳೆಲ್ಲವೂ ಮುಗಿದಮೇಲೆ ನಿತ್ಯಕರ್ಮಗಳನ್ನೆಲ್ಲಾ ತೀರಿಸಿಕೊಂಡು ಕುಳಿತುಕೊಂಡಿದ್ದನಾದ ಉಪಾಧ್ಯಾಯನನ್ನು ಕುರಿತು ಎಲೈ ಗುರುವೆ, ಈ ನಗರವು (ಪಾಟಲಿಪುತ್ರ ನಗರವು) ಲಕ್ಷ್ಮಿಗೂ, ಸರಸ್ವತಿಗೂ ಹೇಗೆ ಆವಾಸಭೂಮಿಯಾಗಿ ಪ್ರಕಾಶಿಸುವದಕ್ಕೆ ಕಾರಣವೇನೆಂದು ಬೆಸಗೊಂಡೆವು. [illegible]

ಡಿಕೊಟ್ಟು ತನಗೆ ಬೇರೆ ಪುತ್ರ ಸಂತಾನವಿಲ್ಲದ್ದರಿಂದ ತನ್ನ ಸಕಲ ಆಸ್ತಿಯನ್ನೂ ಇವರಿಗೊಪ್ಪಿಸಿ ತಾನು ಗಂಗಾಯಾತ್ರೆಗೆ ಹೊರಟುಹೋದನು. ಇವರು ಮಾವನಮನೆಯಲ್ಲಿ ವಾಸಮಾಡುತ್ತಿರುವಾಗ ಕೆಲಕಾಲದಮೇಲೆ ಆ ದೇಶದಲ್ಲಿ ಅನಾವೃಷ್ಟಿನಿಮಿತ್ತವಾದ ಕ್ಷಾಮವು ಪ್ರಾಪ್ತವಾಯಿತು. ಧಾತುಕರಾದ ಪಾಪಿಗಳ ಮನಸ್ಸಿನಲ್ಲಿ ಎಂಥಾ ಬಂಧುವಿನ ವಿಚಾರದಲ್ಲಿಯೂ ಕನಿಕರವುಂಟಾಗಲಾರದಲ್ಲವೆ? ಈ ನೀಚರಾದ ಮೂವರು ಸಹೋದರರೂ ಆಪತ್ಕಾಲದಲ್ಲಿ ಪತಿವ್ರತೆಯರಾದ ತಮ್ಮ ಹೆಂಡರನ್ನು ಬಿಟ್ಟು ಎಲ್ಲಿಯೋ ಹೊರಟು ಹೋದರು. ಆಗ ಈ ಮೂವರು ಹೆಂಡತಿಯರಲ್ಲಿ ನಡುವಿನವಳು ಬಸುರಿಯಾಗಿದ್ದಳು. ಈ ಮೂವರೂ ತಮ್ಮ ತಂದೆಯ ಸ್ನೇಹಿತನಾದ ಯಜ್ಞದತ್ತನ ಮನೆಯನ್ನು ಸೇರಿದರು. ಸತ್ಕುಲಪ್ರಸೂತೆಯರಾದ ಮಹಿಳೆಯರು ಯಾವ ಆಪತ್ಕಾಲದಲ್ಲಿ ತಾನೇ ತಮ್ಮ ಪಾತಿವ್ರತ್ಯಕ್ಕೆ ಕುಂದನ್ನುಂಟು ಮಾಡಿಕೊಂಡಾರು? ಈ ಸಾಧ್ವಿಯರು ಪತಿಯರನ್ನೇ ನಿರಂತರವೂ ಧ್ಯಾನಿಸುತ್ತಾ ಕಷ್ಟವಾದ ಕೆಲಸಗಳನ್ನು ಮಾಡಿ ಜೀವಿಸುತ್ತಿದ್ದರು. ಸ್ವಲ್ಪ ಕಾಲ ಕಳೆದಮೇಲೆ ಗರ್ಭವತಿಯಾಗಿದ್ದ ಆ ನಡುವಿನವಳು ಒಂದು ಗಂಡು ಶಿಶುವನ್ನು ಹೆತ್ತಳು. ಮೂವರು ಅಕ್ಕತಂಗಿಯರೂ ಶಿಶುವನ್ನು ಒಬ್ಬರಿಗಿಂತೊಬ್ಬರು ಅತಿಶಯವಾದ ಪ್ರೀತಿಯಿಂದ ಪೋಷಿಸುತ್ತಿದ್ದರು. ಒಂದಾನೊಂದುದಿನ ಪಾರ್ವತೀ ಪರಮೇಶ್ವರರು ಅದೇಮಾರ್ಗವಾಗಿ ಸಂಚರಿಸುತ್ತಲಿರುವಾಗ ಷಣ್ಮುಖಮಾತೆಯು ಈ ಮಗುವನ್ನು ನೋಡಿ ಮನದಲ್ಲಿ ಮರುಗಿದವಳಾಗಿ ತನ್ನ ಪತಿಯನ್ನು ನೋಡಿ "ಎಲೈ ದೀನಬಂಧುವೆ, ಈ ಮಗುವು ನಮ್ಮನ್ನು ಮುಂದೆ ಪಾಲನೆಮಾಡಬಹುದೆಂಬ ಆಶೆಯಿಂದ ಈ ಮೂವರು ಸ್ತ್ರೀಯರೂ ಹೇಗೆ ನಿರತಿಶಯವಾದ ಸ್ನೇಹದಿಂದೀಬಾಲಕನನ್ನು ಕಾಪಾಡುತ್ತಲಿದ್ದಾರೆ! ನೋಡು ಪ್ರಿಯನೇ, ಈ ಸಾಧ್ವಿಯರ ಇಷ್ಟದಂತೆ ಇವರನ್ನು ಇವನು ಈಗಲೇ ಕಾಪಾಡುವಂತೆ ಅನುಗ್ರಹಿಸು" ಎಂದು ಪ್ರಾರ್ಥಿಸಿದಳು. ಅದನ್ನು ಕೇಳಿ ಶಂಕರನು "ಪ್ರಿಯೇ, ಇವನು ಜನ್ಮಾಂತರದಲ್ಲಿ ಪತ್ನೀಸಮೇತನಾಗಿ ನಮ್ಮನ್ನು ಆರಾಧಿಸಿರುವದರಿಂದ ತತ್ಫಲಾನುಭವಕ್ಕಾಗಿಯೇ ಜನ್ಮವನ್ನೆತ್ತಿರುವನು. ಇವನ ಹೆಂಡತಿಯು ಮಹೇಂದ್ರವರ್ಮನೆಂಬ ರಾಜನ ಮಗಳಾಗಿಹುಟ್ಟಿ ಪಾಟಲಿ ಎಂಬ ಹೆಸರನ್ನು ಹೊಂದಿ ಪುನಃ ಇವನನ್ನೇ ಮದುವೆಯಾಗುವಳು" ಎಂದು ಪಾರ್ವತಿಗೆ ಹೇಳಿ ಅನಂತರದಲ್ಲಿ ಆ ಸಾಧ್ವಿಯರಿಗೆ

ಸ್ವಪ್ನದಲ್ಲಿ ಪ್ರತ್ಯಕ್ಷನಾಗಿ ನಿಮ್ಮೀ ಶಿಶುವಿಗೆ ಪುತ್ರಕನೆಂದೇ ಹೆಸರಿಡಿ, ಮುಂದೆ ಇವನು ರಾಜನಾಗುತ್ತಾನೆ. ಮತ್ತು ಪ್ರತಿದಿನವೂ ಇವನು ಮಲಗೇಳುವಾಗ ಇವನ ತಲೆದಿಂಬಿನಲ್ಲಿ ಲಕ್ಷ ವರಹಗಳು ಸಿಕ್ಕುತ್ತವೆಂದು ಹೇಳಿ ಅಂತರ್ಧಾನನಾದನು. ಅದರಂತೆಯೇ ಆದಿನ ಮೊದಲುಗೊಂಡು ಶಿಶುವು ಮಲಗಿ ಎದ್ದೊಡನೆಯೇ ಅದರ ತಲೆದಿಂಬಿನಲ್ಲಿ ಲಕ್ಷ ವರಹಗಳು ದೊರಕುತ್ತ ಬಂದವು. ಇದರಿಂದ ಕ್ರಮಕ್ರಮವಾಗಿ ಧನವು ಹೆಚ್ಚುತ್ತ ಬಂದು ಕೆಲಕಾಲದಲ್ಲಿಯೇ ಪುತ್ರಕನು ರಾಜನಾದನು. ಸಕಲೈಶ್ವರ್ಯಗಳೂ ತಪಸ್ಸಿಗೆ ಅಧೀನಗಳೆಂದು ಪುತ್ರಕನ ವೃತ್ತಾಂತದಿಂದ ತಿಳಿಯಬರುವದಲ್ಲವೇ! ಸ್ವಲ್ಪ ಕಾಲದಮೇಲೆ ಯಜ್ಞದತ್ತನು ರಾಜನನ್ನು ಕುರಿತು "ಎಲೈ ರಾಜನೇ, ನಿಮ್ಮ ಜನಕರು ದುರ್ಭಿಕ್ಷದಿಂದ ಪೀಡಿತರಾಗಿ ಎಲ್ಲಿಯೋ ಹೋಗಿಬಿಟ್ಟರು. ನಿಶ್ಚಯವೂ ನೀನು ಬ್ರಾಹ್ಮಣ ಸಂತರ್ಪಣೆಯನ್ನು ಮಾಡಿಸುತ್ತ ಬಂದರೆ ಕದಾಚಿತ್ ಅದನ್ನು ತಿಳಿದು ಅವರು ಬರಬಹುದು" ಎಂದು ತಿಳಿಸುತ್ತೇನೆ. ಈ ಸಂದರ್ಭದಲ್ಲಿ ವೃತ್ತಾಂತರೂಪವಾದ ಬ್ರಹ್ಮದತ್ತನ ಕಥೆಯನ್ನು ಹೇಳುತ್ತೇನೆ ಕೇಳು ಎಂದು ಆ ಕಥೆಯನ್ನು ಹೇಳಲು ಉಪಕ್ರಮಿಸಿದನು.

ಬ್ರಹ್ಮದತ್ತನ ಕಥೆ.

[illegible]

ವೇನು" ? ಎಂದು ಬೆಸಗೊಳ್ಳಲು ಆ ಹಂಸಗಳು "ರಾಜನೇ ಕೇಳು, ಕಳೆದ ಜನ್ಮದಲ್ಲಿ ನಾವಿಬ್ಬರೂ ಕಾಗೆಗಳಾಗಿದ್ದೆವು. ಒಂದಾನೊಂದು ಪುಣ್ಯತಮವಾದ ಶಿವಾಲಯದಲ್ಲಿ ಬಲಿಗೂಳಿಗಾಗಿ ಪರಸ್ಪರ ಜಗಳವಾಡುತ್ತಾ ಆ ದೇವಾಲಯದ ದೋಣಿಯಲ್ಲಿ ಬಿದ್ದು ಮೃತಿಯನ್ನೈದಿದೆವು. ಆ ಪುಣ್ಯಪ್ರಭಾವದಿಂದ ಜನ್ಮಾಂತರ ಜ್ಞಾನವುಳ್ಳವರಾಗಿ ಸುವರ್ಣ ಬಣ್ಣದ ಹಂಸಜನ್ಮವನ್ನು ಹೊಂದಿರುತ್ತೇವೆ" ಎಂದು ಸ್ಫುಟವಾಗಿ ಪ್ರತ್ಯುತ್ತರವನ್ನು ಹೇಳಿದವು. ಈ ಮಾತನ್ನು ಕೇಳಿ ಪುನಃ ಪುನಃ ಅವುಗಳನ್ನು ನೋಡುತ್ತಾ ಬ್ರಹ್ಮದತ್ತನು ತುಂಬಾ ಪ್ರೀತನಾದನು ಎಂದು ಯಜ್ಞದತ್ತನು ಉಪದೇಶಿಸಿದನು. ಅದರಂತೆ ಪುತ್ರಕರಾಜನು ಅನ್ನದಾನ ಮಾಡಲಾರಂಭಿಸಿದನು. ಕೆಲವು ದಿವಸಗಳಲ್ಲಿ ಇದನ್ನು ಕೇಳಿ ಆ ಬ್ರಾಹ್ಮಣರು ಅಲ್ಲಿಗೆ ಬಂದು ಸೇರಿದರು. ಇವರ ಪರಿಚಯವು ಎಲ್ಲರಿಗೂ ತಿಳಿದಮೇಲೆ ಪುನಃ ತಮ್ಮ ಪತ್ನಿಯರನ್ನು ಪಡೆದದ್ದಲ್ಲದೆ ಹಿಂದೆ ಇದ್ದ ಬಡತನಕ್ಕೆ ಬದಲಾಗಿ ಮಹದೈಶ್ವರ್ಯವನ್ನು ಹೊಂದಿದರು. ಆದರೇ ಕದಿಂದ ಬುದ್ಧಿ ಶೂನ್ಯರಾದ ದುಷ್ಟರು ತಾವು ಎಷ್ಟೋ ಆಪತ್ತುಗಳನ್ನು ಹೊಂದಿ ಉತ್ತೀರ್ಣರಾಗಿದ್ದರೂ ತಮ್ಮ ದುರ್ಬುದ್ಧಿಯನ್ನು ಮಾತ್ರ ಬಿಡುವದಿಲ್ಲವೆಂಬುದು ತುಂಬ ಆಶ್ಚರ್ಯಕರವಾದದ್ದೇ ಸರಿ. ಕೆಲವು ಕಾಲದಮೇಲೀಬ್ರಾಹ್ಮಣರು ರಾಜ್ಯಾಪೇಕ್ಷಿಗಳಾಗಿ ಪುತ್ರಕನನ್ನು ಕೊಲ್ಲಿಸಬೇಕೆಂದು ದುರಾಲೋಚನೆಮಾಡಿ ವಿಂಧ್ಯಪರ್ವತದಲ್ಲಿರುವ ಭವಾನೀದರ್ಶನ ಮಾಡಬೇಕೆಂಬ ನೆವದಿಂದ ಅಲ್ಲಿಗೆ ಈ ರಾಜನನ್ನು ಕರೆದುಕೊಂಡು ಹೋಗಿ ನೀನು ಮೊದಲು ದೇವೀದರ್ಶನಮಾಡೆಂದು ಹೇಳಿ ದೇವಸ್ಥಾನದ ಗರ್ಭಗುಡಿಯೊಳಕ್ಕೆ ಕಳಿಸಿದರು. ಇವರ ಮಾತಿನಲ್ಲಿ ನಂಬಿಕೆಯನ್ನಿಟ್ಟಿದ್ದ ಪುತ್ರಕನು ಒಳಗೆ ಪ್ರವೇಶಿಸಿದೊಡನೆಯೇ ತನ್ನನ್ನು ಕೊಲ್ಲುವದಕ್ಕೆ ಉದ್ಯುಕ್ತರಾಗಿದ್ದ ಕಟುಕರನ್ನು ನೋಡಿ 'ನನ್ನನ್ನೇಕೆ ಕೊಲ್ಲುತ್ತೀರಿ' ಎಂದು ಅವರನ್ನು ಕೇಳಿದನು. ಆಗಲಾ ಕೊಲೆಪಾತಕರು ನಿನ್ನನ್ನು ಕೊಲ್ಲಬೇಕೆಂದು ನಿಮ್ಮ ತಂದೆಗಳು ನಮಗೆ ಬಹಳ ಹಣವನ್ನು ಕೊಟ್ಟಿರುವುದೇ ಕಾರಣವೆಂದು ಹೇಳಿದರು. ಬುದ್ಧಿಶಾಲಿಯಾದಾ ಪುತ್ರಕನು ನೀವು ನನ್ನನ್ನು ವಧಿಸದೇ ಬಿಟ್ಟರೆ ಅಮೂಲ್ಯವಾದೀ ರತ್ನಾಭರಣವನ್ನು ಕೊಡುತ್ತೇನಲ್ಲದೆ ನಿಮಗೆ ಯಾವ ಮಾತೂ ಬಾರದಂತೆ ದೂರವಾಗಿ ತಲೆತಪ್ಪಿಸಿಕೊಂಡು ಹೋಗುತ್ತೇನೆಂದು ಹೇಳಿಕೊಂಡನು, ಆಗಕೊಲೆಪಾತಕರು ದೇವಿಯ ಮಾಯದಿಂದ ರತ್ನಾಭರಣಕ್ಕೆ

ಮೋಹಿತರಾಗಿ ಆಭರಣವನ್ನು ತೆಗೆದುಕೊಂಡು ಅವನನ್ನು ಬಿಟ್ಟರು. ಮತ್ತು
ಪುತ್ರಕನನ್ನು ಕೊಂದೆವೆಂದು ಅವನ ಜನಕರಿಗೆ ಹೇಳಿದರು. ವಿಶ್ವಾಸಘಾತ
ಕರಿಗೆ ಎಂದಿಗಾದರೂ ಮಂಗಳವಾದೀತೇ? ಕೃತಘ್ನರಾದ ಈ ರಾಜಜನ
ಕರು ಊರಿಗೆ ಹಿಂದಿರುಗಿ ಬಂದ ಮೇಲೆ ಈ ವರ್ತಮಾನ ಹೇಗೋ ಹೊರ
ಬಿದ್ದು ರಾಜ್ಯಾಭಿಲಾಷೆಯಿಂದ ದ್ರೋಹವನ್ನಾಚರಿಸಿದರೆಂದು ಇವರನ್ನು
ಮಂತ್ರಿಗಳು ಕೊಲ್ಲಿಸಿದರು. ಇತ್ತಲಾ ಸತ್ಯಪ್ರತಿಜ್ಞನಾದ ಪುತ್ರಕನು ತನ್ನ
ರಾಜ್ಯಕೋಶಾದಿಗಳನ್ನೂ, ಬಂಧುವರ್ಗವನ್ನೂ ತೊರೆದು ವಿಂಧ್ಯಪರ್ವತದ
ದುರ್ಗಮವಾದ ಕಾಡಿನಲ್ಲಿ ತಿರುಗುತ್ತಿರುವಾಗ ಒಂದು ಪ್ರದೇಶದಲ್ಲಿ
ತಪಸ್ಸನ್ನು ಮಾಡುತ್ತಿದ್ದ ಇಬ್ಬರು ಪುರುಷರನ್ನು ನೋಡಿ “ನೀವು
ಯಾರು? ಏನು ಕಾರಣದಿಂದ ಈ ಕಾಳಗವನ್ನು ಮಾಡುತ್ತೀರಿ?”
ಎಂದು ಕೇಳಿದನು. ಆಗ ಅವರು “ನಾವು ಮಾಯಾಸುರನ ಮಕ್ಕಳು,
ನಮಗೆ ಒಂದು ಪಾತ್ರೆ, ಒಂದು ಕೋಲು, ಮತ್ತು ಒಂದು ಪಾದರಕ್ಷೆ
ಈ ಮೂರು ವಸ್ತುಗಳು ಪಿತ್ರಾರ್ಜಿತವಾದ ಆಸ್ತಿ. ನಮ್ಮಲ್ಲಿ ಯಾರು
[illegible] ಅವರು ಇವುಗಳನ್ನು ತೆಗೆದುಕೊಳ್ಳಬೇಕೆಂದು
ಹೀಗೆ ಗುದ್ದಾಡುತ್ತೇವೆ” ಎಂದು ಹೇಳಿದರು. ಇದನ್ನು ಕೇಳಿ ಪುತ್ರಕನು
[illegible]

ವೇಶ್ಯಾಗೃಹದಲ್ಲಿಯೇ? ಇಲ್ಲ. ವೇಶ್ಯೆಯರು ಬಹು ಮೋಸಗಾತಿಯರು
ಹಾಗಾದರೆ ಬ್ರಾಹ್ಮಣರೋ? ಇನ್ನೇಕೆ ಇವರ ಗುಣವನ್ನು ವರ್ಣಿಸು
ವುದು? ನಮ್ಮ ಜನಕರ ಗುಣಗಳೇ ಪ್ರತ್ಯಕ್ಷವಾಗಿವೆ. ಹಾಗಾದರೆ ವರ್ತ
ಕನ ಮನೆಯಲ್ಲಿರಬಹುದಲ್ಲವೇ? ಅದೂ ಅಸಂಬದ್ಧವೇ. ಇವರಿಗೆ ಹಣದಾಸೆ
ಬಹಳ ಹಾಗಾದರೆ ಈಗೇನು ಮಾಡೋಣ? ” ಎಂದಿವೇ ಮೊದಲಾಗಿ
ಯೋಚಿಸುತ್ತಾ ಬೀದಿಯಲ್ಲಿ ಹೋಗುತ್ತಿರುವಾಗ ಒಂದು ನಿರ್ಜನವಾದ
ಮುರುಕು ಮನೆಯನ್ನು ಕಂಡು ಅದರೊಳಗೆ ಹೋಗಿ ನೋಡಲಾಗಿ ಅಲ್ಲಿ
ಒಬ್ಬ ಮುದುಕೆಯು ವಾಸಮಾಡುತ್ತಿರುವದು ಗೊತ್ತಾಯಿತು. ಆಗ
ಲಾರಾಜಕುಮಾರನು ಆ ಮುದುಕಿಗೆ ತಕ್ಕಷ್ಟು ಹಣವನ್ನು ಕೊಟ್ಟು
ಸಂತೋಷಪಡಿಸಿ ಆಕೆಯ ಆದರಣೆಯಿಂದ ಯಾರಿಗೂ ತಿಳಿಯದಂತೆ ಅಲ್ಲಿ
ವಾಸಮಾಡುತ್ತಿದ್ದನು. ಹೀಗೆ ಸ್ವಲ್ಪಕಾಲ ಕಳೆದಮೇಲೆ ಅವನಲ್ಲಿ ಪ್ರೀತಿ
ಗೊಂಡ ಆ ಮುದುಕೆಯು ‘ ಎಲೈ ಮಗನೇ ನಿನಗೆ ಅನುರೂಪಳಾದ
ಹೆಂಡತಿಯು ದೊರೆಯದಿರುವದಕ್ಕಾಗಿ ತುಂಬಾ ವ್ಯಸನವಾಗಿದೆ. ಈ ಪಟ್ಟ
ಣದ ರಾಜನಿಗೆ ಪಾಟಲಿಯೆಂಬ ಒಬ್ಬಳು ಮಗಳಿದ್ದಾಳೆ. ತಂದೆಯು ಆಕೆ
ಯನ್ನು ಮಹಡಿಯ ಮೇಲಣ ಅಂತಃಪುರದಲ್ಲಿ ರತ್ನದಂತೆ ರಕ್ಷಿಸುತ್ತಿದ್ದಾನೆ
ಎಂದು ಹೇಳಿದಳು. ಮುದುಕಿಯ ಮಾತನ್ನು ಕಿವಿಗೊಟ್ಟು ಕೇಳುತ್ತಿದ್ದ
ರಾಜಪುತ್ರನ ಮನಸ್ಸನ್ನು ಈ ವಾಕ್ಯಗಳು ಪ್ರವೇಶಿಸಿದ ದಾರಿಯಲ್ಲಿಯೇ
ಮನ್ಮಥನೂ ಪ್ರವೇಶಿಸಿದನು. ಆಗ ಪುತ್ರಕನು ಈಗಲೇ ಹೋಗಿ ನಾನು
ಆ ಕಾಂತೆಯನ್ನು ನೋಡಬೇಕೆಂದು ನಿಶ್ಚಯಿಸಿ ಆ ರಾತ್ರಿಯಲ್ಲಿಯೇ ಪಾದು
ಕೆಗಳ ಸಹಾಯದಿಂದ ಅಂತರಿಕ್ಷಮಾರ್ಗವಾಗಿ ಹೋಗಿ ಪರ್ವತ ಶಿಖರ
ದಂತೆ ಅತ್ಯುನ್ನತವಾದ ಮಹಡಿಯ ತುದಿಯಲ್ಲಿರುವ ಕಿಟಕಿಯಿಂದ ಆ ರಾಜ
ಪುತ್ರಿಯ ಅಂತಃಪುರವನ್ನು ಯಾರೂ ಅರಿಯದಂತೆ ಪ್ರವೇಶಿಸಿದನು. ಅಲ್ಲಿ
ಬೆಳದಿಂಗಳಿಗೆ ಮೈಯೊಡ್ಡಿ ಸುಖವಾಗಿ ಮಲಗಿ ನಿದ್ರಿಸುತ್ತಲಿದ್ದ ಪಾಟಲಿ
ಯನ್ನು ನೋಡಿ ವಿಸ್ಮಿತನಾಗಿ ಈ ಪ್ರಪಂಚವನ್ನು ಜಯಿಸುವದರಲ್ಲುಂಟಾದ
ಶ್ರಮಪರಿಹಾರಕ್ಕಾಗಿ ಪ್ರತ್ಯಂಗದಲ್ಲಿಯೂ ಸೇರಿರುವ ಚಂದ್ರಕಾಂತಿಯಿಂದ
ಸೇವಿತಳಾಗಿ ಮಲಗಿ ನಿದ್ರಿಸುತ್ತಿರುವ ಮನ್ಮಥನ ಮೂರ್ತಿ ಮತ್ತಾದ
ಶಕ್ತಿದೇವತೆಯೋ ಎಂದುಭ್ರಮೆಗೊಂಡು ಈಕೆಯನ್ನು ಎಚ್ಚರಗೊಳಿ
ಸುವ ಬಗೆ ಹೇಗೆಂದು ಯೋಚಿಸುತ್ತಿರುವಾಗ ಹೊರಗೆ ಪಹರೆಯವನು

ಮಧುರವಾಗಿ ಗೊರಕೆ ಹಾಕುತ್ತಾ—ಏಕಾಂತದಲ್ಲಿ ಮಲಗಿ ನಿದ್ರಿಸುತ್ತಿರುವ ಪ್ರಾಣಕಾಂತೆಯನ್ನು ಆಲಿಂಗನ ಮಾಡಿಕೊಂಡು ಮಂದಮಂದವಾಗಿ ಕಣ್ಣುಗಳನ್ನು ತೆರೆಯುತ್ತಾ ಎಚ್ಚರಗೊಳ್ಳುವಂತೆ ಮಾಡುವುದಕ್ಕಿಂತಲೂ ಹಿರಿಯದವಾಗಿ ಇಹ ಜನ್ಮದಲ್ಲಿ ಫಲವಿನ್ನಾವದಿರುವುದೆಂಬ ಅರ್ಥಗರ್ಭಿತವಾದ ಆ ಪದ್ಯವನ್ನು ಗಾನಮಾಡಿದನು.

ಆಲಿಂಗ್ಯ ಮಧುರ ಹುಂಕೃತಿಮಲಸೋನ್ಮೀಲದೀಕ್ಷಣಾಂ ರತಃಕಾಂತಾಂ|
ಯದ್ಬೋಧಯಂತಿ ಸುಪ್ತಾಂ ಜನ್ಮನಿ ಯೂನಾಂ ತದೇವಫಲಂ ||

ಆ ಉಪಶ್ರುತಿಯನ್ನು ಕೇಳಿದ ಮಾತ್ರದಿಂದ ನಡುಕ ಹತ್ತಿ ವಿವಶಗಳಾದ ಅಂಗಗಳಿಂದ ಆ ಕಾಂತೆಯನ್ನಾಲಿಂಗನ ಮಾಡಿದನು. ಆಗಲಾ ಪಾಟಲಿಯು ಎಚ್ಚತ್ತು [illegible] ನಾಚಿಕೆಯೂ, [illegible] ಕಾಣಬರುತ್ತ [illegible] ಅನಂತರ [illegible] ನಡೆದಮೇಲೆ ಗಾಂಧರ್ವ [illegible] ಆ ದಂಪತಿಗಳಿಗೆ ಪ್ರೀತಿ [illegible] ಬಹು ಶ್ಲಾಘ್ಯ [illegible] ಬಂದುದರಿಂದ [illegible] ತಿಳಿಸಿ [illegible] ಆದ [illegible] ಆಕೆಯಲ್ಲಿಯೇ [illegible]

ಜ್ಞೆಯಂತೆ ಹುಡುಕುವುದಕ್ಕೆ ಹೋಗಿದ್ದ ಚಾರರು ಮುರುಕುಮನೆಯಲ್ಲಿದ್ದ ಪುತ್ರಕನನ್ನು ಗುರ್ತಿಸಿ ರಾಜನಲ್ಲಿಗೆ ಹಿಡಿದುತಂದರು. ಆಗಾಪುತ್ರಕನು ಸಿಟ್ಟುಗೊಂಡಿರುವ ರಾಜನನ್ನು ನೋಡಿ ಪಾದುಕೆಗಳ ಸಹಾಯದಿಂದ ಅಂತರಿಕ್ಷಕ್ಕೆ ಹಾರಿ ಪಾಟಲಿಯ ಅಂತಃಪುರಕ್ಕೆ ಹೋದನು. ಅಲ್ಲಿ ಪಾಟಲಿಯನ್ನು ನೋಡಿ ನಮ್ಮ ವಿದ್ಯಮಾನಗಳೆಲ್ಲವೂ ಹೊರಬಿದ್ದಿರುವದರಿಂದ ಇನ್ನಿಲ್ಲಿರುವದು ಯುಕ್ತವಲ್ಲ. ಈ ಪಾದುಕೆಗಳ ಸಹಾಯದಿಂದ ಇನ್ನೆಲ್ಲಿಯಾದರೂ ಹೋಗಿ ಬಿಡೋಣ ಹೊರಡು ಎಂದು ಆಕೆಯನ್ನು ತೊಡೆಯ ಮೇಲೆ ಕೂರಿಸಿಕೊಂಡು ಅಂತರಿಕ್ಷಮಾರ್ಗದಲ್ಲಿ ಹೊರಟು ಹೋದನು. ಹೀಗೆ ಬಹುದೂರ ಹೋದಮೇಲೆ ಗಂಗಾತೀರದಲ್ಲೊಂದು ಕಡೆ ಇಳಿದು ಬಳಲಿರುವ ಮಡದಿಗೆ ತನ್ನಲ್ಲಿರುವ ಪಾತ್ರೆಯ ಪ್ರಭಾವದಿಂದ ಬೇಕಾದ ಆಹಾರಗಳನ್ನು ಕೊಟ್ಟು ಸಂತೋಷಪಡಿಸಿದನು. ಗಂಡನ ಮಹಿಮೆಯನ್ನು ತಿಳಿದಾ ರಮಣಿಯು ಒಂದು ಪಟ್ಟಣವನ್ನು ನಿರ್ಮಿಸುವಂತೆ ಬೇಡಿಕೊಳ್ಳಲು ಆ ಕೋಲಿನಿಂದ ಚತುರಂಗಬಲ ಸಮೇತವಾದ ಒಂದು ನಗರಿಯನ್ನು ಬರೆದನು. ಬರೆದದ್ದೆಲ್ಲವೂ ನಿಜವಾಯಿತು. ಆ ನಗರಕ್ಕೆ ಪಾಟಲಿಪುತ್ರವೆಂದು ತಮ್ಮಿಬ್ಬರ ಹೆಸರಿಟ್ಟು ಮಾವನಾದ ಮಹೇಂದ್ರವರ್ಮನೇ ಮೊದಲಾದ ಎಲ್ಲರನ್ನೂ ಜಯಿಸಿ ಸಮುದ್ರಾಂತವಾದೀ ಭೂಮಂಡಲವನ್ನು ಪಾಲಿಸುತ್ತಿದ್ದನು. ಎಲೈ ಬಾಲಕರೇ, ಪ್ರಜಾಸಮೇತವಾದೀ ನಗರವು ಮಾಯಾನಿರ್ಮಿತವಾದುದರಿಂದ ನಿರ್ಮಾತೃವಿನ ಅಭಿಪ್ರಾಯಾನುಸಾರ ಲಕ್ಷ್ಮೀ ಸರಸ್ವತಿಯರಿಬ್ಬರಿಗೂ ಆವಾಸಭೂಮಿಯಾಗಿರುತ್ತದೆ ಎಂದು ವರ್ಷೋಪಾಧ್ಯಾಯನು ಹೇಳಿದ ಕಥೆಯನ್ನು ಕೇಳಿ ಬಹಳ ಹೊತ್ತು ಆಶ್ಚರ್ಯದಿಂದ ಸಂತೋಷಪಡುತ್ತಿದ್ದೆವು.

ಎಂಬಲ್ಲಿಗೆ ಮಹಾಕವಿ ಶ್ರೀ ಸೋಮದೇವಭಟ್ಟ ವಿರಚಿತವಾದ ಕಥಾಸರಿತ್ಸಾಗರದೋಳ್ ಕಥಾಪೀಠಕ ಲಂಬಕದ ಮೂರನೆಯ ತರಂಗವು ಮುಗಿದುದು.

ನಾಲ್ಕನೆಯ ತರಂಗವು.

ಕಾಣಭೂತಿಯೇ ಕೇಳು, ಹೀಗೆ ಆಗಾಗ ವಿನೋದವಾದ ಕಥೆಗಳನ್ನು ಕೇಳುತ್ತಾ ವ್ಯಾಡೀ ಮತ್ತು ಇಂದ್ರದತ್ತರಿಂದ ಸಹಿತನಾಗಿ ಪಾಠವನ್ನು ಓದುತ್ತಾ ಸಕಲ ವಿದ್ಯೆಗಳಲ್ಲಿಯೂ ಪಾರಂಗತನಾದೆನು. ಇಷ್ಟರಲ್ಲಿಯೇ ನಮ್ಮ ಬಾಲ್ಯವು [illegible]. ಒಂದು ದಿನ ಊರ ಹೊರಗೆ ನಡೆಯುತ್ತಿದ್ದ ಇಂದ್ರೋತ್ಸವವನ್ನು ನೋಡುವುದಕ್ಕೆ ನಾವು ಹೋಗಿದ್ದಾಗ ಅಲ್ಲಿ ಬಾಣವಿಲ್ಲದ ಮನ್ಮಥನ ಅಸ್ತ್ರದಂತೆ ಇರುವ ಒಬ್ಬ ಕನ್ನಿಕೆಯನ್ನು ಕಂಡು ಈ ಕನ್ನಿಕೆಯು ಯಾರಿರಬಹುದೆಂದು ಇಂದ್ರದತ್ತನನ್ನು ಕೇಳಿದೆನು. ಆಗ ಅವನು "ನಮ್ಮ ಉಪಾಧ್ಯಾಯನ ತಮ್ಮನಾದ ಉಪವರ್ಷನ ಮಗಳು ಉಪಕೋ[illegible]" ಎಂದು ಹೇಳಿದನು. ನನ್ನನ್ನು ನೋಡಿದ ಈ ಕನ್ನಿಕೆಯು ನನ್ನಂತೆಯೇ ತನ್ನ [illegible] ನನ್ನ [illegible] ತಿಳಿದುಕೊಂಡು ಪ್ರೀತಿ[illegible] ಎಳೆಯುತ್ತಾ [illegible] ಪೂರ್ಣ [illegible]

ಹೆಂಡತಿಯಾಗಿದ್ದಳು. ನಿನ್ನ ಯೋಗ್ಯತೆಗುಣಗಳನ್ನು ತಿಳಿದಿರುವದರಿಂದ ಈಗಲೂ ಮತ್ತೊಬ್ಬನನ್ನಪೇಕ್ಷಿಸಳು. ಚಿಂತಿಸಬೇಡ, ನೀನು ದುಃಖಿಸುವುದನ್ನು ನೋಡಿ ನಾನು ಸಹಿಸಲಾರೆನು. ನಾನು ನಿನ್ನ ದೇಹದೊಳಗೆ ವಾಸವಾಗಿರುವ ಸರಸ್ವತಿಯು ಎಂದು ಹೇಳಿ ಅಂತರ್ಹಿತಳಾದಳು. ಈ ಕನಸಿನಿಂದ ಸ್ವಲ್ಪ ನಂಬಿಕೆಯನ್ನು ಹೊಂದಿ ಮಾರನೆಯ ಬೆಳಿಗ್ಗೆ ಮೆಲ್ಲಗೆ ಹೋಗಿ ಪ್ರಾಣಕಾಂತೆಯ ಮನೆಯ ಹತ್ತಿರವಿರುವ ಒಂದು ಮಾವಿನ ಮರದ ಕೆಳಗೆ ಕುಳಿತು ಯೋಚಿಸುತ್ತಿರುವಾಗ ಆಕೆಯ ಗೆಳತಿಯು ಬಂದು ನನ್ನನ್ನು ನೋಡಿ ತನ್ನ ಸಖಿಯು ಎಂದೂ ಕಾಣದ ಮನ್ಮಥ ವಿಕಾರದಿಂದ ಬಾಧಿತಳಾಗಿರುವಳು ಎಂದು ಹೇಳಿದಳು ಆಗ ನಾನು ಇಮ್ಮಡಿಯಾದ ಸಂತಾಪದಿಂದ 'ಹಿರಿಯರು ಕೊಡದಿರುವ ಉಪಕೋಶಯನ್ನು ನಾನೇ ಸ್ವೇಚ್ಛೆಯಾಗಿ ಹೇಗೆ ಸೇವಿಸಲಾದೀತು? ಅಪಕೀರ್ತಿ ಹೊಂದಿ ಬಾಳುವದಕ್ಕಿಂತಲೂ ಮರಣವೇ ಲೇಸಲ್ಲವೆ? ಅಲ್ಲದೆ ನಿನ್ನಗೆಳತಿಯ ಮನೋಗತವು ಅವರ ಗುರುಹಿರಿಯರಿಗೆ ತಿಳಿದರೆ ಒಂದು ವೇಳೆ ಒಳ್ಳೆಯದಾಗಬಹುದಾದ್ದರಿಂದ ಎಲೌ ಮಂಗಳಕರಳೇ, ಗುರುಗಳ ಅನುಜ್ಞೆಯಿಂದಲೇ ವಿವಾಹ ಕಾರ್ಯವು ನೆರವೇರುವಂತೆ ಮಾಡಿ ನಮ್ಮಿಬ್ಬರನ್ನೂ ಬದುಕಿಸುವಳಾಗೆಂದು ಹೇಳಿದೆನು. ಆಗಲವಳು ಸಖಿಯ ತಾಯಿಗೆ ತಿಳಿಸಿದಳು. ಸಂಭ್ರಮದಿಂದಾಕೆಯು ಈ ವಿಚಾರವನ್ನು ತನ್ನ ಪತಿಯ ಕಿವಿಗೆ ಮುಟ್ಟಿಸಿದಳು. ಅವನಾಗಲೇ ಅದನ್ನು ತನ್ನ ಅಗ್ರಜನಾದ ವರ್ಷೋಪಾಧ್ಯಾಯನಿಗೆ ಅರುಹಿದನು. ಆತನಿದನ್ನು ಸಂತೋಷದಿಂದ ಅನುಮೋದಿಸಿದನು. ಸರ್ವಾನುಮತದಿಂದೀ ವಿವಾಹ ಲಗ್ನವು ನಿಶ್ಚಿತವಾಯಿತು. ಉಪಾಧ್ಯಾಯನ ಆಜ್ಞಾನುಸಾರ ವ್ಯಾಡಿಯು ಕೌಶಾಂಬೀ ನಗರದಿಂದ ನನ್ನ ತಾಯಿಯನ್ನು ಕರೆತಂದನು. ಆಗಲಾ ಉಪಕೋಶೆಯನ್ನು ಆಕೆಯ ತಂದೆಯು ನನಗೆ ಯಥಾವಿಧಿಯಾಗಿ ದಾನಮಾಡಿದನು. ಹೀಗೆ ವಿವಾಹಿತನಾಗಿ ಪತ್ನಿಯೊಡನೆಯೂ, ತಾಯಿಯೊಡನೆಯೂ ಅಲ್ಲಿಯೇ ಸುಖದಿಂದಿದ್ದೆನು. ಕಾಲಕ್ರಮದಿಂದ ವರ್ಷೋಪಾಧ್ಯಾಯರಿಗೆ ಶಿಷ್ಯರ ಗುಂಪು ಹೆಚ್ಚುತ್ತಾ ಬಂದಿತು. ಇವರಲ್ಲಿ ಪಾಣಿನಿಯೆಂಬೊಬ್ಬ ಮಂದಬುದ್ಧಿಯಾದ ಶಿಷ್ಯನಿದ್ದನು ಗುರುಸೇವೆ ಮಾಡುವದರಲ್ಲಿಯೇ ಕ್ಲೇಶಪಡುತ್ತಿದ್ದರೂ ವಿದ್ಯೆಯು ಹತ್ತದೇ ಇರುವ ಆ ಪಾಣಿನಿಯನ್ನು ಉಪಾಧ್ಯಾಯನ ಪತ್ನಿಯು ಹಿಂದಕ್ಕೆ ಕಳುಹಿಸಿದಳು. ಆದರೆ ಅವನ ಮನಸ್ಸು ಮಾತ್ರ

ವಿದ್ಯಾಭ್ಯಾಸದಿಂದ ಹಿಂದಿರುಗಲಿಲ್ಲ. ಆದರಿಂದ ಅವನು ದುಃಖಿತನಾಗಿ ಅಲ್ಲಿಂ
ದ ಹೊರಟು ಹಿಮವತ್ಪರ್ವತವನ್ನು ಸೇರಿ ಪರಮೇಶ್ವರನನ್ನು ಕುರಿತು ತಪವಂ
ಗೈದಿದನು. ಉಗ್ರವಾದ ಆ ತನ್ನ ತಪಸ್ಸಿಗೆ ಮೆಚ್ಚಿದ ಪರಶಿವನಿಂದ ಸಕಲ
ಶಾಸ್ತ್ರಗಳಿಗೂ ಮುಖರೂಪವಾದ ವ್ಯಾಕರಣ ಶಾಸ್ತ್ರವನ್ನು ಪಡೆದನು.
ಅಲ್ಲಿಂದ ತಿರಿಗಿ ಬಂದು ನನ್ನನ್ನೇ ವಾದಕ್ಕೆ ಕರೆದನು. ವಾದಕ್ಕೆ ಮೊದಲಾ
ಯಿತು. ಏಳು ದಿವಸಗಳು ಒಂದೇ ರೀತಿಯಾಗಿ ವಾದ ನಡದು ಎಂಟನೆಯ
ದಿವಸದಲ್ಲಿ ಅವನು ಸೋತನು. ಆಗ ಮುಗಿಲಿನಿಂದ ಒಂದು ಭಯಂಕರ
ವಾದ ಹೂಂಕಾರವು ಕೇಳಬಂತು. ಇದು ಪರಮೇಶ್ವರನದಾಗಿತ್ತು.
ಇದರಿಂದ ನಮಗೆ ಬರುತ್ತಿದ್ದ ಮಹೇಂದ್ರಕೃತ ವ್ಯಾಕರಣವೆಲ್ಲವೂ ಭೂಮಿ
ಯಲ್ಲಿಲ್ಲದಂತಾಯಿತು. ಆಗ ನಾವೆಲ್ಲರೂ ದಡ್ಡರಾದ್ದರಿಂದ ಎರಡನೆಯ
ವಾದದಲ್ಲಿ ಅವನೇ ಜಯಶೀಲನಾದನು. ಅದರಿಂದ ನಾನು ನಿರ್ವಿಣ್ಣನಾಗಿ
ನನ್ನಲ್ಲಿದ್ದ ಹಣವನ್ನೆಲ್ಲಾ ಹಿರಣ್ಯದತ್ತನೆಂಬ ಒಬ್ಬ ವರ್ತಕನ ವಶಕ್ಕೆ
ಕೊಟ್ಟು ಅದರಿಂದ ನನ್ನ ಗೃಹಕೃತ್ಯಕ್ಕೆ ಬೇಕಾದ ಪದಾರ್ಥಗಳನ್ನು ಒದ
ಗಿಸಿ ಕೊಡುವಂತೆ ಹೇಳಿ ಆ [illegible] ಹೆಂಡತಿಗೆ ತಿಳಿಸಿ ಅಲ್ಲಿಂದ
ಹೊರಟು [illegible] [illegible] ಮೆಚ್ಚಿಸದೇ
[illegible] ಕೊಂಡೆನು.

[illegible] ಗಂಗಾನದಿಯಲ್ಲಿ ಸ್ನಾನ
[illegible] ಹಾರೈಸು
[illegible] ವಸಂತಕಾಲದಲ್ಲಿ
[illegible] ದಾಕ್ಷಿಣ
[illegible] ಸ್ನಾನ
[illegible] ರಾಜಪುರೋಹಿತನೂ,
[illegible]
[illegible]
[illegible]
[illegible]
[illegible]
[illegible] ಎಲೆ [illegible]

೪]
ಕರನೆ, ಈ ವಿಚಾರವು ನಿನ್ನಂತೆಯೇ ನನಗೂ ಇಷ್ಟವೇ. ಆದರೆ ನಾನು
ಉತ್ತಮವಾದ ವಂಶದಲ್ಲಿ ಹುಟ್ಟಿದವಳು. ನನ್ನ ಗಂಡನು ದೇಶಾಂತರ ಹೋಗಿ
ದ್ದಾನೆ. ಆದ್ದರಿಂದ ಈಗ ಆಗಲಾರದು. ಈ ವಿಷಯ ಮತ್ತಾರಿಗಾದರೂ
ತಿಳಿದರೆ ನಮ್ಮಿಬ್ಬರಿಗೂ ಕೇಡಾಗುವದು ನಿಜ. ಆದ್ದರಿಂದ ವಸಂತೋತ್ಸ
ವವು ನಡೆಯುವ ದಿನ ರಾತ್ರಿಯ ಮೊದಲನೆಯ ಯಾಮದಲ್ಲಿಯೇ ನನ್ನ
ಮನೆಗೆ ತಪ್ಪದೆ ಬಂದು ಬಿಡು. ಆದಿನ ಹೇಗೂ ಜನರೆಲ್ಲರೂ ಜಾರಿ ಹೋಗಿರು
ವರು, ಎಂದು ಪ್ರತಿಜ್ಞಾಪೂರ್ವಕವಾಗಿ ಹೇಳಿ ದೈವಯೋಗದಿಂದ ಬಿಡು
ಗಡೆ ಹೊಂದಿ ಗೃಹಾಭಿಮುಖವಾಗಿ ಸ್ವಲ್ಪ ದೂರ ಹೋಗುವದರೊಳಗಾಗಿ
ರಾಜಪುರೋಹಿತನು ಬಂದು ಅವಳನ್ನು ಅಡ್ಡಗಟ್ಟಿದನು. ಆಗ ಅವಳು ಹಿಂದಿ
ನಂತೆ ಅದೇ ರಾತ್ರಿ ಎರಡನೆಯ ಯಾಮದಲ್ಲಿ ಬರುವಂತೆ ಸಂಕೇತ ಮಾಡಿ ಅವ
ನಿಂದಲೂ ಪಾರಾಗಿ ಭಯಪರವಶಳಾಗಿ ಸ್ವಲ್ಪ ದೂರ ಹೋದಮೇಲೆ ದಂಡ
ನಾಯಕನಿಂದ ತಡೆಯಲ್ಪಟ್ಟವಳಾಗಿ ಅವನಿಗೂ ಅದೇ ರಾತ್ರಿಯ ಮೂರನೆಯ
ಯಾಮದಲ್ಲಿ ಬರುವಂತೆ ಗೊತ್ತಾಗಿ ಹೇಳಿ ಪುಣ್ಯವಶದಿಂದ ಅವನಿಂದಲೂ ಬಿಡು
ಗಡೆ ಹೊಂದಿ ನಡುಗುತ್ತ ಮನೆಗೆ ಬಂದು ಗಾಡಿಯರಿಗಾವೃತ್ತಾಂತವನ್ನು
ಹೇಳಿ ಆದಕ್ಕಾಗಿ ಮುಂದೆ ಮಾಡಬೇಕಾದ ಕರ್ತವ್ಯವನ್ನೂ ತಿಳಿಸಿ ತನ್ನ ಪರೀ
ರವನ್ನು ನಿಂದಿಸ ತ್ತಾ ರೂಪಕ್ಕಾಗಿ ಹಿಗ್ಗಿ ಮೆರೆಯುವ ಜನರ ನೋಟಕ್ಕೀಡಾ
ಗಿ ಬದುಕಿರುವದಕ್ಕಿಂತಲೂ ಕುಲಸ್ತ್ರೀಯರಿಗೆ ಮರಣವೇ ಲೇಸೆಂದು ಯೋಚಿ
ಸುತ್ತಾ ಆಹಾರವಿಲ್ಲದೆ ಪತಿಸ್ಮರಣೆಯಿಂದಲೇ ಆ ರಾತ್ರಿಯನ್ನು ಕಳೆದಳು.
ಮಾರನೆಯದಿನ ಪ್ರಾತಃಕಾಲದಲ್ಲಿ ಬ್ರಾಹ್ಮಣರ ಪೂಜೆಗಾಗಿ ಸ್ವಲ್ಪ ಹಣವನ್ನು
ತರುವಂತೆ ದೂತಿಯನ್ನು ಹಿರಣ್ಯದತ್ತನ ಮನೆಗೆ ಕಳುಹಿಸಿದಳು. ಹಿರಣ್ಯದತ್ತ
ನು ಯಾರೂ ಇಲ್ಲದ ವೇಳೆಯಲ್ಲಿ ತಾನೇ ಬಂದು ಆಕೆಯನ್ನು ಕಂಡು ನೀನು
ನನ್ನನ್ನು ಪ್ರೀತಿಸುವದಾದರೆ ನಿನ್ನ ಗಂಡನು ಕೊಟ್ಟಿರುವ ಧನವನ್ನು ಕೊಡುವ
ದಾಗಿ ಹೇಳಿದನು. ಆ ಮಾತನ್ನು ಕೇಳಿ ನನ್ನ ಪತಿಯು ಈತನಿಗೆ ಕೊಟ್ಟಿರುವ ಹ
ಣಕ್ಕೆ ಸಾಕ್ಷಿಗಳಿಲ್ಲ. ಈ ವರ್ತಕನಾದರೋ ದ್ರೋಹಿಯಾಗಿದ್ದಾನೆ. ಈಗ
ಮಾಡುವದೇನೆಂದು ವ್ಯಸನ ಮತ್ತು ರೋಷದಿಂದ ಕಲಕಿದ ಮನಸ್ಸುಳ್ಳವಳಾಗಿ
ಹಿರಣ್ಯದತ್ತನಿಗೂ ಅದೇ ವಸಂತೋತ್ಸವದ ರಾತ್ರಿಯ ನಾಲ್ಕನೆಯ ಜಾವದಲ್ಲಿ
ಬರುವಂತೆ ಹೇಳಿ ಸಂಕೇತಮಾಡಿ ಕಳುಹಿಸಿದಳು. ಆಗಲಾ ಪತಿವ್ರತೆಯಾದ
ಉಪಕೋಶೆಯು ತನ್ನ ಚೇಟಿಯರಿಂದ ಹೆಚ್ಚಾಗಿ ಕಾಡಿಗೆಯನ್ನು ಮಾಡಿಸಿ

ಕಸ್ತೂರಿ ಮೊದಲಾದ ಸುಗಂಧ ದ್ರವ್ಯಗಳನ್ನು ಬೆರಿಸಿ ಎಣ್ಣೆಯಲ್ಲಿ ಹಾಕಿ ಕೂಡಿಸಿ ನಾಲ್ಕು ಲಂಗೋಟಿಗಳನ್ನು ಅದರಲ್ಲಿ ಅದ್ದಿ ಇಡಿಸಿ, ಹೊರಭಾಗದಲ್ಲಿ ಅಗುಳಿಹಾಕುವ ಹಾಗೆ ಇರುವ ದೊಡ್ಡದೊಂದು ಪೆಟ್ಟಿಗೆಯನ್ನು ಸಿದ್ಧಪಡಿಸಿದಳು. ವಸಂತೋತ್ಸವದ ರಾತ್ರಿಯು ಬಂತು. ತನ್ನ ಸಂಕೇತಾನುಸಾರ ಮೊದಲನೆಯ ಝಾವದಲ್ಲಿ ಯುವರಾಜನ ಮಂತ್ರಿಯು ಬಹು ಉತ್ಸಾಹದಿಂದ ಆಡಂಬರವಾದ ವೇಷವನ್ನು ಧರಿಸಿ ಯಾರೂ ಕಾಣದಂತೆ ಉಪಕೋಶಿಯ ಮನೆಯನ್ನು ಸೇರಿದನು. ಚತುರಳಾದ ಉಪಕೋಶೆಯು ಅವನನ್ನು ಕುರಿತು 'ಸ್ನಾನಮಾಡದಿರುವ ನಿನ್ನನ್ನು ಸ್ಪರ್ಶಮಾಡಲಾರೆನಾದ್ದರಿಂದ ಒಳಗೆ ಹೋಗಿ ಸ್ನಾನಮಾಡಿ ಬಾ' ಎಂದು ಹೇಳಿದಳು. ಮೂಢನಾದ ಮಂತ್ರಿಕುಮಾರನು ಅದಕ್ಕೊಪ್ಪಿದನು. ಸಿದ್ಧರಾದ ಚೇಟಿಯರು ಇವನನ್ನು ಕತ್ತಲಾದ ಬಚ್ಚಲ ಮನೆಗೆ ಕರೆದೊಯ್ದು ಇವನ ವಸ್ತ್ರಾಭರಣಗಳನ್ನೆಲ್ಲ ತೆಗೆದಿರಿಸಿ ಹಿಂದೆ ಅಣಿಮಾಡಿಟ್ಟಿದ್ದ ಸುಗಂಧವಾದ ಲಂಗೋಟಿಯನ್ನು ಕೊಟ್ಟು ಕಾಡಿಗೆ ಮಿಶ್ರವಾದ ಎಣ್ಣೆಯನ್ನು ಸರ್ವಾಂಗಗಳಿಗೂ ಲೇಪಿಸಿ ತಲೆಗೂ ಹಾಕಿ ಒತ್ತುತ್ತಾ [illegible] ಮಾಡುತ್ತಿದ್ದರು. ಅಷ್ಟರಲ್ಲಿ ಎರಡನೆಯ ಯಾಮವು ಬಂತು. [illegible] ಬಿಟ್ಟನು. ಆಗ [illegible]

ವರ್ತಕನು ಬರುವವರೆಗೂ ಬೆರಗು ಮಾಡುತ್ತಿದ್ದರು. ನಾಲ್ಕನೆಯ ಯಾಮದಲ್ಲಿ ವರ್ತಕನು ಬಂದಿಳಿದನು. ಇವನು ಕಂಡಾನೆಂಬ ಭಯವನ್ನು ತೋರಿಸಿ ದಂಡನಾಯಕನನ್ನೂ ಪೆಟ್ಟಿಗೆಯಲ್ಲಿ ಹೊಗಿಸಿ ಭದ್ರಪಡಿಸಿದರು. ಈ ಮೂವರೂ ಪರಸ್ಪರರ ಶರೀರವು ಸೋಕುತ್ತಿದ್ದರೂ ಭಯದಿಂದ ಮಾತನಾಡದೆ ತಮ್ಮ ಪಾಪಕೃತ್ಯಕ್ಕಾಗಿ ಅಂಧತಾಮಿಸ್ರವೆಂಬ ನರಕದಲ್ಲಿ ಇರುವದಕ್ಕೆ ಈಗಿನಿಂದಲೂ ಅಭ್ಯಾಸಮಾಡುವವರಂತೆ ಪೆಟ್ಟಿಗೆಯೊಳಗೆ ವ್ಯಥೆ ಪಡುತ್ತಿದ್ದರು. ಇದಾದಮೇಲೆ ಮನೆಯಲ್ಲಿ ದೀಪವನ್ನು ಹತ್ತಿಸಿ ವರ್ತಕನನ್ನೂ ಒಳಗೆ ಬರಮಾಡಿಸಿಕೊಂಡು ನನ್ನ ಗಂಡನು ನಿನ್ನಲ್ಲಿ ಕೊಟ್ಟಿರುವ ಧನವನ್ನು ಕೊಡೆಂದು ಕೇಳಿದಳು. ಅದಕ್ಕಾ ಧೂರ್ತನು ಮನೆಯಲ್ಲಾರೂ ಇಲ್ಲವೆಂದು ತಿಳಿದು ನಿನ್ನ ಗಂಡನು ನನ್ನಲ್ಲಿ ಕೊಟ್ಟಿರುವ ಧನವನ್ನು ಕೊಡುವೆನೆಂದು ಈ ಮೊದಲೆ ಒಪ್ಪಿಕೊಂಡಿರುವೆನಲ್ಲವೇ? ಮತ್ತೇನು? ಎಂದು ನುಡಿದನು. ಆಗಲಾ ಚತುರಳು ಪೆಟ್ಟಿಗೆಯೊಳಗೆ ಇರುವವರಿಗೆ ಕೇಳಿಸುವಂತೆ "ಪೆಟ್ಟಿಗೆಯೊಳಗಿರುವ ದೇವತೆಗಳಿರಾ, ಈ ಶೆಟ್ಟಿಯ ಮಾತನ್ನು ಕೇಳಿರಿ" ಎಂದು ದೀಪವನ್ನಾರಿಸಿ ಹಿಂದಿನವರಂತೆ ಇವನನ್ನು ಸ್ನಾನದ ನೆವದಿಂದ ಬಚ್ಚಲ ಮನೆಗೆ ಕಳುಹಿಸಿದಳು. ಸಿದ್ಧರಾಗಿದ್ದ ಚೇಟಿಯರು ಇವನಿಗೂ ಮೊದಲಿನಂತೆಯೇ ಎಣ್ಣೆಯನ್ನೊತ್ತುವದರಲ್ಲೇ ಬೆಳಕು ಹರಿಸಿ, "ರಾತ್ರಿಯು ಕಳೆದು ಹೋಯಿತು ಇನ್ನು ಮನೆಗೆ ಹೊರಡು" ಎಂದು ಹೇಳಿದರು. ಅದಕ್ಕವನು ಸಮ್ಮತಿಸದಿರಲು ಗಳಹಸ್ತಮಾಡಿ (ಕುತ್ತಿಗೆಗೆ ಕೈಹಾಕಿದಬ್ಬಿ) ದರು. ಕೌಪೀನಾವಶಿಷ್ಟನಾಗಿ ಹೊರಬಿದ್ದ ಈ ಶೆಟ್ಟಿಯು ಕಾಡಿಗೆಯಿಂದ ಬಳಿದಿದ್ದ ತನ್ನ ಮೈಯನ್ನು ನೋಡಿಕೊಂಡು ನಾಚುತ್ತಾ ಮನೆಗೆ ಹೊರಟನು. ದಾರಿಯಲ್ಲಿ ಇವನನ್ನು ಕಂಡ ನಾಯಿಗಳು ಹೆಜ್ಜೆ ಹೆಜ್ಜೆಗೂ ಕಡಿಯುವದಕ್ಕೆ ಬರುತ್ತಿದ್ದವು. ವಿಲಕ್ಷಣವಾದೀ ರೂಪವನ್ನು ನೋಡಿ ಅವನನ್ನು ಯಾವದೋ ಒಂದು ಹೊಸ ಮೃಗವೆಂದು ಅವು ಊಹಿಸಿರಬಹುದಲ್ಲವೇ? ಹೇಗೋ ಕಷ್ಟದಿಂದ ಶೆಟ್ಟಿಯು ಮನೆಯನ್ನು ಸೇರಿದನು. ಅಲ್ಲಿ ಅವನಿಗೆ ಮೈಯನ್ನು ತೊಳೆಯುತ್ತಿದ್ದ ಆಳುಗಳಿಗೂ ಸಹ ಮುಖವನ್ನು ತೋರಿಸುವುದು ಕಷ್ಟವಾಯಿತು. ಕೆಟ್ಟ ಕೆಲಸದ ಫಲವೂ ಕಷ್ಟತರವಾದುದೇ.

ಪ್ರಾತಃಕಾಲದಲ್ಲಿ ಉಪಕೋಶೆಯು ಒಬ್ಬ ಗೌಡಿಯನ್ನು ಜೊತೆಗೆ ಕರೆದುಕೊಂಡು ಹಿರಿಯರಿಗಾರಿಗೂ ತಿಳಿಸದೆಯೇ ರಾಜನಾದ ನಂದನ ಮನೆಗೆ ಹೋಗಿ ರಾಜನನ್ನು ಕಂಡು ಎಲೈ ರಾಜನೇ, ಹಿರಣ್ಯದತ್ತನೆಂಬ

ವರ್ತಕನು ನನ್ನ ಪತಿಯು ಅವನಲ್ಲಿ ಮುಡುಪಾಗಿ ಕೊಟ್ಟಿದ್ದ ಹಣವನ್ನು ತಾನೇ ಅಪಹರಿಸಬೇಕೆಂದಿದ್ದಾನೆ, ಎಂದು ವಿಜ್ಞಾಪಿಸಿದಳು. ಅದರ ನಿಜತ್ವವನ್ನು ತಿಳಿಯುವದಕ್ಕಾಗಿ ರಾಜನು ಆ ಶೆಟ್ಟಿಯನ್ನು ಕರೆತರಿಸಿ ಕೇಳಿದನು. ಶೆಟ್ಟಿಯು ಮಹಾಸ್ವಾಮಿ, ನನ್ನಲ್ಲಿ ಇವಳ ಹಣವಾವುದೂ ಇಲ್ಲವೆಂದು ನುಡಿದನು. ಆಗಲಾ ಉಪಕೋಶೆಯು "ಮಹಾಸ್ವಾಮಿ, ಇದಕ್ಕೆ ಸಾಕ್ಷಿಗಳಿದ್ದಾರೆ. ನನ್ನ ಪತಿಯು ಹೋಗುವಾಗ ನಮ್ಮ ಮನೆಯ ದೇವರುಗಳನ್ನೆಲ್ಲಾ ಪೆಟ್ಟಿಗೆಯಲ್ಲಿ ಹಾಕಿ ಹೋಗಿರುತ್ತಾನೆ. ಅವುಗಳ ಮುಂದೆ ಇವನು ನನ್ನ ಹಣವನ್ನು ಕೊಡುವದಾಗಿ ಒಪ್ಪಿಕೊಂಡಿರುತ್ತಾನೆ. ಬೇಕಾದರೆ ಆ ಪೆಟ್ಟಿಗೆಯನ್ನು ತರಿಸಿ ಒಳಗೆ ಇರುವ ದೇವತೆಗಳನ್ನು ಕೇಳಬಹುದು." ಎಂದು ಹೇಳಿದಳು. ರಾಜನು ಇದನ್ನು ಕೇಳಿ ಆಶ್ಚರ್ಯಗೊಂಡು ಪೆಟ್ಟಿಗೆಯನ್ನು ತರುವಂತೆ ಸೇವಕರಿಗೆ ಆಜ್ಞಾಪಿಸಿದನು. ರಾಜಾಜ್ಞೆಯಂತೆ ಬಹು ಜನರು ಹೋಗಿ ಆ ಪೆಟ್ಟಿಗೆಯನ್ನು ತರಲು, ಆಗಲಾ ಉಪಕೋಶೆಯು "ಎಲೈ ಪೆಟ್ಟಿಗೆಯೊಳಗಿರುವ ದೇವತೆಗಳಿರಾ, ಈ ಶೆಟ್ಟಿಯು ಹೇಳುವ ಮಾತುಗಳನ್ನು [illegible]

ಉಪಕೋಶೆಯನ್ನು ಸಂತೋಷದಿಂದ ಶ್ಲಾಘಿಸಿದರು. ರಾಜನು ಪರದಾರಾಪೇಕ್ಷಿಗಳಾದ ಈ ನಾಲ್ಕು ಜನರ ಆಸ್ತಿಗಳನ್ನೆಲ್ಲಾ ಕಿತ್ತುಕೊಂಡು ತನ್ನ ದೇಶದಿಂದ ಗಡೀಪಾರು ಮಾಡಿದನು. ಕೆಟ್ಟನಡತೆಯಿಂದ ಯಾರಿಗೂ ಒಳ್ಳೆಯದಾಗಲಾರದಲ್ಲವೇ? ರಾಜನು ಉಪಕೋಶೆಯನ್ನು ಕುರಿತು ಪ್ರೀತಿಯಿಂದ ಅಮ್ಮಾ ನೀನು ಧರ್ಮತಃ ನನ್ನ ತಂಗಿಯಾಗಿರುತ್ತೀ, ಎಂದು ಹೇಳಿ ಬೇಕಾದಷ್ಟು ದ್ರವ್ಯವನ್ನು ಕೊಟ್ಟು ಮನೆಗೆ ಕಳಿಸಿದನು. ಈ ಸಮಾಚಾರವಂ ಕೇಳಿ ವರ್ಷೋಪವರ್ಷರಿಬ್ಬರೂ ಪತಿಪರಾಯಣೆಯಾದ ಮಗಳಂ ಶ್ಲಾಘಿಸಿದರು. ಆ ನಗರದ ಜನರೆಲ್ಲರೂ ಆಶ್ಚರ್ಯಾನಂದಭರಿತರಾದರು.

ಇಷ್ಟರಲ್ಲಿ ನಾನು ತಪಸ್ಸಿನಿಂದ ಪರಶಿವನನ್ನು ಮೆಚ್ಚಿಸಿದೆನು. ವರದನಾದ ಆ ಶಿವನು ಆದೇ ಪಾಣಿನೀಯ ವ್ಯಾಕರಣ ಶಾಸ್ತ್ರವನ್ನು ನನಗೂ ಉಪದೇಶಿಸಿದನು. ಆತನ ಇಚ್ಛೆಯಂತೆ ಅಪೂರ್ಣವಾಗಿದ್ದ ಆ ಶಾಸ್ತ್ರವನ್ನು ಪೂರ್ಣಗೊಳಿಸಿ, ಅಲ್ಲಿಂದ ಹೊರಟು ಮನೆಗೆ ಬಂದು ಸೇರಿದೆನು. ಚಂದ್ರಶೇಖರನ ಅನುಗ್ರಹವೆಂಬ ಅಮೃತದಿಂದ ಪೂರ್ಣನಾದ ನನಗೆ ಸ್ವಲ್ಪವೂ ಮಾರ್ಗಾಯಾಸ ಕಂಡುಬರಲಿಲ್ಲ. ಅನಂತರ ತಾಯಿಗೂ ಗುರುಗಳಿಗೂ ನಮಸ್ಕರಿಸಿ ಅದ್ಭುತವಾದ ಉಪಕೋಶೆಯ ವೃತ್ತಾಂತವನ್ನು ಕೇಳಿ ಅತಿಶಯವಾದ ಸಂತೋಷಾಶ್ಚರ್ಯಗಳನ್ನು ಹೊಂದಿದೆನು. ಅದರಿಂದ ನನಗಾ ಕೆಯಲ್ಲಿ ಸಹಜವಾಗಿದ್ದ ಪ್ರೇಮಗೌರವಗಳು ಇನ್ನೂ ಹೆಚ್ಚಾದವು. ವರ್ಷೋಪಾಧ್ಯಾಯನು ಒಂದು ದಿನ ನನ್ನ ಬಾಯಿಂದ ಈ ಹೊಸ ವ್ಯಾಕರಣವನ್ನು ಕೇಳಲಪೇಕ್ಷಿಸಿದನು. ಅಷ್ಟರಲ್ಲಿ ಕಾರ್ತಿಕೇಯ ಸ್ವಾಮಿಯೇ ಆದ ವ್ಯಾಡೀನ್ನಾತನಿಗೆ ವಿಶದಪಡಿಸಿದನು. ಇದೆಲ್ಲವೂ ಆದನಂತರ ಒಮ್ಮೆ ವ್ಯಾಡೀಂದ್ರದತ್ತರು ಗುರುದಕ್ಷಿಣೆಯ ವಿಚಾರವಾಗಿ ನಮ್ಮ ಗುರುವಿನಲ್ಲಿ ವಿಜ್ಞಾಪನೆಮಾಡಲು ಗುರುವು ಕೋಟಿ ವರಹಗಳನ್ನು ತಂದು ಕೊಡುವದೆಂದು ಆಜ್ಞಾಪಿಸಿದನು. ಹಾಗೆಯೇ ಆಗಲೆಂದು ಒಪ್ಪಿ ಅವರಿಬ್ಬರೂ ನನ್ನಲ್ಲಿ ಬಂದು ಎಲೈ ಮಿತ್ರನೇ, ಗುರುವಿಗೆ ದಕ್ಷಿಣೆಗಾಗಿ ಒಂದು ಕೋಟಿ ವರಹಗಳನ್ನು ತಂದು ಕೊಡುವದಾಗಿ ಒಪ್ಪಿ ಬಂದಿರುತ್ತೇವೆ. ತೊಂಬತ್ತೊಂಬತ್ತು ಕೋಟಿ ದ್ರವ್ಯಗಳಿಗೆ ಅಧಿಪತಿಯಾದ ನಂದ ರಾಜನಲ್ಲಲ್ಲದೆ ಇಷ್ಟು ಭಾರಿ ಹಣವು ಮತ್ತೆಲ್ಲಿಯೂ ದೊರೆಯಲಾರದು. ಅಲ್ಲದೆ ಹಿಂದೆ ಈ ಅರಸನು ನಿನ್ನ ಪತ್ನಿಯನ್ನು ಧರ್ಮತಃ ತಂಗಿಯಾಗಿ ಮಾಡಿಕೊಂಡಿರುತ್ತಾನೆ. ಇದರಿಂದ ಅವನು

ನಿನಗೆ ಭಾವಮೈದುನನಾಗಬೇಕಾಗಿರುತ್ತೆ. ಅಲ್ಲದೆ ನಿನ್ನ ಸದ್ಗುಣಗಳಿಗಾವುದೂ ಅಲಭ್ಯವಲ್ಲ. ಆದುದರಿಂದ ನಂದರಾಜನಲ್ಲಿ ಹಣವನ್ನು ಯಾಚಿಸುವದಕ್ಕಾಗಿ ನಮ್ಮೊಡನೆ ಬಾ ಎಂದರು. ಅದಕ್ಕೆ ನಾನೂ ಸಮ್ಮತಿಸಿದೆನು.

ಆಗ ನಂದರಾಜನು ಅಯೋಧ್ಯೆಯಲ್ಲಿದ್ದನು. ಸಬ್ರಹ್ಮಚಾರಿಗಳಾದ ನಾವು ಅಲ್ಲಿಂದ ಹೊರಟು ಅಯೋಧ್ಯೆಯನ್ನು ಸೇರಿದೆವು. ಆಗ ಊರಲ್ಲಿ ಎಲ್ಲೆಲ್ಲಿ ನೋಡಿದರೂ ಗೋಳಾಟವಾಗಿತ್ತು. ಕಾರಣವನ್ನು ವಿಚಾರಿಸುವಲ್ಲಿ ಆಗ ತಾನೆ ರಾಜನು ಪರಲೋಕಕ್ಕೆ ಪ್ರಯಾಣಮಾಡಿದನೆಂದು ತಿಳಿಯಿತು. ಆಗ ನಮಗುಂಟಾದ ವ್ಯಸನಕ್ಕೆ ಪಾರವೇ ಇರಲಿಲ್ಲ. ಯೋಗಸಿದ್ಧಿಯನ್ನು ಪಡೆದು ಪರಕಾಯ ಪ್ರವೇಶ ವಿದ್ಯೆಯನ್ನು ಬಲ್ಲವನಾದ ಇಂದ್ರದತ್ತನು ತಕ್ಷಣವೇ 'ಈಗ ನಾನು ಮೃತನಾದ ರಾಜನ ದೇಹದೊಳಗೆ ಪ್ರವೇಶಿಸುವೆನು. ನಾನು ಪುನಃ ಬರುವವರೆಗೂ [illegible] ವ್ಯಾಡಿಯು ಗೋಪ್ಯವಾಗಿಟ್ಟು [illegible]. ನೀನು ಯಾಚಕನಾಗಿ ಬಾ, ನಾನು ಹಣವನ್ನು ಕೊಡಿಸಿ, ಪುನಃ ನನ್ನ ಶರೀರದಲ್ಲಿ ಬಂದು ಸೇರುವೆನೆಂದು ಹೇಳಿ ನಿರ್ಜನವಾದ ಒಂದು ದೇವಾಲಯದಲ್ಲಿ ಇಂದ್ರದತ್ತನು ತನ್ನ ದೇಹವನ್ನು ಬಿಟ್ಟು ರಾಜನ ಶರೀರವನ್ನು ಪ್ರವೇಶಿಸಿದನು. ರಾಜನು ಪುನಃ ಬದುಕಿದನು, ಎಲ್ಲೆಲ್ಲಿಯೂ [illegible]. ಆಗ ನಾನು ಇಂದ್ರದತ್ತನ ಶರೀರದ ರಕ್ಷಣೆಗೆ [illegible] ಯಾಚಕನಾಗಿ ಅರಮನೆಗೆ ಹೋದೆನು. [illegible] ಗುರುದಕ್ಷಿಣೆಗಾಗಿ [illegible] ಯೋಗನಂ[illegible]

[illegible]

ದಲ್ಲಿದ್ದ ಇಂದ್ರದತ್ತನ ದೇಹವನ್ನು ನೋಡಿ ವ್ಯಾಡಿಯನ್ನೋಡಿಸಿ ಇಂದ್ರದತ್ತನ ಶರೀರವನ್ನು ಸುಟ್ಟುಬಿಟ್ಟರು. ಯಾಚಕನು ಕೇಳಿದ ಹಣವನ್ನು ಕೊಡುವುದಾಗಿ ರಾಜನು ಮಂತ್ರಿಗೆ ಒತ್ತಾಯ ಮಾಡಲು ಅವನು 'ಮಹಾಸ್ವಾಮಿ, ಪರಿಜನರೂ, ಸೇವಕರೂ, ಅಧಿಕಾರಿಗಳೂ, ನೀವು ಪುನಃ ಬದುಕಿರುವ ಉತ್ಸವದಲ್ಲಿ ತೊಡಗಿರುವದರಿಂದ ಈ ಬ್ರಾಹ್ಮಣನು ನಾನು ಕೊಡುವವರೆಗೆ ಸ್ವಲ್ಪ ಹೊತ್ತು ನಿರೀಕ್ಷಿಸುವಂತೆ ಮಾಡಬೇಕೆಂದು' ಹೇಳಿದನು. ಇಷ್ಟರಲ್ಲಿ ವ್ಯಾಡಿಯು ಯೋಗನಂದನಲ್ಲಿಗೆ ಬಂದು ಎಲೈ ರಾಜನೇ ನೀನು ಪುನಃ ಜೀವಿಸಿದ ಉತ್ಸವದಲ್ಲಿ ಯೋಗಧಾರಣೆಯಲ್ಲಿದ್ದ ಒಬ್ಬ ಬ್ರಾಹ್ಮಣನ ಶರೀರವನ್ನು ಅನಾಥ ಶವವೆಂದು ಜೀವವಿದ್ದ ಹಾಗೆಯೇ ಬಲಾತ್ಕಾರವಾಗಿ ರಾಜಭಟರು ಸುಟ್ಟು ಬಿಟ್ಟರೆಂದು ಅಂಗಲಾಚಿದನು. ಇದನ್ನು ಕೇಳಿ ಯೋಗನಂದನು ತನಗುಂಟಾದ ದುರವಸ್ಥೆಗಾಗಿ ಬಹು ದುಃಖಪಟ್ಟನು. ಇಷ್ಟರಲ್ಲಿ ಬಹು ಬುದ್ಧಿಶಾಲಿಯಾದ ಮಂತ್ರಿಯು ಇಂದ್ರದತ್ತನ ದೇಹವನ್ನು ಸುಡಿಸಿದ ಮೇಲೆ ಇನ್ನು ಯೋಗಿಯು ನಂದನ ಶರೀರದಲ್ಲಿ ಸ್ಥಿರವಾದನೆಂದು ತಿಳಿದು ನನಗೆ ಹಣವನ್ನು ಕೊಡಿಸಿದನು. ಆಗ ಯೋಗನಂದನು, 'ನಾನು ಬ್ರಾಹ್ಮಣನಾಗಿದ್ದರೂ ಈಗ ಶೂದ್ರನಾದೆನಲ್ಲ! ನನಗೆಷ್ಟು ಐಶ್ವರ್ಯವಿದ್ದರೆ ತಾನೆ ಏನು?' ಎಂದು ಯಾರೂ ಇಲ್ಲದ ಸಮಯದಲ್ಲಿ ವ್ಯಾಡಿಯಲ್ಲಿ ಹೇಳಿಕೊಂಡು ಅತ್ತನು. ಆಗ ವ್ಯಾಡಿಯು ಕಾಲೋಚಿತವಾದ ಕೆಲವು ಮಾತುಗಳನ್ನು ಹೇಳಿ ಆತನನ್ನು ಸಮಾಧಾನಗೊಳಿಸಿ, ಎಲೈ ಮಿತ್ರನೇ, ಈ ಪ್ರಧಾನ ಮಂತ್ರಿಯಾದ ಶಕಟಾಲನು ಬಹು ಬುದ್ಧಿಶಾಲಿಯು. ಇವನು ನಿನ್ನ ವಿಚಾರವನ್ನು ತಿಳಿದವನಾಗಿದ್ದಾನೆ. ರಾಜ್ಯದ ಆಡಳಿತಗಳನ್ನೆಲ್ಲಾ ತನ್ನ ಇಷ್ಟದಂತೆ ನಡಿಸುತ್ತಿದ್ದು ಸ್ವಲ್ಪ ಕಾಲದ ಮೇಲೆ ಸತ್ಯನಂದನ ಮಗನಾದ ಚಂದ್ರಗುಪ್ತನಿಗೆ, ರಾಜ್ಯವನ್ನು ಕೊಡುವನಲ್ಲದೆ ನಿನ್ನನ್ನೂ ನಾಶಗೊಳಿಸಬಹುದು. ಆದುದರಿಂದ ಪ್ರಧಾನ ಮಂತ್ರಿ ಸ್ಥಾನದಲ್ಲಿ ನಮ್ಮ ವರರುಚಿಯನ್ನು ಇಟ್ಟುಕೊಂಡು ರಾಜ್ಯಭಾರವನ್ನು ನಿರ್ವಹಿಸುವವನಾಗು. ಮಹಾಮಹಿಮೆಯುಳ್ಳ ಇವನ ಬುದ್ಧಿ ಶಕ್ತಿಯಿಂದ ನಿನ್ನ ರಾಜ್ಯವು ಸ್ಥಿರವಾಗುವದು, ಎಂದು ಹೇಳಿ ಗುರುದಕ್ಷಿಣೆಯನ್ನು ಕೊಡುವದಕ್ಕಾಗಿ ಹೊರಟು ಹೋದನು. ಯೋಗನಂದನು ಆಗಲೇ ನನ್ನನ್ನು

ಕರೆಯಿಸಿ ಪ್ರಧಾನಮಂತ್ರಿಪದವನ್ನಿತ್ತನು. ಆಗ ನಾನು ಯೋಗನಂದನನ್ನು ಕುರಿತು ಎಲೈ ರಾಜನೇ ಈ ಶಕಟಾಲನು ಅಧಿಕಾರದಲ್ಲಿ ಇದ್ದದ್ದೇ ಆದರೆ ನಿನಗೆ ಬ್ರಾಹ್ಮಣ್ಯವನ್ನು ಕಳಕೊಂಡ ಫಲವೊಂದೇ ಹೊರತು ರಾಜ್ಯವುಮಾತ್ರ ನೆಲೆಯಾಗಲಾರದೆಂದು ತಿಳಿಯುತ್ತೇನೆ. ಆದುದರಿಂದ ಈ ಶಕಟಾಲನನ್ನು ಏನಾದರೂ ಯುಕ್ತಿಯಿಂದ ನಾಶಪಡಿಸೆಂದು ಹೇಳಿದೆನು. ಆಗ ರಾಜನು ದೇವದಲ್ಲಿದ್ದ ಬ್ರಾಹ್ಮಣನನ್ನು ಸುಡಿಸಿದನೆಂಬ ತಪ್ಪನ್ನು ಶಕಟಾಲನ ಮೇಲೆ ಹೊರಿಸಿ ನೂರು ಮಕ್ಕಳ ಸಹಿತನಾದ ಶಕಟಾಲನನ್ನು ಕಗ್ಗತ್ತಲೆಯಾದ ಪಾಳು ಭಾವಿಯೊಳಗೆ ಕೂಡಿಸಿ, ಅವನ ಆಹಾರಕ್ಕಾಗಿ ಒಂದು ಸೇರು ಹಿಟ್ಟನ್ನೂ, ಒಂದು ಬೋಗಿ ನೀರನ್ನೂ ನಿತ್ಯವೂ ಕಳುಹಿಸುತ್ತಿದ್ದನು. ಆಗ ಶಕಟಾಲನು ತನ್ನ ಮಕ್ಕಳನ್ನು ಕುರಿತು ಎಲೈ ಮಕ್ಕಳಿರಾ, ಇವನು ಕೊಡುತ್ತಿರುವ ಆಹಾರ ಪದಾರ್ಥಗಳು ಒಬ್ಬರಿಗೂ ಸಾಲದು. ಕಷ್ಟದಿಂದ ಒಬ್ಬನು ಮಾತ್ರ ಜೀವಿಸಬಹುದೇ ಹೊರತು ಎಲ್ಲರೂ ಬದುಕಲಾರೆವೆಂದು ನಿಮಗೆ ತಿಳಿದಿದೆಯಷ್ಟೆ! ಈ ರಾಜನು ನಮಗೆ ಮಾಡಿರುವ ಶಿಕ್ಷೆಗೆ [illegible] ನಮ್ಮಲ್ಲಿ ಯಾರು ಸಮರ್ಥರೋ ಅವನು ಇದನ್ನು ತಿಂದು ಜೀವಿಸಲಿ, ಎಂದು ಹೇಳಿದನು. ಆಗಲಾ ಮಕ್ಕಳು ಎಲೈ ತಂದೆಯೇ ನಮಗಾರಿಗೂ ಆ ಸಾಮರ್ಥ್ಯವಿಲ್ಲ. ಆದುದರಿಂದ ನೀನೇ [illegible] ವೈರವನ್ನು ತೀರಿಸಿಕೊಳ್ಳಬೇಕೆಂದರು. [illegible] ಪ್ರೀತಿಕರವಾದುದಲ್ಲವೇ? ಆಗ ಶಕಟಾಲನು [illegible] ತಾನೊಬ್ಬನೇ ಜೀವಿಸುತ್ತ ಬಂದನು. [illegible] ಶಕಟಾಲನು, [illegible]

೫]

ಇಷ್ಟರಲ್ಲಿ ಯೋಗನಂದನಿಗೆ ರಾಜ್ಯವೆಲ್ಲವೂ ಸ್ವಾಧೀನವಾಯಿತು. ಗುರುದಕ್ಷಿಣೆಯನ್ನು ಕೊಟ್ಟ ವ್ಯಾಡಿಯು ಪುನಃ ಅಲ್ಲಿಗೆ ಬಂದು ರಾಜನನ್ನು ಕುರಿತು ಎಲೈ ರಾಜನೇ ನೀನು ಬಹುಕಾಲ ಈ ರಾಜ್ಯವನ್ನು ಅನುಭವಿಸೆಂದು ಹರಿಸಿ, ನಾನು ತಪಸ್ಸಿಗಾಗಿ ಎಲ್ಲಿಯಾದರೂ ಹೋಗುತ್ತೇನೆ. ಅನುಜ್ಞೆ ಕೊಡೆಂದು ಕೇಳಿದನು. ಇದನ್ನು ಕೇಳಿ ರಾಜನು ದುಃಖದಿಂದ ಗದ್ಗದ ಕಂಠನಾಗಿ ಎಲೈ ವ್ಯಾಡಿಯೇ, ನನ್ನನಗಲಿ ಹೋಗಬೇಡ ಈ ನನ್ನ ರಾಜ್ಯದಲ್ಲಿಯೇ ಇದ್ದುಕೊಂಡು ಬೇಕಾದ ಭೋಗಗಳನ್ನು ಅನುಭವಿಸುತ್ತಿರು, ಎಂದು ಹೇಳಿದನು. ಆಗ ವ್ಯಾಡಿಯು ಎಲೈ ರಾಜನೇ, ಈ ಶರೀರವು ಒಂದು ಕ್ಷಣದಲ್ಲಿ ನಾಶವಾಗತಕ್ಕದ್ದು. ಅಲ್ಲದೆ ಶಾರೀರ ವ್ಯಾಪಾರಗಳು ನಿಸ್ಸಾರವಾದವುಗಳು. ಇದಕ್ಕೆ ನೀನೇ ದೃಷ್ಟಾಂತ. ಇಂಥ ನಿಸ್ಸಾರವಾದ ಸಂಸಾರದಲ್ಲಿ ಬುದ್ಧಿವಂತನು ಮುಳುಗಬೇಕೆಂದು ಅಪೇಕ್ಷಿಸುವನೇ? ಬಿಸಿಲು ಕುದುರೆಯು ನೀರಿನ ಭ್ರಮೆಯನ್ನು ಮಾಡುವಂತೆ ಸುಖಭ್ರಮೆಯನ್ನುಂಟು ಮಾಡುವ ಈ ಐಶ್ವರ್ಯವು ವಿವೇಕಿಯನ್ನು ಮರುಳುಗೊಳಿಸಲಾರದು, ಎಂದು ಹೇಳಿ ನಿಶ್ಚಲವಾದ ಮನಸ್ಸಿನಿಂದ ತಪಸ್ಸಿಗೆ ಹೊರಟು ಹೋದನು. ಆಗ ನನ್ನಿಂದ ಸಹಿತನಾದ ಯೋಗನಂದನು ಸಕಲ ಸೇನಾಸಮೇತನಾಗಿ ಸುಖದಿಂದಿರುವುದಕ್ಕಾಗಿ ಪುನಃ ಪಾಟಲೀಪುತ್ರಕ್ಕೆ ಬಂದನು. ಹೀಗೆ ಬಂದ ಮೇಲೆ ನಾನು ಪತ್ನಿಯಾದ ಉಪಕೋಶೆಯ ಸೇವೆಯನ್ನು ಕೈಕೊಳ್ಳುತ್ತಾ ತಾಯಿ ಗುರು ಮತ್ತು ಬಂಧುವರ್ಗದವರಿಂದ ಕೂಡಿ ಅಧಿಕಾರ ಮತ್ತು ಐಶ್ವರ್ಯಗಳನ್ನು ಹೊಂದಿ ಸುಖವಾಗಿದ್ದೆನು. ನನ್ನ ತಪಸ್ಸಿಗೆ ಮೆಚ್ಚಿದ ಗಂಗಾದೇವಿಯು ನನಗೆ ಪ್ರತಿದಿನವೂ ಬಂಗಾರವನ್ನು ಕೊಡುತ್ತಿದ್ದಳು. ಶಾರದಾದೇವಿಯು ಆಗಾಗ ನನಗೆ ಪ್ರತ್ಯಕ್ಷಳಾಗಿ ನನ್ನ ಕೆಲಸಗಳ ಸಂದೇಹವನ್ನು ಹೋಗಲಾಡಿಸುತ್ತಿದ್ದಳು.

ಎಂಬಲ್ಲಿಗೆ ಮಹಾಕವಿ ಶ್ರೀ ಸೋಮದೇವಭಟ್ಟ ವಿರಚಿತ ಕಥಾಸರಿತ್ಸಾಗರದೊಳ್ ಕಥಾಪೀಠ ಲಂಬಕದ ನಾಲ್ಕನೆಯ ತರಂಗವು ಮುಗಿದುದು.

ಐದನೆಯ ತರಂಗವು.

(೧)

ಪ್ರಸ್ತ: ವರರುಚಿಯು ಹೇಳತೊಡಗಿದನು:—ಕಾಣಭೂತಿಯೇ ಕೇಳು, ಹೀಗೆ ಕೆಲವು ಕಾಲ ಕಳೆದ ಮೇಲೆ ಯೋಗನಂದನು ಕಾಮಕ್ರೋಧಾದಿಗಳ ವಶನಾದನು. ಕೊಬ್ಬಿದ ಆನೆಯಂತೆ ಮದವೇರಿದವನಾಗಿ, ರಾಜ್ಯಕಾರ್ಯಗಳಲ್ಲೊಂದಕ್ಕೂ ಲಕ್ಷ್ಯಮಾಡದೆ ಸ್ವೇಚ್ಛೆಯಾಗಿ ವಿಹರಿಸುತ್ತಿದ್ದನು. ಬಿಟ್ಟಿ ಬಂದ ಹಣದಿಂದ ಯಾರು ತಾನೇ ಮದಿಸಲಾರರು? ಆಗ ನನ್ನೊಳು ನಾನೇ "ಅರಸನು [illegible] ರಾಜ್ಯದ ಕಾರ್ಯಭಾಗವನ್ನು ಸ್ವಲ್ಪಾದರೂ ನೋಡನು. ಇದರ ಯೋಚನೆಯಲ್ಲಿಯೇ ನಾನು ಕುಳಿತರೆ ಸ್ವಧರ್ಮವೆಲ್ಲವೂ ನಾಶವಾಗುತ್ತದೆ. ಆದುದರಿಂದ ಈಗ ಶಕಟಾಲನನ್ನು ಬಿಡಿಸಿ ನನ್ನ ಸಹಾಯಕ್ಕಾಗಿ ಇಟ್ಟುಕೊಳ್ಳುವುದು ಒಳ್ಳೆಯದಾಗಿ ಕಾಣುತ್ತೆ. ಒಂದು ವೇಳೆ ಇವನು [illegible] "ನಾನಿರುವಾಗ [illegible]" [illegible] ಆಲೋಚಿಸಿ [illegible] ಶಕಟಾಲನನ್ನು [illegible] ಶಕಟಾಲನು [illegible] ಒಂದು [illegible]

[illegible]

ಮನಸ್ಸುಳ್ಳ ಇಬ್ಬರಿಗೆ ಯಾವುದೂ ಅಸಾಧ್ಯವಲ್ಲವೆಂದು ತೋರಿಸಿದೆನು. ಗೂಢವಾಗಿದ್ದ ಈ ಅರ್ಥವನ್ನು ತಿಳಿದು ಹೇಳಿದ್ದಕ್ಕಾಗಿ ರಾಜನು ಸಂತೋಷಪಟ್ಟನು. ಶಕಟಾಲನು ಜಯಿಸಲು ಅಸಾಧ್ಯವಾದ ನನ್ನೀ ಬುದ್ಧಿಯನ್ನು ಕಂಡು ಒಳಗೆ ಸಂಕಟಪಟ್ಟನು. ಹೀಗಿರಲು ಒಂದು ದಿನ ಒಬ್ಬ ಬ್ರಾಹ್ಮಣನು ರಾಜನ ಮಹಡಿಗೆದುರಾಗಿ ಬೀದಿಯಲ್ಲಿ ಬರುತಿದ್ದನು. ಮಹಡಿಯ ಮೇಲಿದ್ದ ಅರಸನ ಹೆಂಡತಿಯು ಕಿಟಕಿಯಿಂದ ಅತಿಥಿಯನ್ನು ನೋಡುತ್ತಿದ್ದಳು. ಇದನ್ನು ರಾಜನು ನೋಡಿದನು. ಇಷ್ಟರಿಂದಲೇ ರಾಜನು ಆಗ್ರಹಗೊಂಡು ಬ್ರಾಹ್ಮಣನನ್ನು ವಧಿಸುವುದೆಂದು ಆಜ್ಞಾಪಿಸಿದನು. ಅಸೂಯೆಯು ಎಂತಹ ವಿವೇಕವನ್ನಾದರೂ ನಾಶಮಾಡುವದಲ್ಲವೆ? ರಾಜಾಜ್ಞೆಯಂತೆ ಆ ಬ್ರಾಹ್ಮಣನನ್ನು ವಧ್ಯಸ್ಥಾನಕ್ಕೆ ಕರೆದೊಯ್ಯುತ್ತಿರುವಾಗ ಕಟುಕರ ಅಂಗಡಿಯಲ್ಲಿದ್ದ ಸತ್ತ ಮೀನು ನಗಲಾರಂಭಿಸಿತು ಇದನ್ನು ನೋಡಿದ ಅರಸನು ಆ ದಿನ ಬ್ರಾಹ್ಮಣನನ್ನು ಕೊಲ್ಲಿಸದೆ ನಿಲ್ಲಿಸಿ ಮೀನು ನಕ್ಕದ್ದಕ್ಕೆ ಕಾರಣವೇನೆಂದು ಪ್ರಶ್ನಮಾಡಿದನು. ನಾನು ಆಲೋಚಿಸಿ ತಿಳಿಸುವುದಾಗಿ ಹೇಳಿ ಮನೆಗೆ ಹೋಗಿ ರಹಸ್ಯವಾದ ಸ್ಥಳದಲ್ಲಿದ್ದು ಮನದಲ್ಲಿ ಶಾರದೆಯನ್ನು ಸ್ಮರಿಸಿದೆನು. ಆಗ ದೇವಿಯು ಪ್ರತ್ಯಕ್ಷಳಾಗಿ, ಎಲೈ ಮಗನೆ, ಈ ರಾತ್ರಿ ಇಲ್ಲಿ ಕಾಣಬರುವ ತಾಳೇ ಮರದ ಮೇಲೆ ಯಾರಿಗೂ ಕಾಣದಂತೆ ಅಡಗಿದ್ದರೆ ಮೀನು ನಗುವುದರ ಕಾರಣವನ್ನು ತಿಳಿಯುವವನಾಗುತ್ತೀ, ಎಂದು ಹೇಳಿದಳು. ಆ ರಾತ್ರಿ ಆ ತಾಳೆಯಮರದ ಮೇಲೆ ನಾನು ಗುಟ್ಟಾಗಿ ಅವಿತುಕೊಂಡಿದ್ದೆನು. ಒಬ್ಬ ಭಯಂಕರಳಾದ ರಾಕ್ಷಸಿಯು ಕೆಲವು ಚಿಕ್ಕ ಮಕ್ಕಳನ್ನು ಕರೆದುಕೊಂಡು ಅಲ್ಲಿಗೆ ಬಂದಳು. ಆಗಲಾ ಮಕ್ಕಳು ತಾಯಿಯನ್ನು ಕುರಿತು ಅಮ್ಮಾ ನಮಗೆ ಆಹಾರವನ್ನು ಕೊಡೆಂದು ಕೇಳಹತ್ತಿದವು. ಅದಕ್ಕವಳು ಸ್ವಲ್ಪ ತಡೆಯಿರಿ; ನಾಳೇ ಬೆಳಿಗ್ಗೆ ನಿಮಗೆ ಬ್ರಾಹ್ಮಣನ ಮಾಂಸವನ್ನು ತಂದು ಕೊಡುವೆನು. ಈ ದಿನ ಅವನನ್ನು ಕೊಲ್ಲಲಿಲ್ಲವೆಂದು ಹೇಳಿದಳು. ಮಕ್ಕಳು ಅಮ್ಮಾ, ಈ ದಿನವೇಕೆ ಅವನನ್ನು ಕೊಲ್ಲಲಿಲ್ಲವೆಂದು ಕೇಳಿದವು. ರಾಕ್ಷಸಿಯು ಅವನನ್ನು ನೋಡಿ ಸತ್ತ ಮೀನು ನಕ್ಕದ್ದರಿಂದ ಈ ದಿನ ಕೊಲ್ಲಿಸಲಿಲ್ಲವೆಂದಳು. ಮಕ್ಕಳು "ಸತ್ತ ಮೀನು ನಕ್ಕುದೇಕೆ?" ಎಂದು ಕೇಳಿದವು. ರಾಕ್ಷಸಿಯು ಅಂತಃಪುರದಲ್ಲೆಲ್ಲಾ ಸ್ತ್ರೀವೇಷಧಾರಿಗಳಾದ ಪುರುಷರು ತುಂಬಿದ್ದಾರೆ. ರಾಜ ಮಹಿಷಿಯರೆಲ್ಲರೂ ತಮ್ಮ ಶೀಲವನ್ನು ಬಿಟ್ಟು ಕೆಟ್ಟುಹೋಗಿರು

ವರು. ಹೀಗಿದ್ದೂ ರಾಜನು ನಿರಪರಾಧಿಯಾದ ಬ್ರಾಹ್ಮಣನನ್ನು ಕೊಲ್ಲಿಸುತ್ತಾನಲ್ಲ! ಎಂದು ಸತ್ತ ಮೀನು ನಕ್ಕಿತು. ಆದರೆ ನಿರ್ಜೀವವಾದ ವಸ್ತುಗಳಿಗೆ ಈ ಶಕ್ತಿಯು ಹೇಗೆ ಉಂಟಾಯಿತು? ಎಂದು ಕೇಳಬಹುದು. ಸಮಸ್ತ ಪ್ರಾಣಿಗಳಲ್ಲೂ ಪಂಚಭೂತಗಳು ಸಂಚಾರಮಾಡತಕ್ಕವುಗಳಾದ್ದರಿಂದ ಅವಕ್ಕೆ ತಿಳಿಯದೆ ಇದ್ದ [illegible] ಇರುವದಿಲ್ಲ ರಾಜರು ಮದೋನ್ಮತ್ತರಾಗಿ ಸ್ವಲ್ಪವೂ ವಿವೇಕವಿಲ್ಲದೆ ಕೆಲಸ ಮಾಡುತ್ತಿರುವಾಗ ಆ ಭೂತಗಳು ಹೀಗೆ ನಗುತ್ತಿರುವವು. ಸತ್ತ ಪ್ರಾಣಿಗಳಲ್ಲಿ ಈರೀತಿ ನಗುವನ್ನುಂಟು ಮಾಡುವ ಉತ್ಪಾತವು ಆ ಪಂಚಭೂತಗಳ ಶಕ್ತಿಯೇ ಆಗಿರುತ್ತೆ. ಎಂದು ರಾಕ್ಷಸಿಯು ಹೇಳಿದಳು.

ಈ ಮಾತನ್ನು ಕೇಳಿ [illegible] ದಿನ ರಾಜನಿಗೆ ಮೀನು ನಕ್ಕ ಕಾರಣವನ್ನು ತಿಳಿಸಿದೆನು. [illegible] ಅಂತಃಪುರದಲ್ಲಿ ಪರೀಕ್ಷಿಸಲಾಗಿ ಸ್ತ್ರೀರೂಪರಾದ [illegible] ಸಿಕ್ಕಿದರು. ಇದರಿಂದ ರಾಜನಿಗೆ ನನ್ನಲ್ಲಿ [illegible] ಬ್ರಾಹ್ಮಣನಿಗೂ [illegible] ಇವೇ [illegible] ಮಾತ್ರ ಬೇಸರಿಕೆ [illegible] ಚಿತ್ರ [illegible] ಅವಳ [illegible] ಆ ಚಿತ್ರದಲ್ಲಿ ಮಾತನಾ [illegible] ಭಾಗಗ [illegible] ರಾಜನು [illegible]

[illegible]

ರುಚಿಯು ಅದನ್ನು ಬರೆದನೆಂದು ಹೇಳಿದರು. ಇದನ್ನು ಕೇಳಿ ಅರಸನು ಕೋಪದಿಂದ ಉರಿಯುತ್ತಾ ನಾನೊಬ್ಬನು ಹೊರತು ಮತ್ತಾರಿಂದಲೂ ತಿಳಿಯಲಶಕ್ಯವಾದ ರಾಣಿಯ ರಹಸ್ಯ ಪ್ರದೇಶದಲ್ಲಿರುವ ಮಚ್ಚೆಯನ್ನು ಈ ವರರುಚಿಯು ಕಂಡದ್ದು ಹೇಗೆ? ಇವನು ಗುಟ್ಟಾಗಿ ನನ್ನ ಅಂತಃಪುರವನ್ನೆಲ್ಲಾ ಕೆಡಿಸಿರುವುದೇನೋ ನಿಜ. ಹಾಗಲ್ಲದಿದ್ದರೆ ಅಂತಃಪುರದಲ್ಲಿ ಹೆಂಗಸರ ವೇಷದಿಂದಿದ್ದ ಗಂಡಸರ ಪತ್ತೆಯು ಇವನಿಗೆ ಹೇಗಾಗುತ್ತಿತ್ತೆಂದು ಆಲೋಚಿಸಿದನು. ಮೂಢರಿಗೆ ಹೇಳಿದ ಬುದ್ಧಿವಾದಗಳು ವಿಪರೀತವಾಗುವುದೇ ಸರಿ. ಆಗಲಾ ಅರಸನು ಏನೊಂದೂ ವಿಚಾರಿಸದೆ ಶಕಟಾಲನನ್ನು ಕುರಿತು ಮಹಾರಾಣಿಯ ಶೀಲನಾಶಕನಾದ ವರರುಚಿಯನ್ನು ಕೊಲ್ಲಿಸುವುದೆಂದು ಮನಸ್ಸಿಗೆ ಬಂದಂತೆ ಆಜ್ಞೆಮಾಡಿದನು. ಶಕಟಾಲನು ಅಪ್ಪಣೆಯಂತೆ ನಡೆಯಿಸುವುದಾಗಿ ಹೇಳಿ ಹೊರಗೆ ಬಂದು ಮಹಾಬುದ್ಧಿಶಾಲಿಯಾದ ವರರುಚಿಯನ್ನು ನಾನು ಕೊಲ್ಲಿಸುವದು ಸಾಧ್ಯವೇ? ಇವನು ನನ್ನನ್ನು ಸೆರೆಯಿಂದ ಬಿಡಿಸಿರುತ್ತಾನೆ. ಅಲ್ಲದೆ ಇವನು ಬ್ರಾಹ್ಮಣನು. ಆದುದರಿಂದ ಇವನನ್ನು ಗೋಪ್ಯವಾಗಿಟ್ಟು ರಕ್ಷಿಸಿ ನನ್ನ ಸ್ವಾಧೀನ ಮಾಡಿಕೊಳ್ಳುವುದು ಉತ್ತಮವೆಂದು ಯೋಚಿಸಿಕೊಂಡು ನನ್ನಲ್ಲಿಗೆ ಬಂದು ಎಲೈ ವರರುಚಿಯೇ, ಅರಸನು ನಿನ್ನನ್ನು ಕೊಲ್ಲಿಸುವಂತೆ ಆಜ್ಞೆಮಾಡಿರುತ್ತಾನೆ. ಇದು ನಿಷ್ಕಾರಣವಾದುದೆಂಬುದನ್ನು ನಾನು ಬಲ್ಲೆನು. ನಾನು ನಿನಗೆ ಬದಲಾಗಿ ಬೇರೊಬ್ಬನನ್ನು ಕೊಲ್ಲಿಸಿ ನಿನ್ನನ್ನು ಕೊಲ್ಲಿಸಿದೆನೆಂದು ಹೇಳುತ್ತೇನೆ. ನೀನು ನನ್ನ ಮನೆಯಲ್ಲಿ ಅಡಗಿಕೊಂಡಿರಬೇಕು, ಎಂದು ಪ್ರಾರ್ಥಿಸಿದನು. ಅವನ ಇಷ್ಟದಂತೆ ನಾನು ಅವನ ಮನೆಯಲ್ಲಿ ಗುಪ್ತವಾಗಿ ಇದ್ದೆನು. ಶಕಟಾಲನು ಇನ್ನೊಬ್ಬನನ್ನು ಕೊಲ್ಲಿಸಿ ನನ್ನನ್ನು ಕೊಲ್ಲಿಸಿರುವುದಾಗಿ ವರ್ತಮಾನವನ್ನು ಹುಟ್ಟಿಸಿದನು. ಇದಾದ ಮೇಲೆ ನಾನು ಎಲೈ ಶಕಟಾಲನೇ, ನನ್ನನ್ನು ಕೊಲ್ಲಿಸಬೇಕೆಂದು ನೀನು ಮನಸ್ಸು ಮಾಡದಿರುವುದರಿಂದ ನೀನು ನಿಜವಾಗಿಯೂ ಮಂತ್ರಿಪದವಿಗೆ ತಕ್ಕವನೇ ಆಗಿರುತ್ತೀಯೆ. ನನ್ನನ್ನು ಕೊಲ್ಲಿಸುವುದು ಯಾರಿಗೂ ಸಾಧ್ಯವಲ್ಲ. ಏಕೆಂದರೆ ನನಗೊಬ್ಬ ರಾಕ್ಷಸನು ಸ್ನೇಹಿತನಾಗಿರುವನು. ಮನದಲ್ಲಿ ನಾನು ನೆನೆದ ಮಾತ್ರಕ್ಕೆ ಬರುವನಲ್ಲದೆ ನನಗೋಸ್ಕರ ಅವನೀ ಪ್ರಪಂಚವನ್ನೇ ನಾಶಮಾಡಬಲ್ಲನು. ಆದರೆ ರಾಜನನ್ನೇಕೆ ಕೊಲ್ಲಿಸಬಾರದೆಂದು ಕೇಳುವೆಯೇನೋ! ಅವನು ನನ್ನ ಸ್ನೇಹಿತನಾದ ಇಂದ್ರದತ್ತನೆಂಬ ಬ್ರಾಹ್ಮಣನಾದ್ದರಿಂದ ಅವ

ನನ್ನು ಕೊಲ್ಲಿಸಲಾರೆನು, ಎಂದು ಹೇಳಿದ್ದನ್ನು ಕೇಳಿ ಶಕಟಾಲನು ಆ ರಾಕ್ಷಸನನ್ನು ನನಗೆ ತೋರಿಸಬೇಕೆಂದು ಕೇಳಿಕೊಂಡನು. ಅವನ ಇಷ್ಟಪ್ರಕಾರ ನಾನು ರಾಕ್ಷಸನನ್ನು ಸ್ಮರಿಸಿದೊಡನೆಯೇ ಅವನು ಪ್ರತ್ಯಕ್ಷನಾದನು. ಅತನನ್ನು ನೋಡಿದ ಮಾತ್ರಕ್ಕೇ ಶಕಟಾಲನು ಏಕಕಾಲದಲ್ಲಿ ಭಯಾಶ್ಚರ್ಯಗಳನ್ನು ಹೊಂದಿದನು. ರಾಕ್ಷಸನು ಅಂತರ್ಗತನಾದ ಮೇಲೆ ಶಕಟಾಲನು ನಿನಗೂ ರಾಕ್ಷಸನಿಗೂ ಸ್ನೇಹವಾದದ್ದು ಹೇಗೆ? ಎಂದು ಪ್ರಶ್ನೆ ಮಾಡಿದನು.

ಅದಕ್ಕೆ ನಾನು, "ಕೇಳು ಶಕಟಾಲನೇ. ರಾತ್ರಿಕಾಲದಲ್ಲಿ ನಗರ ರಕ್ಷಣೆಗಾಗಿ ನಗರಾಧಿಪತಿಯು ಪುರಸಂಚಾರ ಮಾಡಬೇಕಾದುದು ಸರಿಯಷ್ಟೆ? ಹಿಂದೊಂದು ದಿನ ಊರು ತಿರುಗುವದಕ್ಕೆ ಹೋದ ನಗರಾಧಿಪತಿಯು ಹಿಂತಿರುಗಿ ಬರಲಿಲ್ಲ. ಆ ಸ್ಥಾನಕ್ಕೆ ಮತ್ತೊಬ್ಬನನ್ನು ನಿಯಮಿಸಿದ್ದಾಯಿತು. ಅವನಿಗೂ ಅದೇ ಗತಿ ಬಂದಿತು. ಹೀಗೆ ಪ್ರತಿದಿನವೂ ಒಬ್ಬೊಬ್ಬರಂತೆ ನಾಶಹೊಂದುತ್ತ ಬಂದರು. ಅದಕ್ಕೆ ಕಾರಣವು ತಿಳಿಯಲಿಲ್ಲ. ಆಗ ರಾಜನು ಒಂದು ದಿನ ಆ ಕೆಲಸಕ್ಕೆ ನನ್ನನ್ನೇ ನೇಮಿಸಿದನು. ನಾನು ಆ ದಿನ ಊರಲ್ಲೆಲ್ಲಾ ಸುತ್ತುತ್ತಿರುವಾಗ ಒಬ್ಬ ರಾಕ್ಷಸನನ್ನು ಕಂಡೆನು. ಅವನು ನನ್ನನ್ನು ನೋಡಿ [illegible] ಪ್ರಶ್ನೆ ಮಾಡಿದನು. [illegible]

ಕೊಂಡನು. ನಾನು ಧ್ಯಾನಮಾಡಲು ಗಂಗೆಯು ಪ್ರತ್ಯಕ್ಷಳಾದಳು ನನ್ನ ಸ್ತೋತ್ರದಿಂದ ಸಂತುಷ್ಟಳಾದ ಜಾಹ್ನವಿಯು ಶಕಟಾಲನಿಗೂ ದರ್ಶನ ಕೊಟ್ಟು ಅಂತರ್ಧಾನವಾದಳು. ಆಗ ಶಕಟಾಲನು ನನಗೆ ಸಹಾಯಕನಾಗಿ ನಮ್ರತೆಯಿಂದಿದ್ದನು. ಹೀಗೆ ಒಳಗೆ ಅಡಗಿದ್ದು ಬಹಳ ವ್ಯಸನ ಪಡುತ್ತಿರುವ ನನ್ನನ್ನು ನೋಡಿ ಒಂದು ದಿನ ಶಕಟಾಲನು ಎಲೈ ಕಾತ್ಯಾಯನನೇ, ಸರ್ವಜ್ಞನಾದ ನೀನು ಹೀಗೇಕೆ ವ್ಯಸನಕ್ಕೆ ಮನಸ್ಸನ್ನು ಕೊಡುತ್ತೀಯೇ! ಸ್ವಲ್ಪ ಕಾಲದಲ್ಲಿಯೇ ನಿನ್ನ ಮೇಲಿನ ಅಪರಾಧವು ಪರಿಹಾರವಾಗಿ ಶುದ್ಧನಾಗುತ್ತೀ. ರಾಜನ ಮನಸ್ಸು ವಿಚಾರಶೂನ್ಯವಾದುದು ಎಂದು ನಿನಗೆ ತಿಳಿಯದೇ? ಇದಕ್ಕೆ ದೃಷ್ಟಾಂತರೂಪವಾಗಿ ಒಂದು ಕಥೆಯನ್ನು ಹೇಳುತ್ತೇನೆ ಕೇಳೆಂದು ಹೇಳಲಾರಂಭಿಸಿದನು:—

ಆದಿತ್ಯವರ್ಮನ ಕಥೆ.

ಪೂರ್ವದಲ್ಲಿ ಆದಿತ್ಯವರ್ಮನೆಂಬ ಒಬ್ಬ ರಾಜನಿದ್ದನು. ಅವನಿಗೆ ಶಿವವರ್ಮನೆಂಬ ಒಬ್ಬ ಬಹು ಬುದ್ಧಿಶಾಲಿಯಾದ ಮಂತ್ರಿ ಇದ್ದನು. ಒಂದಾನೊಂದು ಕಾಲದಲ್ಲಿ ರಾಜನ ಹೆಂಡತಿಯರಲ್ಲೊಬ್ಬಳು ಗರ್ಭಿಣಿಯಾಗಿದ್ದಾಳೆಂದು ತಿಳಿಯಬಂತು. ಇದನ್ನು ಕೇಳಿ ರಾಜನು ಅಂತಃಪುರದ ಅಧಿಕಾರಿಗಳಾಗಿದ್ದವರನ್ನು ಕರೆಯಿಸಿ ನಾನು ಅಂತಃಪುರಕ್ಕೆ ಬಾರದೇ ಎರಡು ವರ್ಷಗಳಾದವು. ಆದುದರಿಂದ ಬೇರೆ ಯಾರೋ ಪುರುಷರು ಗುಪ್ತವಾಗಿ ಅಂತಃಪುರಕ್ಕೆ ಪ್ರವೇಶಿಸುತ್ತಿರಬೇಕಲ್ಲವೆ? ಹಾಗಾದರೆ ಯಾರು ಪ್ರವೇಶಿಸುತ್ತಿದ್ದಾರೋ ತಿಳಿಸಿರೆಂದು ಅಪ್ಪಣೆ ಮಾಡಲು, ಅವರು, "ಮಹಾಸ್ವಾಮಿ ತಮ್ಮ ಮಂತ್ರಿ ಶಿವವರ್ಮನು ಹೊರತು ಯಾರೂ ಹೋಗಿ ಬರುತ್ತಿರಲಿಲ್ಲ. ಇವರೊಬ್ಬರು ಮಾತ್ರ ತಡೆಯಿಲ್ಲದೆ ಹೋಗಿ ಬರುತ್ತಿರುವರೆ"ಂದು ಹೇಳಿದರು. ಇದನ್ನು ಕೇಳಿ ಆ ರಾಜನು ಶಿವವರ್ಮನು ದ್ರೋಹಮಾಡಿದ್ದಾನೆಂದು ನಿಶ್ಚಯಿಸಿ ಅವನನ್ನು ಕೊಲ್ಲಿಸಬೇಕೆಂದು ಮನಸ್ಸು ಮಾಡಿದನು. ಆದರೆ ಅವನನ್ನು ಎಲ್ಲರಿಗೂ ತಿಳಿಯುವಂತೆ ಕೊಲ್ಲಿಸಿದರೆ ಅಪವಾದ ಬರುವುದೆಂದು ಯೋಚಿಸಿ, ತನ್ನ ಸ್ನೇಹಿತನೂ ಅಧಿರಾಜನೂ ಆಗಿರುವ ಭೋಗವರ್ಮನೆಂಬ ರಾಜನಲ್ಲಿಗೆ ಏನೋ ಒಂದು ರಾಜಕಾರ್ಯದ ನೆವದಿಂದ ಶಿವವರ್ಮನನ್ನು ಕಳುಹಿಸಿ ಕೊಟ್ಟನು. ಅನಂತರ ಅವನನ್ನು ಕೊಲ್ಲಿಸುವಂತೆ ಪತ್ರ

ವನ್ನು ಬರೆದು ಒಬ್ಬ ದೂತನ ಕೈಯಲ್ಲಿ ಕೊಟ್ಟು ಗುಪ್ತವಾಗಿ ಭೋಗವರ್ಮನಲ್ಲಿಗೆ ಕಳುಹಿಸಿದನು. ಈ ಮಂತ್ರಿಯು ಹೊರಟು ಏಳು ದಿನಗಳಾದ ಮೇಲೆ ಗರ್ಭಿಣಿಯಾಗಿದ್ದ ರಾಜಪತ್ನಿಯು ಭಯದಿಂದ ಇನ್ನೊಬ್ಬಳು ಹೆಂಗಸನ್ನು ಕಟ್ಟಿಕೊಂಡು ರಾತ್ರಿಯ ವೇಳೆಯಲ್ಲಿ ತಪ್ಪಿಸಿಕೊಂಡು ಹೋಗುತ್ತಿರುವಾಗ ನಗರ ರಕ್ಷಕರ ಕೈಯಲ್ಲಿ ಸಿಕ್ಕಿ ಬಿದ್ದಳು. ವಿಚಾರ ಮಾಡಿದ್ದರಲ್ಲಿ ಈ ಬಸುರಿಯಾದ ರಾಜಪತ್ನಿಯ ಸಂಗಡ ಇದ್ದ ವ್ಯಕ್ತಿಯು ಪುರುಷನೆಂದೂ ಅವನೇ ಅವಳ ಉಪಪತಿಯೆಂದೂ ತಿಳಿದು ಬಂದುದರಿಂದ ರಾಜನು ಅವಿಚಾರದಿಂದ ಸಮರ್ಥನಾದ ಮಂತ್ರಿಯನ್ನು ಕೊಲ್ಲಿಸಿ ಅನ್ಯಾಯವಾಗಿ ಪಾಪಕ್ಕೀಡಾದೆನಲ್ಲಾ, ಎಂದು ಸಂಕಟಪಡುತ್ತಿದ್ದನು.

ಇತ್ತಲಾ ಶಿವವರ್ಮನೂ ಆ ಗುಟ್ಟಿನ ಪತ್ರವನ್ನು ತಂದ ರಾಜದೂತನೂ ಭೋಗವರ್ಮನನ್ನು ಸೇರಿದರು. ಏನೋ ದೈವಗತಿಯಿಂದ ಭೋಗವರ್ಮನು ಶಿವವರ್ಮನಿಗೆ [illegible] ಕಾಗದವನ್ನು ಗುಟ್ಟಾಗಿ ಓದಿ ತೋರಿಸಿದನು. ಆಗ ಬುದ್ಧಿಶಾಲಿಯಾದ ಶಿವವರ್ಮನು ಎಲೈ ಭೋಗವರ್ಮನೇ ನೀನು ರಾಜಾಜ್ಞೆಯಂತೆ ನನ್ನನ್ನು ಕೊಲ್ಲಿಸುವದಾಗು. ಇಲ್ಲವಿದ್ದರೆ ನಾನೇ ಆತ್ಮಹತ್ಯೆಯನ್ನು ಮಾಡಿಕೊಳ್ಳುವೆನೆಂದು ಹೇಳಿದನು. ಇದನ್ನು ಕೇಳಿ ಆಶ್ಚರ್ಯಗೊಂಡ ಭೋಗವರ್ಮನು 'ಶಿವವರ್ಮನೇ, ಪ್ರಾಣಗಳನ್ನು ಬಿಡುವದಕ್ಕೇಕೆ ಅಪೇಕ್ಷಿಸುತ್ತೀ' ಎಂದು ಪ್ರಶ್ನೆ ಮಾಡಿದನು. ಅದಕ್ಕವನು ಯಾವ [illegible]

ಕಳುಹಿಸಿ ಬಿಟ್ಟನು. ಹೀಗೆ ಆ ಮಂತ್ರಿಯು ತನ್ನ ಪ್ರಜ್ಞಾಬಲದಿಂದ ಬದುಕಿ ಹಿಂತಿರುಗಿ ಬಂದು ಬಿಟ್ಟನು. ಇಷ್ಟರಲ್ಲಿಯೇ ಅಪರಾಧಿಯು ಸಿಕ್ಕಿದ್ದುದರಿಂದ ಇವನ ಮೇಲಿನ ಅಪರಾಧವು ಪರಿಹಾರವಾಗಿತ್ತು.

'ಎಲೈ ವರರುಚಿಯೇ, ಧರ್ಮವು ಎಂದಿಗೂ ಅಧರ್ಮವಾಗಲಾರದಷ್ಟೆ. ಆದ್ದರಿಂದ ಇದರಂತೆ ನಿನಗೂ ಶುದ್ಧಿಯುಂಟಾಗುತ್ತದಲ್ಲದೆ ರಾಜನು ತಾನು ಮಾಡಿದ್ದು ಅಕೃತ್ಯವೆಂದು ಪರಿತಾಪ ಹೊಂದುವನು' ಎಂಬಿವೇ ಮೊದಲಾದ ಮಾತುಗಳಿಂದ ನನ್ನನ್ನು ಸಮಾಧಾನಗೊಳಿಸುತ್ತಿದ್ದನು. ನಾನು ಅದೇ ರೀತಿಯಾಗಿ ಕಾಲವನ್ನು ನಿರೀಕ್ಷಿಸುತ್ತಾ ಅಡಗಿದ್ದೆನು. ಹೀಗಿರಲು ಒಂದಾನೊಂದು ದಿನ ರಾಜನ ಮಗನಾದ ಹಿರಣ್ಯಗುಪ್ತನು ಬೇಟೆಗಾಗಿ ಅರಣ್ಯಕ್ಕೆ ಹೋದನು. ಅಲ್ಲಿ ವೇಗವಾಗಿ ಹೋಗುತ್ತಿದ್ದ ಕುದುರೆಯು ಇವನನ್ನು ಬಹುದೂರವಾಗಿ ತೆಗೆದುಕೊಂಡು ಹೋದುದರಿಂದ ಒಂಟಿಯಾಗಿ ಅರಣ್ಯಮಧ್ಯದಲ್ಲಿ ಸಿಕ್ಕಿದನು. ಇಷ್ಟರಲ್ಲಿಯೇ ಸೂರ್ಯನು ಮುಳುಗಿದುದರಿಂದ ರಾತ್ರಿಯನ್ನು ಕಳೆಯುವದಕ್ಕಾಗಿ ಒಂದು ಮರವನ್ನೇರಿ ಕುಳಿತನು. ಸ್ವಲ್ಪ ಹೊತ್ತಿನಲ್ಲಿಯೇ ಒಂದು ಸಿಂಹವು ಒಂದು ಕರಡಿಯನ್ನು ಅಟ್ಟಿಸಿಕೊಂಡು ಬಂದಿತು. ಆ ಸಿಂಹದ ಹೆದರಿಕೆಯಿಂದ ಕರಡಿಯು ಅದೇ ಮರವನ್ನೇರಿತು. ಆಗ ರಾಜಪುತ್ರನಿಗೆ ಭಯವುಂಟಾಯಿತು. ಇದನ್ನು ತಿಳಿದು ಕರಡಿಯು ಮನುಷ್ಯ ಭಾಷೆಯಿಂದ 'ಎಲೈ ರಾಜಪುತ್ರನೇ, ಹೆದರಬೇಡ; ನನ್ನನ್ನು ನಿನ್ನ ಗೆಳೆಯನಂತೆ ತಿಳಿ' ಎಂದು ಹೇಳಿ ಅವನ ಭಯವನ್ನು ಹೋಗಲಾಡಿಸಿತು. ರಾಜಪುತ್ರನು ಕರಡಿಯ ಮಾತನ್ನು ನಂಬಿ ಸ್ವಲ್ಪ ಹೊತ್ತು ಮಲಗಿ ನಿದ್ರಿಸಿದನು. ಆಗ ಕರಡಿಯು ಎಚ್ಚರವಾಗಿತ್ತು. ಮರದ ಬುಡದಲ್ಲಿದ್ದ ಸಿಂಹವು ಎಲೈ ಕರಡಿಯೇ ಆ ಮನುಷ್ಯನನ್ನು ಕೆಳಕ್ಕೆ ಕೆಡವು. ನಾನು ಅವನನ್ನು ತಿಂದು ಹೋಗುತ್ತೇನೆಂದು ಹೇಳಿತು. ಕರಡಿಯು ನಾನೆಂದಿಗೂ ಮಿತ್ರದ್ರೋಹವನ್ನು ಮಾಡುವದಿಲ್ಲ, ಎಂದು ಉತ್ತರವನ್ನು ಕೊಟ್ಟಿತು. ರಾಜಪುತ್ರನು ಎಚ್ಚತ್ತ ಮೇಲೆ ಸರದಿಯ ಪ್ರಕಾರ ಕರಡಿಯು ಮಲಗಿತು. ಹಿಂದಿನಂತೆಯೇ ಸಿಂಹವು ಎಲೈ ಮನುಷ್ಯನೇ ಆ ಕರಡಿಯನ್ನು ಕೆಳಕ್ಕೆ ದಬ್ಬಿಬಿಡು. ನಾನು ಅದನ್ನು ತಿಂದು ಹೋಗುತ್ತೇನೆ ಎಂದು ಹೇಳಿತು. ರಾಜಪುತ್ರನು ತನ್ನ ಮನಸ್ಸಿನ ಭೀತಿಯಿಂದ ಸಿಂಹವನ್ನು ಒಲಿಸಿಕೊಳ್ಳಬೇಕೆಂದು ಯೋಚಿಸಿ ಕರಡಿಯನ್ನು ಕೆಳಕ್ಕೆ ದಬ್ಬಿದನು. ದೈವಗತಿಯಿಂದ ಕರಡಿಯು

ಎಚ್ಚರ ಹೊಂದಿ, ಎಲೌ ಮಿತ್ರದ್ರೋಹಿಯೇ, ನಿನ್ನೀ ವೃತ್ತಾಂತವನ್ನು ಇನ್ನೊಬ್ಬರಿಂದ ನೀನು ಕೇಳುವವರೆಗೂ ಹುಚ್ಚನಾಗಿರೆಂದು ಶಪಿಸಿತು. ಮಾರನೆಯ ಪ್ರಾತಃಕಾಲ ಹಿರಣ್ಯಗುಪ್ತನು ಮನೆಗೆ ಬಂದು ಸೇರುವದರೊಳಗಾಗಿ ಹುಚ್ಚು ಹಿಡಿದಿತ್ತು. ಇದನ್ನು ನೋಡಿ ರಾಜನು ಈ ಕಾಲದಲ್ಲಿ ವರರುಚಿಯು ಬದುಕಿದ್ದರೆ ಇದರ ಸಂಗತಿಯನ್ನು ತಿಳಿದು ಹೇಳುತ್ತಿದ್ದನು. ಅವನನ್ನು ಕೊಲ್ಲಿಸುವುದರಲ್ಲಿ ಮಾಡಿದ ನನ್ನ ಅಚಾತುರ್ಯವನ್ನು ಸುಡಬೇಕೆಂದು ಹೇಳುತ್ತಾ ಬಹು ಸಂಕಟಪಡುತ್ತಿದ್ದನು. ಆಗ ಶಕಟಾಲನು, 'ಅಯ್ಯೋ ವರರುಚಿಯನ್ನು ಹೊರಕ್ಕೆ ತರುವದಕ್ಕೆ ಒಳ್ಳೆಯ ಸಮಯವು ಸಿಕ್ಕಿತು; ಆದರೆ ವರರುಚಿಯು ಹೊರಗೆ ಬಂದರೂ ಗೌರವಕಾರಿಯಾದ್ದರಿಂದ ಪುನಃ ಈ ಕೆಲಸಕ್ಕೆ ಸೇರುವುದಿಲ್ಲ. ಅಲ್ಲದೆ ಮಗನ ಹುಚ್ಚುತನವನ್ನು ಕಳೆದದ್ದಕ್ಕಾಗಿ ರಾಜನಿಗೂ ನಾನು ವಿಶ್ವಾಸಪಾತ್ರನಾಗುವೆನೆಂದು ಆಲೋಚಿಸಿ, ಎಲೈ ಪ್ರಭುವೇ, ನಾನು [illegible] ತಪ್ಪನ್ನು ಮಾಡಿದಾಗ್ಯೂ ಕ್ಷಮಿಸಬೇಕೆಂದು ಅಭಯವನ್ನು ಬೇಡಿ ರಾಜನಿಂದ ಅಭಯವನ್ನು ಪಡೆದು [illegible] ವ್ಯಸನಪಡಬೇಡಿ. ವರರುಚಿಯು [illegible] ಎಂದು ಹೇಳಿದನು. ಆಗ ಯೋಗನಂದನು ಬೇಗ [illegible] ಆಜ್ಞಾಪಿಸಿದನು. ಆಗ ಶಕಟಾಲನು ಬಲಾತ್ಕಾರವಾಗಿ [illegible] ಕರೆದುಕೊಂಡು ಹೋದನು. ನಾನು ಅಲ್ಲಿ [illegible] ಅನುಗ್ರಹದಿಂದ [illegible] ಇವನು ಮಿತ್ರದ್ರೋಹವನ್ನು [illegible] ಶಾಪ [illegible] ಮಾಡಿದನು. [illegible]

ಆದರೆ ನಾನು ಇವನ ಯಾವ ಉಡುಗರೆಯನ್ನೂ ತೆಗೆದುಕೊಳ್ಳದೆ ನನ್ನ ಮೇಲಿದ್ದ ಅಪವಾದವು ಹೋಗಿ ಪರಿಶುದ್ಧನಾದದ್ದೇ ಲಾಭವೆಂದು ಹೇಳಿ ನನ್ನ ಮನೆಗೆ ಹೋದೆನು. ಸದಾಚಾರವೇ ವಿದ್ವಾಂಸರಿಗೆ ದ್ರವ್ಯವು. ನಾನು ಮನೆಗೆ ಬಂದೊಡನೆಯೇ ಅಲ್ಲಿದ್ದವರು ನನ್ನ ಮುಂದೆ ಅಳುವುದಕ್ಕಾರಂಭಿಸಿದರು. ಇದರಿಂದ ಏನೂ ತಿಳಿಯದೆ ಸಂಕಟಪಡುತ್ತಿದ್ದ ನನ್ನನ್ನು ನೋಡಿ ನಮ್ಮ ಮಾವನಾದ ಉಪವರ್ಷನು ಬಂದು ರಾಜನು ನಿನ್ನನ್ನು ಕೊಲ್ಲಿಸಿದನೆಂಬ ವಾರ್ತೆಯನ್ನು ಕೇಳಿ ಉಪಕೋಶೆಯು ಅಗ್ನಿ ಪ್ರವೇಶಮಾಡಿದಳೆಂದೂ ನನ್ನ ತಾಯಿಯು ಎದೆಯೊಡೆದು ಸತ್ತಳೆಂದೂ ತಿಳಿಸಿದನು. ಇದನ್ನು ಕೇಳಿ ಈ ಜನ್ಮದಲ್ಲಿಯೇ ಹೊಸದಾದ ದುಃಖದಿಂದ ನಿಶ್ಚೇತನನಾಗಿ ಬಿರುಗಾಳಿಯ ಹೊಡೆತದಿಂದ ಮುರಿದು ಬಿದ್ದ ಮರದಂತೆ ಕೆಳಗೆ ಬಿದ್ದು ಅಳುತ್ತಾ ದುಃಖರಸದ ರುಚಿಯನ್ನು ತಿಳಿದವನಾದೆನು. ತಮಗೆ ಪ್ರೀತಿಪಾತ್ರರಾದ ಸಂಬಂಧಿಗಳ ನಾಶದಿಂದುಂಟಾದ ಶೋಕಾಗ್ನಿಯು ಯಾರಿಗೆ ತಾನೆ ಸಂತಾಪವನ್ನುಂಟುಮಾಡಲಾರದು? ಹೀಗೆ ನಾನು ದುಃಖಿಸುತ್ತಿರುವಾಗ ವರ್ಷೋಪಾಧ್ಯಾಯನು ಬಂದು ಎಲೈ ವರರುಚಿಯೇ, 'ಈ ಲೋಕದಲ್ಲಿ ಸಂಸಾರವು ಮೊದಲಿನಿಂದ ಕೊನೆಯವರೆಗೂ ನೆಲೆಯಾದದ್ದಲ್ಲವೆಂಬುದೊಂದೇ ನೆಲೆಯಾದದ್ದೆಂದೂ ಇದೆಲ್ಲವೂ ಭಗವಂತನ ಮಾಯೆಯೆಂದೂ' ನೀನು ತಿಳಿದವನಾಗಿದ್ದೂ ಹೀಗೆ ಸಾಮಾನ್ಯರಂತೆ ಭ್ರಮಿಸುವದೇಕೆ? ಎಂದು ಇವೇ ಮೊದಲಾದ ಪಾರಮಾರ್ಥಿಕ ವಚನಗಳಿಂದ ಎಚ್ಚರಗೊಳಿಸಿದುದರಿಂದ ಹೇಗೋ ಕಷ್ಟದಿಂದ ಧೈರ್ಯವನ್ನು ಹೊಂದಿದೆನು. ಆಗ ನನ್ನ ಮನಸ್ಸಿಗೆ ಏನೂ ಬೇಕಾಗದೆ ವೈರಾಗ್ಯವು ಹುಟ್ಟಿದುದರಿಂದ ಎಲ್ಲವನ್ನೂ ಪರಿತ್ಯಾಗಮಾಡಿ ಶಾಂತಿಯೊಂದೇ ಸಹಾಯವೆಂದೆಣಿಸಿ ಅಲ್ಲಿಂದ ಹೊರಟು ತಪೋವನವನ್ನು ಆಶ್ರಯಿಸಿದೆನು. ಕೆಲವು ಕಾಲ ಕಳೆದ ಮೇಲೆ ನಾನಿದ್ದ ತಪೋವನಕ್ಕೆ ಅಯೋಧ್ಯಾಪಟ್ಟಣದಿಂದ ಒಬ್ಬ ಬ್ರಾಹ್ಮಣನು ಬಂದನು. ಆಗ ನಾನು ಯೋಗನಂದನ ರಾಜ್ಯಸ್ಥಿತಿಯನ್ನು ಕುರಿತು ಪ್ರಶ್ನೆಮಾಡಿದೆನು. ಅದಕ್ಕವನು ನನ್ನನ್ನು ಗುರ್ತಿಸಿ ಅಯ್ಯಾ ವರರುಚಿಯೇ, ನೀನು ಬಿಟ್ಟುಬಂದ ನಂತರ ವೈರಪ್ರತಿಕ್ರಿಯೆಗಾಗಿ ಕಾದಿದ್ದ ಶಕಟಾಲನಿಗೆ ಬಹು ದಿವಸಗಳ ಮೇಲೆ ಅವಕಾಶವು ದೊರೆಯಿತು. ಏನಾದರೂ ಯುಕ್ತಿಯಿಂದೀ ರಾಜನನ್ನು ಕೊಲ್ಲಬೇಕೆಂದು ಶಕಟಾಲನು ಯೋಚಿಸುತ್ತಿರುವ ಸಮಯದಲ್ಲಿ ದಾರಿಯಲ್ಲಿ ಅಗೆಯುತ್ತಿದ್ದ ಚಾಣಕ್ಯ

ನೆಂಬೊಬ್ಬ ಬ್ರಾಹ್ಮಣನನ್ನು ಕಂಡನು. ಏನಯ್ಯಾ ಬ್ರಾಹ್ಮಣನೇ, ಏಕೆ ಅಗೆಯುತ್ತಿದ್ದೀ? ಎಂದು ಪ್ರಶ್ನೆಮಾಡಲವನು ಈ ದರ್ಭೆಯು ನನ್ನ ಕಾಲಿಗೆ ಚುಚ್ಚಿ ತೊಂದರೆ ಮಾಡಿದ್ದರಿಂದ ಇದರ ಬೇರು ಸಹಿತ ಕಿತ್ತುಹಾಕುತ್ತೇನೆ, ಎಂದು ಹೇಳಿದನು. ಇದನ್ನು ನೋಡಿ ಮಂತ್ರಿಯು ಈ ಬ್ರಾಹ್ಮಣನು ತುಂಬಾ ಸಿಟ್ಟುಗಾರನಾಗಿಯೂ ಸ್ವಲ್ಪ ತಪ್ಪಿಗಾಗಿ ಕ್ರೂರವಾದ ಶಿಕ್ಷೆಮಾಡುವ ನಿಶ್ಚಯ ಮನಸ್ಸುಳ್ಳವನಾಗಿಯೂ ಇರುತ್ತಾನೆ. ಆದ್ದರಿಂದ ರಾಜನನ್ನು ಕೊಲ್ಲುವದಕ್ಕೆ ಇವನೇ ತಕ್ಕವನೆಂದು ತಿಳಿದು, ಆತನ ಹೆಸರನ್ನೂ, ಕುಲಶೀಲಗಳನ್ನೂ ತಿಳಿದು ಎಲೈ ಬ್ರಾಹ್ಮಣನೇ, ನಾಳಿನ ತ್ರಯೋದಶಿಯ ದಿನ ರಾಜನ ಮನೆಯಲ್ಲಿ ಶ್ರಾದ್ಧವಾಗುತ್ತದೆ. ಅಲ್ಲಿ ನಿನಗೆ ನಿಮಂತ್ರಣವನ್ನು ಕೊಡಿಸುವೆನು. ಅದರಲ್ಲಿ ನಿನಗೆ ಒಂದು ಲಕ್ಷ ವರಹಗಳು ದಕ್ಷಿಣೆಯಾಗಿ ಸಿಕ್ಕುವವು ಮತ್ತು [illegible] ಭುಜಿಸಬಹುದು. ಆದ್ದರಿಂದ ನನ್ನ ಮನೆಗೆ ಬಾ, ಎಂದು ಕರೆದುಕೊಂಡು ಹೋಗಿ ತನ್ನ ಮನೆಯ [illegible] ಶ್ರಾದ್ಧದ ದಿನ ಬ್ರಾಹ್ಮಣನನ್ನು ರಾಜನಲ್ಲಿಗೆ ಕರೆದುಕೊಂಡು ಹೋಗಿ [illegible] ಕೊಡಿಸಿದನು. ಹೀಗೆ [illegible] ಪೂರ್ವ ಪಙ್ಕ್ತಿಗೆ ಸಿದ್ಧ [illegible] ಬ್ರಾಹ್ಮಣನು [illegible] ಶಕಟಾ [illegible] ಆಗ [illegible] ಮತ್ತಾರೂ [illegible] ಎಂದು ಆಜ್ಞಾ [illegible] ಬ್ರಾಹ್ಮಣನೇ, [illegible] ರಾಜಾ [illegible] ದಿನಗಳಲ್ಲಿ [illegible] ಬ್ರಾಹ್ಮಣನು [illegible] ಬ್ರಾಹ್ಮ

ಣನನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಅವನಿಗೆ ಬೇಕಾದ ಸಾಮಾನುಗಳನ್ನು ಒದಗಿಸಿಕೊಟ್ಟನು. ಚಾಣಕ್ಯನು ಆ ಪದಾರ್ಥಗಳನ್ನು ತೆಗೆದುಕೊಂಡು ಎಲ್ಲಿಗೋ ಹೋಗಿ ಮಾಟಮಾಡಿದನು. ಇದರಿಂದ ಏಳನೆಯ ದಿನವೇ ರಾಜನು ಬೆಂಕಿಯ ಜ್ವಾಲೆಯಂತೆ ಸುಡುತ್ತಿರುವ ಉತ್ಕಟವಾದ ಜ್ವರದಿಂದ ಪೀಡಿತನಾಗಿ ಲೋಕಾಂತರಕ್ಕೆ ತೆರಳಿದನು. ಶಕಟಾಲನು ಯೋಗನಂದನ ಮಗನಾದ ಹಿರಣ್ಯಗುಪ್ತನನ್ನು ಕೊಲ್ಲಿಸಿ ಸತ್ಯನಂದನ ಮಗನಾದ ಚಂದ್ರಗುಪ್ತನಿಗೆ ರಾಜ್ಯಾಭಿಷೇಕವನ್ನು ಮಾಡಿ ಬುದ್ಧಿಶಾಲಿಯಾದ ಚಾಣಕ್ಯನಿಗೆ ಮಂತ್ರಿಪದವಿಯನ್ನಿತ್ತನು.

ಹೀಗೆ ಶತ್ರುಪ್ರತಿಕ್ರಿಯೆಯು ಪೂರೈಸಿದ ಮೇಲೆ ತನ್ನ ಮಕ್ಕಳು ಹೋದ ವ್ಯಸನದಿಂದ ನಿರ್ವಿಣ್ಣನಾಗಿ ಶಕಟಾಲನು ತಪಸ್ಸಿಗಾಗಿ ಅರಣ್ಯಕ್ಕೆ ಹೋದನೆಂದು ತಿಳಿಸಿದನು. ಈ ವೃತ್ತಾಂತವನ್ನು ಕೇಳಿದ ನಾನು ಮತ್ತಷ್ಟು ವ್ಯಸನವನ್ನು ಹೊಂದಿ ಸಕಲ ಸಂಪದವೂ ಚಂಚಲವೆಂದು ಭಾವಿಸಿ ಅದೇ ವ್ಯಸನದಿಂದಲೇ ವಿಂಧ್ಯವಾಸಿನಿಯಾದ ಪಾರ್ವತೀ ದರ್ಶನಕ್ಕಾಗಿ ಬಂದು ಆಕೆಯ ಅನುಗ್ರಹದಿಂದ ನಿನ್ನನ್ನು ನೋಡಿ ಜನ್ಮಾಂತರ ಸ್ಮರಣೆಯನ್ನು ಹೊಂದಿ ದಿವ್ಯ ಜ್ಞಾನವನ್ನು ಹೊಂದಿದ್ದರಿಂದ ಮಹೇಶ್ವರೋಕ್ತವಾದೀ ಮಹಾ ಕಥೆಯನ್ನು ನಿನಗೆ ತಿಳಿಸಿರುತ್ತೇನೆ. ಇದರಿಂದ ಈಗ ನನ್ನ ಶಾಪವು ಕೊನೆಗಂಡಿತು. ಇನ್ನೀ ದೇಹವನ್ನು ಬಿಡುವದಕ್ಕೆ ಅಪೇಕ್ಷಿಸುತ್ತೇನೆ. ಎಲೈ ಕಾಣಭೂತಿಯೇ ನನ್ನಂತೆಯೇ ನಿನಗೋಸ್ಕರವಾಗಿ ದೇವಿಯ ಶಾಪಕ್ಕೆ ಗುರಿಯಾದ ಮಾಲ್ಯವಂತನು ಗುಣಾಢ್ಯನೆಂಬ ಹೆಸರಿನಿಂದ ಬ್ರಾಹ್ಮಣನಾಗಿ ಜನಿಸಿದ್ದಾನೆ. ಆ ಬ್ರಾಹ್ಮಣನು ಸಂಸ್ಕೃತ ಪ್ರಾಕೃತ ಮತ್ತು ದೇಶ್ಯಗಳೆಂಬ ಮೂರು ಭಾಷೆಗಳನ್ನು ಬಿಟ್ಟಿರುತ್ತಾನೆ. ಶಿಷ್ಯಸಹಿತನಾದ ಆ ಬ್ರಾಹ್ಮಣನು ಬರುವವರೆಗೂ ನೀನು ಕಾಲವನ್ನು ನಿರೀಕ್ಷಿಸುತ್ತಾ ಇರೆಂದು ಹೇಳಿ ದೇಹ ಬಿಡುವದಕ್ಕಾಗಿ ಬದರಿಕಾಶ್ರಮಕ್ಕೆ ಹೊರಟು ಹೋದನು. ಹೋಗುತ್ತಿರುವಾಗ ದಾರಿಯಲ್ಲಿ ಗಂಗಾನದಿಯ ತೀರದಲ್ಲಿ ಶಾಕಗಳನ್ನೇ ಆಹಾರ ಮಾಡಿಕೊಂಡಿದ್ದ ಒಬ್ಬ ಋಷಿಯನ್ನು ಕಂಡನು. ಆಕಸ್ಮಿಕವಾಗಿ ಋಷಿಯ ಕೈಗೆ ದರ್ಭೆಯು ಚುಚ್ಚಿದುದರಿಂದ ಗಾಯವಾಗಿ ರಕ್ತವು ಬಂದಿತು. ಮುನಿಯು ಎಷ್ಟರ ಮಟ್ಟಿಗೆ ಅಹಂಕಾರವನ್ನು ಬಿಟ್ಟಿರುವನೋ ನೋಡಬೇಕೆಂದು ತನ್ನ ವಿದ್ಯಾಪ್ರಭಾವದಿಂದ ವರರುಚಿಯು ಆ ರಕ್ತವು ಶಾಕರಸದಂತೆ

ಹಸುರಾಗಿ ಕಾಣುವಂತೆ ಮಾಡಿದನು. ಇದನ್ನು ಕಂಡು ಆ ಮುನಿಯು ತನ್ನ ಶಾಕಾಹಾರ ವ್ರತವು ಸಿದ್ಧಿಸಿದೆ, ಎಂದು ಅಹಂಕಾರಭರಿತನಾದನು. ಇದನ್ನು ನೋಡಿ ವರರುಚಿಯು ಎಲೈ ಮುನಿಯೇ ನಿನ್ನ ಅಹಂಕಾರ ಪರೀಕ್ಷಾರ್ಥವಾಗಿ ನಿನ್ನರಕ್ತವನ್ನು ಹಸುರಾಗಿಮಾಡಿದೆನು. ನೀನಿನ್ನೂ ಅಹಂಕಾರವನ್ನು ಬಿಟ್ಟಿಲ್ಲ. ಜ್ಞಾನಮಾರ್ಗಕ್ಕೆ ಅಹಂಕಾರವು ದಾಟಲು ಅಸಾಧ್ಯವಾದ ತಡೆಯಾಗಿರುತ್ತದೆ. ಎಷ್ಟು ವ್ರತಗಳನ್ನಾಚರಿಸಿದಾಗ್ಯೂ ಜ್ಞಾನವಿಲ್ಲದವನಿಗೆ ಮೋಕ್ಷವಾಗಲಾರದು. ಮೋಕ್ಷಾಪೇಕ್ಷಿಗಳು ನಶ್ವರವಾದ ಸ್ವರ್ಗಸುಖವನ್ನು ಬಯಸಲಾರರು. ಆದುದರಿಂದ ಅಹಂಕಾರವನ್ನು ಬಿಟ್ಟು ಜ್ಞಾನಸಂಪಾದನೆಗಾಗಿ ಪ್ರಯತ್ನಿಸೆಂದು ಮುನಿಗೆ ಉಪದೇಶಿಸಿದನು. ಆಗಲಾ ಮುನಿಯು ಇವನಿಗೆ ನಮಸ್ಕರಿಸಿ ಸತ್ಕಾರಮಾಡಿದನು. ಅಲ್ಲಿಂದ ಹೊರಟ ವರರುಚಿಯು ಬದರಿಕಾಶ್ರಮವನ್ನು ಸೇರಿ ತನ್ನೀ ಮನುಷ್ಯ ಶರೀರವನ್ನು ಬಿಡಲು ಅಪೇಕ್ಷಿಸಿ ಶರಣಾಗತರಕ್ಷಕಳಾದ ಭವಾನಿಯನ್ನು ಕುರಿತು ಸಂಪೂರ್ಣವಾದ ಭಕ್ತಿಯಿಂದ ಆರಾಧಿಸಿದನು. ದೇವಿಯು ಇವನ ದೃಢವಾದ ಭಕ್ತಿಗೆ ಮೆಚ್ಚಿ ಪ್ರತ್ಯಕ್ಷಳಾಗಿ ಆ ಶರೀರತ್ಯಾಗವನ್ನು ಮಾಡಲು ಅಗ್ನಿಮಧ್ಯದಲ್ಲಿ ಯೋಗಧಾರಣೆ ಮಾಡುವ ರೀತಿಯನ್ನು ಉಪದೇಶಿಸಿ ಅಂತರ್ಧಾನಹೊಂದಿದಳು. ಆಗ ವರರುಚಿಯು ಭವಾನಿಯು ಹೇಳಿದ ಮಾರ್ಗದಲ್ಲಿಯೇ ಅಗ್ನಿಸಮಾಧಿಯಿಂದ ದೇಹವನ್ನು ಸುಟ್ಟು ತನ್ನ ಪೂರ್ವದ ದಿವ್ಯದೇಹವನ್ನು ಹೊಂದಿ ಸ್ವಸ್ಥಾನವನ್ನು ಸೇರಿದನು.

ಇತ್ತಲಾ ಕಾಣಭೂತಿಯು ಗುಣಾಢ್ಯನು ಯಾವಾಗ ಬರುವನೋ ಎಂದು [illegible] ಮಾಡುತ್ತಿದ್ದನು.

ಎಂಬಲ್ಲಿಗೆ [illegible] ಕಥಾಸರಿತ್ಸಾಗರದೋಳ್ [illegible] ತರಂಗವು ಮುಗಿದುದು.

ಆರನೆಯ ತರಂಗವು.

ಗುಣಾಢ್ಯನ ಕಥೆ.

ವರರುಚಿಯು ತನ್ನ ಮನುಷ್ಯ ಶರೀರವನ್ನು ತ್ಯಜಿಸಿ ದಿವ್ಯ ಶರೀರವನ್ನು ಹೊಂದಿ ಕೈಲಾಸಕ್ಕೆ ಹೋದನಂತರದಲ್ಲಿ ಅವನಂತೆಯೇ ಮನುಷ್ಯನಾಗಿ ಹುಟ್ಟಿದ್ದ ಮಾಲ್ಯವಂತನು ಗುಣಾಢ್ಯನೆಂಬ ಹೆಸರಿನಿಂದ ಪ್ರಸಿದ್ಧನಾಗಿ ಸಾತವಾಹನನೆಂಬ ರಾಜನ ಸೇವೆಯಲ್ಲಿದ್ದು ಸಂಸ್ಕೃತವೇ ಮೊದಲಾದ ಮೂರು ಭಾಷೆಗಳನ್ನೂ ಪ್ರತಿಜ್ಞಾ ಪೂರ್ವಕವಾಗಿ ಬಿಟ್ಟು ವಿರಕ್ತನಾಗಿ ಬೆಟ್ಟಗುಡ್ಡಗಳಲ್ಲಿ ತಿರುಗುತ್ತಾ ಕೊನೆಗೆ ವಿಂಧ್ಯವಾಸಿನಿಯಾದ ಪಾರ್ವತಿಯ ದರ್ಶನಕ್ಕಾಗಿ ಬಂದು ಅಲ್ಲಿ ಭವಾನಿಯನ್ನು ಆರಾಧಿಸುತ್ತಿದ್ದನು. ಹೀಗಿರಲು ಒಂದು ದಿನ ಶಾಂಭವಿಯ ಅಪ್ಪಣೆಯ ಪ್ರಕಾರ ಅಲ್ಲಿಂದ ಹೊರಟು ಕಾಣಭೂತಿಯನ್ನು ಕಂಡನು. ಅವನನ್ನು ನೋಡಿದ ಮಾತ್ರದಿಂದಲೇ ಈ ಗುಣಾಢ್ಯನಿಗೆ ಜನ್ಮಾಂತರ ಸ್ಮರಣೆಯುಂಟಾದದರಿಂದ ಅಕಸ್ಮಾತ್ತಾಗಿ ಎಚ್ಚರಗೊಂಡು ತಾನು ಬಿಟ್ಟಿರುವ ಮೂರು ಭಾಷೆಗಳಿಗೂ ಬದಲಾದ ಪೈಶಾಚ ಭಾಷೆಯಿಂದ ಎಲೈ ಕಾಣಭೂತಿಯೇ, ನಾನೇ ಮಾಲ್ಯವಂತನು; ಗುಣಾಢ್ಯನೆಂಬ ಹೆಸರಿನಿಂದ ಮನುಷ್ಯ ಜನ್ಮವನ್ನೆತ್ತಿ ಇಲ್ಲಿಗೆ ಬಂದಿರುತ್ತೇನೆ. ಏಕಕಾಲದಲ್ಲಿ ನಮ್ಮಿಬ್ಬರಿಗೂ ಶಾಪವಿಮೋಚನಕ್ಕೆ ಕಾರಣಭೂತನಾದ ಪುಷ್ಪದಂತನಿಂದ ನೀನು ಕೇಳಿರುವ ಆ ದಿವ್ಯವಾದ ಕಥೆಯನ್ನು ಹೇಳುವವನಾಗು, ಎಂದು ಬೆಸಗೊಂಡನು. ಇದನ್ನು ಕೇಳಿ ಕಾಣಭೂತಿಯು ಬಹು ಸಂತೋಷದಿಂದ ಗುಣಾಢ್ಯನಿಗೆ ನಮಸ್ಕರಿಸಿ ಎಲೈ ಪ್ರಭುವೇ, ನಿನ್ನಿಷ್ಟದಂತೆ ಆ ಕಥೆಯನ್ನು ಹೇಳುತ್ತೇನೆ. ಆದರೆ ನಿನ್ನ ಜನ್ಮವೃತ್ತಾಂತವನ್ನು ಕೇಳಬೇಕೆಂಬ ಕುತೂಹಲ ಇರುವದರಿಂದ ದಯಮಾಡಿ ಹೇಳಬೇಕೆಂದು ಕೇಳಿದನು. ಹೀಗೆ ಕಾಣಭೂತಿಯು ಬೇಡಿಕೊಂಡದ್ದರಿಂದ ಗುಣಾಢ್ಯನು ತನ್ನ ವೃತ್ತಾಂತವನ್ನು ಹೇಳಲು ಉಪಕ್ರಮಿಸಿದನು.

ಮಿತ್ರನೇ ಕೇಳು, ಪ್ರತಿಷ್ಠಾನವೆಂಬ ದೇಶದಲ್ಲಿ ಸುಪ್ರತಿಷ್ಠವೆಂಬ ನಗರವುಂಟು. ಆ ಪಟ್ಟಣದಲ್ಲಿ ಸೋಮಶರ್ಮನೆಂಬ ಒಬ್ಬ ಬ್ರಾಹ್ಮಣ

ನಿದ್ದನು. ಆತನಿಗೆ ವತ್ಸ ಮತ್ತು ಗುಲ್ಮಕರೆಂಬ ಇಬ್ಬರು ಗಂಡು ಮಕ್ಕಳೂ ಕೃತಾರ್ಥೆಯೆಂಬ ಒಬ್ಬಳು ಹೆಣ್ಣು ಮಗಳೂ ಇದ್ದರು. ಕೆಲವು ದಿನಗಳ ಮೇಲೆ ತಂದೆ ತಾಯಿಗಳಿಬ್ಬರೂ ಪರಲೋಕಕ್ಕೆ ಹೋದುದರಿಂದ ಈ ಬಾಲಕರುಗಳು ಕೃತಾರ್ಥೆಯನ್ನು ಕಾಪಾಡುತ್ತಿದ್ದರು. ಹೀಗಿದ್ದ ಹಾಗೆಯೇ ಆ ಬಾಲಕಿಯು ಗರ್ಭಿಣಿಯಾದಳು. ಇದನ್ನು ನೋಡಿ ತಮ್ಮ ಮನೆಗೆ ಇನ್ನೊಬ್ಬರೂ ಬಾರದಿರುವುದರಿಂದ ಈ ಅಣ್ಣತಮ್ಮಂದಿರಲ್ಲಿಯೇ ಒಬ್ಬರನ್ನೊಬ್ಬರು ಈ ಗರ್ಭಕ್ಕೆ ಕಾರಣವೆಂದು ಊಹಿಸುತ್ತಿದ್ದರು. ಆಗ ಬುದ್ಧಿಶಾಲಿಯಾದ ಕೃತಾರ್ಥೆಯು ಇವರ ಮನೋಭಾವಗಳನ್ನು ತಿಳಿದು ಅಣ್ಣಂದಿರುಗಳಿರಾ, ನೀವು ಹೀಗೆ ನಿಮ್ಮಲ್ಲಿಯೇ ಪಾಪವನ್ನು ಆಲೋಚಿಸಬೇಕಾಗಿಲ್ಲ. ಇದರ ನಿಜಸ್ಥಿತಿಯನ್ನು ನಾನೇ ಹೇಳುತ್ತೇನೆ ಕೇಳಿ. ಒಂದು ದಿನ ನಾನು ಸ್ನಾನಕ್ಕೆ ಹೋಗಿದ್ದಾಗ ಸರ್ಪಗಳಿಗೆಲ್ಲಾ ಅಧಿಪತಿಯಾದ ವಾಸುಕಿಯ ಅಣ್ಣನ ಮಗನಾದ [illegible] ನನ್ನನ್ನು ನೋಡಿ ಮನ್ಮಥಾವಿಷ್ಟನಾಗಿ ತನ್ನ ಪೂರ್ವೋತ್ತರಗಳನ್ನು ಹೆಸರನ್ನು ತಿಳಿಸಿ ಗಾಂಧರ್ವ ರೀತಿಯಿಂದ ನನ್ನನ್ನು ಮದುವೆಯಾದನು. ಅದರಿಂದ ನನ್ನ ಈ ಗರ್ಭವು ಬ್ರಾಹ್ಮಣ ಜಾತಿಯದೆಂದು ಹೇಳಿದಳು. ಆಗ ಅವರು ಈ ಮಾತನ್ನು ನಂಬುವದು ಹೇಗೆ? ಎಂದು ಪ್ರಶ್ನೆ ಮಾಡಿದರು. ಅದಕ್ಕೆ ಆಕೆಯು ರಹಸ್ಯದಲ್ಲಿ ತನ್ನ ಪತಿಯನ್ನು ಧ್ಯಾನಿಸಿದಳು. ಆ ಕ್ಷಣವೇ [illegible] ಬಂದು ವತ್ಸ ಗುಲ್ಮಕರನ್ನು ಕುರಿತು ಎಲೈ ಬ್ರಾಹ್ಮಣರಿರಾ, ನಾನು ನಿಮ್ಮ ತಂಗಿಯನ್ನು ವಿವಾಹ ಮಾಡಿಕೊಂಡಿದ್ದೇನೆ. ಆಕೆಯು [illegible] ನೀವು ದೇವತೆಗಳು. [illegible]

[illegible]

-2-

ಕ್ಷಾರತೈಲ—ಕರ್ಣ ಶೂಲಿಗೆ ಉಪಯುಕ್ತವಾದ ತೈಲ ಕ್ರಯ ಶೀಸೆ ೧ ಕ್ಕೆ ೪ ಆಣೆ

ಮಂಡೂರವಟಕ—ಪಾಂಡುರೋಗ, ಶೋಥೆ, ಕಾಮಾಲೆ, ಮುಂತಾದ ರೋಗಗಳಿಗೂ ಮೂತ್ರರೋಗಗಳಿಗೂ ಖಾತ್ರಿಯಾದ ಔಷಧ ಕ್ರಯ ಒಂದು ವಾರ ಉಪಯೋಗಿಸುವಷ್ಟು ಔಷಧಕ್ಕೆ ೩ ರೂ.

ಚಿಂಚಾಶಂಖವಟಿಕ—ಅತ್ಯುತ್ತಮವಾದ ಶೂಲೆಯ ಔಷಧ ಕ್ರಯ ೫೦ ಮಾತ್ರೆಗಳುಳ್ಳ ಡಬ್ಬಿ ೧ ಕ್ಕೆ ೧—೪—೦

ಚಂದ್ರೋದಯ—ನಿಶ್ಶಕ್ತಿ, ವೀರ್ಯದೋಷಗಳು ಇವುಗಳನ್ನೆಲ್ಲ ಹೋಗಲಾಡಿಸಿ ರಕ್ತವೃದ್ಧಿಯನ್ನುಂಟುಮಾಡುತ್ತದೆ. ಕ್ರಯ ತೊಲಿ ೧.ಕ್ಕೆ ರೂ. ೨ ೨ ವಾರ ಉಪಯೋಗಿಸುವಷ್ಟು ಔಷಧಕ್ಕೆ ೬—೪—೦

ಶ್ವಾಸಕುಠಾರ—ಶೀತರೋಗಗಳನ್ನು ನಿವಾರಿಸುತ್ತದೆ. ಕ್ರಯ ೧೦೦ ಮಾತ್ರೆಗಳಿಗೆ ೧—೪—೦

ಪ್ರಸೂತಾವಿಲಾಸ—ಬಾಣಂತಿಯರುರಿಗೆ

ಶೂಲೆ ವಗೈರೆ ರೋಗಗಳನ್ನೂ ಹೋಗಲಾಡಿಸುತ್ತದೆ. ಡಬ್ಬಿ ೧ ಕ್ಕೆ ರೂ. ೪

ವ್ರಣಾಂತಕಲೇಪಃ—ವ್ಯಭಿಚಾರದೋಷದಿಂದ ಸಂಭವಿಸುವ ವ್ರಣಗಳನ್ನು ಗುಣಪಡಿಸುತ್ತದೆ. ಕ್ರಯ ೮ ಆಣೆ

ರೋಪಣೀಲೇಪ—ಚರ್ಮವನ್ನು ಮೃದುಮಾಡಿ ಮುಖ ತುಟಿ ಇವುಗಳ ಬಿರಿಯುವದನ್ನು ಗುಣಪಡಿಸುತ್ತದೆ. ಕ್ರಯ ೪ ಆಣೆ

ನೇತ್ರಬಿಂದು—ನೇತ್ರರೋಗಗಳಿಗೆ ತುಂಬಾ ಉಪಯುಕ್ತ, ಕ್ರಯ ಶೀಸೆ ೧ ಕ್ಕೆ ೪ ಆಣೆ

ಇರಿಮೇದಾದಿ ಚೂರ್ಣ—ದಂತಸಂಬಂಧವಾದ ರೋಗಗಳಿಗೆ ಉತ್ತಮವಾದ ಔಷಧಿ ಪಟ್ಣ ೧ ಕ್ಕೆ ೪ ಆಣೆ

ಭಾಸ್ಕರ ಲವಣ—ಅಜೀರ್ಣರೋಗಗಳಿಗೆ ಸಿದ್ಧೌಷಧ

ಇಷ್ಟವುಳ್ಳವರು ಒಂದಾಣೆ ಸ್ಟಾಂಪ ಕಳುಹಿಸಿದಲ್ಲಿ ಅಚ್ಚಾಗಿದ ಕ್ಯಾಟಲಾಗನ್ನು ಪಡೆಯಬಹುದು

ಪ್ರೊಪ್ರೈಟರ್,
ಆಯುರ್ವೇದಿಕ್ ಮೆಡಿಕಲ್ ಸ್ಟೋರ್ಸ್.
ಬೀರೂರ [ಕಡೂರ ಡಿಸ್ಟ್ರಿಕ್ಟ್]

[Regist]ered No. M. 1234.

|| ಶ್ರೀಃ ||

ಕನ್ನಡ ಸಹಕಾರದಿಂದ ಪೋಷಿಸಲ್ಪಡುವ

ಕನ್ನಡ ಕೋ[illegible]

ಎಂಬ

ಮಾಸಪತ್ರಿಕೆ.

ವಾರ್ಷಿಕ ಚಂದಾ ಪೋಷಕರಿಗೆ ರೂ. ೪—೦—೦ }
,, ,, ಪ್ರೋತ್ಸಾಹಕರಿಗೆ ರೂ. ೧—೮—೦ } ೦—೨—೬
ಅಂಚೆ ವೆಚ್ಚ ಬೇರೆ.

ಸಂಪುಟ ೩.] ಜುಲಾಯಿ ೧೯೧೮. [ಸಂಚಿಕೆ ೪.

ವಿಷಯಸೂಚಿಕೆ.

ಪುಟ

೧. ಪ್ರಚಲಿತ ವಿಷಯಗಳು ೪೯

೨. ಕರ್ನಾಟಕ ರಾಷ್ಟ್ರಗೀತೆ ೫೩

೩. ಕನ್ನಡವೂ ಮರಾಠಿಯೂ ನಂ. ೨ . . . ೫೫

೪. ನಮ್ಮ ನೋಟ ೬೪

೫. ಹಗಲಿರುಳು . . . . [illegible]

ಸಂಪಾದಕ: ಎಮ್. ತಿಮ್ಮಪ್ಪಯ್ಯ.

Printed by V. S. Kamath at the M. T. A. Sharada Press, Mangalore.
and published by M. Thimmappaya.

1918.

ಧಾರವಾಡ.

ಬೇಗನೇ ತರಿಸಿರಿ! ಬೇಗನೇ ತರಿಸಿರಿ!!

ಸೊಬಗಿನ ಬಳ್ಳಿ.

ಇದೊಂದು ಅಪರೂಪವಾದ ಪದ್ಯಗ್ರಂಥ. ನಾಮವಾಚಕಗಳು ಮಾತ್ರ ಸಂಸ್ಕೃತವಲ್ಲದೆ, ಉಳಿದ ಇದಿ ಗ್ರಂಥವೂ ಕನ್ನಡದಲ್ಲಿ ರಚಿತವಿದೆ. ಇಂಥ ಗ್ರಂಥವನ್ನು ಪೂರ್ವಿಕನಾದ ಆಂಡಯ್ಯನು ಪ್ರಚಾರಕ್ಕೆ ತಂದಿದ್ದರೂ, ಹಲವು ಕವಿಗಳು ಅಸಾಧ್ಯವೆಂದು ಹಿಂದಕ್ಕೊಗೆದರು. 'ಹೇಳುವವರು ಏನೇ ಹೇಳಲಿ' ಅದಕ್ಕೆ ಮನಗೊಡದೆ ಈ ಕಾವ್ಯವು, ಸರಳವಾಗಿ ಅಚ್ಚಗನ್ನಡದಲ್ಲಿ ರಚಿಸೋಣಾಯಿತು. ಶಂಬರಾಸುರ ವಧವೆ ಇದರ ಕಥೆ. ಕ್ಲಿಷ್ಟಪದವೆ ಇಲ್ಲ. ಹಾಗೂ ಇದ್ದ ಅಲ್ಪಸ್ವಲ್ಪ ಅಂಶಕ್ಕೆ ಟಿಪ್ಪಣಿಯೂ, ಗದ್ಯಾನುವಾದವೂ ಕೊಡೋಣಾಗಿದೆ. ಕಾದಂಬರೀ ಸಂಗ್ರಹದ ೩೩ನೇ ನಂದ ಈ ಪುಸ್ತಕಕ್ಕೆ ಬೆಲೆ ಬಹಳ ಕಡಿಮೆ—೦—೩-೦. ಅಂಚೆ ವೆಚ್ಚ ಮಾತ್ರ ಬೇರೆ. ಉಳಿದುದು ಸ್ವಲ್ಪವೇ ಪ್ರತಿಗಳು.

ವಿಳಾಸ— ಮ್ಯಾನೇಜರ್ ಕನ್ನಡ ಕೋಗಿಲೆ, ಮಂಗಳೂರು.

ಧಾರವಾಡ ಕರ್ನಾಟಕ ವಿದ್ಯಾವರ್ಧಕಸಂಘದಿಂದ ಪ್ರಕಟಿಸಲ್ಪಡುವ

ವಾಗ್ಭೂಷಣ.

[illegible]

ವಿಳಾಸ— ಮ್ಯಾನೇಜರ್, ವಾಗ್ಭೂಷಣ, ಧಾರವಾಡ.

ವಿನಾ ಮೂಲ್ಯ! ವಿನಾ ಮೂಲ್ಯ!! ವಿನಾ ಮೂಲ್ಯ!!!

ಅರ್ಷ ಚಿಕಿತ್ಸಾ ರಹಸ್ಯ.

[illegible]

ಕನ್ನಡ ಕೋಗಿಲೆ.

ಸಂಪುಟ ೩	ಜುಲಾಯಿ ೧೯೧೮	ಸಂಚಿಕೆ ೪

ಪ್ರಚಲಿತವಿಷಯ.

೧. ಈ ವರುಷದ ಅಗಣಿತವಾದ ಚಳವಳಿಗಳ ಮಧ್ಯೆ ನಮ್ಮ ಕನ್ನಡಭಾಷೆ ಕನ್ನಡದೇಶಗಳ ಉದ್ಧಾರದ ಬಗ್ಗೆಯೂ ಪ್ರಯತ್ನವಾಯಿತು. ಆ ಪ್ರಯತ್ನವೆಂದರೆ, ಈಚೆಗೆ ಧಾರ್‍ವಾಡದಲ್ಲಿ ನೆರವೇರಿದ 'ಕರ್ನಾಟಕ ಸಾಹಿತ್ಯಪರಿಷತ್ತಿ'ನ ನಾಲ್ಕನೆ ವಾರ್ಷಿಕ ವರ್ಧಂತಿ. ಈ ವರೆಗೆ ನಮ್ಮ ಸಹೋದ್ಯೋಗಿಗಳು ಹಲವು ಮಂದಿ, ವಾರ ಪಕ್ಷ ಮಾಸಗಳಲ್ಲಿ ಆ ವಿಷಯವಾಗಿ ಬಣ್ಣಿಸಿ ಬರೆಯುತ್ತಿದ್ದಕಾರಣ ನಾವು ಕೂಟಸ್ಥರಾಗಿದ್ದೆವು. ಈಗ ಆ ಸಭೆಯ ಸಾರಾಂಶವನ್ನೂ ನಮ್ಮ ಅಭಿಪ್ರಾಯವನ್ನೂ ಒಂದಿಷ್ಟು ಬರೆಯದಿದ್ದರೆ ತಪ್ಪಾದೀತು.

ಮೊನ್ನೆಯ ಅಧಿವೇಶನವೆಂದರೆ, ನಮ್ಮ ಕನ್ನಡಿಗರ ಒಂದು ಪರ್ವಕಾಲವೆಂದೆ ಹೇಳಬೇಕು. ಆ ಸಮಾರಂಭದ ಮುಖಂಡರೂ, ಅಂದಿನ ವಾಗ್ಮಿಗಳೂ, ಅಲ್ಲಿ ನೆರೆದವರೂ ಅವರವರ ಯೋಗ್ಯತಾನುಸಾರವಾಗಿ ಪುಣ್ಯವಂತರೆಂದೆ ಹೇಳಬೇಕು. ಕನ್ನಡನಾಡು ನುಡಿಗಳ ಮುಂದಾಳುಗಳಿಂದ ಕಿಕ್ಕಿರಿದುತುಂಬಿದ ಆ ಸಭೆಗೆ, ಮೈಸೂರಿನ ಪ್ರಾಕ್ತನ ವಿದ್ಯಾವಿಚಕ್ಷಣಾದಿ ಬಿರುದುಗಳಿಂದ ಅಲಂಕೃತರಾದ ಮಹಾರಾಜಶ್ರೀ ಆರ್. ನರಸಿಂಹಾಚಾರ್ಯರವರೆ ಅಧ್ಯಕ್ಷರಾಗಿದ್ದರೆಂಬುದರಿಂದಲೆ ಅಂದಿನ ಮಹತ್ವವನ್ನು ವಾಚಕರು ಊಹಿಸಬಹುದು. ನಮ್ಮ ಕನ್ನಡವು ಒಂದೆಯಾದರೂ, ಮೈಸೂರು ಮಂಗಳೂರು ಧಾರ್‍ವಾಡಗಳೆಂಬ ದೇಶಭೇದಗಳಿಂದಾಗಿ, ಕಾವ್ಯರೀತಿ ಒಂದೇ, ವೈದರ್ಭೀ ಗೌಡೀ ಪಾಂಚಾಲೀ ಎಂಬ ಭೇದಗಳನ್ನು ಒಳಗೊಂಡಂತೆ,

ಮೂರು ತರವಾಗಿವೆ. ಆದರಿಂದ, ಅಲ್ಲಲ್ಲಿಯವರು ತಂತಮ್ಮ ಬಾಷೆಯೆ ಸರ್ವೋತ್ತಮವೆಂದು ಹೋರಾಡುವುದರಿಂದ ಕನ್ನಡವಾಙ್ಮಯದ ಪ್ರಗತಿಯೆ ಕುಂಟಾಗಿದೆ. ವಾಙ್ಮಯಮೂಲಕವಾಗಿಯೆ ಎಲ್ಲ ಸುಧಾರಣೆಗಳೂ ಮುಂದುವರಿಯತಕ್ಕದಾದ ಕಾರಣ 'ತದಭಾವೇ ತದಭಾವ:' 'ಅದಿಲ್ಲವಾದರೆ ಅದೆಯದೂ ಇಲ್ಲ, ಎಂಬ ನ್ಯಾಪ್ತಿಯಂತೆ ಯಾವುದರ ಮಾತೂ ಇಲ್ಲ. ಸೈಕಲ್ಲಾದರೂ, ಸುತ್ತುಪಟ್ಟಿಯ ರಬ್ಬರು ತೂತಾದರೆ ಓಡುವುದೆ? ಆದರಿಂದ, ನಮ್ಮ ಭಾಷೆಯ ರೂಪಾಂತರಗಳನ್ನು ಏಕೀಕರಿಸುವುದು ಮೊದಲನೆಯ ಕೆಲಸ. ಅದರೊಡನೆ ಆಯಾ ಊರುಗಳಲ್ಲಿ ನಮ್ಮ ಭಾಷೆ ಚರಿತ್ರೆ ಇವುಗಳ ತಿಳಿವನ್ನು ಹರಡಬೇಕು. ಹಾಗಾದರೆ ಇನ್ನೊಮ್ಮೆ ಕನ್ನಡವು ಕನ್ನಡಿಗನಾದೀತು. ನೋಡಿರಿ. ಕೊಯಂಮುತ್ತೂರು ಪ್ರಾಂತವು ಮೈಸೂರಿಂದ ತಪ್ಪಿಹೋಗಿ, ಈಗ 'ಕನ್ನಡವೂ ಅಲ್ಲ, ತಮಿಳೂ ಅಲ್ಲ' ಎಂಬ ಗಬ್ಬಿಲದ ಅವಸ್ಥೆಗೆ ಬಂದಿದೆ. ಅಲ್ಲಿ [illegible] ಮಂದಿ ಕನ್ನಡಿಗರಿದ್ದಾರೆ. ಆದರೆ, ಸ್ವಭಾಷೆಗೆ [illegible] ಸುಶಿಕ್ಷಿತರಾದ [illegible] ಕನ್ನಡ [illegible]

[illegible]

[illegible] ವಿದ್ಯಾವರ್ಧಕ [illegible]

ಆಯಾ ಸರಕಾರದವರಿಗೆ ವಿನಂತಿಯನ್ನು ಮಾಡ[illegible]ತ್ತದೆ. ರಾಮದುರ್ಗ, ಮುಧೋಳ, ಜಮಖಂಡಿ, ಸೊಂಡೂರ ಮೊದಲಾದ ಸಂಸ್ಥಾನಗಳು ಕೇವಲ ಕನ್ನಡ ಪ್ರಜೆಗಳದೆ ಇರುವುದರಿಂದ ಅಲ್ಲಿಯ ದರಬಾರಿ ಭಾಷೆಯು ಕನ್ನಡವಿರಬೇಕೆಂದೂ, ಉಳಿದ ಸಂಸ್ಥಾನಗಳಲ್ಲಿ ಕನ್ನಡತಾಲೂಕುಗಳಲ್ಲಿರುವ ಕನ್ನ[illegible] ಕನ್ನಡವೆ ದರ್ಬಾರುಭಾಷೆಯಾಗಿರಬೇಕೆಂದೂ ಈ ಸಮ್ಮೇಲನದ ಅಭಿಪ್ರಾಯವಾಗಿರುತ್ತದೆ. ಈ ಠರಾವನ್ನು ಅಮಲಿನಲ್ಲಿ ತರುವುದಕ್ಕೆ ಕೆಳಗೆ ಬರೆದ ಜನರ ಕಮಿಟಿಯನ್ನು ನೇಮಿಸಬೇಕು, ೧. ಶ್ರೀ. ರಾ. ನರಸಿಂಹಾಚಾರ್ಯರು (ಅಧ್ಯಕ್ಷರು) ೨. ಶ್ರೀ. ಎಮ್. ಶ್ಯಾಮರಾಯರು. ೩. ಶ್ರೀ. ಧಿ. ನಾಯಕರು. ೪. ಶ್ರೀ. ರಾ. ಹ. ದೇಶಪಾಂಡೆಯವರು. ೫. ಶ್ರೀ. ರಾಮರಾಯರು. ಮಂಗಸೂಳಿ. ೬. ಶ್ರೀ. ತಮ್ಮಪ್ಪನವರು. ಚಿಕ್ಕೋಡಿ. ೭. ಶ್ರೀ. ರಾ. ನರಗುಂದಕರ. ೮. ಶ್ರೀ. ವೇ. ಭೀ. ಆಲೂರ (ಕಾರ್ಯದರ್ಶಿಗಳು) (೩) ಮುಂಬಯಿ ಮತ್ತು ಮದರಾಸು ಇಲಾಖೆಗಳಲ್ಲಿಯ ಕನ್ನಡಶಾಲೆಗಳಲ್ಲಿ ಉಪಯೋಗಿಸತಕ್ಕ ಕ್ರಮಿಕಪುಸ್ತಕಗಳೆಲ್ಲ ಏಕರೂಪವಾಗಿರುವಂತೆ ಏರ್ಪಾಡು ಮಾಡಲು ಆಯಾ ಸರಕಾರಗಳಿಗೆ ಸಮ್ಮೇಲನದವರು ಸೂಚಿಸುವರು. ೪. ಮದ್ರಾಸು ಇಲಾಖೆಯಲ್ಲಿಯೂ ಮೈಸೂರುಸಂಸ್ಥಾನದಲ್ಲಿಯೂ ಇರುವಂತೆ ಮುಂಬಯಿ ಇಲಾಖೆಯಲ್ಲಿಯೂ ಕನ್ನಡ ಪಂಡಿತಪರೀಕ್ಷೆಗಳಿಗೆ ಏರ್ಪಾಡು ಮಾಡಬೇಕೆಂದು ಅಲ್ಲಿಯ ಸರಕಾರಕ್ಕೆ ಸೂಚಿಸುವುದು. (೫) ಕರ್ಣಾಟಕದ ಬೇರೆಬೇರೆ ಭಾಗಗಳಲ್ಲಿರುವ ಭಾಷಾಕೋವಿದರಿಂದ ಉತ್ತಮವಾದ ಗ್ರಂಥಗಳನ್ನು ಬರೆಯಿಸಿ ಪರಿಶೋಧಿಸಿ ಪ್ರಕಟಗೊಳಿಸುವುದಕ್ಕಾಗಿ ಬೆಂಗಳೂರಲ್ಲಿ "ಕರ್ಣಾಟಕ ಗ್ರಂಥಪ್ರಚಾರಿಣೀಸಮಿತಿ" ಎಂಬ ಸಂಘವೊಂದನ್ನು ಏರ್ಪಡಿಸಬೇಕು. (೬) ಹೆಣ್ಣುಮಕ್ಕಳ ಶಾಲೆಯಲ್ಲಿ ಉಪಯೋಗಿಸುವ ಕ್ರಮಿಕಪುಸ್ತಕಗಳನ್ನೂ ಇತರ ವಾಚಕಪುಸ್ತಕಗಳನ್ನೂ ಸ್ತ್ರೀವರ್ಗಕ್ಕೆ ಉಚಿತವಾಗಿರುವಂತೆ ಸ್ವತಂತ್ರವಾಗಿ ಬರೆಯಿಸಿ ಎಲ್ಲ ಕಡೆಯಲ್ಲಿಯೂ ಉಪಯೋಗಿಸುವಂತೆ ಏರ್ಪಾಡುಮಾಡಲು ಮುಂಬಯಿ, ಮದರಾಸು ಮತ್ತು ಮೈಸೂರು ಸರಕಾರಗಳಿಗೆ ಸೂಚಿಸಬೇಕು. (೭) ಕನ್ನಡನಾಡಿನ ಎಲ್ಲ ಭಾಗಗಳಲ್ಲಿಯೂ ಬರವಣಿಗೆಯು ಒಂದೇ ಕ್ರಮದಲ್ಲಿರುವಂತೆ ಮಾಸೆಯ ಪುಸ್ತಕ (ಕಾಪಿಯ ಪುಸ್ತಕ)ಗಳನ್ನು ಬರೆಯಿಸುವಂತೆ ಆಯಾ ಸರಕಾರದವರು ಯತ್ನಮಾಡಬೇಕು. (೮) ಕನ್ನಡದ ಬೇರೆಬೇರೆ ಪ್ರಾಂತಗಳಲ್ಲಿ ರೂಪಭೇದವನ್ನು ಹೊಂದಿದ ಶಬ್ದಗಳನ್ನು ಸಂಸ್ಕರಿಸಿ ಅವುಗಳಿಗೆ ನಿಷ್ಕರ್ಷೆಯಾದ ಒಂದೆ ರೂಪವಿರುವಂತೆಯೂ, ಅವುಗಳ ಅರ್ಥವು ಶಾಸ್ತ್ರವತ್ತಾಗಿ ಇರುವಂತೆಯೂ ನಿಶ್ಚಯಿಸಿ ದೊಡ್ಡ

ದೊಂದು ಕೋಶವನ್ನು ಸಿದ್ಧಪಡಿಸತಕ್ಕದ್ದು. (೯) ಮರಾಠಿ, ಗುಜರಾಥಿ, ಬಂಗಾಳಿ ಮೊದಲಾದ ಭಾಷೆಯವರ ಸಮ್ಮೇಳನದವರಿಗೂ ಕರ್ಣಾಟಕಸಾಹಿತ್ಯಸಮ್ಮೇಳನದವರಿಗೂ, ಸಾಮಾನ್ಯವಾಗಿರುವ ವಿಷಯಗಳಲ್ಲಿ ಸಮ್ಮೇಳದವರಿಂದ ಅವರಿಗೂ, ಅವರಿಂದ ನಮಗೂ ಸಹಾಯವಾಗುವಂತೆ ಏರ್ಪಾಡು ಮಾಡುವುದು. . . .

ಈ ಅಭಿಪ್ರಾಯಗಳೆಲ್ಲ ಬಂಗಾರಗಳೆ. ಆದರೆ ಕೆಲಸವು ಮಾತ್ರ ಕಬ್ಬಿಣವಾಗದಂತೆ ಪ್ರಯತ್ನಿಸುವುದೆ ಮುಖ್ಯವು. ನಮ್ಮ ಕನ್ನಡಿಗರು ಮನಸ್ಸಿನ ಮಂಡಿಗೆಯನ್ನು ತಿನ್ನುವುದರಲ್ಲಿ ನಿರತರೆಂಬುದು ಸಿದ್ಧವಾದರೂ ಧಾರವಾಡಕ್ಕೆ ಆ ಕಳಂಕವು ಈ ವರೆಗೂ ಬಂದಿಲ್ಲವೆಂಬುದು ಸಂತೋಷಕರವು. ಅದಕ್ಕೆ ಕಲ್ಲೆದೆಯ ಮರಾಠರು ಅವರ ನೆರೆಮನೆಯವರಾಗಿರುವುದೆ ಕಾರಣವು. ಮರಾಠರಿಗೆ, ಶ್ರೀ ಛತ್ರಪತಿ ಶಿವಾಜಿರಾಜರ [illegible] ಈಗಲೂ ಕೇಳುತ್ತಲೆ ಇದೆ. ನಮ್ಮ ಕನ್ನಡನಾಡಿನವರಿಗೆ, [illegible] ಮರಾಠಾ [illegible]

[illegible]

ಕರ್ಣಾಟಕ ರಾಷ್ಟ್ರಗೀತೆ.

(ಲೇ.—ಕೇಶವಾತ್ಮಜ. ಮಂಗಳೂರು.)

(ಶಕ್ತನಾದರೆ ನಂಟರೆಲ್ಲ ಹಿತರೂ, ಎಂಬಂತೆ.)

ಕರ್ಣಾಟಕೀಮಾತೆ ಧನ್ಯೆಧನ್ಯೆ । ಪಲ್ಲವಿ ॥
ಕರ್ಣಕಾನಂದಕಾರಿಣಿ ಲೋಕಮಾನ್ಯೆ । ಅನುಪಲ್ಲವಿ ॥

ಎಡಬಲದಿ ಗೌಡಮಲೆಯಾಳ ಕೆಳದಿಯರಿಂದ ।
ಹಿಡಿಸಿರಲು ಚಾಮರವ ಜಡಧಿಯೇ ಹಿಂದೆ ॥
ಬಿಡದೆ ಘೋಷಿಸಲಿದಿರು ತೆಲುಗು ಬೆಳ್ಗೊಡೆಯ, ಕ ।
ನ್ನಡದೇವಿ, ನಿನಗೆ ಸರಿಯಾರು ಜಗದಿ ॥ ಕರ್ಣಾಟಕೀಮಾತೆ ॥ ೧ ॥

ಭಾರತದ ಕಾಲಕೂ ಹಿಂದೆಯೇ ಜನಿಸಿ ಕಳೆ ।
ದಾರನೆಯ ಶತಮಾನ ಮೊದಲುಗೊಂಡು ॥
ಏರುಜವ್ವನೆಯಾಗಿ ಭಾರತದ ಮುಖದಿ ಕ ।
ಸ್ತೂರಿಯಂಪದಿತೊಳಗಿ ಬೆಳಗುತಿದ್ದೆ ॥ ಕರ್ಣಾಟಕೀಮಾತೆ ॥ ೨ ॥

ಗಂಗೆಹೊಯ್ಸಳ ರಾಷ್ಟ್ರಕೂಟ ಚಾಲುಕ್ಯರು ।
ತ್ತುಂಗಬಲ್ಲಾಳ ಯಾದವರಿಂದಲಿ ॥
ಸಿಂಗಾರಿಯಾಗಿ ಸೌಭಾಗ್ಯಲಕ್ಷ್ಮಿಯೊಳಕ್ಕ ।
ತಂಗಿಯಂದದಿ ಕೂಡಿ ನಡೆದೆಯಮ್ಮಾ ॥ ಕರ್ಣಾಟಕೀಮಾತೆ ॥ ೩ ॥

ಒಂದು ಕಾಲದಲಿ ಕನ್ಯಾಕುಮಾರಿಯ ಮೂಲ ।
ದಿಂದ ಹಿಮವದ್ಗಿರಿಯ ತುತ್ತತುದಿಗೆ ॥
ಬಂದು ಹೊರಗೊಳಗೂರೊಳೆಲ್ಲ ನಿನ್ನಯ ಹೆಸರ ।
ನೊಂದನೇ ಕೇಳಿಸಿದ ನಿನಗೆ ಸರಿಯೆ ॥ ಕರ್ಣಾಟಕೀಮಾತೆ ॥ ೪ ॥

ವಿಜಯನಗರದಿ ನಿನ್ನ ವಿಜಯಧ್ವಜವನೆಟ್ಟು ।
ಅಜರಾಮರದ ಕೀರ್ತಿಯನು ತಾಳಿದೆ, ॥

ಭಜಿಪ ಕವಿಗಳಿಗಮರಕುಜವಾದೆಯಪ್ಪದಿ ।
ಗ್ಗಜಗಳನು ನಿನ್ನೊಳೇ ಹೊತ್ತುನಿಂದೆ ॥ ಕಾರ್ಣಾಟಕೀಮಾತೆ ॥ ೫ ॥

ಅರಸರಿಗೆ ತಾಯಿಮನೆ ಕವಿಗಳಾನಂದವನ ।
ಸರಸಸಂಗೀತದ ಸರೋವರವೆನೆ ॥
ಧರೆಗೆ ಧೌತಿಕಶಾಸ್ತ್ರದೊರತೆಯಾಗಿರೆ ನಿನಗೆ ।
ಕೊರತೆಯಾವುದು ನಮ್ಮ ರಾಷ್ಟ್ರಜನನಿ ॥ ಕಾರ್ಣಾಟಕೀಮಾತೆ ॥ ೬ ॥

[illegible]

[illegible]

[illegible]

[illegible]

[illegible]

ಮಾನ್ಯೆ ನಿನ್ನಯಪಾದಧೂಳಿಯನಿದೇ ಪುಣ್ಯ ।
ವೆನ್ನುತಲಿ ತಲೆಗೆ ತಳಿಯುತ ನಡೆದರು ॥ ಕಾರ್ಣಾಟಕೀಮಾತೆ ॥ ೧೧ ॥

ಅನುಕೂಲಕಳೆರಾಷ್ಟ್ರವಿಸ್ತಾರಕೀರ್ತಿಯಾ ।
ಘನವಾದ ಧರ್ಮಕರ್ಮಾಕರ್ಷಣ ॥
ಜನರಂಜನವು ಸಾಧುತನವೈಭವಾದಿಗಳ ।
ಮನೆಯಾದ ಕರ್ಣಾಟರಾಷ್ಟ್ರಜನನಿ ॥ ಕಾರ್ಣಾಟಕೀಮಾತೆ ॥ ೧೨ ॥

ಮಂಗಲಂ ಕರ್ಣಾಟಧರಣಿ ಮೃದುವಾಣಿ ಜಯ ।
ಮಂಗಲಂ ನೃಪಕುಲಾವನತಚರಣೆ ॥
ಮಂಗಲಂ ಸಕಲಸಂಪದೆ ಪದೇಪದೆ ನಿನಗೆ ।
ಬಂಗಾರದೂರಿಂಗೆ ಶುಭಮಂಗಲಂ ॥ ಕಾರ್ಣಾಟಕೀಮಾತೆ ॥ ೧೩ ॥

ಕನ್ನಡವೂ ಮರಾಠಿಯೂ ನಂ. ೨.

(ರಾ. ರಾ. ಶೇಷ ಭಿ. ಪಾರಿಶವಾಡವರಿಂದ.)

"ಧರ್ಮರಕ್ಷಕರೆನ್ನುವವರೀ ಭೂಮಂಡಲದಲ್ಲುಳಿಯಲೇ ಇಲ್ಲ ; ಮಹಾರಾಷ್ಟ್ರ ಧರ್ಮವೇನೋ ತಮ್ಮಿಂದಲೇ ಉಳಿದಿದೆ !"*

— ಶ್ರೀ ಶಿವಾಜಿಯವರಿಗೆ ಸಮರ್ಥರು ಹೇಳಿದುದು.

ಮಂಗಲಮಯವಾದ, ಶುಭೋದಯವನ್ನು ಹೇಳುವ ಓಷಧಿನಾಥನ ಸಮೋದಯವನ್ನು ಮುಂದೆ ಮಾಡಿಕೊಂಡು, ಪುಣ್ಯಶ್ಲೋಕರಾದ ಅವತಾರಿಗಳಾದ—ಭಾಷಾಕ್ಷೇತ್ರಗಳನ್ನೆಲ್ಲ ದಾಟಿ ನಮಗೆಲ್ಲರಿಗೂ ಪೂಜ್ಯರಾದ—ಶ್ರೀ ಶಿವಾಜಿಯವರ ಜಯಂತಿಯನ್ನಭಿವಂದಿಸುತ್ತೆ ಜರಗಿರುವ ಮೊನ್ನಿನ ಚತುರ್ಥ ಸಮ್ಮೇಲನಮಂದಿರದಲ್ಲಿ,†

* ಯಾ ಭೂಮಂಡಳಾಚೇ ಠಾಯಿ। ಧರ್ಮರಕ್ಷೀ ಐಸಾನಾಹೀ ।
ಮಹಾರಾಷ್ಟ್ರಧರ್ಮ ಉರಲಾ ಕಾಹೀ । ತುಮ್ಹಾ ಕಾರಣೇ ॥ ೧ ॥

† ಸಭೆಯು ಚಂದ್ರದರ್ಶನದ ದಿವಸವೂ, ಶಿವಜಯಂತಿ ದಿವಸವೂ ಕೂಡಿದ್ದ ಸ್ಥಳದಲ್ಲಿ ಆ ವಿಧಾನವಾಗಿದೆ.

ಕಾರ್ಯದರ್ಶಿಗಳು ಕೊನೆಗೆ ಸ್ವಯಂಸೇವಕರಿಗೆ ಧನ್ಯವಾದಗಳನ್ನರ್ಪಿಸುವಾಗ ಅದೇ ಅಂಥದೊಂದು ಸಮಯದಲ್ಲಿ ಲೋಕಮಾನ್ಯ—ಬಳವಂತರಾಯರು—"ಮಾತೃ—ಪಿತೃದೇವೋಭವ—ಆಚಾರ್ಯ—ದೇವೋಭವ—ಎಂಬಂತೆ ನೀವೆಲ್ಲರೀಗ ಅತಿಥಿದೇವರಾದಿರಿ. ಆದರೆ, ಇನ್ನು ನಾವೆಲ್ಲ—

ರಾಷ್ಟ್ರದೇವೋ ಭವ

ಎಂಬೀ ವ್ಯಾಪಕವಾದ ತತ್ತ್ವವನ್ನನುಸರಿಸಬೇಕಾಗಿದೆಯೆಂ''ದು ಮೊದಲಾಗಿ ಶಿರಸಾ ವಂದ್ಯವಾದ [illegible] ಲೇಖಕನು ನೆನಸಿ ರೋಮಾಂಚಿತನಾದನು! [illegible] ನಾವು ಕನ್ನಡದ ಪುರಸ್ಕಾರವನ್ನು ಮಾಡುತ್ತಿರುವೆವು. ಕರ್ನಾಟಕಾಂತರ್ಯಾಮಿಯಾದ ಭಾರತ ಭೂಮಾತೆಯು [illegible] ನೋಡಿ [illegible] ಏನು! ಪೂಜ್ಯ ಕನ್ನಡವು [illegible] ಗಡಗಮಿಸುವ [illegible] ನಮ್ಮ [illegible] ಅವಯವಾಂಗವೆಲ್ಲವೂ [illegible] ಅನ್ಯಭಾಷೆಯ— [illegible] ನಾವೆಲ್ಲ [illegible] ಮಹನೀ [illegible]

[illegible]

ಯವರ ಪರಾಕ್ರಮವನ್ನೂ ನಿವೃತ್ತಿಪರರಾದ ದಾವ ಕವಿಪುಂಗವರೂ ಎತ್ತಿಹಿಡಿಯಲ್ಲಿಲ್ಲೆಂ'ದು ಮೊದಲಾಗಿ ಉಪಕ್ರಮಿಸಿರುವರು. ವಾಚಕ ಮಹನೀಯರೇ! ನಾವಂತೂ ಪಂಪಭಕ್ತರೆಂಬ ಮಾತು "ಸಹಸ್ರವಾರ್ಷಿಕೋತ್ಸವ'' ಲೇಖದಿಂದೆ ಸರ್ವವಿಶ್ರುತವೇ ಆಗಿದೆಯೆಂದಮೇಲೆ ಅಂಜಿಕೆಯೇಕೆ? "ಉದಾತ್ತನಾ | ರಾಯಣನಾದ ದೇವನೆಮಗೀ ಗರಿಕೇಸರಿ ಸೌಖ್ಯಕೋಟಿಯಂ'' ಎಂದರೆ ಐಹಿಕಮಾತಿನ ಮುಖ್ಯಾಂಶವಾದ ಮಹಾ ಪರಾಕ್ರಮಿಯಾದ ರಾಯನನ್ನೇ ದೇವರೆಂದು ತಿಳಿದ ಮೇಲೆ ಇದಕ್ಕೂ ಅದೊಂದೆಷ್ಟು ರೀತಿಯಿಂದೆ ಪ್ರವೃತ್ತಿಮಾರ್ಗವನ್ನು ಎತ್ತಿಹಿಡಿಯುವದು?

> ಎನೆಸಂದುಂ ವೀರವೈರಿಕ್ಷಿತಿಪ ಗಜಘಟಾಟೋಪಕುಂಭಸ್ಥಳೀಭೇ
> ದನನುಗ್ರೋದ್ಭಾಸಿ ಭಾಸ್ವದ್ಭುಜಪರಿಕರನಾರೂಢಸರ್ವಜ್ಞನಂ ವೈ
> ರಿನರೇಂದ್ರೋದ್ದಾಮದರ್ಪೋದ್ದಳನ ಘಟನನಂ ನಾಯಕಂಮಾಡಿಸಂದ
> ರ್ಜುನನೊಳ್ಪೋಲ್ಪಿಕಥಾಭಿತ್ತಿಯನನು ನಯದಿಂ ಪೇಳಲೆಂದೆತ್ತಿಕೊಂಡೆನ್

ರಾಷ್ಟ್ರಪಿತರಾದ ಸಮರ್ಥರು ಶಿವಾಜಿಯವರಿಗೆ ಸರ್ವಜ್ಞರೆಂದುದೂ ಶಿವಾಜಿಯವರು ಅವರಿಗೆ ತಾವು ಚರಣರಜರೆಂದು ಹೇಳಿಕೊಳ್ಳುವದೂ ತಿಳಿದುಬಂದಿದೆ. ಇಲ್ಲಿ ಕಾವ್ಯದಲ್ಲಿಯೇ ಇಷ್ಟೊಂದು ಅರಿಕೇಸರಿಯ ಮಾತನ್ನು ಹೇಳುವ ಪಂಪನು ಇನ್ನೂ ಏನೇನು ತನ್ನೀ ಸ್ವಾಮಿಯ ವಿಷಯವಾಗಿ ಅಭಿಪ್ರಾಯಪಡುತ್ತಿದ್ದನೋ ತಿಳಿಯಲು ಆಗಿನ ಕಾಗದಪತ್ರಗಳನ್ನು ನೋಡಬೇಕು! ಎಂದಮೇಲೆ ನಮ್ಮನ್ನೆದ್ಬಿಸಲು ಆರೊಬ್ಬ ಕರ್ವೆಯವರೇ ನಮ್ಮ ತನಕ ಬರುವ ಕಾರಣವಿರುವಷ್ಟು ನಮ್ಮ ಪೂರ್ವೇತಿಹಾಸವು ಸೊಪ್ಪಗಿಲ್ಲವೆಂದು ಹೇಳುವ ಕಾರಣವಿಲ್ಲ!! ವಿಷಯವಿವೇಚನಕ್ಕಾಗಿ ಇಲ್ಲಿಯ ಮುಂದಿನ ಉಪಕ್ರಮವೆಂದು ತಿಳಿಯಬೇಕು.

ಮಹಾರಾಷ್ಟ್ರಸಾಹಿತ್ಯೋನ್ನತಿಗೆ ವಿಶೇಷವಾದ ಕಾರಣವೆಂದರೆ, ಅಲ್ಲಾದ ೧೭ನೆಯ ಶತಮಾನದಲ್ಲಿಯ ಅಪೂರ್ವವಾದರಾಜ್ಯಕ್ರಾಂತಿಯು. ಆ ಹಿಂದೆ ಆದ ತುಕಾರಾಮಾದಿನಿವೃತ್ತಿಪರಸಾಧುಗಳು ಪಂಗುಗಳೆಂತಲೂ ಅವರು ರಾಷ್ಟ್ರವನ್ನು ಅವನತಿಯಮಾರ್ಗಕ್ಕೆ ಹಚ್ಚಿದರೆಂತಲೂ ರಾಜವಾಡೆ ಪ್ರಭೃತಿಪಂಡಿತರ ವಿಧಾನವನ್ನು ರಾನಡೆ—ಟಿಳಕರೊಪ್ಪಿಲ್ಲ. ಜ್ಞಾನೇಶ್ವರ(೧೨೭೦)ನ ಕಾಲದಿಂದೆ ೩ ನೂರು ವರ್ಷಗಳ ವರೆಗಿನ ಸಾಧುಗಳು ದೇಶದಲ್ಲಿ ಮನೋಭೂಮಿಕೆಯನ್ನು ಉದಾತ್ತವಾದ ಧಾರ್ಮಿಕವಿಚಾರಗಳೊಡನೆ ಸಿದ್ಧಪಡಿಸಿದ ಮೇಲೆ ಸಮರ್ಥರ ಮನೋಭೂಮಿಕೆಯಲ್ಲಿ ಪ್ರವೃತ್ತಿಪರವಿಚಾರದ ಬೀಜಾರೋಪಣವನ್ನೂ ಮಾಡಿದರೆಂತಲೂ ಈ ಮಹನೀಯರು ಹೇಳುವದು ಯುಕ್ತವಾಗಿ ಕಾಣುತ್ತದೆ. ಇರಲಿ;

ಶೇಕ್ಸಪಿಯರನು ಇಂಗ್ಲಿಷನಾಡಿನೊಳಗಷ್ಟೇ ಅಲ್ಲದೆ ಈ ಜಗತ್ತಿಗೇ ಅಲಂಕಾರ ಪ್ರಾಯನಾದ ಕವಿಯೆಂದೂ ಅದರಂತೆಯೇ ಕಾಲಿದಾಸನಾದರೂ ಎಂತಲೂ ಹೇಳು ವಂತೆ ಶ್ರೀ ಶಿವಾಜಿಯವರ ಮಾತು ಜಗತ್ತಿನ ರಾಜಕೀಯವಾತಾವರಣದೊಳಗೆಲ್ಲವೂ ಎಂದು ರಾಜವಾಡೆಯವರು ಹೇಳುವದು ಶಿರಸಾವಂದ್ಯವಾಗಿ ತೋರುತ್ತದೆ. ದೇವ ಕೋಟಿಯಲ್ಲಿ ಸೇರಿದ ಮಹಾರಾಜರು ಮುಸಲಮಾನರಾಗಿದ್ದರೂ ಪೂಜ್ಯರಾಗಿದ್ದ ರೆಂದು ಶಿವಾಜಿ—ಉತ್ಸವ—ಪ್ರೇರಕರಾದ ರಾ. ರಾ. ಬಳವಂತರಾವ ಟಿಳಕರೊಂದೆಡೆ ಹೇಳಿದ್ದು ಆಗಿನ ಅವರ ಧರ್ಮವಿಚಾರಗಳಲ್ಲಿಯೇ ದೇಶಾಭಿಮಾನವು ತುಂಬಿ ತುಳುಕಾಡುತ್ತಿತ್ತೆಂದೂ ಹೇಳಿರುವರು. ಜಗತ್ತಿನೊಳಗಿನ ಈವರೆಗಿನ—ನೆಪೋಲಿಯನ —ವೆಲಿಂಗ್ಟನ್ ವಾಶಿಂಗ್ಟನ್—ಸೀಸರ—ಮೊದಲಾದ ಎಲ್ಲ ಪಾಶ್ಚಾತ್ಯರೂ, ಪೌರ್ವಾತ್ಯರಾದ ಅಕಬರ, ಹೈದರಾಲಿ, ರಣಜಿತಸಿಂಗ ಇವರೂ, ಒಂದಿಲ್ಲೊಂದು ಗುಣಗಳಲ್ಲಿ ಶಿವಾಜಿಯವರ ಮುಂದೆ ಚಿಕ್ಕರೆನಿಸುವರೆಂದು ರಾಜವಾಡೆಯವರು ಹೇಳಿರುವದು [illegible] ತೋರುತ್ತದೆ. "ತ್ರೈಲೋಕ್ಯದ ಆಸೆಯೂ ಇಲ್ಲದ [illegible]" ಶ್ರೀ [illegible]—[illegible]—ಧರ್ಮ [illegible]—ಈ ಈ [illegible] ನಾವೇನು ಹೇಳುವದು? ಶ್ರೀ [illegible] ಶ್ರೀ [illegible] ಶಿವಾಜಿ [illegible]

[illegible]

ಹಾಯ್ದು ಹೋಗಿರಲು ಅವನ್ನು ಅನೇಕಸಾರೆ ಗುಣುಗುಟ್ಟಿರುವೆವು! ಪಂಪನ ದುಂದು ಭಿಗಭೀರ ನಿನದವು ಮರಾಠಿಯಲ್ಲಿಲ್ಲ; ಆದರೆ, ಶ್ರೀ ಸಮರ್ಥರ ಅಧಿಕಾರಯುಕ್ತ ವಾದ ವಾಗ್ವೈಭವವು ಕನ್ನಡದಲಿಲ್ಲವೆನ್ನಬೇಕು. ಇವರ ಉಪದೇಶದ ಸಾರವ ನ್ನೊಂದು ಕನ್ನಡದಲ್ಲಿ ಬರೆಯಬೇಕು.

ಸಮರ್ಥರ ಅಧಿಕಾರಯುಕ್ತತೆಯನ್ನವಲಂಭಿಸಿಯೇ ಇತ್ತಲಾಗಿಯ ಮಹಾ ರಾಷ್ಟ್ರವಾಙ್ಮಯಾಕಾಶದಲ್ಲಿ ಅಂಥ ವಿದ್ಯುತ್ತು ಆಗಾಗ್ಗೆ ಮಿಂಚುತ್ತಿರುವದು. ಕೇಳಿರೋ ವಿಶೇಷವೇನಾದರೂ ಇಲ್ಲದೆ, ಆರನ್ನಾರು ಕೇಳಬೇಕು? ಮಹಾತ್ಮರಾದ ವಿಷ್ಣು ಶಾಸ್ತ್ರಿ ಚಿಪಳೂಣಕರರು ವಾಮನ—ತುಕಾರಾಮರ ಶ್ರುತಿವಂದ್ಯ ಗ್ರಂಥರಚನೆ ಯನ್ನೂ, ಅಟಕದಾಟಿ ಮೆರೆದ ಸಮರ್ಥರ ಪ್ರಸಾದದಿಂದೆ ಲಭಿಸಿದ ಭಗವಾ ಝೇಂಡಾ (ಶಾವಿಯ ನಿಶಾನೆ) "ಜರೀ ಪಟಕೆಯ"ನ್ನೂ ನವೀನ ವಿದ್ವಾನರಿಗೆ ತೋರಿಸಿ ಇಂಥವರ ಆರೇ ಮಾತು ಅಸಮರ್ಥವೆ? ಎಂದೆನ್ನಲು ಅವರ ಶಿಷ್ಯರಾದ ಲೋಕ ಮಾನ್ಯರು "ಸರ್ವತ್ರ ಜಯಮನ್ವಿಚ್ಛೇಚ್ಛಿಷ್ಯಾದಿಚ್ಛೇತ್ಪರಾಜಯಂ" ಎಂಬ ವಚನವು ಗುರುವರ್ಯರಿಗೆ ಸ್ವರ್ಗದಲ್ಲಿಯೂ ನೆನಪಾಗುವಂತೆ ಗೀತಾರಹಸ್ಯವನ್ನು ಕೈಕೊಂಡು ಅದನ್ನೋದಬೇಕೆಂಬ ಲವಲವಿಕೆಯಿಂದೆಷ್ಟೋ ತಾವೇ ದೊಡ್ಡವರೆಂದು ಸಟೆಕೊಂಡು ಕೂತ ಬಂಗಾಳಿಯವರೂ ಮರಾಠಿಯನ್ನು ಕಲಿಯುವಂತೆ ಮಾಡಿದರು.

ಮರಾಠಿಯಲ್ಲಿ ಇವರದಷ್ಟೇ ಮಾತು ಆಗಿದ್ದರೆ ಅದು ಏಕಾಂಗಿಯಾಗುತ್ತಿತ್ತೆಂದು ಕಾಣುತ್ತದೆ! ಗುರುಮೂರ್ತಿಗಳು "ಓರಾಯನ" ಗ್ರಂಥವನ್ನು ಇಂಗ್ರಜಿಯಲ್ಲಿ ಬರೆದರೇಕೆಂದಾಕ್ಷೇಪಿಸುವ ರಾಜವಾಡೆಯವರು ಮಧುಕರವೃತ್ತಿಯನ್ನನುಸರಿಸಿಯೂ ಸಂಶೋಧನದ ಕೆಲಸ ನಡೆಯಿಸುತ್ತಿದ್ದು, ದೇಶದ ದೀನಸ್ಥಿತಿಯನ್ನೂ ವಿಧವೆಯರ ಅಮಾನುಷವಾದ ಛಲವನ್ನೂ ನೆನಸುತ್ತಿರುವ ನಮಗೆ ಹಗಲು ಅನ್ನ ಸವಿಯೆನಿಸ ಬಾರದು; ರಾತ್ರಿ ನಿದ್ರೆಬರಬಾರದೆಂದು ಎಂದು ಒಂದೆಡೆ ಹೇಳಿರುವದು, ಚಿರಸ್ಮರಣೀ ಯವಾಗಿದೆ. ಆಪಟೆಯೆಂಬವರು ಕಾದಂಬರೀಲೇಖನವೇ ತಮ್ಮ ಜನ್ಮದ ಕೆಲಸ ವೆಂದೊಪ್ಪಿದ್ದು, ಗೋವಿಂದಾಗ್ರಜರೆಂಬೊಬ್ಬ ಕವಿವರ್ಯರು ಎಲ್ಲ ನಾಡಿನ ಹೃದ ಯವನ್ನೇ ಆಕ್ರಮಿಸಿರುವರು. ಕವಿತೆಯಲ್ಲನೇಕರು "ಇಂಗ್ರಜಿ ನಮೂನೆಗಳ"ನ್ನೇ ಇಳಿಸಿದ್ದು, ಗ್ರಂಥರಚನೆಯಲ್ಲೂ ಅದೇ ಮಾತು! ಜ್ಯೋತಿರ್ವಿಲಾಸ—ಭಾರತೀಯ ಜ್ಯೋತಿಃಶಾಸ್ತ್ರದ ಇತಿಹಾಸ—ಈ ಗ್ರಂಥಗಳನ್ನೊಬ್ಬರು ತಮ್ಮ ಜನ್ಮವನ್ನೇ ಹಾಕಿ ಬರೆದರು. "ಹಿಂದು ಧರ್ಮವೂ ಸುಧಾರಣೆಯೂ" ಎಂಬದನ್ನು ಗೋಳೆಯವರು

ಸ್ವತಂತ್ರವಾಗಿಯೇ ಬರೆದರು. ಭಾರತದ ಭಾಷಾಂತರವನ್ನೊಬ್ಬರು ಕೈಕೊಂಡು ಮುಗಿಸಿದ್ದು ಪ್ರೊ. ರಾನಡೆಯವರು ಇಂಗ್ಲಿಷ ಮರಾಠಿಕೋಶವನ್ನು ವಿಸ್ತೃತ ಪ್ರಮಾಣದ ಮೇಲೆ ಬರೆಯುವದನ್ನೇ ತಮ್ಮ ಜನ್ಮದ ಇತಿ ಕರ್ತವ್ಯವನ್ನಾಗಿ ತಿಳಿದು ಮುಗಿಸಿದವರು ಮೊನ್ನೆಯೇ ಪರಲೋಕವಾಸಿಗಳಾದರೆಂದು ಕೇಳಿದೆವು. "ಪಂಡಿತೆಯೆಂಬ ಪೆಸರನಾಪ್ರಸ್ತಾವದೊಳ್ ನನ್ನಿಮಾಡಿದ ಪಂಡಿತೆಯ"ರನೇಕರೂ ಪಂಪನು ಹೇಳುವಂತೆ ಮಹಾರಾಷ್ಟ್ರಸಾಹಿತ್ಯಕ್ಷೇತ್ರದಲ್ಲಿ ಹೊಳೆಯುತ್ತಿರುವರು. ರಾವ ಬಹದ್ದೂರ ರಾನಡೆಯವರ ಪತ್ನಿಯವರಾದ ಶ್ರೀಮತಿ ರಮಾಬಾಯಿ ರಾನಡೆಯವರು ತಮ್ಮ ಪತಿದೇವರ ಚರಿತೆಯನ್ನು ಬರೆದುದು ಸರ್ವಮಾನ್ಯವಾಗಿದೆ. ರೆವ್ಹರೆಂಡ ಟಿಳಕರೊಬ್ಬರು ಆರೇ ಮಾತಿನ ಕವಿಗಳು ಪ್ರಸಿದ್ಧರಾಗಿದ್ದರೆ ಅವರ ಪತ್ನಿಯವರೂ ಅದೇ ಪತಿದೇವರಾದ ಕವಿವರ್ಯರ [illegible] ಕವಯಿತ್ರಿಯ ಕೀರ್ತಿಯನ್ನಲಂಕರಿಸಿರುವಂತೆ ತೋರುತ್ತದೆ. ಇನ್ನೊಬ್ಬರು ಸರಕಾರದ ಅಪ್ಪಣೆಯನ್ನನುಸರಿಸಿ ಭಾರತ ಸಂರಕ್ಷಕ ಸೇವೆಗೆ ಹೋಗಲು [illegible] ಇನ್ನೊಬ್ಬರು [illegible] ಮೋರೆಗೆ [illegible] ತಮ್ಮ ಕೈಯ [illegible] ಕೆಲಸವಾದ [illegible] ಜನಾಂಗ [illegible] ಅದೊಂದು [illegible]

[illegible]

ರಿಂದೆ [illegible]

ದಿದ್ದರೂ ಹಿಂದುಸ್ಥಾನಕ್ಕೆಲ್ಲವೂ ಬೆಳಕುಮಾಡಿದ ನಾಮದಾರ ಗೋಖಲೆಯವರಂತೆಯೇ ಆಗರಕರರು ದೀನಸ್ಥಿತಿಯಲ್ಲಿಯೇ ಇದ್ದರು. ಒಂದೇ ಅಂಗಿಯನ್ನು ಒಗೆದುಕೊಳ್ಳುತ್ತೆ ಎತ್ತೆತ್ತೋ ಅಲೆದಾಡಿ ಎಮ್. ಎ. ಪದವಿಯನ್ನು ಪಡದಮೇಲೆ ತಿಂಗಳ ಐನೂರುರೂಪಾಯಿಗಳ ಕೆಲಸ ಬಂದರೂ ತೊರೆದು ನಿಂತು ವೈರಿಕೋತ್ತಮರಿಗೂ ಮಿತ್ರನಾದ "ಕೇಸರಿ" ರಾಜನಿಗೂ ಪ್ರತಿಭಟಿಸಿ ನಿಂತು "ಸುಧಾರಕವ"ನ್ನು ಕೈಕೊಂಡರು! ಆರೇ ಮಾತಿನ ಪರಮಾವಧಿಯ ಶೋಭೆಯೂ ಆವೇಶವೂ ಇವರು ಬರೆದ ಅನೇಕಲೇಖಗಳಲ್ಲಿ ವ್ಯಕ್ತವಾಗಿದೆ! ಪ್ರತಿಪಕ್ಷಿಗಳಾಗಿ ಇವರಿಲ್ಲದಿದ್ದರೆ ಪುಣೆಯಲ್ಲಿಯ ಟಿಳಕರ ರಾಜಕಾರಣವೂ ಸೊಪ್ಪಗಾಗಿ ಎಲ್ಲಾಗುತ್ತಿತ್ತೋ! ಜನರಿಗೇನು? ರಾಜಕೀಯವೂ ಬೇಡ, ಮತ್ತೊಂದೂ ಬೇಡ. ಎಲ್ಲರನ್ನೂ ಮೀರಿನಿಂತ ಆಗರಕರರನ್ನು ಅಲ್ಲಗಳೆಯುವ ಕಲ್ಪನೆಯಿಂದಾದರೂ ಸ್ವಾರ್ಥದಿಂದೆ ಜನರ ಲಕ್ಷ್ಯವು ಸಾರ್ವಜನಿಕ ಮಾತಿನಕಡೆಗೆ ಬಂತು! ಕೇಸರಿ—ಸುಧಾರಕಗಳ ಈ ಟಿಳ್ಳಿಯ ಹಾದಾಟವು ನೋಡತಕ್ಕಂಥದಾಗಿದೆ. ಇಂಥ ಮಹಾತ್ಮರಿಂದಲ್ಲದೆ ಮತ್ತಾರಿಂದೆ ವಾಙ್ಮಯರಥಕ್ಕೆ—ರಾಷ್ಟ್ರನೌಕೆಗೆ ಚಾಲನೆದೊರೆಯಬೇಕು?

ಪುಣೆಯ ಮರಾಠಿಗರು ಗುಣಗ್ರಾಹಿಗಳು. ಪರಮ ಮಿತ್ರರಾದ ಆಗರಕರರು ಕೂಡ "ನ ಭೂತೋನ ಭವಿಷ್ಯತಿ" ಸಮರವನ್ನೆಸಗಿದರೂ ಪ್ರಾತಃಸ್ಮರಣೀಯರಾದ ಲೋಕಮಾನ್ಯ ಟಿಳಕರು ಆಗರಕರರ ವಿಷಯದಲ್ಲೆಂದೂ ವೈಯಕ್ತಿಕಭಾವನೆಯನ್ನೇ ತರಲಿಲ್ಲ. ಗೋಖಲೆಯವರ ವಿಷಯದಲ್ಲೂ ಅವರ ನಡವಳಿಕೆಯು ಇದೇ ಮಾತು ನಮಗೆ ಎದ್ದು ಕಾಣುತ್ತದೆ. ನಮ್ಮಂತೆ ಮರಾಠಿ ದೇಶವೂ ೩—೪ ತುಂಡುಗಳುಳ್ಳದ್ದಾದರೂ ಅದರ ಕಡೆಗೆ ಅವರು ಪೂರ್ಣ ದುರ್ಲಕ್ಷ್ಯ ಮಾಡುವರು! ಲೋಕಮಾನ್ಯರ ಹೆಜ್ಜೆಯ ಮೇಲೆ ಹೆಜ್ಜೆಯನ್ನಿಡುವವರಲ್ಲಿ ಪ್ರಮುಖರಾದವರು ನಾಗಪೂರ ವರ್‍ಹಾಡದವರೇ! ಡಾಕ್ಟರ ಭಾಂಡಾರಕರರಿಗೆ ಕೂಪಮಂಡೂಕಗಳೆಂದೊಮ್ಮೆ ಕೇಸರಿಕಾರರೆಂದರೂ ಅವರ ಯೋಗ್ಯತೆಗೆಲ್ಲರೂ ಕೇಸರಿಯವರೂ ತಲೆವಾಗುವರು. ದೊಡ್ಡವರ ದೋಷಗಳೇ ಭಯಂಕರವೆಂದು ಚಿಪಳೂಣಕರರು ತಮ್ಮ ಸುಪ್ರಸಿದ್ಧವಾದ "ನಿಬಂಧಮಾಲೆಯ"ಲ್ಲಿ ಬರೆದಿರುವರು. ದೊಡ್ಡವರ ಚಿಲ್ಲರೆ ದೋಷಗಳೂ ಅಗತ್ಯವಾಗಿ ಬೈಲಿಗೆ ಬರಬೇಕು. ಇರಲೊಲ್ಲವಪ್ಪಾದೋಷಗಳೆಂಬ ಮಿಜಿಮಿಜಿ ಪುರಾಣವೆಷ್ಟುಮಾತ್ರವೂ ತಕ್ಕದ್ದಲ್ಲ. ರಾನಡೆಯವರು ಎಲ್ಲರಿಗೂ ಗುರುಗಳು. ಅವರ ಸರ್ವವ್ಯಾಪಿ ದೃಷ್ಟಿಯು ಇನ್ನಾರಿಗೂ ಬಾರದು. ಕೇಸರಿಯವರೂ ಅವರನ್ನು ಸರ್ವಜ್ಞರೆಂದು ಕೊಂಡಾಡಿದರು. ಆದರೆ, ಅವರ ಭಕ್ತ

ರೊಂದು (ದಿನ ಅವರ ಶ್ರಾದ್ಧ ತಿಥಿಯಲ್ಲೆಂದು ಕಾಣುತ್ತದೆ,) ಅವರಿಗೆ ರಾಮದಾಸರ ಉಪಮೆಯನ್ನು ಕೊಟ್ಟರು! ಆದರೆ, ಇಂಥ ಅತಿಶಯೋಕ್ತಿಯು ಸಹ್ಯವಾದರೆ, ಮರಾಠಿಗರು ಮರುಳರೇ ಎನ್ನಬೇಕಾಗಿತ್ತು! ಕೂಡಲೇ "ಕೇಸರಿಯ"ಲ್ಲೊಬ್ಬರು ಬರೆದರು:—"ತಮ್ಮ ಸರ್ವಸ್ವದ ಮೇಲೆಯೇ ನೀರುಬಿಟ್ಟು ಕಂಕಣಬದ್ಧರಾಗಿ ಆರು ರಾಷ್ಟ್ರೋದಯವನ್ನೇ ಆ ಜನ್ಮವಾಗಿ ಕೈಕೊಂಡು ನಡೆದರೋ ಆ ಮಹಾಮಹಿಮ ರಾದ ರಾಮದಾಸ ಸ್ವಾಮಿಗಳೆತ್ತ? ಪುನರ್ವಿವಾಹದ ಉಪದೇಶವನ್ನು ಮಾತ್ರ ಜನ ರಿಗೆ ಮಾಡಿ, ತಮ್ಮ ಮೇಲೆ ಅದೇ ಪ್ರಸಂಗ ಬರಲು ತಂದೆಯವರ ಕಡೆಗೆ ಬೆಟ್ಟು ತೋರಿಸಿ, ಹಿಂಬದಿಯ, ಅದೇ ಪುನರುದ್ವಾಹದ ಪ್ರಯೋಗವನ್ನು ಬೇಕ್ಕು ನಾಯಿ ಗಳ ಮೇಲೆ ಮಾಡುವಂತೆ ಜನರ ಮೇಲೆ ಮಾಡಿದ, ತಾವು ನಿವೃತ್ತಿಕರಾದರೂ ಜಗಳವನ್ನು ಕೊಂಡುಕೊಂಡು ತಮ್ಮ ಹಿಂದಿಟ್ಟು ಹೋದೀರಾನಡೆಯವರೆತ್ತ? [illegible] ತಮ್ಮ [illegible] ಒಂದು [illegible] ಅಧ್ವರ್ಯರಾಮದಾಸರು!"

[illegible]

ಯವರ ರಾಜಕೀಯವಿಷಯವಾಗಿಯೂ, ಅವರ ಥಿಯಾಸೊಫಿಯ ತತ್ತ್ವಜ್ಞಾನ ವಿಷಯವಾಗಿಯೂ ಕಾನಿಟಕರ ಸಾಹೇಬರಿಗೆ ಪೂಜ್ಯ ಬುದ್ಧಿಯಿದೆ. ವಾಙ್ಮಯ ಭಕ್ತಿಯಿಂದ ಅವರು ಆ ಗ್ರಂಥಗಳೆಲ್ಲವನ್ನೂ ಮನವಿಟ್ಟು ಓದುವರು. ಅವರ ಉದಾರವಾದ ವ್ಯಾಪಕವಾದ ವಿಚಾರಸರಣಿಗಳನ್ನೂ ವಾಗಾಡಂಬರವನ್ನೂ ನೋಡಿ ತಲೆದೂಗುವರು. ಆದರೆ, "ನಮ್ಮನ್ನೂ ಕೇಳಿದರೆ, ನಮ್ಮ ಪೂರ್ವ ಪರಂಪರೆಯೊಳ ಗಿನ ಸಮಾಧಾನವು ಅದರಲ್ಲಿಲ್ಲದುದರಿಂದ ನಾವೆಂದೂ ಆ ಪಂಥವನ್ನಂಗೀಕರಿಸುವವ ರಲ್ಲವೆ"ಂಬದಾಗಿ ಅವರ ಸ್ಪಷ್ಟವಾದ ಮತವಾಗಿದೆ.

ಮಹನೀಯರೇ! ಆರೇ ಜನರ ವಿಷಯವಾಗಿ ಹೀಗೆ ನೆನನೆನೆದು ಬರೆಯುತ್ತ ಹೋದ ಹಾಗೆಲ್ಲ ನಮ್ಮೀ ಲೇಖನವು ಬೆಳೆಯುತ್ತ ಹೋಗಬಹುದು. ಇಂಥ ಸಂದ ರ್ಭಗಳಲ್ಲಿ, ನಾಗಚಂದ್ರನು ಮೋರೋಪಂತನಂತೆ ಮನೋಹರವಾಗಿ ಕೌಟುಂಬಿಕ ವಿಚಾರವನ್ನು,

ಬಿದಿಬರೆದಟ್ಟಿದಂ ಮಗನೆ ಪಿಂದೆ ತವರ್ಮಗನೆನಾವುಕೇಳಮಾ।
ದುದು ಪತಿಯುಂ ತಪಕ್ಕೆ ನಡೆವಂಸುತ ನೀನುಮಗಲ್ದು ಪೋದೊಡಾ॥
ವುದವೊಗತಿ ಜೀವಿಪಂದಮೆನಗಾವುದು ಪೊರ್ದುವೆನಾರನೆಂದು ಗ।
ದ್ಗದರವಮುಣ್ಮೆ ತಂದಳಪರಾಜಿತ ಕಣ್ಗೆತದುಷ್ಣವಾರಿಯಮ್ ॥೧॥

ಈ ರೀತಿ ಹೇಳುವದೂ ಪಂಪನು, ಮುಕ್ತೇಶ್ವರನಂತೆಯೇ ಉತ್ಕೃಷ್ಟವಾದ ಶೈಲಿ ಯಲ್ಲಿ—"ದ್ರೌಪದಿಯ ಕೇಶಪಾಶ ಪ್ರಪಂಚದಲ್ಲಿಯೇ ಹತ್ತು ದಿಕ್ಕಿನ ಸಾಮ್ರಾಜ್ಯ ಗಳೆಲ್ಲವೂ ಅಂಜಿ, ಅಡಗಿಹೋಗಿ, ಭೀಮಸೇನನ ಪರಾಕ್ರಮಕ್ಕೂ ಮಹಾಭಾರ ತಕ್ಕೂ ಅದೇ ಆದಿಯಾಯಿತೆಂದು ಮೊದಲಾಗಿ ಹೇಳಿ ಮಹಾಭಾರತದ ಮೇಲೆ ಕೈಮಾಡುವದೂ—ಇಂಥ ಜೈನರ ಸಾಮ್ರಾಜ್ಯದ ಕಾಲದ ನಮ್ಮಾನಾಗ್ಯೈಭವವೆಲ್ಲ ಈಗೇನಾಯ್ತಪ್ಪ ಎಂದೂ—"ಸರಸ್ವತಿಗೆ ವಿಳಾಸಮಂಪೊಸತು ಮಾಡುವ ಪಂಪನವಾ ಗ್ವಿಳಾಸಮುಮ್" ಈ ವಚನವನ್ನು ಕವಿಯು ಗ್ರಂಥದ ಕೊನೆಗೆ ಬರೆದನಲ್ಲ. ಕಡೆಯ ಪಾನು ಹರಿದುಹೋದರೇನು ಗತಿಯೆಂದೂ ಮೊದಲಾಗಿ ಚಿಂತಿಸುತ್ತ, ಈಗಿನ ಕನ್ನ ಡದ ಪೇಚಾಟವನ್ನು ನೋಡಿ ನಾವು ತೀವ್ರವಾದ ನಿರಾಶೆಯಲ್ಲಿ ಮಗ್ನರಾಗಿ ಕೈಕಾಲು ಕಳೆದುಕೊಂಡು ಕೂತೆವು! ಪ್ರಿಯ ಬಂಧುಭಗಿನಿಯರೇ, ಏನೇನೋ ತಿಳಿಯಬೇಡಿರಿ. ಆ ವೇಳೆಗೆ "ಆಶೇಚೀನಿರಾಶಾ ಆಣಿ ನಿರಾಶೇಚೀ ಆಶಾ" ಎಂಬ ಉಪರಿನಿರ್ದಿಷ್ಟಪೂಜ್ಯರ ಶಬ್ದಗಳು ನೆನಪಿಗೆ ಬಂದು, "ನಿರಾಶೆಯೊಳಗಿನ ಆಶೆಯೇ

ಹೌದು, ಅದೇ ಮೇಲು, ಅದೇ ಬೇಕುಬೇಕೆ"ನ್ನುತ್ತೆ. ಪ್ರಸ್ತುತವಾದೀಲೇಖನವನ್ನು ಬರೆಯತೊಡಗಿದೆವು! ಇನ್ನು ತುಲನಾತ್ಮಕ ರೀತಿಯಿಂದ ಕನ್ನಡದ ಕಡೆಗೆ ಹೊರಳಬೇಕು.

ಅಲ್ಪಕಾಲದ ಹಿಂದೆ ನಾವೇ ಈ ವಿಶಾಲವಾದ ನಾಡಿನ ಒಡೆಯರಾಗಿದ್ದೆವೆಂಬ ಭಾವನೆಯು ಮರಾಠಿಗರಲ್ಲಿರುವದೊಂದು ಅವರ ಪೂರ್ವೇತಿಹಾಸದ ಲಾಭವೆನ್ನಬೇಕು. ಆದರೂ ಅವರ ಗುಣವಿಶೇಷಗಳಲ್ಲೊಂದೆರಡು ನಮಗೂ ಸ್ಮರಣೀಯವಾಗಿವೆ. ಕನ್ನಡನಾಡಿನಲ್ಲಾದರೋ [illegible] ಬೆಂಗಳೂರಿನ ಕನ್ನಡ ಸಭೆಯ ಪತ್ರಿಕೆ,- [illegible] —ಸ್ವದೇಶಾಭಿ[illegible] ಅವುಗಳಲ್ಲಿ ಸಾಹಿತ್ಯ ಪತ್ರಿಕೆ [illegible] ಇತ್ಯಾದಿ [illegible] ಮುಂದೆ [illegible]!

[illegible]

ನಮ್ಮ ನೋಟ.

[illegible]

ಪ್ರಾಯವೇರಿದಂತೆ ಹೊರಗಣ ವಿಕೃತಿಗುಣದಿಂದ ಮಿಶ್ರಿತವಾಗಿ ವಾಸಿಹೋಗುವುದು; ಆ ಮಿಶ್ರಿತಗುಣವು ಪ್ರಕೃತಿಗೆ ಭಿನ್ನವಾಗಿ ಅದರಲ್ಲಿ ವಿಕೃತಿಯೆ ಪ್ರಬಲವಾಗಿರುವುದು; ಅದರಿಂದಲೇ ಅದು ಅಬಲವಾದ ವ್ಯಕ್ತಿಗಳನ್ನೆಲ್ಲ ತೃಷ್ಣೆಯ ಗಾಳದಿಂದ ಸೆಳೆಯಹತ್ತುವುದು. ಆ ಮಿಶ್ರಣವೆ ಪ್ರಕೃತಿಯಾದರೆ, ಅಬಲಪ್ರಾಣಿಯ ಪ್ರಕೃತಿಗೆ ವಿರುದ್ಧವಾಗಿ ಅದನ್ನು ಬಡಿದು ಬಾಯಿತುಂಬಿಸುವ ಎಣಿಕೆ, ಆ ಬಲಿಷ್ಠಪ್ರಾಣಿಯಲ್ಲಿ ಮೊಳೆಯಬಹುದೆ? ಶುದ್ಧವಾದ ಬಂಗಾರದ ಪ್ರಕೃತಿ ಮೆದುವಾಗಿ ಕೆಲಸಕ್ಕೆ ಬರುವುದಿಲ್ಲವೆಂದು, ಮನ ಬಂದಂತೆ ಕಣ್ಮುಚ್ಚಿ ಚೆಂಬನ್ನು ತುಂಬಿದರೆ ಯಾಕಾದೀತು? ಇರಲಿ, ಇದಕ್ಕೆ ಬೆರಗಾಗಿ ಬರಿದೆ ಮರುಕಪಡುವುದೇಕೆ? ನಮ್ಮ ನಾಗರಿಕತೆಯು ನಾಡಿನಲ್ಲಿಯಾದರೂ, ಆ ಅನ್ಯಾಯವು ಕಾಲ್ದೆಗೆದಿರುವುದಿಲ್ಲ. ಹಲವರು, ಹೊರಹೊರಗೆ ಮಾತ್ರ ಪರೋಪಕಾರದ ಬಣ್ಣವನ್ನು ಬಳಿದಿರುವರಲ್ಲದೆ, ಒಳಗೊಳಗೆ ಸ್ವಾರ್ಥದ ಹೆಬ್ಬಾವಿನ ಹೆಬ್ಬಾಯನ್ನೆ ತೆರೆದಿರುತ್ತಾರೆ. ಹೋಗಲಿ, ಅಂಥವರ ಮಾತೇಕೆ? ಅವರನ್ನು ದಾರಿಗೆ ತರಲಿಕ್ಕೆ ದೇವರಿಗೂ ಅಸಾಧ್ಯವು. ಬೇರೊಣಗಿದ ಮರಕ್ಕೆ ನೀರೆರೆದು ವಸಂತನನ್ನು ಕಾಯುತ್ತಿದ್ದರೂ ಅದು ಹೂಬಿಡುವುದೆ? ಮುಂದಿನ ಮೊಳಕೆಯ ಜನಾಂಗವಾದರೂ ಕಣ್ದೆರೆದು, ಲೋಕಹಿತಕಾರಿಯಾಗಿ ಏಳ್ಗೆಗೆ ಬರಬೇಕೆಂಬುದು ಮಾತ್ರ ನಮ್ಮ ಉದ್ದೇಶವು. ಇರಲಿ, ಕತ್ತಲೆಯ ಕೆಲಸವೇನು, ನೋಡೋಣ.]

ಕತ್ತಲೆ:—(ಅಳುತ್ತ) ಅಣ್ಣ, 'ಲೋಕದಲ್ಲಿ ಸ್ವೇಚ್ಛೆಯಿಂದ ತಾನುತಾನಾಗಿರು' ಎಂದು, ನೀನು, ನನ್ನನ್ನು ನಾಡಿಗೆ ಕಳುಹಿಸಿ, ನಿನ್ನ ಕಾರ್ಯಭಾರದ ಹೊರೆಯನ್ನು ಇಳಿಸಿಕೊಂಡೆಯಷ್ಟೆ. ಆದರೆ...(ಎಂದು ಗೋಳಿಡತೊಡಗಿದಳು).

ಅಂಧಕಾರ:—(ಅಚ್ಚರಿಯಿಂದ) ತಂಗಿ, ಇದೇನು ವಿಕೃತಿ? 'ನಾಡಿನಲ್ಲಿ ನಮ್ಮ ಸಮೀಪಬಂಧುಗಳಾದ ರಾತ್ರಿನಕ್ಷತ್ರಪತಿಗಳಿಗೆ ಪೂರ್ಣಾಧಿಕಾರವು ದೊರೆತಿದೆ. ಆದರಿಂದ ನಾನೂ ಅವರೊಡನೆ ವಿಹರಿಸುತ್ತೇನೆ' ಎಂಬ ನಿನ್ನ ಬಿನ್ನಹಕ್ಕಾಗಿಯೆ ಕಳುಹಿದೆನು. ಈಗ, ಹೆಂಗುಸಾದ ನಿನ್ನ ಸ್ವಾತಂತ್ರ್ಯಪ್ರಿಯತೆಗೆ ಬಿಡ್ಡಿಸಿಕ್ಕಿತೆಂದು ನನ್ನ ಮೇಲೆ ತಪ್ಪನ್ನು ಹೊರಿಸುವಂತೆ ತೋರುವುದು. ಇರಲಿ, ಈಗಿನ ಸಂಕಷ್ಟವೇನು?

ಕತ್ತಲೆ:—ಅಣ್ಣಾ, ಅಲ್ಲಿರಲಿಕ್ಕೆ ನನಗೆ ಒಪ್ಪಿಗೆ ಇತ್ತು. ರಾತ್ರಿ ರಾಣಿಯೆ ಅಕ್ಕನು. ನಕ್ಷತ್ರಪತಿರಾಜನೆ ಧಾವನು. ಮತ್ತೇನು, ನನ್ನ ಕೈಯಾಟವೇ ಆಟವೆಂದು ಎಣಿಸಿದ್ದೆನು. ಹಾ! ಎಲ್ಲವೂ ಬಯಲುಬರಗಿದಂತಾಯಿತು. ಆದರೆ, ಧಾವನ ಎದೆಯಲ್ಲಿ, ಇನ್ನೂ ನನ್ನ ಪ್ರೇಮವು ನಾಟಿದ ಕಪ್ಪುಗುರುತು ಇದ್ದೇ ಇದೆ. ಅದನ್ನು ಕಂಡು ಕರುಬಿ, ಲೋಕದ ಮುಂದಾಳಾದ ತೇಜಸ್ವಿ, ಬಹಳ [illegible] ಆ ದುರ್ಬುದ್ಧಿಗೆ ತಕ್ಕ ಪ್ರಾಯಶ್ಚಿತ್ತವಾಗಿ ಈಗ ಅವನ ಹೆಸರೂ ಇಲ್ಲದಂತಾಗಿದೆ. ಅದರೇನು? ಈಗ ಲೋಕವೆಲ್ಲವೂ, ಧಾವನನ್ನು, [illegible] ಅದರಿಂದ, ಹೆದರಿ ಅವನೂ ಅಕ್ಕನೂ [illegible] ಅಣ್ಣಾ, ಅವರು ಅದಕ್ಕೆ ಈಗ [illegible] ಅಂತೂ, ದೊಡ್ಡವರ—ಅದ [illegible] ಬಡವರ ಬಾಳು [illegible]

[illegible] | ೧ |

[illegible] | ೨ |

[illegible]

ವಾಸಿಹೋಯಿತು!! ಇದನ್ನು ಲೋಕದ ಒಂದು ಕತೆ ನೆನಪಿಗೆ ತರುತ್ತಿದೆ. ಕೇಳು—'ಇಂದಿಗೆ ಎಷ್ಟೋ ಮೊದಲು, ಕಡೆಹಳ್ಳಿಯೆಂಬಲ್ಲಿ ಒಬ್ಬ ಬ್ರಾಹ್ಮಣನಿದ್ದನು. ಅವನ ಮನೆಯನ್ನು ಹಲವರು ನೋಡದಿದ್ದರೂ ಅವನು ಒಬ್ಬನದನ್ನೂ ಬಿಡಲಿಲ್ಲ. ನಾಲ್ಕು, ತಪ್ಪಿದರೆ, ಐದು ದಿನಕ್ಕೊಮ್ಮೆ ಅವನ 'ಭವತಿಭಿಕ್ಷಾಂದೇಹಿ' ಪ್ರತಿಯೊಂದು ಮನೆಯಲ್ಲೂ ಆವೃತ್ತಿಯಾಗುತ್ತಿತ್ತು. ಅಕ್ಕಿಯ ಕಡಿಕಣ್ಣೊಂದು ಚೆಲ್ಲಿಹೋದರೂ, ಕಾಗೆಯ ಕೊಕ್ಕಿನಂತಿರುವ ಬೆರಳಿಂದ ಹೆಕ್ಕುತ್ತಿದ್ದನು. ಆಗ ನಗುತ್ತ ಅವನು 'ಲೋಕದಲ್ಲಿ ಬಹಳ ಮಂದಿ ಗಣಿತಶಾಸ್ತ್ರಪಾರಂಗತರಿದ್ದಾರೆ. ಆದರೆ, ಈ ಕಡಿಕಾಳಿಗೆ, ಇಂತಿಷ್ಟು ಬೆಲೆಯೆಂದು, ನಾನಲ್ಲದೆ ಯಾರೂ ಹೇಳಲಾರರು.' ಅದಕ್ಕೆ ಮತ್ತೊಬ್ಬ ವಿದ್ಯಾರ್ಥಿ "ಆಯ್ಯಾ, ವೆಂಕಣ್ಣಾ, ನಾನು ಅಯ್ಯಗಳ ಮಠದಲ್ಲಿ ಕಲಿಯ ತೊಡಗಿ ಐದಾರು ವರ್ಷಗಳಾದುವು. ನಿನ್ನ ಪ್ರಶ್ನೆಗೆ ಉತ್ತರಗೊಡಲಿಕ್ಕೆ ಮಹಾಶಾಸ್ತ್ರಿಗಳೇನೂ ಬೇಡ. ಅದಿರಲಿ, ಉತ್ತರಹೇಳಿದರೆ, ನನಗೆ ಉಡುಗೊರೆ ಏನು?"

"**ಬ್ರಾಹ್ಮಣ:**—ಇದೇನು? ಮಜ್ಜಿಗೆಗೆ ಗತಿಯಿಲ್ಲ, ಮೊಸರಿಗೆ ಚೀಟು. ಉತ್ತರದ ಮೇಲಲ್ಲವೆ ಉಡುಗೊರೆ? ಹುಂ, ಚಿಂತೆಯಿಲ್ಲ. ಹುಡುಗರು ನಿಷ್ಕಾಮ ಕರ್ಮಕ್ಕೆ ಕೈಹಾಕುವುದು ಕಡಮೆ. ಸಂಸಾರಿಗಳಾಗತಕ್ಕ ಅವರು ನಿಷ್ಕಾಮಿಗಳಾಗಬಾರದೆಂದೆ ನನ್ನದೂ ಎಣಿಕೆ. ಇರಲಿ, ಉತ್ತರಹೇಳಿದರೆ ಸುಂದರವಾದ ಬಹುಮಾನವನ್ನೆ ಕೊಡುತ್ತೇನೆ. ಆದರೆ, ಅದನ್ನು ಹಾಗೆಹೀಗೆಂದು ತಿರಸ್ಕರಿಸದೆ ತಲೆಬಗ್ಗಿಸಿ ಅಂಗೀಕರಿಸಬೇಕು. ನಿನ್ನಂಥ ಹುಡುಗರೂ ನನ್ನ ವಿದ್ವತ್ತಿಗೆ ಕಪ್ಪುಹಚ್ಚಿ ಉಡುಗರೆಗೆ ಕೈನೀಡುವುದಿದ್ದರೆ ನೋಡೋಣ." ಹುಡುಗನೇನೋ ಶ್ರೀಮಂತನ ಮಗನು. ಈ ಬಡವನು ಹೆಚ್ಚೇನೂ ಕೊಡಲಾರನೆಂದು ಅವನಿಗೆ ಗೊತ್ತಿತ್ತು. ಆದರೂ, ಹತ್ತಾಗಲಿ, ಒಂದಾಗಲಿ, ಉಡುಗೊರೆಯೆಂದರೆ, ಹುಡುಗರಿಗೆ ಒಂದು ಸಡಗರಿಕೆ. ಬ್ರಾಹ್ಮಣನ ಮಾತಿಗೆ ಹುಂಗುಟ್ಟಿದನು. ಇಬ್ಬರು ಗೃಹಸ್ಥರ ಎದುರಲ್ಲಿ ಹೊದಗ್ಗೆಯ ಆಣೆಗ್ಗೆಯ ಪಂತವಾಯಿತು. ಬಾಲಕನು ಉತ್ತರವನ್ನು ನೀರಿನಂತೆ ಹೇಳಿಬಿಟ್ಟನು. ಮಧ್ಯಸ್ಥರು 'ಸೈಸೈ' ಎಂದರು. ಆಗ ಹುಡುಗನು ಕೈಹೊಯ್ದು "ಎಲೆ, ವೆಂಕಣ್ಣಾ, ಈಗೇಲ್ಲಿ ಉಡುಗೊರೆ" ಎಂದು ಚಾಳಿಸಿದನು. ಆಗ ಬ್ರಾಹ್ಮಣನು ನಗುತ್ತ

"ಊರುರು ಬಿಕ್ಕೆಬೇಡುವ ಬ್ರಾಹ್ಮನನ್ನು ಬೇಡಿಕಾಡುವ ನಿನಗೆ—ಲಕ್ಷಾಧಿಪತಿಗೆ ನಾಚಿಕೆ ಇಲ್ಲವೆ?" ಎಂದು ಕಟಕಿಯಾಡಿದನು.

"ಹುಡುಗ:—ಬೇಡಿದೆನೆ? ಮತ್ತೇಕೆ, ಈ ಪಂತದ ಹೊಂತಗಾರಿಕೆ? ಹೂಗೊಡುವಲ್ಲಿ ಹೂವಿನ ಎಸಳಾದರೂ ಕೊಟ್ಟೇ ತೀರಬೇಕು." ಎಂದು ಕೊನೆಯ ಮರುಮಾತಾಡಿದನು. ಮಧ್ಯಸ್ಥರೂ 'ಸರಿಸರಿ' ಎಂದರು. ವೆಂಕಣ್ಣನು "ಹೌದು, ಮಾತಿಗೆ ಮರೆಯಿಲ್ಲ. ಆದರೆ, ನನ್ನಲ್ಲಿ ಬೇರೆ, ಚೆಂಬಿನ ಕಾಸೂ ಇಲ್ಲವೆಂಬುದು ಎಲ್ಲರಿಗೂ ಗೊತ್ತು. ಈ ವರೆಗೆ ಸಾಕಿ ಸಂರಕ್ಷಿಸಿದ ಕನ್ಯಾರತ್ನವೊಂದುಂಟು. ಅವಳನ್ನು ಕೊಟ್ಟು ಮಾತಿನ ಮೈಲಿಗೆಯನ್ನು ಮಡಿ ಮಾಡುತ್ತೇನೆ." ಎಂದನು. ಮಧ್ಯಸ್ಥರು ಒಪ್ಪಿಗೊಟ್ಟರು. ಹುಡುಗನ [illegible] ನಾಲಗೆ ಮಿಕ್ಕಿ [illegible] ಮಾತಿಗೆ [illegible] ಧಿಕ್ಕರಿಸುವ [illegible] ಆದರೆ, ಆ [illegible] ಕನ್ನೆಯು ಕೈಹಿಡಿ [illegible]

ರೂಪಸನಾದ ತಂದೆಯನ್ನೆ ಮರೆತ ಮೇಲೆ, ನಿನ್ನ ಎದೆ ಕರಗಿ ಜನ್ಮಾವ ಕಡೆಗೆ ಹರಿಯಲಿಕ್ಕಿದೆ? ಅದು ಮಂಜುಗಡ್ಡೆಯೆ ಸರಿ.

ಕುಸುಮ ಷಟ್ಪದಿ ‖ ಇನನೊಡನೆ ಕೂಡಿ ನಗುವಾನಳಿನಿಯೊಂದಿಸ್ಸ
ನೆನೆವುದೇ ಹುಟ್ಟಿದ ಕೆಸರು ನೆಲವನು? ‖
ಮನವಿಡದೆ ಬೆನ್ನು ಹಾಕುತ ಮೇಲೆಸೋಳ್ಪದಲಿ
ವನಿತೆ, ಅದು ನಿನ್ನಿಂದಲೇ ಕಲಿತುದೆ? ‖ ೧ ‖

ಚೌಪದಿ ‖ ಹಡೆದು ಹೊರೆಯುತ ನಡೆಯಿಸುತ ನುಡಿಯ ಕಲಿಸಿ
ಬಡತನದ ಹೇಳಲಾಗದ ಕಷ್ಟ ಸೈಸಿ ‖
ಹುಡುಕಿ ಗಂಡನ ಕೈಗೆ ಕೊಡೆ ಪುನರ್ಜನ್ಮ
ಪಡೆದವರವೋಲು ಮರೆತೆಯೆ ನಿನ್ನ ಕರ್ಮ? ‖ ೨ ‖

ತನ್ನ ಮನೆಯಲ್ಲಿ ಅಶನಧ್ವಂಸಕಾಗಿ
ಇನ್ನಿಲ್ಲಿ ಬಂದನೆಂದೆಣಿಸಿದೆಯೊ ನೀನು?
ನಿನ್ನನೇ ನಿಷ್ಕಾಮದಿಂ ಸಾಕಿದವಗೆ
ಅನ್ನಕೇಂ ಕಡಮೆ ನಾಡಿನ ಬಟ್ಟಲೊಳಗೆ? ‖ ೩ ‖

ಆಗ ವೆಂಕಣ್ಣನು "ಆಕೆಯನ್ನು ಯಾಕೆ ಬರಿದೆ ಬಯ್ಯುವೆ? ನನ್ನ ಬಡತನವನ್ನೊ, ಅಲ್ಲವೆ, ಅವಳಿಗೆ ಸರಿಯಾದ ಬಾಲ್ಯಶಿಕ್ಷಣವನ್ನು ಕೊಡಲಾರದ ನನ್ನನ್ನೊ ಬಯ್ಯಬೇಕು." ಎಂದನು. ಆ ಮೇಲೆ, ಮಗಳು ತಂದೆಯ ಕೈಕಾಲುಹಿಡಿದುಕೊಂಡು ಪಶ್ಚಾತ್ತಾಪಪಟ್ಟಳಂತೆ. ಹಾಗೆಯೆ ನಮ್ಮ ರಾತ್ರಿಯೂ ಈಗ ರೂಪಾಂತರವನ್ನೆ ಹೊಂದಿರುವಳು. ಎಂದಮೇಲೆ, ಲೋಕವು ನಮ್ಮ ಹಗೆಗಟ್ಟುತ್ತಿರುವುದು ಅಷ್ಟಿಷ್ಟೆಂದು ಬಣ್ಣಿಸುವುದು ಹೇಗೆ? "ನಮ್ಮವರೆಲ್ಲರೂ ನೀಚರು. ಅವರು ನಾಡಿಗೆ ಅಡಿಯಿಡಲೆ ಬಾರದು. ಅಷ್ಟೆ ಅಲ್ಲ, ಆಗಾಗ ಈ ಕಾಡಿಗೂ ಬಂದು, ಆ ನಾಡವರು ನಮ್ಮವರನ್ನು ಗುಂಡಿನ ಬಾಯಿಗೆ ಕಟ್ಟುವುದೂ ನ್ಯಾಯಸಮ್ಮತವು!" ಈ ಪ್ರಕೃತಿವಿರುದ್ಧವಾದ, ಅಸಹ್ಯವಾದ, ಅವರ ಉಪಟಳಗಳು ಲೆಕ್ಕಕ್ಕೆ ಸಿಕ್ಕದಷ್ಟು. ಅದು ಹೇಗೂ ಇರಲಿ, ಎಂದು ಸೈರಿಸಿಕೊಂಡು ಹೆಣ್ಣುಗೊಟ್ಟು, ಈ ಹೊಸದೊರೆಯಿಂದ ನ್ಯಾಯವನ್ನು ನಿರೀಕ್ಷಿಸುತ್ತಿದ್ದುದು ಬೆಲೆಗೊಟ್ಟು ಹಾಯುವ ಎತ್ತನ್ನು ಕೊಂಡಂತಾಯಿತು. ಇರಲಿ, ಈ ವಿಷಯದಲ್ಲಿ, ಸರ್ವಪ್ರಯತ್ನವನ್ನಾದರೂ ಮಾಡಿ ಒಂದುಕೈ ನೋಡುವುದೆ ಸಿದ್ಧವು. ತಂಗಿ, 'ಕೊಟ್ಟಕೂಸು ಕುಲದಿಂದ ಹೊರಗೆ' ಎಂಬ ಗಾದೆಗೆ, ನಿನ್ನಕ್ಕನಾದ ಕತ್ತಲೆ ಆದರ್ಶವಾ

ದರೂ, ಅವಳಲ್ಲಿಯು ಬೇಸರವನ್ನು ನಿನ್ನಲ್ಲಿಡುವ ಅಲ್ಪಬುದ್ಧಿ, ನನಗೂ ಈ ನನ್ನ ಸಭ್ಯರಿಗೂ ಇರಲಾರದು. [ಒಡನೆಯೆ ಸಿಂಹರಾಜನ ಮುದುರಿದ ಕೇಸರವು ನೆಟ್ಟಗೆ ನಿಂತುದು. ಯಜ್ಞಕುಂಡದ ಎರಡು ಕಿಡಿಗಳೆಂಬಂತೆ ಕಣ್ಣುಗಳು ಮಿಣಿಮಿಣಿಸಿದುವು. ಮೇಲೆ ಹೊಮ್ಮುವ ಹೊಗೆಯಂತೆ ನಿಡುಸುಯ್ಲು ಬುಬ್ಬುಳ್ಗಿಂದಿತು. ದರ್ಭಾದಿಗಳಲ್ಲಿ ಆವರಿಸಿ ಅವ್ವಳಿಸುವ ಸಪ್ತಜಿಹ್ವ (ಅಗ್ನಿ) ನಂತೆ, ಮಿಂಚಿನ ಕೇಸರಗಳು ಥಳಥಳಿಸಿದುವು. ತೇಜಸ್ವಿಯ ದ್ವೇಷಿಗಳಾದರೂ ದಾರಿಗಾಣದೇಕಾದರೆ, ಅವನ ಸಹಾಯವೇ ಬೇಕೆಂಬಂತೆ ನೋರೆ ಕಿಚ್ಚಿನ ಆಜ್ಞಾಗಿತ್ತು. ಹಗೆಗಳನ್ನು ಕೊಚ್ಚಿ ಹೊಡೆಯುದೇಕೆಂಬ ಮಾತಿಗನುಸಾರವಾಗಿ, ತೇಜಸ್ವಿ ಆ ಸಿಂಹರಾಜನ ಮುಖವನ್ನು ಸೇರಿರಬಹುದು. ಹಾವಿಗೆ ಹಾಲೆರೆದರೆ ವಿಷವೆ ಏರುವುದು; ನೀಚರಿಗೆ ವಿದ್ಯಾಭ್ಯಾಸದಿಂದ ದುರಹಂಕಾರವೇ ಪ್ರಬಲವಾಗುವುದು; ಹಾಗೆಯೆ, ಆ ಘಾತುಕ ಜಂತುಗಳಿಗೆ ತೇಜಸ್ವಿನ [illegible]]

ಸಿಂಹರಾಜ — ಒಡೆಯನೆ, [illegible] ನಮ್ಮನ್ನು ಕಚ್ಚಿರೆ [illegible] ನಿನ್ನ [illegible]

ಎದುರೆದುರು ದಂಡೋಪಾಯದಿಂದ ಹೋರಾಡುತ್ತಿದ್ದರು. ಈ ನೀಚನು, 'ಒಳಹೊಕ್ಕುಹೊರಕಡಿವ' ಮರೆಮೋಸದ ಭೇದವನ್ನೆ ಪ್ರಯೋಗಿಸಿದ್ದಾನೆ. ಆದರಿಂದ ಲೋಕಮತವನ್ನೂ, ಈ ರಾಜಮತವನ್ನೂ ಖಂಡಿಸಿ, ನಮ್ಮ ಶಕ್ತಿಯ ರಾಜ್ಯವನ್ನೆ ಅಖಂಡವಾಗಿ ಸ್ಥಾಪಿಸುವುದು ಆದ್ಯಕರ್ತವ್ಯವು. (ತಿರುಗಿ) ಪ್ರಿಯರಾದ ವ್ಯಾಘ್ರ ಪ್ರಮುಖರೆ, ನಮ್ಮೊಳಗೆ, ಮತಭೇದಗಳು ಇದ್ದರೂ ಇರಬಹುದು. ಅದು ಪ್ರಕೃತಿಯ ಕಟ್ಟಳೆ. ಮರಗಳು, ಕುಂಜಗಳು, ಗವಿಗಳು ಹಲವಾದರೂ, ನಮ್ಮ ನೆಲೆಮನೆಯಾದ ಈ ಕಾಡೊಂದೇ ಅಲ್ಲವೆ? ಅದರಿಂದ, ಎಲ್ಲರೂ ಒಕ್ಕಟ್ಟಾಗಿ ಮೊದಲು ಲೋಕವನ್ನೂ ನಕ್ಷತ್ರಪತಿಯನ್ನೂ ಬಗ್ಗುಬಡಿಯಬೇಕು.

ವ್ಯಾಘ್ರ: —(ಭೂಮಿ ಬಾಯಿಬಿಡುವಂತೆ ಬಾಯಿಬಿಟ್ಟು) ಸಿಂಹರಾಜನೆ, ಅದಕ್ಕೇನು ಸಂದೇಹವು? ಆ ನಾಡವರು, ನಮಗೆ ಕೊಡುತ್ತಿರುವ ಕೋಟಲೆಯೆಂದರೆ ಕೋಟಿ ಕೋಟಿ. ನಮ್ಮ ಮೃಗಜಾತಿಗೆ ಸೇರಿದ, ನಮ್ಮ ಹಲವು ಮಂದಿ ಬಂಧುಬಾಂಧವರನ್ನು, ಮೊದಲೆ ಸೆರೆಯಲ್ಲಿಟ್ಟವರು ಯಾರು? ನಾವ ಬಹುಕಾಲ ಮೊದಲ್ಗೊಂಡು ಮನಮೆಚ್ಚಿದಂತೆ ಪಳಗಿಸಿ, ಸ್ವಾತಂತ್ರ್ಯದ ದೈವೀ ಪ್ರಸಾದವನ್ನೆ ಮರೆಯಿಸಿ, ಅವರನ್ನು ಕೈಮರಿಗಳನ್ನಾಗಿ ಮಾಡಿದವರಾರು!? ಎಲ್ಲ ಆ ನೀಚಲೌಕಿಕರೆ. ಕಡೆಗೆ, ಆ ನಮ್ಮವರಿಗೆ 'ನಾಡಜಂತುಗಳು' ಎಂಬ ಹೆಸರಿಟ್ಟಿದ್ದಾರೆ. ಆದರೆ, ಆ ನಾಡಲ್ಲಿಯೂ ಅವರಿಗೆ ಇನ್ನೂ ಬಿಡುಗಡೆ ಇಲ್ಲ. ದನ, ನಾಯಿ, ಒಂಟೆ, ಕುದುರೆ ಮೊದಲಾದ ನಮ್ಮವರು ಅವರ ಊಳಿಗವನ್ನು ಮಾಡುತ್ತಿರುವುದೆಂದರೇನು! ಇರಲಿ, ಸ್ವಾತಂತ್ರ್ಯವಾದರೂ ಇದ್ದರೆ, ಮೆಣಸಿನ ಕಾರವನ್ನು ಸಕ್ಕರೆಯ ಸಿಹಿಯಿಂದ ಸೈಸುವಂತೆ ಇರಬಹುದಿತ್ತು. ಅದೊಂದಕ್ಕೂ ಎಡೆಯಿಲ್ಲ. ಇನ್ನು ಆ ವಂಚಕರಲ್ಲಿ ಹಲವರು 'ಗೋವುಗಳೆಂದರೆ ನಮ್ಮ ದೇವತೆಗಳು' ಎಂದು ಹೇಳಿಕೊಳ್ಳುತ್ತಾರೆ. ಆದರೆ, ಪಾಲಿನ ವಿಷಯವು ಬಂದೊಡನೆ, ಆ ದೇವತೆಗಳ ಕರುಗಳ ಕೊರಳಿಗೆ ಹಗ್ಗವೆ ದೇವತಾರಾಧನೆ. ಇಷ್ಟಲ್ಲದೆ 'ಗೋಹತ್ಯಕಾರರು' ಎಂದು ನಮ್ಮಲ್ಲಿ ಬೇರೊಂದು ಆಕ್ಷೇಪವಿದೆ. ಆದರಿಂದ, ನಮ್ಮನ್ನು, ಗುಂಡಿನ ಬಾಯಿಗೆ ಕಟ್ಟುತ್ತಾರೆ. ಆಗಾಗ ನಮ್ಮ ಈ ಮನೆಯನ್ನು ನುಗ್ಗಿ ಸೂರೆಮಾಡುವುದಲ್ಲದೆ, ನಮ್ಮ ಮರಿಮಕ್ಕಳನ್ನೂ ಹಿಡಿದುಕೊಂಡು ಹೋಗುತ್ತಾರೆ. ನಮ್ಮ ಈ ಕಾಂಡೆಂಬ ಮನೆಯನ್ನು ಮುರಿದು ತಮ್ಮ ಮನೆಗಟ್ಟುತ್ತಾರೆ. ಇದೆಂಥ ಅನ್ಯಾಯ?

ಬಂಧುಗಳನ್ನು ಮರೆತು ಹಗೆಗಳಲ್ಲಿ ಆಳಾಗಿ, ನಮ್ಮ ವಂಶಕ್ಕೇ ಕಳಂಕವನ್ನು ತರುವ ಆ ದನಗಳನ್ನು ಶಿಕ್ಷಿಸುವುದು ನಮ್ಮದೆ ಧರ್ಮವು. ಹೊಳೆನೀರಿಗೆ ದೊಣ್ಣೆಯ ಅಪ್ಪಣೆಯೇನು? ಅದೂ ಬೇಡ. ಅವರೊಳಗೇ ಹಲವರು ಆ ದೇವತಾಸ್ವರೂಪಿಗಳಾದ ಗೋವುಗಳನ್ನು ಕಡಿದು, ಬಾಯಿಗೆ ಗಿಡಿಯುತ್ತಿರುವುದನ್ನು, ಆ ಧರ್ಮರಕ್ಷಕರು ಯಾಕೆ ಕಂಡೂ ಕಾಣದಂತಿರುವುದು? ಆದರಿಂದ, ಅವರ ಧರ್ಮಾಚರಣೆಯೆಂದರೆ 'ಬಗ್ಗಿದವನಿಗೆ ಒಂದು ಗುದ್ದು ಹೆಚ್ಚು' ಎಂಬಂತೆಯೆ ಸರಿ. ಅಂಥ ದುಷ್ಟಲೋಕವನ್ನು ಮುರಿದುಬಡಿಯಲೆ ಬೇಕು. ಅದಕ್ಕೆ ಹಲವರೇಕೆ! ಅಪ್ಪಣೆಯಾದರೆ, ಕೂಡಲೆ ಊರಿಗೆ ದಾಳಿಯಿಟ್ಟು, ಆ ದುಷ್ಟರನ್ನು ಕೊಂದು [illegible] ಜಯಭೇರಿಯೊಡನೆ ಬರುತ್ತೇನೆ.

[illegible]:—[illegible] ಆದರೂ ಹಿತ [illegible] ದೇರೆ. [illegible] ಬಲೆ [illegible]

[illegible]

[illegible]

[illegible]

ಜಂಬುಕ:—ಬುದ್ಧಿ, ಹೇಳುತ್ತೇನೆ. ಆದರೆ 'ಹಿಂದಿದ್ದರೆ ಒದೆತ, ಮುಂದಿದ್ದರೆ ತುತ್ತು' ಎಂಬುದು ಹೆಚ್ಚಾಗಿ ಈಗಿನ ಅರಸರ ರೀತಿ. ಆದರಿಂದ, ಕಂಡುದನ್ನು ಕಂಡಂತೆ ಹೇಳಲಿಕ್ಕೆ ಸ್ವಲ್ಪ ಭಯವಾಗುತ್ತದೆ.

ಸಿಂಹ:—ಅದೇನೂ ಇಲ್ಲ. ನಿನ್ನ ಪೂರ್ವಜರಂತೆ, ನೀನೂ ಬಗೆಬಾಯಿಗಳಿಂದ ಸಹಾಯಕನಾಗಲೇ ಬೇಕು. ಕೆಲಸದ ಬಂಡಾರಕ್ಕೆ ಎನಿಕೆಯೆ ಬೀಗದ ಕೈಯಲ್ಲವೆ?

ಜಂಬುಕ:—ಇದೀಗ ಕೋಲುಬೇಲಿಯಿಲ್ಲದ ರಾಜಮಾರ್ಗವು. ಕೇಳು. ಮೊದಲು ನಮ್ಮೆಣಿಕೆಯನ್ನೆ ಬಲಪಡಿಸಿಕೊಳ್ಳಬೇಕು. ಎಂದರೆ—ಆಡಳಿತದ ರೀತಿ, ಪ್ರಜೆಗಳೆಲ್ಲರಿಗೂ ಮೆಚ್ಚಿಕೆಯಾಗಿರಬೇಕು. ಮೇಲಾಳುಗಳಿಗೆ, ಎಲ್ಲರಲ್ಲಿಯೂ ಸಮದೃಷ್ಟಿಯಿದ್ದರೇ ಅದು ಸಾಗುವುದು. ಹಾಗಿಲ್ಲದೆ, 'ಈ ಕೆಲಸದಲ್ಲಿ ಮಾತ್ರ ನೀವು ನಮಗೆ ಸಹಾಯಕರಾಗಬೇಕು' ಎಂದರೆ, ಆ ಕೀಳುತರಗತಿಯವರು ಒಪ್ಪುವರೆ? ಕಷ್ಟಕಾಲದಲ್ಲಿ ಕೈಗೊಟ್ಟವನನ್ನು, ಇಷ್ಟನೊರಗಿದಾಗ, ಸಮ್ಮಾನದ ಹಿಟ್ಟಾಗಿಸಬಾರದು. ಐಕಮತ್ಯವೆಂಬುದು, ಒತ್ತಾಯದಿಂದ ಕಡ ಸಾಗದು. ಒಳಗೊಳಗಿನ ಬಿರುಕಿಗೆ ಮಣ್ಣುಮೆತ್ತದೆ, ಮೇಲುಮೇಲಿಂದ ಸಾರಣೆಮಾಡಿದರೆ ಹೇಗಾದೀತು? ನಿನ್ನ ಉದಾರಮತದಂತೆ, ದೊರೆಯಾದ ಅಂಧಕಾರನ ಅಭಿಪ್ರಾಯವೂ ಇರುವುದಾದರೆ ಕಾರ್ಯಸಿದ್ಧಿ ಕೈಗೆ ಬಂದಂತೆಯೆ ಸರಿ.

ಅಂಧಕಾರ:—ಹೌದು, ನನ್ನೊಳಗಿನ ಪ್ರಜೆಗಳೆಲ್ಲರೂ, ತಾಯಮಡಿಲ ಮಕ್ಕಳಂತೆ, ಅವರವರ ಯೋಗ್ಯತಾನುಸಾರವಾಗಿ, ಏಕರೀತಿಯಿಂದ ಸುರಕ್ಷಿತರಾಗಬೇಕು.

ವ್ಯಾಘ್ರ:—(ಕೋಪಿಸಿ) ದೊರೆಯೆ, ಭೇದಬುದ್ಧಿಯ ಬೀಜವಾದ, ಈ ನರಿಯ ಮಾತಿಗೆ ಏನೆಂದು ಹೇಳಬೇಕು! ಸಮಭಾವವೆಂಬುದು, ನಮ್ಮಲ್ಲಿ ಈಗಲ್ಲ ಆಗಲ್ಲ; ಅದಿಯಿಂದಲೆ ಹುಟ್ಟಿರುವುದು. ಲೋಕದ ಆ ಪಕ್ಷಪಾತಬುದ್ಧಿಯ ನಿಗ್ರಹಕ್ಕಾಗಿಯೆ, ನಾವು ಇಷ್ಟೆಲ್ಲ ಯೋಚಿಸುವುದು. ಪ್ರಜೆಗಳಿಗೆ ಅಸಂತೋಷವುಂಟಾಗಬಾರದೆಂದು, ನಾವು ಕೈಲಾದಷ್ಟು ಪ್ರಯತ್ನಿಸುತ್ತೇವೆ. ಸುಲಭವಾಗಿ ಒದಗತಕ್ಕ ಕಾಡಜಂತುಗಳನ್ನೂ ಬಿಟ್ಟು ನಾಡವುಗಳನ್ನೆ ತಿನಿಸಿಗಾಗಿ ಅರಿಸುವುದು ಮತ್ತೇಕೆ? ನನ್ನಾಕೆ, ಈ ಪ್ರಜೆಗಳ ಹಿತಕ್ಕಾಗಿ, ಹುಟ್ಟಿದ

ಮರಿಯನ್ನಾದರೂ ತಿಂದು ಹೊಟ್ಟೆಹೊರೆಯುತ್ತಾಳೆಂಬುದು ಜಗತ್ಪ್ರಸಿದ್ಧವಾಗಿದೆ. ಇದಕ್ಕಿಂತಲೂ ಅಧಿಕವಾದ ಪ್ರಜಾವಾತ್ಸಲ್ಯವೆಂದರೇನು? ಇನ್ನು, ಒಂದೊಂದು ಕಷ್ಟಕಾಲಗಳಲ್ಲಿ, ಇಂಥ ಮುಂದಾಳುಗಳ ರಕ್ಷಣೆಗಾಗಿ ತಮ್ಮ ಮೆಯ್ಯನ್ನಾದರೂ ಕೊಟ್ಟು, ಅದರಿಂದ, ನಮ್ಮ ಸಮಾಜೋದ್ಧಾರದ ಕೀರ್ತಿಯನ್ನು ಕಟ್ಟಿಕೊಳ್ಳುವುದು, ಹಿಂದಾಳುಗಳ ಧರ್ಮವು. ಇಂಥ ದೃಷ್ಟಾಂತವು ಆ ಊರಲ್ಲಿಯೂ ಬೇಕಾದಷ್ಟಿದೆ. ಎಂದಮೇಲೆ, ಸಂದೇಹದ ಸೆರೆಯೂ ಇಲ್ಲದೆ, ಈ ಜಂಬುಕ ಬರಿಗೆ, ಆ ಅಯುಂವಿಶೇಷದ ಪ್ರಶ್ನೆಯು ಉಳಿಯುನ್ನು, ಹೆಟ್ಟಿದುದೇಕೆ?

ಕಪಿ: — ([illegible]) [illegible], ಒಂದಿಷ್ಟು, ಮೇಲೆ ಕಣ್ಣಿಟ್ಟು ಕಿವಿಗೊಡಿರಿ. ನಮ್ಮ [illegible] ಹೊರಗಿನವರಿಗೆ, ಹೊಕ್ಕು [illegible] ಅದರಿಂದ, ಬಡವರೆ ಅಧಿಕ [illegible] ನರಿ [illegible] ಹುಲಿಯು ಹೊಟ್ಟೆಸಾಡಿನ [illegible] ಹೋಗುವುದು ನಾಲಗೆಯ [illegible] ಬೇಕಷ್ಟು ದೃಷ್ಟಾಂತ [illegible] ಬಾಳಂತಿಮುದ್ದಿ [illegible] ಸರ್ವಸಮ [illegible] ಮುಟ್ಟುವುದಿಲ್ಲ? [illegible] ಮರದಿಂದ ಮರಕ್ಕೆ [illegible] ಹಾರು [illegible] ಸ್ಥಿರಿಸದೆಯೆ, [illegible] ಇದಕ್ಕಾಗಿಯೆ, [illegible] ಹೊಟ್ಟೆ [illegible] [ಆ [illegible] ನರಿಯು [illegible] ಮಾಡುವುದೇನು? [illegible]

ಇಳಿಯಬೇಕಷ್ಟೆ. ಮೊದಲು ಕೈ, ಅದು ಮುಟ್ಟದಿದ್ದರೆ ನಾಲಗೆಯಾದರೂ ನೀಡುವುದು ನೀಚರ ಸ್ವಭಾವವು.]

ಹುಲಿ: — (ಗುಡುಗುಡಿಸಿ) ಆಃ, ನಿನ್ನ ನೆತ್ತರನ್ನು, ಈಗಲೆ ಕುಡಿಯಬೇಕಿತ್ತು!

ಕಪಿ: — ಉಃ, ಏನುಮಾಡಲಿ, 'ಕೈನಿಲುಕದಷ್ಟು ದೂರವಾಯಿತಲ್ಲ' ಎಂದಲ್ಲವೆ ಚಿಂತೆ? ಇದಕ್ಕೇ ನಾವು ಇಷ್ಟು ಎತ್ತರದಲ್ಲಿರುವುದೆಂದು ಗೊತ್ತಾಯಿತೆ?

ಹುಲಿ: — ಆಗಲಿ, ನೀನೆಲ್ಲಿ ಹೋಗುವೆ? ನೋಡೋಣ.

ಕಪಿ: — ಮತ್ತೆಲ್ಲಿ? ಮರದಿಂದ ಮರಕ್ಕೆ. ಚೆನ್ನಾಗಿ ನೋಡಬಹುದು.

ಹುಲಿ: — ಏನು, ಈ ಮರಕ್ಕೆ ಹತ್ತಕೂಡದೊ?

ಕಪಿ: — ಒಂದುವೇಳೆ ಹತ್ತಿದರೂ, ನನ್ನಂತೆ ಹಾರಕೂಡದು.

ಹುಲಿ: — ಇರಲಿ; ನಮ್ಮದೆಲ್ಲ ಅನ್ಯಾಯವು. ಆ ಮನುಷ್ಯರು ಸೊಂಟಕ್ಕೆ ಹಗ್ಗ ಹಾಕಿ, ಕೇರಿಕೇರಿಗಳಲ್ಲಿ ನಿಮ್ಮನ್ನು ಕುಣಿಸುವುದು ನ್ಯಾಯವಷ್ಟೆ.

ಕಪಿ: — ಸೊಂಟಕ್ಕೆ ಹಗ್ಗಹಾಕಿದರೂ, ನಿಮ್ಮಂತೆ ಕೊರಳಿಗೆ ಬಾಯಿಹಾಕುವ ಅಪಾಯವಿಲ್ಲವಲ್ಲವೆ? ಹುಟ್ಟುಗುರುಡನಿಗಿಂತ ಒಕ್ಕಣ್ಣನಾಗಿರುವುದೆ ವಾಸಿ. [ಈಗ ವ್ಯಾಘ್ರನ ಮನಸ್ಸು 'ಮುಯ್ಯಿಗೆ ಎಡೆ ಎಲ್ಲಿ?' ಎಂದು ಹುಡುಕುತ್ತಿತ್ತು. ಆ ಮರದ ತೊಗಟೆ ನುಣುಪಾಗಿಯೂ, ಉಗುರುನಾಟದಂತೆ ಗಟ್ಟಿಯಾಗಿಯೂ ಇದ್ದುದರಿಂದ ಹತ್ತಲಿಕ್ಕೂ ಸಾಧ್ಯವಿಲ್ಲ. ಆದಕಾರಣ ಕೈಯೂ ಇಲ್ಲ ಬಾಯೂ ಇಲ್ಲ. ಮರದ ಬುಡವನ್ನೆಲ್ಲ ಕೀರಿ ಎದೆಗಾಣದೆ ಸಿಟ್ಟು ತಿರುಗಿತು. ಆಮೇಲೆ ಅದು ಎಲ್ಲಿ ಹೊಗಬೇಕು? ಬಾದರಾಯಣಸಂಬಂಧ ಹಿಡಿದು, ಹೀಗೆ ಚರ್ಚೆಗೆ ಮೊದಲುಮಾಡಿದ ತನ್ನಲ್ಲಿ ಆಸಿಟ್ಟು ಇರಬಹುದೆಂದು ನರಿ ಊಹಿಸಿತು. ನರಿಯು ಕಲಿಕೆಗೆ ಬೆನ್ನುಂಟೆ?]

ಜಂಬುಕ: — ಹುಲಿಯಣ್ಣ, ಬಾವಿಯ ಕಪ್ಪೆಯಂತಿರುವ ಈ ಮರದ ಮಂಗನ ಮಾತಿಗೆ ಬೆಲೆಯುಂಟೆ? ಮೇಲಾಳುಗಳ ವಿಚಾರವು, ಕೀಳಾಳುಗಳೆಲ್ಲರಲ್ಲಿಯೂ ಸರಿಯಾಗಿ ಹಬ್ಬುವುದರಿಂದ, ಅದು ಮೆಲ್ಲಮೆಲ್ಲನೆ ಜರಗಬೇಕೆಂಬುದು ಖಂಡಿತವು. ಆದರೆ, ಸ್ವಾರ್ಥದಲ್ಲಿ ಮಾತ್ರ ಕಣ್ಣಿರುವ ಇಂಥ ಅಲ್ಪರಿಗೆ ಅದು ನಿಮ್ಮ

ದುರುದ್ದೇಶವೆಂದು ತೋರಬಹುದು. ‘ಮನೆಕಟ್ಟಿದವನೆ ಬಲ್ಲ, ಮದುವೆಮಾಡಿದವನೆ ಬಲ್ಲ’ ಎಂಬ ನಾಡವರ ಮಾತಿನಂತೆ, ಯಜಮಾನಿಕೆಯ ಕಷ್ಟವನ್ನು ಬಲ್ಲವರೆ ಬಲ್ಲರು. ಇಂಥ ಅಲ್ಪರ ಅಪವಾದಗಳನ್ನು, ನಿಮ್ಮಂಥ ದೊಡ್ಡವರು ಮನಮುಟ್ಟಿಸಿಕೊಳ್ಳಬಾರದು. ಮಂಗಗಳು ಮಾತ್ರ ಮರಹತ್ತಿದರೂ, ಹಲವು ಅಬಲಜಂತುಗಳು ನಿಮ್ಮ ಕಾಲಡಿಯಲ್ಲೆ ಸುಖವಾಗಿ ಬಾಳಿಕೊಂಡಿಲ್ಲವೆ? ಎಲ್ಲದಕ್ಕಿಂತಲೂ ಹೆಚ್ಚಾಗಿ, ಅಶಕ್ತನಾದ ನನ್ನನ್ನು ತಮ್ಮವನೆಂಬ ಅಕ್ಕರೆಯಿಂದ ಮಂತ್ರಿಪದವಿಯಲ್ಲಿ ನೇಮಿಸಿದ, ಒಂದೇ ಒಂದು ದೃಷ್ಟಾಂತವು ನಿಮ್ಮ ಸಮದೃಷ್ಟಿಯನ್ನು ಸಮರ್ಥಿಸುತ್ತಿದೆ. ನಾನು ಮೊದಲು ಹೇಳಿಕೊಂಡುದಾದರೂ ನಿಮ್ಮ ತಪ್ಪಕ್ಕೆ ಕಂಡಲ್ಲ. ನಮ್ಮೊಳಗೆ ಏನಾದರೂ ಕುಂದಿದ್ದರೆ ಮೊದಲೆ ನಿವಾರಿಸಿಕೊಳ್ಳಬೇಕೆಂಬ ಎಂಬುದೊಂದೆ ಮಾತ್ರವೆ. ನಿಮ್ಮ ಉತ್ತರವಾದರೂ ಅರ್ಥಗರ್ಭಿತವಾಗಿಯೇ ಇತ್ತು.

ವ್ಯಾಘ್ರ:—([illegible]) [illegible], ಚೆನ್ನಾಗಿ ಹೇಳಿದೆ. ನೀನು ಇಷ್ಟರ [illegible]. [illegible] ಈಗಲೆ ನೇರಾ [illegible] ಕ್ಷಮಿಸು. [illegible] ಸಮಾಧಾನವು, [illegible].

ಜಂಬುಕ:—([illegible]) [illegible] ಈ ಮಾತಿನ [illegible] ಅದು [illegible] [illegible]!

ವ್ಯಾಘ್ರ:—[illegible], [illegible].

ಜಂಬುಕ:—[illegible], [illegible].

ಆದರೆ ಅದೆಲ್ಲ ಸುಳ್ಳೆಂದು ಈಗ ಪ್ರತ್ಯಕ್ಷಸಿದ್ಧವಾಗುವಂತಿದೆ. ಆ ಸದಾಗತಿ ಮೈಮರೆಯಿಸಿಕೊಂಡು, ಮಿಂಚುಹುಳುಗಳ ಅವತಾರವನ್ನು ಧರಿಸಿದ ತೇಜಸ್ವಿಯೊಡನೆ ಸೇರಿ ಈಕಡೆಗೆ ಬೀಸುತ್ತಿದ್ದನು. ಆದರೆ, ನಮ್ಮ ಅಂಧಕಾರನ ಎಡೆಯಲ್ಲಿ, ಅವರಿಗೆ ಸ್ಥಿರವಾದ ಆಶ್ರಯವು ಸಿಕ್ಕಲಿಲ್ಲ. ಅದರಿಂದ ಮುಂದಾಳುಗಳಾದ ನಿಮ್ಮೆಲ್ಲರ ಉಸಿರುಗಳಲ್ಲಿ ಸದಾಗತಿಯೂ, ಕಣ್ಣುಗಳಲ್ಲಿ, ಮಿಂಚುಹುಳುಗಳ ರೂಪದ ತೇಜಸ್ವಿಯೂ, ಗೊತ್ತಾಗದಂತೆ ಮನೆಮಾಡಿರುತ್ತಾರೆ. ಅದೋ, ನಿನ್ನ ಕಣ್ಣುಗಳಲ್ಲಿ, ಮಿಂಚುಹುಳುಗಳು ಕೆಂಪು ಕೆಂಡಗಳಂತೆ ಮಿನುಗುಟ್ಟುತ್ತವೆ. ಆ ನೀಚರು ನಿಮ್ಮಲ್ಲಿ ಮಾತ್ರವಲ್ಲ; ನಮ್ಮ ಕಣ್ಣುಗಳಲ್ಲಿಯೂ ಹೊಕ್ಕಿರಬಹುದು. ಆದರೆ, ಕಳ್ಳರು ದೊಡ್ಡವರ ಮನೆಗಳಿಗೇ, ಹೆಚ್ಚಾಗಿ, ಕನ್ನಹಾಕುವಂತೆ, ಹುಲಿ ಸಿಂಹ ಮೊದಲಾದ ಮುಖಂಡರನ್ನೇ ಹೆಚ್ಚಾಗಿ ಪ್ರವೇಶಿಸಿದ್ದಾರೆ. ಒಬ್ಬೊಬ್ಬರಲ್ಲಿಯೂ ಇದ್ದು ಭಿನ್ನಭಿನ್ನವಾದ ಯೋಚನಾಭಿಪ್ರಾಯಗಳನ್ನು ತೋರಿಸುವುದೆ ಅವರ ಉದ್ದೇಶವು. ಅದರಿಂದಲೆ, ನಮ್ಮಲ್ಲಿ, ಒಬ್ಬನಿಗೆ ಒಂದು ಅಭಿಪ್ರಾಯವಾದರೆ, ಇನ್ನೊಬ್ಬನಿಗೆ ಮತ್ತೊಂದು ತಲೆದೋರಿ, ಹೀಗೆ ಮನಃಕ್ಲೇಶವುಂಟಾಗುವುದು. ಅದಕ್ಕಾಗಿ, ಅವರನ್ನು ಈಗಲೆ, ನಾವೆಲ್ಲರೂ ಕಿತ್ತೊಗೆಯಬೇಕು. [ಈ ಮಾತನ್ನು ಕೇಳಿದ ಕೂಡಲೆ, ಹುಲಿ ಸಿಂಹ ಮೊದಲಾದ ಮೂಢಪ್ರಾಣಿಗಳು ಮಹಾಕೋಪದಿಂದ ‘ಅಃ, ನೀಚರೆ, ತೇಜಸ್ವಿಸದಾಗತಿಗಳೆ, ಸಿಕ್ಕಿದಿರಿ’ ಎಂದು ಗುಡುಗುಡಿಸಿ ಗರ್ಜಿಸಿ, ತಂತಮ್ಮ ಕಣ್ಣುಗಳನ್ನು ಕುಕ್ಕಿ ಬಿಕ್ಕಿದುವು. ಸುಗ್ರೀವನನ್ನು ಹಿಡುಕೊಂಡು ಹೋದ ಕುಂಭಕರ್ಣನ ಕಾರ್ಯದಷ್ಟು ಸತ್ವತ್ವವು ಇಲ್ಲಿಲ್ಲದಿದ್ದರೂ, ಪ್ರತಿಫಲವು, ಅದಕ್ಕಿಂತಲೂ ಅಧಿಕವಾಗಿಯೆ ಆಯಿತೆನ್ನಬಹುದು. ಅಲ್ಲಿ ಮೂಗು ಬಾಗವಾಯಿತು, ಇಲ್ಲಿ ಕಣ್ಣಿಗೆ ಸೊನ್ನೆ ಮುಟ್ಟಿತು. ಒಡನೆಯೆ ಉರಿಬೇನೆಗಳು ಏರಿದುವು. ಆಗ ನರಿಯೂ, ಅದರ ಅನುಯಾಯಿಗಳೂ ‘ಹಾ! ಒಳಹೊಕ್ಕು ತಲೆಬಡಿವ ಘಾತಕರೆ, ಜೀವಹೋದರೂ ಸರಿ. ನಿಮ್ಮನ್ನು ಕಿತ್ತೊಗೆವುದೆ ನಿಶ್ಚಯವು’ ಎಂದು ಚೀರುತ್ತ ಓಡಾಡಹತ್ತಿರುವು.]

ಸಿಂಹಾದಿಗಳು:—(ಚೀರುತ್ತ) ಮಂತ್ರಿ, ಇದೇನು ಉರಿ ಏರುತ್ತಲೆ ಇದೆ?

ಜಂಬುಕ:—(ದೂರದಿಂದ) ನಮಗೂ ಹಾಗೆಯೆ ಆಗುತ್ತಿದೆ. ಅದೊಂದು ಅಪಾಯಕರವಲ್ಲ. ಬೀಗಿದ ಬಾವು, ಕೀವುತುಂದಿ ಸಿಳಿತವೇರಿದರೆ, ಕೂಡಲೆ ಒಡೆದು ಸೋರಿ ವಾಸಿಯಾಗುವುದು. ಹಾಗೆಯೆ, ತನ್ನ ಒಳಸಂಚು ಬಯಲಾಯಿತೆಂದು ನಿರಾಶನಾಗಿ ತೇಜಸ್ವಿ ಈ ರೀತಿಯಲ್ಲಿ ಚುಚ್ಚುತ್ತಿರುವುದು.

ಆದರೆ, ಆತನ ಆಪ್ತನಾದ ಸದಾಗತಿಯನ್ನು, ಇನ್ನೂ ನಾವು ಶ್ವಾಸಕೋಶಗಳಲ್ಲಿ ಹೊಕ್ಕು ಹೊರಡಿಸಿ ಮನ್ನಿಸುತ್ತಿರುವುದರಿಂದ, ಅವನಿಗೆ, ತನ್ನ ಆ ಮಿತ್ರನ ಸಹಾಯವು ಈಗಲೂ ಇದೆ. ವಂಚಕಸದಾಗತಿಯೆ, ತೇಜಸ್ವಿಗೆ, ಒಳಗೊಳಗೆ ಕೈಗೊಟ್ಟು ಹೀಗೆ ಪೀಡಿಸುತ್ತಾನೆ. ಕೇಳಿರಿ, ನಾಡಿನ ಸಂಸಾರಾಗ್ನಿಯನ್ನು ಸ್ಪರ್ಶಿಸದೆ ಕಾಡಿಗೆ ಬಂದರೂ, ಯೋಗಿಗಳು ಶ್ವಾಸ (ಸದಾಗತಿ) ಗಟ್ಟಿಯೆ ಸುಖಿಗಳಾಗುವುದು. ಅದರಂತೆ, ನಾವೂ ಉಸುರಗಟ್ಟಿ, ಅವನನ್ನು ಅಟ್ಟಬಿಡಬೇಕು. ಹಾಗಾದರೆ, ಬೇನೆಯುರಿಗಳೆಲ್ಲ ತಣ್ಣಗಾಗಿ ಮುಂದಣ ಕೆಲಸವೆಲ್ಲ ತನ್ನಷ್ಟಕ್ಕೆ ತಾನೆ ನೆರವೇರುವುದು, [ನರಿಯ ಮಾತನ್ನೆ ಬ್ರಹ್ಮವಾಕ್ಯವೆಂದೆಣಿಸಿ ಘಾತುಕಪ್ರಾಣಿಗಳು ಉಸುರುಗಟ್ಟತೊಡಗಿದುವು. ಆದರ ಮಾತು [illegible] ನಿಜವಾಯಿತು. ಹೇಗೆಂದರೆ— [illegible] ಬಿಗಿಹಿಡಿಯದಿದ್ದರೂ, ಕೆಲವು [illegible] ಕಂಡಿಗುಂಡಿಗಳಿಗೆ [illegible] ಎಂಬುದು ಪ್ರಸಿದ್ಧ [illegible] ಒದ್ದಾಡಿ [illegible] ಆ ಕುರುಡುಮೊರಡು [illegible] ತಣ್ಣಗೆ; [illegible] ಶಾಂತಿಶ್ಶಾಂತಿಶ್ಶಾಂತಿಃ' [illegible] ಕರಾಪ್ತನು, [illegible] ಕೆಲವು ಜಂಬುಕ [illegible] ಹುಂ, [illegible] ಅನುಸಾರವಾಗಿಯೆ, [illegible] ಕಟುಕನ [illegible] ಕಾಯ [illegible] ಒಂದು [illegible] ವಿರಪರಾಧಿ [illegible] ಆಕ್ಷೇಪಿಸಿದರೆ, [illegible] ನ್ಯಾಯವನ್ನು [illegible] ಗೊಡವೆಗ [illegible]

ಅಂತೂ ಇಂತೂ, ಆ ಕಾಡವರ ಸಂಕಲ್ಪದಲ್ಲಿ ಪುಣ್ಯಕಾಲವು ಕಳೆಯಿತು. ಘಾತುಕಪ್ರಾಣಿಗಳ ಒತ್ತಾಟವೂ ಕಳೆಯಿತು. ಪರಮಾತ್ಮನು, ದುಷ್ಟನಾಶಕ್ಕೆ ಸಿದ್ಧಮಾಡಿಟ್ಟ ಉಪಾಯಗಳಲ್ಲಿ ಇದೂ ಒಂದು. ಹಲವರು ಕಾಲದಿಂದ, ಕೆಲವರು ರೋಗದಿಂದ, ಅನ್ಯರು ಹಗೆಗಳಿಂದ, ಅನೇಕರು ಅವಗಡಗಳಿಂದ, ಬೇರೆಯವರು ತಮ್ಮವರ ಮರೆಮೋಸಗಳಿಂದ, ಇನ್ನಿರುವವರು ತಮ್ಮಿಂದಲೆ ತಾವು ಸಾವಿನ ಸಜ್ಜೆಯನ್ನು ಸಾರುತ್ತಾರೆ. 'ಯಜ್ಜನ್ಯಂ ತನ್ನಶ್ಯಂ' ಎಂಬುದನ್ನು ಯೋಚಿಸಿದರೆ, ಅದು ಒಂದು ಆಶ್ಚರ್ಯವಲ್ಲ. ವಿಕೃತಿಯ ಅವತಾರವು ತರತರವಾಗಿದ್ದರೂ, ಕಡೆಗೆ, ಪ್ರಕೃತಿಯ ಮೈ ಒಂದೆ ಸರಿ. ಬಗೆಬಗೆಯ ಬಣ್ಣಗಳ ಬಳಿತದಿಂದ ಕ್ಷಣಕ್ಕೆ ಒಬ್ಬನಾಗಿ, ರಂಗಕ್ಕೆ ಮೋರೆ ತೋರಿಸಿದವನೂ, ಕಡೆಗೆ ಮನೆಗೆ ಹೊರಡುವಾಗ ತಾನೊಬ್ಬನು ಮಾತ್ರನೆ. ಆದರೂ "ವಿಕೃತಿಮೂಲಕವಾಗಿ ಪುಣ್ಯಪಾಪಗಳನ್ನು ಮಾಡಿಸುವುದೂ, ತಕ್ಕಂತೆ ಸ್ವರ್ಗನರಕಫಲಗೊಡುವುದೂ ಪರಮಾತ್ಮನೆ. ಎಂದ ಮೇಲೆ, ನಾವೇನು ಮಾಡಲಿಕ್ಕಿದೆ?" ಎಂದು ತಪ್ಪೊಪ್ಪುಗಳೆರಡನ್ನೂ ಒಡೆಯನಾದ ಪರಮಾತ್ಮನ ಮೇಲೆ ಹೊರಿಸುವ ಯುಕ್ತಿವಾದವು ಸರಿಯಲ್ಲ. ಯಾಕೆಂದರೆ, ತನ್ನ ಮನೆಗೆ ಬರಲಿಕ್ಕಿರುವ ಅತಿಥಿಗಳ ಅನುಕೂಲತೆಗಾಗಿ ಒಳ್ಳಾರಿಗಳನ್ನು ಮಾಡಿಸುವುದೂ, ಕಳ್ಳರನ್ನು ಹಿಡಿಯಲಿಕ್ಕೆ ಸಂಚುಗಳನ್ನು ಒಡ್ಡುವುದೂ ಯಜಮಾನನ ಕೆಲಸವು. ಆದರೆ, ಅವರವರಿಗೆ ಆಯಾಬದ್ಧಿಗಳನ್ನು ಕೊಡುವುದೂ ಅವನ ಕರ್ತವ್ಯವಲ್ಲ. 'ಬುದ್ಧಿಃ ಕರ್ಮಾನುಸಾರಿಣೀ' ಎಂಬ ಹಾಗೆ, ಪೂರ್ವಕರ್ಮಾನುಸಾರವಾಗಿಯೆ ಆಯಾ ಬುದ್ಧಿ ನೆಲೆಗೊಳ್ಳಬೇಕು. ಬಿತ್ತಿದಂತೆ ಬೆಳೆಯಲ್ಲವೆ? ಆದರೆ, ಆರಾಜಮಾರ್ಗದಲ್ಲೆ ಬಂದು ತಸ್ಕರಣ ಮಾಡಿದರೆ ಬಂಧನವೇ ಮನ್ನಣೆ. ದುಷ್ಕರ್ಮಕ್ಕೆ, ಅವನೆ ಪ್ರೋತ್ಸಾಹಿಸಿ, ಆಮೇಲೆ ಅವನೆ ಶಿಕ್ಷಿಸುವುದೆಂದರೆ, ಕೆಲವು ದುಷ್ಟರಾದ ಅಧಿಕಾರಿಗಳಂತೆಯೆ ಆಯಿತು. ಲೋಕರಕ್ಷಕನಾದ ಪರಮಾತ್ಮನನ್ನು, ಆ ಅಲ್ಪರಾದ ಅಧಿಕಾರಿಗಳೊಡನೆ ಹೋಲಿಸುವುದೆಂದರೆ, ಸಿಟ್ಟು ಬೂದಿಗಳನ್ನು ಒಟ್ಟುಗೂಡಿಸುವ ಮೂಢತೆಯೆ ಸರಿ. ನಮ್ಮ ಈ ರಾಜ್ಯಗಳಲ್ಲಿ ಹಸಿಬಿಸಿಗಳು ಒಟ್ಟಿಗೆ ಹೊತ್ತಿಹೋಗುವಾಗುತ್ತಿದ್ದರೂ, ಪರಮಾತ್ಮನ ಅಖಂಡ ಸಾಮ್ರಾಜ್ಯಸಭೆಯಲ್ಲಿ ಸತ್ಯವೇ ಸಾವಿಲ್ಲದ ಸಭಾಹಿತನು. ನಮ್ಮಲ್ಲಿ, ಸತ್ಯದ ಕಿಡಿಯ ಸುತ್ತಲೂ ಸುಳ್ಳಿನ ಬೂದಿ ಮುಚ್ಚುವುದು ಸ್ವಭಾವವಾದ ಕಾರಣ, ಅದು ಕ್ರಮೇಣ, ಆ ಕಿಡಿಯನ್ನು ಸವೆಯಿಸುತ್ತ ಬರುತ್ತದೆ. ಸ್ವಾರ್ಥಿಗಳಾದ ಮಂತ್ರಿಗಳಿಗೆ ಒಳಗಾದ ಮುಖಂಡರ ಗತಿಯೂ ಹಾಗೆಯೆ.]

ಪಂಚಮಾಂಕ.

[ನಾದವರಿಗೆ ಎಡೆಗೊಡುವಂತೆ ಕಾಡವರ ಕಟ್ಟೆ ಅಳಿಯಿತು. ಶುಭೋದಯದ ಡಂಗುರಸಾರುವಂತೆ ಕೋಳಿಯ ನೀಳದ ಕೂಗು ಕೇಳತೊಡಗಿತು. ಒಡನೆ, ಗುರುವನ್ನು ಅನುಸರಿಸಿ ಹಾಡುವ ಶಿಷ್ಯರ ಪಾಠದಂತೆ, ನೂರಾರು ಹುಂಜಗಳು ಬಾಯ್ದೆರೆದುವು. ಆ ಬೋಧನೆಯಿಂದ ಎಚ್ಚರಿತ ಬೇರೆ ಹಕ್ಕಿಗಳೂ [illegible] 'ಚಿಂಚಿಂ' ಗುಟ್ಟಿದುವು. ಮಾತು ಮುಟ್ಟಿದ್ದ ಕೋಗಿಲೆಯು [illegible], ಗೀತಾರಂಭವಾಯಿತು. ಜಲಧರನು [illegible] 'ವ್ಯರ್ಥಾ ನಾರೀಪತಿವ್ರತಾ' ಎಂಬಂತೆ ಎಂದು [illegible] ಆಗಮನಕಾಲದ ಸುಲಕ್ಷಣದಿಂದ [illegible] ತಣ್ಣಗಾಗಿತ್ತು. ಮನೆಮನೆ [illegible] ಗಳೊಳಗೆ, ಎಷ್ಟೆ [illegible] ಸಮ್ಮುಖದಲ್ಲಿ ಎಲ್ಲರೂ [illegible] ಊರೂರೊಳಗೆ [illegible] ಪಟ್ಟಣದಲ್ಲಿ ಎಲ್ಲವೂ ಕಲೆತು [illegible]

[illegible]

ಕೂತಲ್ಲಿ ನೂರಾರು ರೂಪಾಯಿಗಳನ್ನು ಸಂಪಾದಿಸಲು ಕೈಲ್ಲಾಗದೆಯೂ, ಮತ್ತು ನಾನಾ ವಿಧನಾದ ಕೆಟ್ಟ ಚಾಲುಗಳಿಂದ ಬರಮಾಡಿಕೊಂಡ ಕೆಟ್ಟ ವ್ಯಾಧಿಗಳನ್ನು ಹೋಗಲಾಡಿಸಿಕೊಂಡು ಸುಖಸಂಪತ್ತುಗಳಿಂದಿರಬೇಕಾದರೆ ರಾಜವೈದ್ಯರ

ಬಹುಮಾನ ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದುವದರಿಂದ ತಿಳಿಯುವದು. ಇದಕ್ಕೆ ಕ್ರಯವನ್ನಾಗಲೀ ಅಂಚೆ ವೆಚ್ಚವನ್ನಾಗಲೀ ಕೊಡಬೇಡಿರಿ. ಒಂದು ಕಾಲಾಣೆಯ ಕಾರ್ಡು ಬರೆದು ನಿಮ್ಮ ವಿಳಾಸವನ್ನು ತಿಳಿಸಿದರೆ ರಾಜವೈದ್ಯರ ವೈದ್ಯವಿದ್ಯವೆಂಬ ಪುಸ್ತಕವು ನಿಮ್ಮ ಮನೆಯ ತಲಬಾಗಲಿಗೆ ಬಂದು ಸೇರುವದು.

ನಮ್ಮ ವಿಳಾಸ—ರಾಜವೈದ್ಯ ನಾರಾಯಣಜೀ ಕೇಶವಜೀ,

27, ಚೀನಾ ಬಜಾರ್, ಮದ್ರಾಸು.

ಧಾರವಾಡ ಪ್ರಸಾದ ರಾಘವ ಮುದ್ರಾಲಯ ಈ ಮುದ್ರಾಲಯದಲ್ಲಿ

ಲೋಕಬಂಧು

ಸಾಪ್ತಾಹಿಕ ವರ್ತಮಾನಪತ್ರವು ಪ್ರತಿ ರವಿವಾರ ಪ್ರಸಿದ್ಧವಾಗುತ್ತಿರುವದು.

ಬೆಲೆ ಅತ್ಯಲ್ಪ: ಟಪಾಲ ಹಾಸಲು ಸೇರಿ ೧—೧೩—೦

☞ ಇದರಲ್ಲಿ ನೋಟೀಸು, ಜಾಹಿರಾತುಗಳು ಸೋಯಿಯಿಂದ ಮುದ್ರಿಸಲ್ಪಡುವವು

ನಮ್ಮಲ್ಲಿ ಶಿಲಾಪ್ರೇಸು ಇದ್ದು ನಾಟಕದ (ಗೋಡೆಗೆ ಹಚ್ಚುವ) ಸುಂದರ ಅಕ್ಷರದ ದೊಡ್ಡ ಜಾಹೀರಾತು, ಕಿತ್ತೆ ಪಂಚಾಂಗ ಮುಂತಾದವುಗಳೂ ಇಂಗ್ಲಿಷ, ಮರಾಠಿ, ಕನ್ನಡ, ಮುಸಲ್ಮಾನೀ ಟೈಪುಗಳಿಂದ ಇತರ ಮುದ್ರಣ ಕೆಲಸವೂ ಆಗುವದು. ಅವಶ್ಯಕರು ಕೆಳಗಿನ ಪತ್ತೆಗೆ ಪತ್ರವ್ಯವಹಾರ ಮಾಡಬಹುದು ಇಲ್ಲವೆ ಸಮಕ್ಷ ಭೆಟ್ಟಿ ಆಗಬಹುದು.

ಗುರುರಾವ ರಾಘವೇಂದ್ರ ಮಮದಾಪೂರ,

ಮಾಲಕ ಪ್ರಸಾದ ರಾಘವ ಪ್ರೆಸ್ಸ, ಧಾರವಾಡ

ಅಕಬರ ಚರಿತ್ರ.

ಮ. ರಾ. ರಾ. ರಾಮಚಂದ್ರ ಹಣಮಂತ ದೇಶಪಾಂಡೆ ಎಮ್. ಎ. ಮಾಳಮಡ್ಡಿ, ಧಾರವಾಡ ಇವರು ತಿದ್ದಿ ಬೆಳೆಸಿದ ಸಚಿತ್ರವಾದ ಅಕಬರ ಚರಿತ್ರದ ಎರಡನೆಯ ಆವೃತ್ತಿಯು ಬೆಂಗಳೂರಿನಲ್ಲಿ ಅಚ್ಚಾಗುತ್ತಲಿದೆ. ಮುಂಬಯಿ, ಮದ್ರಾಸ, ಮೈಸೂರು ಪ್ರಾಂತಗಳ ಪ್ರತಿನಿಧಿಗಳು ಒಟ್ಟುಗೂಡಿ ಇದರ ಭಾಷೆಯನ್ನು ಮೂರೂ ಪ್ರಾಂತಗಳಿಗೆ ಸರಿಯಾಗುವಂತೆ ತಿದ್ದಿರುತ್ತಾರೆ. ಈ ಪುಸ್ತಕವು ಅಕ್ಷಯತೃತೀಯೆಯ (೧೩ಮೇ) ಸುಮಾರಿಗೆ ಮಾರಾಟಕ್ಕೆ ಸಿದ್ಧವಾಗುವುದು. ಮುಂಗಡವಾಗಿ ಬೆಲೆ ಕೊಡುವವರಿಗೆ ೧೨ ಆಣೆ ಮಾತ್ರ; ಹಿಂದಿನಿಂದ ೧ ರೂಪಾಯಿ ಬೀಳುವುದು. ಅಂಚೆವೆಚ್ಚ [illegible]

ಸಂಪಾದಕ ಕನ್ನಡ ಕೋಗಿಲೆ, ಮಂಗಳೂರು.

ಕನ್ನಡ ಶಿಕ್ಷಕಿ

The Kanarese Mistress.

"Educate a Woman and you educate a race."

ಸಂಪುಟ ೧. } ಜುಲೈ ೧೯೧೬. { ಸಂಚಿಕೆ ೭.

ವಿಷಯಾನುಕ್ರಮಣಿಕೆಯು.

ವಿಷಯ.	ಪುಟ.
೧. ದೇವರಿಗೆ-ಪ್ರಾರ್ಥನೆ.	೧೨೨
೨. ಕೊಲ್ಲಾಪುರ.	೧೨೩–೧೨೬
೩. ಸಹನಶೀಲತೆಯ ಪರಮಾವಧಿ.	೧೨೬–೧೪೧
೪. ಕಥೆ-೩ ಚಳಿನಾಡಿನ ಚಿಗರಿಯು.	೧೪೧–೧೪೬
೫. ಹುಡುಗಿಯರ ತಾಯಿತಂದೆಗಳ ಸಹಕಾರಿತ್ವದ ಆವಶ್ಯಕತೆಯು. ...	೧೪೭–೧೫೪
೬. ವಸ್ತುಪಾಠಗಳು.	೧೫೪–೧೫೮

ಕನ್ನಡ ಶಿಕ್ಷಕ.

" ಸ್ತ್ರೀಯರಿಗೆ ಕಲಿಸಿದರೆ ಜನಾಂಗಕ್ಕೇ ಕಲಿಸಿದಂತಾಗುವದು. "

ಸಂಪುಟ ೧. | ಜುಲೈ ೧೯೧೬. | ಸಂಚಿಕೆ ೪

ದೇವರಿಗೆ ಪ್ರಾರ್ಥನೆ.

ಧಾಟಿ:— अंकित पदाम्बुजाची दासी ॥ ಇದರಂತೆ.

ದೇವನೆ, ದಯಾನಿಧೇ ಜಗದೀಶಾ । ಕರುಣಿಸು ।
ದಯಾಂಕುರ ತೋರು, ಬೇಗನೆ । ದಯಾ ॥ ಪಲ್ಲ ॥

ಕಾಮಿತವರದಾ ।
ವಿಮಲ-ಸುಚರಿತಾ ।
ಪ್ರೇಮೋದ್ರೇಕದಿ ದೇವ ದೇವನೆ, ದಯಾ ॥ ೧ ॥

ಮೂಢತೆಯಂ ನೀ ।
ನೋಡಿಸುತಲಿ ಕಾ ।
ಪಾಡೈ, ಬೇಡುವೆನೀಗ ದೇವನೆ, ದಯಾ ॥ ೨ ॥

ವಲ್ಲಭ. ಮ. ಕಟ್ಟಿ.

ಪ್ರಿಯ ವಾಚಕರೇ,

ಇದು "ಕನ್ನಡ ಶಿಕ್ಷಕನು" ಮೊದಲನೆಯ ವರ್ಷದ ಕೊನೆಯ ಸಂಚಿಕೆಯು. ಇದಕ್ಕೆ ಈ ವರ್ಷ ೫೮೪ ವರ್ಗಣಿದಾರರಿರುವರೆಂದು ನಿಮಗೆಲ್ಲ ನಾನು ಸಂತೋಷದಿಂದ ತಿಳಿಸುವೆನು. ಮುಂದಿನ ವರ್ಷವೂ ನೀವೆಲ್ಲರು ಇದೇ ಮೇರೆಗೆ ಈ ಪತ್ರಕಕ್ಕೆ ಆಶ್ರಯ ಕೊಡುವಿರೆಂದು ನಂಬಿದ್ದೇನೆ. ಬರುವ ಅಕ್ಟೋಬರ ತಿಂಗಳಿಂದ ಇದನ್ನು ಎರಡು ತಿಂಗಳಿಗೊಮ್ಮೆ ಪ್ರಸಿದ್ಧ ಪಡಿಸಬೇಕೆಂದು ಎಣಿಸಿದೆನು; ಆದರೆ ಸದ್ಯಕ್ಕೆ ಕಾಗದದ ಬೆಲೆಯು ವಿಪರೀತವಾಗಿ ಹೆಚ್ಚಿರುವದು; ಆದ್ದರಿಂದ ಈ ವರ್ಷದಂತೆಯೇ ಮುಂದಿನ ವರ್ಷವಾದರೂ ಈ ಪತ್ರಕವನ್ನು ಮೂರು ತಿಂಗಳಿಗೊಮ್ಮೆ ಮಾತ್ರ ಪ್ರಕಟಿಸಬೇಕೆಂದು ನಿಶ್ಚಯಿಸಬೇಕಾಯಿತು. ಈ ಪತ್ರಕವನ್ನು ಓದುವದರಿಂದ ನಮ್ಮ ವಾಚಕರಿಗೆ ಉಪಯೋಗವಾಗುವದೆಂದು ನಂಬಿದ್ದೇನೆ. ಕೆಲವು ಸ್ನೇಹಿತರು ಈ ಪತ್ರಕದಲ್ಲಿ ಮಮತೆಯಿಟ್ಟು ಇದಕ್ಕೆ ಲೇಖಗಳನ್ನು ಬರೆದು ಕಳಿಸಿದ್ದಕ್ಕಾಗಿ ಅವರೆಲ್ಲರ ಉಪಕಾರವನ್ನು ಸ್ಮರಿಸುತ್ತೇನೆ. ಯಾಕೆಂದರೆ ಇವರ ಲೇಖಗಳಿಂದ [illegible] ಲೇಖಕರ ನಾಂದಿ [illegible] ನಂಬಿದ್ದೇನೆ. ಈ ಪತ್ರದ ಸಂಪಾದಕನಾದ ನಾನು [illegible] ಇವರ ಉಪಕಾರವನ್ನು [illegible] ಈ ಪ್ರಕಾರ ತೊಡಗಿಸುವರ [illegible] ಈ ಪತ್ರಕವನ್ನು [illegible] ಮುಖ್ಯವು; [illegible] ನಮ್ಮ [illegible] ಸ್ನೇಹಿತರಾದರೂ [illegible] ಲೇಖಗಳನ್ನು ಬರೆದು ಕಳಿಸಿ ನಮಗೆ ನೆರವಾಗಬೇಕೆಂದು ಕೇಳಿಕೊಳ್ಳುತ್ತೇನೆ.

F. L. McArez.

ಕರ್ನಾಟಕ ವಿದ್ಯಾವರ್ಧಕ ಸಂಘ.

ಕೊಲ್ಹಾಪುರ.

ತಾವು ಇರುವ ಊರ ಹೊರತು ಬೇರೆ ಊರುಗಳ ಬಗ್ಗೆ ಓದಬೇಕೆಂದೆನಿಸುವವರು ಈ ತ್ರೈಮಾಸಿಕದ ವಾಚಕರಲ್ಲಿ ಇರಬಹುದು. ಪ್ರವಾಸದಿಂದೊದಗುವ ಲಾಭಗಳನ್ನು ಕುರಿತು ಜನರು ಮಾತಾಡುವದನ್ನು ಕೇಳಿ ನಾವೆಲ್ಲರು ತಲೆದೂಗುತ್ತೇವೆ. ನಮ್ಮ ಹಿತವನ್ನು ಕೋರುವ ನಮ್ಮ ಸರಕಾರದವರು ಟ್ರೇನಿಂಗ ಕಾಲೇಜಗಳ ಹಾಗು ಹಾಯ್‌ಸ್ಕೂಲುಗಳ ವಿದ್ಯಾರ್ಥಿಗಳು ವರ್ಷಕ್ಕೊಮ್ಮೆಯಾದರೂ ಪ್ರವಾಸದ ಸುಖಗಳನ್ನೂ ಲಾಭಗಳನ್ನೂ ಅನುಭವಿಸಲೆಂದು ದ್ರವ್ಯಸಹಾಯವನ್ನು ಮಾಡುವರೆಂಬದು ನಮಗೆಲ್ಲ ಗೊತ್ತಿದೆ. ಕಳೆದ ಸೂಟಿಯಲ್ಲಿ ನಾವು ಮಾಡಿದ ಪ್ರವಾಸದ ವರ್ಣನೆಯನ್ನು ನಮ್ಮ ವಾಚಕರಿಗೋಸ್ಕರ ಇಲ್ಲಿ ಕೊಡುತ್ತೇವೆ- ಕೊಲ್ಹಾಪುರವು ದಕ್ಷಿಣ ಮಹಾರಾಷ್ಟ್ರದೊಳಗಿನ ಒಂದು ಸಣ್ಣ ಸಂಸ್ಥಾನದ ಮುಖ್ಯ ಪಟ್ಟಣವೆಂದು ಎಲ್ಲರಿಗೂ ಗೊತ್ತಿರುವದಷ್ಟೇ.

ಧಾರವಾಡದಿಂದ ಪುಣೆಗೆ ಹೋಗುವ ಉಗಿಬಂಡಿಯಲ್ಲಿ ಕುಳಿತು ಹೊರಟು, ಮಿರಜದಲ್ಲಿ ಗಾಡಿ ಬದಲಿಸಿ, ಸ್ವಲ್ಪದೂರ ಹೋದರೆ ಕೊಲ್ಹಾಪುರದ ಸ್ಟೇಶನ್ನವು ಬರುವದು. ಈ ಸ್ಟೇಶನ್ನದ ಬಗ್ಗೆ ವಿಶೇಷ ಹೇಳತಕ್ಕ ಮಾತು ಯಾವದೂ ಇಲ್ಲ. ಚಟುವಟಿಕೆಯಿಂದ ಓಡಾಡುತ್ತಿರುವ ಜನಸಂದಣಿಯಿಂದ ತುಂಬಿದ ಇತರ ದೊಡ್ಡ ಸ್ಟೇಶನ್ನಗಳಂತೆಯೇ ಇದೂ ಇರುವದು. ಊರೊಳಗೆ ಹೋಗಲಿಕ್ಕೆ ಸ್ಟೇಶನ್ನದ ಹೊರಗೆ ಎರಡುಕುದುರೆಯ ಟಾಂಗಾಗಳು ಬೇಕಾದಷ್ಟಿರುವವು. ಗಾಡಿ ಹೊಡೆಯುವವರು ಈ ಬಡ ಪ್ರಾಣಿಗಳನ್ನು ಎಷ್ಟು ತ್ವರೆಯಿಂದ ಓಡಿಸುತ್ತಾರೆಂಬದನ್ನು ನೋಡಿದರೆ ಬಹಳ

ಆಶ್ಚರ್ಯವಾಗುವದು. ನಿಜವಾಗಿ ಹಗಲಿರಳು ದುಡಿದು ಒಡೆಯನ ದಿನದ ಉಪಜೀವನವನ್ನು ಒದಗಿಸಿಕೊಡುವ ಈ ಮೂಕ ಪಶುಗಳನ್ನು ಮನುಷ್ಯರೆನಿಸಿಕೊಳ್ಳುವವರು ಇಷ್ಟು ನಿರ್ದಯದಿಂದ ನಡಿಸಿಕೊಳ್ಳುವದನ್ನು ನೋಡಿ ಬಹಳ ದುಃಖವಾಗುತ್ತದೆ.

ಕೊಲ್ಲಾಪುರದ ಕಟ್ಟಡಗಳ ಅಚ್ಚುಕಟ್ಟುತನವು ಮೊದಲು ಪ್ರವಾಸಿಕನ ಲಕ್ಷ್ಯದಲ್ಲಿ ಬರುವದು. ಗುಡಿಸಲುಗಳಂತೆ ತೋರುವ ಸಣ್ಣಮನೆಗಳೂ, ಚಿಕ್ಕದೊಡ್ಡ ಅಂಗಡಿಗಳೂ, ಶ್ರೀಮಂತರ ಬಂಗಲೆಗಳೂ-ಎಲ್ಲವೂ ಕಲ್ಲಿನ ಕಟ್ಟಡಗಳೇ ಇರುವವು. ಈ ಸಂಸ್ಥಾನದಲ್ಲಿ ಇಮಾರತಿಯ ಕಲ್ಲು ವಿಪುಲವಾಗಿಯೂ ಅಗ್ಗವಾಗಿಯೂ ದೊರೆಯುವದೆಂದು ಇದರಿಂದ ಗೊತ್ತಾಗುವದು. ಒಳಊರ ಬೀದಿಗಳು ಕಿರಿದಾಗಿದ್ದರೂ [illegible] ಕಾಣುವವು; ಎರಡೂ ಬದಿಗಳಲ್ಲಿ [illegible]. ಪ್ರತಿಯೊಂದು ಬೀದಿಯ [illegible] ಗೋಮುಖಾಕೃತಿಯ ನೀರಿನ [illegible] ಕಾಣುವವು. ಇದರಿಂದ ಈ ಊರಿಗೆ [illegible]. ಊರ ಸುತ್ತಲು [illegible] ಮನೋರಂಜಕವಾದ ಹಲವು ಸ್ಥಳಗಳನ್ನು [illegible].

[illegible]. ಅಲ್ಲಿಂದ [illegible] ಅವುಗಳ [illegible] ಕಾಣುತ್ತವೆ. [illegible] ಕಲ್ಲಿನ [illegible] ನೋಡಿದರೆ [illegible]. ಗುಡಿಗಳ ಹಿಂದೆ [illegible] ಬೀಳು-

ವದು. ಇವುಗಳ ಕೆಳಗೆ ಹಚ್ಚಗೆ ಹಬ್ಬಿರುವ ಹುಲ್ಲಿನ ಗದ್ದೆಗಳು ಬಹಳ ರಮಣೀಯವಾಗಿರುವವು. ರಂಕಾಳಿಯ ಕೆರೆಯು ಈ ಊರಲ್ಲಿ ನೋಡತಕ್ಕ ಸ್ಥಳಗಳಲ್ಲಿ ಒಂದಿರುವದು. ಇದು ಬಹಳ ದೊಡ್ಡದಿರುವದು. ಇದರ ಸುತ್ತಲು ಗಾಡಿಯೊಳಗೆ ಕುಳಿತು ಆರಾಮದಿಂದ ಹೋಗಲಿಕ್ಕೆ ಹಾದಿ ಮಾಡಿಸಿರುವರು. ಸರೋವರದ ದಂಡೆಗೆ ನಾಲ್ಕಾರು ಡೋಣಿಗಳು ಕಂಡವು. ಇದರಿಂದ, ಡೋಣಿಯಲ್ಲಿ ಕುಳಿತು ಜನರು ಸರೋವರದಲ್ಲಿ ವಿಹಾರಮಾಡುತ್ತಿರಬಹುದೆಂದು ತೋರುತ್ತದೆ.

ಊರೊಳಗೆ ಇತ್ತಲಾಗಿ ಕಟ್ಟಿದ ಹಲವು ಭವ್ಯವಾದ ಕಟ್ಟಡಗಳಿರುವವು. ಕೊಲ್ಲಾಪುರದ ಕಾಲೇಜವೂ, ಅಲ್ಬರ್ಟ ಎಡ್ವರ್ಡ ಆಸ್ಪತ್ರೆಯೂ, ಟೌನಹಾಲ ಎಂಬ ಸಾರ್ವಜನಿಕ ಕಟ್ಟಡವೂ ಇವುಗಳಲ್ಲಿ ಮುಖ್ಯವಾದವು. ಈ ಇಮಾರತುಗಳ ಸುತ್ತಲು ಮನೋಹರವಾದ ತೋಟಗಳನ್ನು ಬೆಳಿಸಿರುವರು. ಟೌನಹಾಲದ ಕಟ್ಟಡವಂತೂ ನೋಡತಕ್ಕದ್ದಿರುವದು. ಇದರಲ್ಲಿ ಸಂಸ್ಥಾನದ ದಿವಾಣರ ಕಚೇರಿಯು ಇರುವದು.

ಊರ ನಡುವೆ ಅಂಬಾಬಾಯಿಯ ಗುಡಿಯೆಂದು ಹೆಸರಾದ ಲಕ್ಷ್ಮಿಯ ದೇವಸ್ಥಾನವಿರುವದು. ಹಳೇ ಅರಮನೆಯು ಊರ ನಡುವೆ ಇರುವ ಮತ್ತೊಂದು ಮನೋರಂಜಕವಾದ ಕಟ್ಟಡವು. ಈ ಅರಮನೆಯು ಹಿಂದುಸ್ಥಾನದ ಹಳೇ ಕಾಲದ ಮಾದರಿಯ ರಾಜವಾಡೆಯಂತಿರುವದು. ಅಸಂಖ್ಯ ಚಿಕ್ಕ ಚಿಕ್ಕ ಕಿಡಿಕಿಗಳಿಂದ ಇದು ಬಹು ಚಂದ ಕಾಣುವದು. ಇದನ್ನು ನೋಡಿದರೆ ಪುರಾತನ ಕಾಲದ ಇತಾಲಿ ದೇಶದೊಳಗಿನ ಕಟ್ಟಡಗಳ ನೆನಪಾಗುವದು. ಈ ಹಳೇ ಅರಮನೆಯಲ್ಲಿ ಮಹಾರಾಜರ ಕಚೇರಿಯೂ, ಸಂಸ್ಥಾನದ ಇತರ ಕಚೇರಿಗಳೂ, ಖಜೀನೆಯೂ ಇರುವವು. ಇಲ್ಲಿ

ವಿಚಿತ್ರವಾದ ಒಂದು ಆನೆಯ ಗಾಡಿಯು ಇರುವದು. ಇದು ಬಹಳ ದೊಡ್ಡದೂ ಭಾರವಾದದ್ದೂ ಅದೆ. ರಾಜವಂಶದ ಮದುವೆ ಮೊದಲಾದ ಸಮಾರಂಭಗಳಲ್ಲಿ ಮೆರವಣಿಗೆಯು ಹೊರಡುವಾಗ ಇದನ್ನು ಉಪಯೋಗಿಸುವರು. ಇದರ ಮುಂಭಾಗದಲ್ಲಿ ಎತ್ತರದ ಮೇಲೆ ಒಂದು ವಿಶಾಲವಾದ ಮಂಚವಿರುವದು. ಇದರ ಮೇಲೆ ಮಹಾರಾಜರಾಗಲಿ, ರಾಜಪುತ್ರರಾಗಲಿ ಕೂಡುವರಂತೆ. ಈ ರಥಕ್ಕೆ ಹೂಡುವ ಕೆಲವು ಆನೆಗಳನ್ನು ನಮಗೆ ತೋರಿಸಿದರು.

ಮಹಾರಾಜರು ಕೊಲ್ಲಾಪುರದಲ್ಲಿರುವಾಗ ವಾಸಿಸುವ ಹೊಸ ಅರಮನೆಯು ಊರ ಹೊರಗೆ ಒಂದು ಮನೋಹರವಾದ ಸ್ಥಳದಲ್ಲಿ ಇರುವದು. ಇದನ್ನು ಹೊಸ ಮಾದರಿಯಂತೆ ಕಲ್ಲಿನಿಂದ ಕಟ್ಟಿರುವರು. ಅರಮನೆಯ ಸುತ್ತಲು ಒಂದು ಅಂದವಾದ ತೋಟವು. ಅದರ ಬೈಲಿನಲ್ಲಿ ಒಂದು ಪಶುಸಂಗ್ರಹಾಲಯವು ಇರುವದು. ಇಲ್ಲಿ ಕೆಲವು ಹುಲಿಗಳನ್ನೂ, ಸಿಂಹಗಳನ್ನೂ, [illegible] ಸಾಕಿರುವರು. ಇವೆಲ್ಲವನ್ನು ನೋಡಿದರೆ ಪ್ರವಾಸಿಕರ ಮನಸಿಗೆ ಬಹಳ ಸಮಾಧಾನವೆನಿಸುವದು. ಅರಮನೆಯ ಆಚೆಗೆ ದೂರದಲ್ಲಿ ಕ್ಯಾಂಪ ಎಂಬ ಸ್ಥಳವಿದೆ. ಅಲ್ಲಿ ಕೆಲವು ಯುರೋಪಿಯನ ದೊರೆಗಳು ಇರುವರು. [illegible] ಕಾಣುವವು. ಇದಲ್ಲದೆ ಸರ[illegible] ಕೆಲವು [illegible] ಬ್ರಿಟಿಷ್ [illegible] ಕಟ್ಟಡವು [illegible] ಕಾಣುವವು. ಈ ಭಾಗದ ಆಚೆಗೆ ಬಹು [illegible] ಕಟ್ಟಿರುವದು. ಹಾಗು ದೂರದಲ್ಲಿ ಕೆಲವು [illegible] ಗುಡ್ಡಗಳು ಕಾಣುವವು. ಇವುಗಳ ಮೇಲೆ [illegible] ಕಾಣುವ [illegible] ಹಳೇ ಕೋಟೆಗಳು

ದೃಷ್ಟಿಗೆ ಬೀಳುವವು. ಕೊಲ್ಲಾಪುರದಿಂದ ೧೦ ಮೈಲು ಆಚೆಗೆ ಅಲ್ಲಿಂದ ೯೦೦ ಫೂಟು ಎತ್ತರದಲ್ಲಿ ಇರುವ ಒಂದು ಗುಡ್ಡದ ಮೇಲೆ ಪನ್ಹಾಳಾ ಎಂಬದೊಂದು ಹಳೇ ಕೋಟೆಯು ಇರುವದು. ಅಲ್ಲಿ ನಾವು ಒಂದು ವಾರ ಇದ್ದೆವು. ಮುಂದಿನ ಸಂಚಿಕೆಯಲ್ಲಿ ಆ ಕೋಟೆಯನ್ನು ಸಂಕ್ಷೇಪವಾಗಿ ವರ್ಣಿಸುವೆವು.

F. L. Mc AFEE.

ಸಹನಶೀಲತೆಯು ಪರಮಾವಧಿ.

ಸಹನಶೀಲತೆಯು ಮನುಷ್ಯರಲ್ಲಿರತಕ್ಕ ಸದ್ಗುಣಗಳಲ್ಲಿ ಒಂದಾಗಿರುವದು. ಕೆಲವರು ಚಿಕ್ಕಪುಟ್ಟ ವಿಷಯಗಳಲ್ಲಿ ತಮಗೆ ಬಾಧೆಯಾಗದಂಥ ಪ್ರಸಂಗಗಳಲ್ಲಿ ಸಹನಶೀಲರಾಗಿರುತ್ತಾರೆ. ಎಂಥ ತೊಂದರೆ ಬಂದರೂ ಸ್ವಹಿತವನ್ನು ಬದಿಗಿಟ್ಟು ಒಡನುಡಿದ ಮಾತನ್ನು ಕೊನೆಗಾಣಿಸುವಷ್ಟು ಸಹನಶೀಲತೆಯುಳ್ಳವರು ಅಪರೂಪವಾಗಿರುವರು. ಹರಿಶ್ಚಂದ್ರ, ಭೀಷ್ಮಾಚಾರ್ಯ ಮುಂತಾದ ಮಹಾತ್ಮರು ಮೇಲಾದ ಸಹನಶೀಲರಿದ್ದರೆಂದು ಬಹು ಜನರಿಗೆ ಗೊತ್ತುಂಟು. ಈ ಗುಣವು ದೊಡ್ಡವರಲ್ಲಿ ಮಾತ್ರವಲ್ಲ; ಹಳ್ಳಿಗಾಡಿನಲ್ಲಿ ದನಕಾಯುವ ಅಶಿಕ್ಷಿತ ಸ್ತ್ರೀಯರಲ್ಲಿ ಸಹ ಇರುವದೆಂಬ ಸಂಗತಿಯು ಮುಂದಿನ ಕಥೆಯಿಂದ ತಿಳಿಯುವದು.

ಹಿಂದಕ್ಕೆ ಇತಾಲೀ ದೇಶದಲ್ಲಿ ಸಾಲೂಸವೆಂಬ ಫಲದ್ರೂಪವಾದ ಪ್ರದೇಶದಲ್ಲಿ ಒಬ್ಬ ದೊರೆ ಇದ್ದನು. ಅವನು ಸುಂದರನೂ, ಶೂರನೂ, ಸದ್ಗುಣಿಯೂ, ರಾಜನೀತಿಯಲ್ಲಿ ನಿಪುಣನೂ, ಪ್ರಜೆಗಳನ್ನು ಸಮಬುದ್ಧಿಯಿಂದ ರಕ್ಷಿಸುವವನೂ ಆಗಿದ್ದನು. ಅದರಿಂದ ಪ್ರಜೆಗಳು ಅವನಲ್ಲಿ ಪೂರ್ಣ ವಿಶ್ವಾಸವುಳ್ಳವರಾಗಿದ್ದರು. ಅರ

ಸನು ಎಲ್ಲ ವಿಧದಿಂದಲೂ ಯೋಗ್ಯನಿದ್ದನು. ಆದರೆ ಅವನು ಮದುವೆ ಮಾಡಿಕೊಳ್ಳಬಾರದೆಂದು ನಿಶ್ಚಯಮಾಡಿದ್ದನು. ಈ ನಿಶ್ಚಯವು ಅವನ ಪ್ರಜೆಗಳಿಗೆ ಸರಿದೋರಲಿಲ್ಲ. ಅವರಲ್ಲಿ ಕೆಲ ಪ್ರಮುಖರು ದೊರೆಯ ಬಳಿಗೆ ಬಂದು "ದೊರೆಯೆ, ನಿನ್ನ ಸುಖಕರವಾದ ಆಳಿಕೆಯೆಂಬ ಛತ್ರದ ನೆರಳಲ್ಲಿ ನಮಗೆಲ್ಲರಿಗೂ ನಿಶ್ಚಿಂತೆ, ನಿರ್ಭಯ, ಸೌಖ್ಯಶಾಂತಿಗಳುಂಟಾಗಿವೆ. ಆದರೆ ನಿನಗೆ ತಾರುಣ್ಯವು ಪೂರ್ಣವಾಗಿ ಪ್ರಾಪ್ತವಾಗಿದ್ದು ನೀನು ಲಗ್ನಮಾಡಿಕೊಳ್ಳದಿರುವದು ನಮಗೆ ಅಸಮಾಧಾನವಾಗಿದೆ. ತಾರುಣ್ಯವು ನಿನಗೆ ತಿಳಿಯದಂತೆ ಕಳೆದು ಹೋಗಿ ವೃದ್ಧಾಪ್ಯವು ಉಂಟಾಗಿ ಕೊನೆಗೆ ದುಷ್ಟ ಮೃತ್ಯು ಒದಗಿದರೆ ನಮ್ಮ ಗತಿಯೇನು? ನೀನು ಸಂತತಿಹೀನನಾಗಿ ನಮ್ಮನ್ನು ಬಿಟ್ಟು ಹೋದರೆ ನಿನ್ನ ರಾಜ್ಯವು ಯಾವ ಪಾಲಾಗುವದೋ ಎಂದು ದಿಗಿಲುಗೊಳ್ಳುತ್ತಿರುವೆವು. ಈ ದುಃಖನಿವಾರಣೆಗಾಗಿ ನೀನು ಲಗ್ನಮಾಡಿಕೊಳ್ಳಲೊಪ್ಪಿದರೆ ನಿನಗ ಅನುರೂಪಳಾದ ಕನ್ಯೆಯನ್ನೇ ಗೊತ್ತುಮಾಡುತ್ತೇವೆ." ಎಂದು ನಮ್ರತೆಯಿಂದ ಬಿನ್ನೈಸಿದರು.

ರಾಜನಿಗೆ [illegible] ಪ್ರಜೆಗಳ ವಿನಂತಿಯನ್ನು [illegible] [illegible] ಮನ್ನಿಸಲು [illegible]. ಅವನು "ಪ್ರಜೆಗಳೇ, ನಾನು [illegible] ನನ್ನ [illegible] ನಿಮ್ಮ ಇಚ್ಛೆಯಂತೆ [illegible] ಕನ್ಯೆಯನ್ನು ನಾನೇ [illegible] ಒಬ್ಬ [illegible]." ಎಂದು ಹೇಳಿದನು. [illegible] [illegible] ತಮ್ಮ

ತಮ್ಮ ಸ್ಥಾನಗಳಿಗೆ ತೆರಳಿದರು. ಮದುವೆಯ ಸಿದ್ಧತೆಯನ್ನು ಮಾಡಲಿಕ್ಕೆ ಅರಮನೆಯ ಅಧಿಕಾರಿಗಳಿಗೆ ಅಪ್ಪಣೆಯನ್ನಿತ್ತನು.

ರಾಜಧಾನಿಗೆ ಸಮೀಪವಾಗಿಯೇ ಒಂದು ಚಿಕ್ಕ ಹಳ್ಳಿ ಇತ್ತು. ಅಲ್ಲಿಯ ಜನರೆಲ್ಲರೂ ಬಡ ಒಕ್ಕಲಿಗರು. ತಮ್ಮ ನಿರ್ವಾಹವನ್ನು ಹೊಲಮನೆಯಿಂದಲೇ ಸಾಗಿಸುತ್ತಿದ್ದರು. ಅವರಲ್ಲಿ ಅತಿಶಯ ದರಿದ್ರನಾದ ಒಬ್ಬ ಒಕ್ಕಲಿಗನಿದ್ದನು. ಅವನಿಗೆ ಬಹು ರೂಪವತಿಯೂ, ಗುಣವತಿಯೂ ಆದ ಒಬ್ಬ ಮಗಳಿದ್ದಳು. ಆ ಕಾಲದಲ್ಲಿ ಅವಳಿಗೆ ಸರಿಯಾದವರು ಯಾರೂ ಇದ್ದಿಲ್ಲ. ಅವಳು ಬಡತನದಲ್ಲಿ ಬೆಳೆದವಳಾದ್ದರಿಂದ ಮಿತವ್ಯಯಿಯೂ, ಉದ್ಯೋಗಿಯೂ ಆಗಿದ್ದಳು. ಬೆಳಗಿನಿಂದ ಸಂಜೆಯವರೆಗೂ ಅರಗಳಿಗೆಯನ್ನಾದರೂ ಹಾಳುಮಾಡದೆ ತನ್ನ ಹೊಲದಲ್ಲಿ ಕುರಿಗಳನ್ನು ಕಾಯುತ್ತ ನೂಲನ್ನು ನೂಲುವಳು. ಮನೆಗೆ ಬರುವಾಗ ಸಾಯಂಕಾಲದ ಅಡಿಗೆಗೆ ಉರುವಲವನ್ನು ಆರಿಸಿಕೊಂಡು ಬರುವಳು. ಅವಳು ಬಿರುಸಾದ ಹಾಸಿಗೆಯ ಮೇಲೆ ಮಲಗುವಳು. ತನ್ನನ್ನು ಹೆತ್ತವರಿಗೆ ಯಾವಾಗಲೂ ವಿಧೇಯಳಾಗಿ ಭಯಭಕ್ತಿಯಿಂದ ನಡಕೊಳ್ಳುವಳು.

ದೊರೆಯು ಬೇಟೆಗೆ ಹೋಗುವಾಗ ಪ್ರತಿನಿತ್ಯದಲ್ಲೂ ಈ ಹುಡುಗೆಯ ಉದ್ಯೋಗವನ್ನೂ, ಶೀಲಸ್ವಭಾವವನ್ನೂ ನೋಡಿ, "ಲಗ್ನವಾದರೆ ಇವಳೊಡನೆಯೇ ಆಗಬೇಕಲ್ಲದೆ ಬೇರೆ ಇಲ್ಲ." ಎಂದು ಮನಸ್ಸಿನಲ್ಲಿ ನಿಶ್ಚಯಿಸಿದ್ದನು.

ಮದುವೆಯ ದಿವಸವು ಬಂದರೂ ಒಬ್ಬರಿಗೂ ಕನ್ಯೆಯ ವಿಷಯವಾಗಿ ಏನೂ ಗೊತ್ತಾಗಲಿಲ್ಲ. ಕೆಲವರಂತೂ ಆಶ್ಚರ್ಯಗೊಂಡು ದೊರೆಯು ತಮ್ಮನ್ನು ಮೋಸಗೊಳಿಸುತ್ತಾನೆಲ್ಲಿಯೋ

ಎಂದು ಚಿಂತಾಕ್ರಾಂತರಾಗಿದ್ದರು. ದೊರೆಯು ಕನ್ಯೆಗೆ ತ
ವಸ್ತ್ರಾಭರಣಗಳನ್ನು ಸಹ ಸಿದ್ಧಪಡಿಸಿದ್ದನು.

ಲಗ್ನದ ದಿವಸವು ಬೆಳಗಾಯಿತು. ಅರಮನೆಯೂ ರಾ
ಧಾನಿಯೂ ನಾನಾಪತಾಕೆಗಳಿಂದಲೂ, ಗುಡಿತೋರಣಗಳಿಂದಲೂ
ಮಂಟಪಗಳಿಂದಲೂ ಬಹುಪರಿಯಾಗಿ ಅಲಂಕರಿಸಲ್ಪಟ್ಟವು. ಅ
ಸನು ಒಳ್ಳೇ ಪೋಷಾಕು ಹಾಕಿಕೊಂಡು, ನಿಮಂತ್ರಿತರಾದ ದೊ
ದೊಡ್ಡ ಗೃಹಸ್ಥರನ್ನೂ, ಸಭ್ಯಸ್ತ್ರೀಯರನ್ನೂ, ತನ್ನ ಸರಂಜ
ಮನನ್ನು ಒಡಗೊಂಡು ಆ ಹಳ್ಳಿಯ ಮಾರ್ಗವಾಗಿ ಹೊರಟನು.
ಈ ದೊಡ್ಡ ಜನಸಮೂಹವು ಇಂಪಾದ ವಾದ್ಯಗಳೊಂದಿಗೆ ತಮ
ಬೀದಿಯಲ್ಲಿಯೇ ಬರುವದನ್ನು ನೋಡಿ, ತನ್ನ ನೀರಿನ ಕೊಡವನ್ನು
ಒಳಗಿಟ್ಟು ಕಟ್ಟೆಯ ಮೇಲೆ ನಿಂತು ಕಣ್ಣಣಿಯುವಂತೆ ನೋ
ಬೇಕೆಂದು ಹೋಗುತ್ತಿರುವಷ್ಟರಲ್ಲಿ ದೊರೆಯು ಆ ಒಕ್ಕಲಿಗ
ಗುಡಿಸಲ ಬಳಿ ನಿಂತು ಅವಳನ್ನು ಕರೆದನು. ಅವಳು ಕೊಡವನ್ನು
ಅಲ್ಲಿಯೇ ಇಟ್ಟು [illegible] ದೊರೆಯ ಪಾದಕ್ಕೆರಗಿದಳು.
“ನಿನ್ನ ತಂದೆಯು ಎಲ್ಲಿರುವನು?” ಎಂದು ಅರಸನು ಗಂಭೀ
ವಾಣಿಯಿಂದ ಅವಳನ್ನು ಕೇಳಲು “ಜೀಯಾ, ಅವನು ಮನೆಯ
ಲ್ಲಿಯೇ ಇದ್ದಾನೆ” ಎಂಬುದಾಗಿ ವಿನಯಪೂರ್ವಕವಾದ ಉತ್ತ
[illegible]

ತಾನಾಗಿ ಅಳಿಯನಾಗಲೊಪ್ಪಿದರೆ ಯಾರಿಗೆ ಆನಂದಾಶ್ಚರ್ಯಗ
ಳುಂಟಾಗಲಿಕ್ಕಿಲ್ಲ! ತಮ್ಮ ಪ್ರೀತಿಯ ಮಕ್ಕಳನ್ನು ಭಾಗ್ಯವಂತರ
ಮನೆಗೆ ತಕ್ಕ ವರನಿಗೆ ಕೊಡುವ ಆಶೆಯು ಯಾವ ತಂದೆಗಿರಲಿ
ಕ್ಕಿಲ್ಲ! ಐನೂರು, ಸಾವಿರ, ಎರಡು ಸಾವಿರ, ಮೂರು ಸಾವಿರ
ಗಳ ವರೆಗೆ ವರದಕ್ಷಿಣೆಯನ್ನಿತ್ತು ಒಳ್ಳೇ ಸ್ಥಳ ನೋಡಿ ಕೊಡ
ಲಿಕ್ಕೆ ಎಷ್ಟೋ ಜನರು ಹೆಣಗಾಡುತ್ತಿರುತ್ತಾರೆ. ತಮ್ಮ ಮಕ್ಕಳಿಗೆ
ಸರಿಯಾದವರ ಮನೆತನವು ದೊರೆತರೆ ತಾಯಿತಂದೆಗಳು ಕೃತಾ
ರ್ಥರಾದೆವೆಂದು ತಿಳಿಯುತ್ತಾರೆ. ಅಕಸ್ಮಾತ್ತಾಗಿ ದೊರೆಯ
ಬಾಯಿಂದ ಈ ಪ್ರಶ್ನವನ್ನು ಕೇಳಿ, ಬಡ ಮುದುಕನಿಗೆ ನಡುಗು
ಹುಟ್ಟಿ, ಕೆಲ ಹೊತ್ತಿನ ವರೆಗೆ ಬಾಯಿಂದ ಮಾತುಗಳೇ ಹೊರಡ
ದಾದವು. ಆ ಮೇಲೆ ಧೈರ್ಯವನ್ನು ಅವಲಂಬಿಸಿ “ಜೀಯಾ,
ನೀನು ನನ್ನ ಒಡೆಯನು. ನನ್ನ ಅಪೇಕ್ಷೆಗಳೆಲ್ಲವೂ ನಿನ್ನವೇ.
ನಿನ್ನ ಚಿತ್ತಕ್ಕೆ ಬಂದಂತೆ ಮಾಡಬೇಕು.” ಎಂದು ಹೇಳಿದನು.

ದೊರೆಯು “ಗ್ರಿಜೆಲ್ಡಾ, ನನ್ನ ಇಚ್ಛೆಯ ಪ್ರಕಾರ ನಿನ್ನ ತಂದೆ
ಯೂ ಒಪ್ಪಿದ್ದರಿಂದ ನಿನ್ನನ್ನು ವರಿಸಬೇಕೆಂದು ಬಂದಿರುವೆನು.
ನೀನು ನನ್ನನ್ನು ಮದುವೆಯಾದ ಬಳಿಕ ನಾನು ಕೊಟ್ಟ ಅಪ್ಪಣೆ
ಯಿಂದ ನಿನಗೆ ಸಂತೋಷವೇ ಆಗಲಿ, ದುಃಖವೇ ಆಗಲಿ, ನೀನು
ಸ್ವಲ್ಪವೂ ಅಸಂತೋಷವನ್ನು ತೋರಿಸದೆ, ಅದನ್ನು ತ್ರಿಕರಣಪೂ
ರ್ವಕವಾಗಿ ಶಿರಸಾವಹಿಸುವೆನೆಂದು ಭಾಷೆಯನ್ನಿತ್ತರೆ ಮಾಡಿಕೊ
ಳ್ಳುತ್ತೇನೆ. ವಿಚಾರ ಮಾಡಿ ಹೇಳು.” ಎಂದನು.

ಈ ಶಬ್ದಗಳನ್ನು ಕೇಳಿ ಅವಳು ಆನಂದಾಶ್ಚರ್ಯಗಳಿಂದ
ಚಕಿತಳಾಗಿ ಗದ್ಗದ ಸ್ವರದಿಂದ “ಒಡೆಯಾ, ಈ ರೀತಿಯಾದ
ಮರ್ಯಾದೆಯನ್ನು ಹೊಂದಲು ನಾನು ಸರ್ವಥಾ ಅರ್ಹಳಲ್ಲ.
ಆದರೆ ತಮ್ಮ ಆಜ್ಞೆಯೇ ಶಿರಸಾಮಾನ್ಯವಾದುದರಿಂದ ಅದರಂ

ತೆಯೇ ಮಾಡುವೆನು. ಪ್ರಾಣಾಂತ್ಯಸಮಯವು ಒದಗಿದಾಗ್ಯೂ ನಾನು ಮಾತಿನಲ್ಲಿಯೇ ಆಗಲಿ, ಕೃತಿಯಲ್ಲಿಯೇ ಆಗಲಿ, ಮನಸ್ಸಿನಲ್ಲಿಯೇ ಆಗಲಿ ತಮ್ಮ ಇಚ್ಛೆಗೆ ವಿರುದ್ಧವಾಗಿ ಎಂದಿಗೂ ನಡೆಯಲಿಕ್ಕಿಲ್ಲ" ಎಂದು ಆಣೆಯನ್ನಿಟ್ಟುಕೊಂಡಳು. ಬಳಿಕ ಎಲ್ಲರೂ ಗುಡಿಸಲ ಹೊರಕ್ಕೆ ಬಂದರು. ಅರಸನು ತನ್ನ ಪರಿವಾರಕ್ಕೆ "ನಾನು ಗೊತ್ತುಮಾಡಿಸಿರುವ ಕನ್ಯೆಯು ಇವಳೇ" ಎಂದು ಹೇಳಿದನು. ತಂದೆಯ ಮನೆಯ ಹರಕು ಬಟ್ಟೆಗಳನ್ನು ತೆಗೆದು ಬೆಲೆಯುಳ್ಳ ವಸ್ತ್ರಾಭರಣಗಳಿಂದ ಅಲಂಕೃತಳಾದ ಬಳಿಕ ಆ ಭಾವೀ ರಾಣಿಯು ತಾರಾಮಂಡಲದಲ್ಲಿ ಒಪ್ಪುವ ಚಂದ್ರನೋಪಾದಿಯಲ್ಲಿ ಆ ಸ್ತ್ರೀಸಮೂಹದಲ್ಲಿ ಕಂಗೊಳಿಸಹತ್ತಿದಳು. ತರುವಾಯ ದೊರೆಯು ಅವಳನ್ನು ಒಂದು ಬಿಳಿಯ ಬಣ್ಣದ ಕುದುರೆಯ ಮೇಲೆ ಕೂಡ್ರಿಸಿ, ತಾನು ಅವಳ ಹಿಂದೆಯೇ ಕುಳಿತನು. ಈ ಹೊಸ ದಾಂಪತ್ಯವನ್ನು ನೋಡಿ ಸಂತೋಷಭರಿತರಾದ ತನ್ನ ಜನರೊಂದಿಗೆ ಅರಮನೆಗೆ ಬಿಜಯ ಮಾಡಿದನು. ಅಲ್ಲಿ ವಿಧಿಪೂರ್ವಕ ವಿವಾಹೋತ್ಸವವು ನೆರವೇರಿ [illegible] ಊಟದ ಸಮಾರಂಭ [illegible].

ಈ [illegible] ದೇಶಮಾತ್ರ [illegible] ದಿಂದ [illegible] ಬಡತನ [illegible] ಕನ್ಯೆಯು [illegible] ಈ ಪದ [illegible].

[illegible] ನೀಚ [illegible] ಹಾಗಾಗಿ

ದ್ದಳೆಂಬದಿಷ್ಟೇ ಅಲ್ಲ; ಸಾರ್ವಜನಿಕ ಹಿತಕಾರ್ಯಗಳನ್ನು ಸಹ ಮಾಡುತ್ತಿದ್ದಳು. ತನ್ನ ಪತಿಯು ರಾಜಧಾನಿಯಲ್ಲಿಲ್ಲದಾಗ ಅವಳು ನ್ಯಾಯವಿಮರ್ಶೆಯನ್ನು ಮಾಡುವಳು. ರಾಜ್ಯದಲಿ ಕದನಗಳು ಕಟ್ಟಾದವು. ಆದರಿಂದ ಪ್ರಜೆಗಳೆಲ್ಲರೂ ದೇವರೇ ಇವಳನ್ನು ಈ ಲೋಕಕ್ಕೆ ಕಳಿಸಿರಬಹುದೆಂದು ಅಂದುಕೊಳ್ಳುತ್ತಿದ್ದರು.

ಹೀಗೆಯೇ ಕೆಲವು ದಿವಸಗಳು ಕಳೆದು ಹೋಗಲು ಅವಳು ಒಬ್ಬ ಮಗಳನ್ನು ಹಡೆದಳು. ಆಗ ಅರಸನ ಮನಸ್ಸಿನಲ್ಲಿ ತನ್ನ ಹೆಂಡತಿಯ ಸ್ವಭಾವವನ್ನು ಪರೀಕ್ಷಿಸಬೇಕೆಂಬದೊಂದು ಇಚ್ಛೆಯು ಹುಟ್ಟಿತು. ಅದು ಬಹು ಕ್ರೂರವಾದದ್ದೂ, ದುಃಖಕರವಾದದ್ದೂ ಇತ್ತು. ಯಾಕಂದರೆ ಈ ಮೊದಲೇ ಅವನು ಅವಳ ಗುಣಗಳನ್ನು ಮನಗಂಡಿದ್ದನು. ಒಂದು ದಿನ ಅಂತಃಪುರದಲ್ಲಿ ಅವಳಿಗೆ, "ಗ್ರಿಜೆಲ್ಡಾ, ನಾನು ನಿನ್ನನ್ನು ವರಿಸಿದ ದಿವಸವನ್ನು ನೀನು ಮರೆತಿರಲಿಕ್ಕಿಲ್ಲ. ನಿನ್ನನ್ನು ಬಡ ಕೊಟ್ಟಿಗೆಯಿಂದ ತಂದು ಸಿಂಹಾಸನಾರೂಢೆಯನ್ನಾಗಿ ಮಾಡಿ ನಿನ್ನನ್ನು ಇಂಥ ದೊಡ್ಡ ಪದವಿಗೇರಿಸಿದೆನು. ನನಗೇನೋ ನೀನು ಪರಮ ಪ್ರಿಯಳು. ಆದರೆ ನನ್ನ ಪ್ರಜೆಗಳಾಡುವ ಕೆಲವು ಮಾತುಗಳು ನನ್ನ ಕಿವಿಗೆ ಬಿದ್ದಿರುತ್ತವೆ. ಅವರು "ಇಂಥ ಹೀನ ಕುಲದಲ್ಲಿ ಹುಟ್ಟಿದವರ ಪ್ರಜೆಗಳಾಗಿರುವದು ನಮಗೆ ನಾಚಿಕೆಯಾದ ಮಾತು." ಎಂದು ನಿನಗೆ ಈ ಹುಡುಗೆ ಹುಟ್ಟಿದಂದಿನಿಂದ ಅವರು ಅನ್ನತೊಡಗಿದ್ದಾರೆ. ನಾನು ಅರಸನಾಗಿರುವದರಿಂದ ಪ್ರಜೆಗಳ ಇಚ್ಛೆಯನ್ನು ಪೂರ್ಣಮಾಡುವದೇ ನನ್ನ ಕರ್ತವ್ಯವಾಗಿರುವದರಿಂದ ನಿನ್ನ ಮಗುವನ್ನು ಕೊಂದು ಬಿಡಬೇಕೆಂಬದಾಗಿ ನನ್ನ ಮನಸಿನಲ್ಲಿ ಬಂದಿರುವದು. ಈ ಬಗ್ಗೆ ನನಗಾಗಿರುವ ತಾಪವು ದೇವರಿಗೇ ಗೊತ್ತು. ನಿನಗೆ ತಿಳಿಸದೆ ಅಥವಾ ನಿನ್ನ ಒಪ್ಪಿಗೆ

ಯಿಲ್ಲದೆ ಈ ಕೆಲಸವನ್ನು ನಾನು ಮಾಡಲಾರೆನು. ಆದ್ದರಿಂದ ನೀನು ಲಗ್ನಕಾಲದಲ್ಲಿ ಒಪ್ಪಿಕೊಂಡಂತೆ ನಿನ್ನ ತಾಳ್ಮೆಯನ್ನೂ, ವಿಧೇಯತೆಯನ್ನೂ ತೋರಿಸು" ಎಂದನು. ಅವಳು ಕಿಂಚಿತ್ತಾದರೂ ಖೇದಗೊಳ್ಳದೆ "ದೊರೆಯೆ, ನಾನೂ, ನನ್ನ ಕೂಸೂ ನಿನ್ನವರು. ನಿನ್ನ ವಸ್ತುಗಳನ್ನು ನಿನ್ನ ಇಚ್ಛಾನುಸಾರ ಮಾಡಲು ನಿನಗೆ ಅಧಿಕಾರವಿರುವದು. ನೀನು ಮಾಡುವ ಯಾವ ಕೆಲಸವೂ ನನಗೆ ಅಹಿತವೆನಿಸದು. ನಿನ್ನ ಹೊರತು ಈ ಲೋಕದಲ್ಲಿಯ ಎಂಥ ಅಮೂಲ್ಯವಾದ ವಸ್ತುವನ್ನು ಕಳೆದುಕೊಳ್ಳಲು ನಾನು ಹಿಂಜರಿಯಲಾರೆನು; ಇದೇ ನನ್ನ ದೃಢ ನಿಶ್ಚಯವು" ಎಂದಳು. ದೊರೆಗೆ ಅಂತರಂಗದಲ್ಲಿ ಪರಮ ಹರ್ಷವಾಯಿತು. ಆದರೂ ಹೊರಗೆ ವ್ಯಥೆಪಡುವವನಂತೆ ನಿಟ್ಟುಸಿರುಗರೆದನು. ಅವನ ಬಳಿಯಲ್ಲಿ ಪ್ರಾಮಾಣಿಕನೂ, ವಿಶ್ವಾಸಕ್ಕೆ ಯೋಗ್ಯನೂ ಆದ ಒಬ್ಬ ಸೇವಕನಿದ್ದನು. ಅರಸನು ಅವನನ್ನು ಏಕಾಂತದಲ್ಲಿ ಕರೆದು ತನ್ನ ಹಂಚಿಕೆಯನ್ನು ತಿಳಿಸಿದನು. ಅವನು ತನ್ನ ಒಡೆಯನ ಅಪ್ಪಣೆಯ ಮೇರೆಗೆ ರಾಣಿಯ [illegible] "ಮಾತೆಯೆ, ಅರಸನ ಅಪ್ಪಣೆಯ ಪ್ರಕಾರ ಮಾಡುವ ಬಗ್ಗೆ ನೀನು ನನ್ನನ್ನು ಕ್ಷಮಿಸಬೇಕು. [illegible] ಒಡೆಯನ ಅಪ್ಪಣೆಗಳು ಎಷ್ಟೇ ಕಠಿಣವಿದ್ದರೂ [illegible] ನೀನು ಒಲ್ಲೆ. ಈ [illegible] ಅಪ್ಪಣೆಯಾಗಿದೆ." ಎಂದು [illegible] ತೆಕ್ಕೆಕೊಂಡು [illegible] ಪ್ರೀತಿಯು [illegible] ತಿಳಿದಿ [illegible] ಅವಳು [illegible] ಹರಿದು

[illegible]ನ್ನದಂತೆ ಆಳವಾದ ಕುಣಿಯಲ್ಲಿ ಹುಗಿಯಬೇಕೆಂದು ಆವನನ್ನು ಬೇಡಿಕೊಂಡಳು. ಅವನು ಮಗುವಿನೊಡನೆ ದೊರೆಯ ಹತ್ತರ ಬಂದು ನಡೆದ ಸಂಗತಿಯನ್ನು ಶ್ರುತಗೊಳಿಸಿದನು. ಅರಸನಿಗೆ ತಾನು ಮಾಡಿದ ತಪ್ಪು ಕೆಲಸದ ಬಗ್ಗೆ ತುಂಬಾ ವ್ಯಥೆಯಾಗಿದ್ದರೂ ತನ್ನ ಹೇತುವನ್ನು ಸಿದ್ಧಿಗೊಯ್ಯುವದಕ್ಕೋಸ್ಕರ ಮನಸ್ಸು ಬಿಗಿ ಮಾಡಿ, ಆ ಮಗುವನ್ನು ಒಂದು ಬುಟ್ಟಿಯಲ್ಲಿ ಸುತ್ತಿಟ್ಟು ಯಾರಿಗೂ ತಿಳಿಯದಂತೆ ತನ್ನ ತಂಗಿಯ ಬಳಿಗೆ ಕಳುಹಿಕೊಟ್ಟನು. ತಂಗಿಗೂ, ತಂಗಿಯ ಗಂಡನಿಗೂ ಈ ವಿಷಯವನ್ನು ಹೊರಗೆಡಹದೆ ಮಗುವನ್ನು ಜಾಗ್ರತೆಯಾಗಿ ನೋಡಿಕೊಳ್ಳುವಂತೆ ಕಾಗದ ಬರೆದಿದ್ದನು. ಅವರೂ ಅರಸನ ಅಪ್ಪಣೆಯ ಪ್ರಕಾರ ನಡೆಯಲು ಒಪ್ಪಿಕೊಂಡರು. ಇತ್ತ ದೊರೆಯು ತನ್ನ ಹೆಂಡತಿಯ ಸ್ವಭಾವದಲ್ಲಿ ಏನಾದರೂ ವ್ಯತ್ಯಾಸವಾಗಿರುವುದೋ ಹೇಗೆ ಎಂದು ಬಹು ಸೂಕ್ಷ್ಮರೀತಿಯಿಂದ ನೋಡಹತ್ತಿದನು. ಅವಳಲ್ಲಿ ಗಾಂಭೀರ್ಯ, ಸಭ್ಯತನ, ಆನಂದವೃತ್ತಿ, ಲೀನತೆ, ಗಂಡನಲ್ಲಿ ಪ್ರೇಮ ಮತ್ತು ಅವನ ಆಜ್ಞಾಪಾಲನದಲ್ಲಿ ತತ್ಪರತೆ ಇವುಗಳಲ್ಲಿ ತಿಲಮಾತ್ರವೂ ಹೆಚ್ಚು ಕಡಿಮೆಯಾಗಿದ್ದಿಲ್ಲ. ದುಃಖದ ಚಿಹ್ನವೇ ಅವಳಲ್ಲಿ ತೋರಲಿಲ್ಲ; ಮತ್ತು ತನ್ನ ಮಗುವಿನ ಬಗ್ಗೆ ಅವಳು ಎಂದೂ ಮಾತೆತ್ತಲಿಲ್ಲ.

ಹನ್ನೆರಡು ವರುಷಗಳು ಹೋದವು. ಹೆಂಡತಿಯನ್ನು ಇನ್ನೂ ಕಠಿಣವಾದ ರೀತಿಯಿಂದ ಪರೀಕ್ಷಿಸಬೇಕೆಂದು ದೊರೆಯು ನಿಶ್ಚಯಿಸಿದನು. ಹಾಗು ಬೇರೊಬ್ಬಳನ್ನು ಲಗ್ನವಾಗುವೆನೆಂದು ಹೇಳಹತ್ತಿದನು. ಈ ದುರ್ವಾರ್ತೆಯು ಕರ್ಣೋಪಕರ್ಣವಾಗಿ ನಿರಪರಾಧಿಯೂ, ನಿರ್ಮಲಾಂತಃಕರಣೆಯೂ ಆದ ರಾಣಿಗೆ ತಿಳಿದೊಡನೆಯೇ ಅವಳಿಗೆ ಕಡುಖೇದವೆನಿಸಿತು. ಆದರೂ ತನ್ನ ಗಂಡನಿಗೆ

ಸಂತೋಷವಾಗುವ ವಿಷಯಗಳು ತನಗೆ ಎಷ್ಟೇ ಕಡಿಕಾ[illegible]ದ್ದರೂ ಅವುಗಳನ್ನು ಸಮಾಧಾನದಿಂದ ತಾಳುವುದಕ್ಕೆ ಆ ಸಾಧ್[illegible]ಯು ಸಿದ್ಧಳಾಗಿದ್ದಳು.

ಇದೇ ಸಮಯದಲ್ಲಿ ದೊರೆಯು ಗುಪ್ತವಾಗಿ ತನ್ನ ಬೀ[illegible]ನಿಗೆ ತನ್ನ ಮಗಳನ್ನು ಇಂಥವರ ಮಗಳೆಂದು ಪ್ರಕಟಪಡಿಸ[illegible] ಮರ್ಯಾದೆಯಿಂದ ತನ್ನಲ್ಲಿಗೆ ತರುವಂತೆ ಬರೆದನು. ಹಾಗೂ [illegible] ಕನ್ಯೆಯನ್ನು ದೊರೆಯು ಲಗ್ನವಾಗುತ್ತಾನೆಂದು ಸುದ್ದೀ ಪಸರಿ[illegible] ಸಂಭ್ರಮದಿಂದ ಬರಹೇಳಿದನು.

ಇಷ್ಟರಲ್ಲಿ ದೊರೆಯು ತನ್ನ ಹೆಂಡತಿಯ ಸಮಾಧಾನವೃ[illegible]ಯನ್ನು ಒರೆಗೆ ಹಚ್ಚಬೇಕೆಂದು ಮಾಡಿದ ದುರಾಲೋಚನೆಯನ[illegible] ಸಿದ್ಧಿಗೊಯ್ಯುವುದಕ್ಕೋಸ್ಕರ ಒಂದು ದಿನ ತನ್ನ ಪ್ರಮುಖ ಜನ[illegible] ಎದುರಿಗೆ ಆ ಸಾಧ್ವಿಯನ್ನು ಬಿರುನುಡಿಗಳಿಂದ ಕರೆದು, "ಗ್ರಿಜೆಲಾ[illegible] ನಿನ್ನ ದಾರಿದ್ರ್ಯವನ್ನೂ ಅಯೋಗ್ಯತೆಯನ್ನೂ ಲೆಕ್ಕಿಸದೆ, ನಿ[illegible] ಸದ್ಗುಣ ಮತ್ತು ವಿಧೇಯತೆಗಳ ಕಡೆಗೆ ಲಕ್ಷಕೊಟ್ಟು ನಾ[illegible] ನಿನ್ನನ್ನು ಸಂತೋಷದಿಂದ ಪರಿಗ್ರಹಿಸಿದೆನು. ಆದರೆ, ನಾನು ಕುಲ[illegible] [illegible] ಬನ್ನವಾಗುವದರಿಂದನನ್ನ ಇಷ್ಟಾ[illegible] [illegible] ನನಗೆ ಅಧಿಕಾ[illegible] [illegible] ಪ್ರತಿ ಇನ್ನೊಬ್ಬಳ[illegible] [illegible] ಬಲಾತ್ಕರಿಸುತ್ತಿದ್ದಾರೆ. ನನಗಾ[illegible] [illegible] ಇಲ್ಲಿಗೆ ಬರುವದಕ್ಕಾಗಿ ಹೊರ[illegible] [illegible] ತಾಳಿ. ಯಾವ ಸಂಪತ್ತು [illegible] [illegible] ಬಂದ ವಿಪತ್ತು [illegible] [illegible] ಬಳವಳಿಯ[illegible] [illegible]" ಎಂದು ಹೇಳಿದನು.

ಆವಳು, "ಒಡೆಯರೇ, ನನ್ನ ನೀಚ ಮತ್ತು ತಮ್ಮ ಉಚ್ಚ ಸ್ಥಿತಿಗಳಲ್ಲಿ ಭೂಮ್ಯಾಕಾಶದಷ್ಟು ಅಂತರವಿದೆಯೆಂಬದನ್ನು ನಾನು ಚೆನ್ನಾಗಿ ಬಲ್ಲೆನು. ಎಷ್ಟುಮಾತ್ರಕ್ಕೂ ನಾನು ತಮ್ಮ ಕೈಹಿಡಿಯಲು ತಕ್ಕವಳಲ್ಲ; ಇಷ್ಟೇ ಅಲ್ಲ, ತಮ್ಮ ಗುಲಾಮಳಾಗಲು ಸಹ ನಾನು ಯೋಗ್ಯಳಲ್ಲ. ಯಾವ ಮನೆಯಲ್ಲಿ ತಾವು ನನ್ನನ್ನು ರಾಣಿಯೆಂದು ಇರಿಸಿದ್ದಿರೋ ಆ ಮನೆಯಲ್ಲಿ ನಾನು ದೇವರ ಸಾಕ್ಷಿಯಾಗಿಯೂ ಹಾಗೆ ಎಂದಿಗೂ ಭಾವಿಸದೆ ತಮ್ಮ ಪಾದಸೇವಕಳೆಂದೇ ಭಾವಿಸಿದ್ದೆನು ಹಾಗೂ ಅದರಂತೆಯೇ ಸಾಯುವವರೆಗೂ ಇರುವೆನು. ಅಯೋಗ್ಯಳಾದ ನನ್ನನ್ನು ತಾವು ಈ ವರೆಗೂ ಮರ್ಯಾದೆಯಿಂದ ಇಟ್ಟುಕೊಂಡದ್ದಕ್ಕಾಗಿ ನಾನು ದೇವರಿಗೂ, ತಮಗೂ ತುಂಬಾ ಕೃತಜ್ಞಳಾಗಿದ್ದೇನೆ. ಇದಕ್ಕೂ ಹೆಚ್ಚಿಗೆ ಹೇಳತಕ್ಕದ್ದೇನೂ ಇಲ್ಲ. ನಾನು ಸಂತೋಷದಿಂದ ನನ್ನ ತಂದೆಯ ಗುಡಿಸಲಿಗೆ ಹೋಗಿ ನನ್ನ ಉಳಿದ ಆಯುಷ್ಯವನ್ನು ಕಳೆಯುವೆನು. ದೇವರು ಹೊಸ ಹೆಂಡತಿಯೊಡನೆ ತಮಗೆ ಸೌಖ್ಯವನ್ನೀಯಲೆಂದು ಕೋರುತ್ತೇನೆ. ನನ್ನ ಕೂಡ ತಾವು ಹೇಗೆ ನಡೆದರೂ ನನ್ನ ಪ್ರಾಣಪದಕವು ತಾವೇ ಆಗಿರುವಿರಿ. ನಾನು ಇಲ್ಲಿಗೆ ಬರುವಾಗ್ಗೆ ತಂದ ಹಳೇ ವಸ್ತ್ರಗಳು ಇಷ್ಟು ದೀರ್ಘಕಾಲದ ಮೇಲೆ ದೊರೆಯಲಾರವು. ಇಗೋ, ತಾವು ಕೊಟ್ಟಿರುವ ಬೆಲೆಯುಳ್ಳ ವಸ್ತ್ರಾಭರಣಗಳನ್ನು ತಕ್ಕೊಳ್ಳಿರಿ. ಈ ವರೆಗೆ ತಮ್ಮ ಪತ್ನಿಯೆನಿಸಿಕೊಂಡ ನಾನು ವಸ್ತ್ರಹೀನಳಾಗಿ ಹೋಗದಂತೆ ಕೆಲವು ಮಾಸಿದ ಬಟ್ಟೆಗಳನ್ನು ದಯಪಾಲಿಸಿರಿ" ಎಂದಳು. ಅರಸನು ಕೆಲ ಮಲಿನ ವಸ್ತ್ರಗಳನ್ನು ಕೊಟ್ಟು ದುಃಖದಿಂದ ಬೇರೆ ಕಡೆಗೆ ಹೋದನು. ರಾಣಿಯು ಲೇಶವಾದರೂ ದುಃಖವನ್ನು ತೋರಿಸದೆ ಅವನ್ನೇ ಧರಿಸಿ ತಂದೆಯ ಗುಡಿಸಲಿಗೆ ಹೋದಳು. ದುಃಖಿತರಾದ ಪ್ರಜೆ

ಗಳು ಅವಳನ್ನು ಹಿಂಬಾಲಿಸಿದರು. ಅರಸಿಯಾಗಿದ್ದ ಮಗಳು ಆಳಿನಂತೆ ಬಂದದ್ದನ್ನು ನೋಡಿ ತಂದೆಯು ಬಹು ಮಿಡುಕಿದನು. ಆದರೆ ಆಕೆ ಮಾತ್ರ ಶಾಂತವೃತ್ತಿಯಿಂದ ಗಂಭೀರವಾಗಿರಹತ್ತಿದಳು. ಅವಳ ಶಾಂತತೆಯನ್ನೂ, ಸಹನಶೀಲತೆಯನ್ನೂ ಯಾವ ಗಂಡಸು ತಾನೆ ಸಂಗಟ್ಟಲಾಪನು!

ಅತ್ತ, ದೊರೆಯು ಬೀಗನು ಲಗ್ನಮಾಡಿಕೊಡುವ ಕನ್ಯೆಯನ್ನು ಬಹು ವೈಭವದಿಂದ ಕರೆದುಕೊಂಡು ಬರುತ್ತಿದ್ದಾನೆಂಬ ಸಂಗತಿಯು ನಾಲ್ದೆಸೆಗೆ ಹಬ್ಬಿತು. ಬೀಗನು ಪಟ್ಟಣವನ್ನು ಪ್ರವೇಶಿಸುವದಕ್ಕೆ ಸ್ವಲ್ಪ ಮುಂಚಿತವಾಗಿ, ದೊರೆಯು ಬಡ ಗ್ರಿಜೆಲ್ಡೆಯನ್ನು ಕರೆದು ಕಳುಹಲು, ಅವಳು ಗಂಡನ ಆಜ್ಞೆಯನ್ನು ಶಿರಸಾವಹಿಸಿ ಬಹು ಸಂತೋಷದಿಂದ ಬಂದು ಅವನ ಕಾಲಿಗೆರಗಿದಳು. ಆಗ ಅವನು ತಾನು ಮದುವೆಯಾಗತಕ್ಕ ಕನ್ಯೆಯು ನಾಳೆಗೆ ಆಲ್ಲಿಗೆ ಬರತಕ್ಕವಳಿದ್ದು ಅವಳನ್ನು ದೊರೆತನಕ್ಕೆ ಸರಿಯಾದ ಮರ್ಯಾದೆಯಿಂದ ಸ್ವಾಗತಿಸಬೇಕೆಂಬುದು ತನ್ನ ಅಪೇಕ್ಷೆ; ಆದರೆ ತನ್ನ ಮನೆಯಲ್ಲಿ [illegible] ವ್ಯವಸ್ಥೆಯನ್ನು ಮಾಡುವುದಕ್ಕೂ, ಬಂದಂಥ ಅತಿಥಿಗಳನ್ನು ಸತ್ಕರಿಸುವುದಕ್ಕೂ ಹೆಂಗಸಿಲ್ಲದ್ದರಿಂದ ನಿನ್ನನ್ನು ಕರೆಸಿದ್ದೇನೆ. ಎಲ್ಲ ವ್ಯವಸ್ಥೆಯನ್ನು ಮಾಡು ಎಂದು ನಿರ್ದಯದಿಂದ ಹೇಳಿದನು.

ಆ [illegible] ಆಜ್ಞೆಯನ್ನು ಸಮ್ಮತಿಯಿಂದ [illegible] ದುಡಿದು [illegible] ಯೋಗ್ಯವಾಗಿ ಸಜ್ಜುಗೊಳಿಸಿದಳು.

ಮರುದಿವಸ [illegible] ಮದುಮಗಳೊಡನೆ [illegible] ಮೆರವ

ಣಿಗೆಯನ್ನು ನೋಡಲಿಕ್ಕೆ ಜನರು ಗುಂಪಾಗಿ ನೆರೆದಿದ್ದರು. ಅರಸನನ್ನು ಜರೆಯುತ್ತಿದ್ದ ಜನರೇ ಹೊಸ ರಾಣಿಯ ಸೌಂದರ್ಯವನ್ನು ನೋಡಿ ಅವನನ್ನು ಹೊಗಳಹತ್ತಿದರು! ನಿಬ್ಬಣದವರು ಅರಮನೆಯಲ್ಲಿಳಿದರು. ಹಳೆರಾಣಿಯು ಯೋಗ್ಯತಾನುಸಾರವಾಗಿ ಎಲ್ಲರ ಸ್ವಾಗತಮಾಡಿದಳು. ಆ ಹರಕು ಬಟ್ಟೆಯವಳು ಮಾಡಿದ್ದ ಮೇಲಾದ ವ್ಯವಸ್ಥೆಯನ್ನು ನೋಡಿ, ಎಲ್ಲರೂ ಆಶ್ಚರ್ಯಪಟ್ಟು, ಇವಳು ಯಾರಾಗಿರಬಹುದೆಂದು ಯೋಚಿಸಹತ್ತಿದರು. ಹಳೆರಾಣಿಯು ಹೊಸರಾಣಿಯ ರೂಪಾತಿಶಯವನ್ನು ಹೊಗಳಹತ್ತಿದಳು.

ಎಲ್ಲರೂ ಊಟಕ್ಕೆ ಕೂತನಂತರ ಬಡಿಸುವದರಲ್ಲಿ ತೊಡಗಿದ್ದ ತನ್ನ ಹೆಂಡತಿಯನ್ನು ಕರೆದು ರಾಜನು "ಗ್ರಿಜೆಲ್ಡಾ, ನನ್ನ ನೂತನ ಹೆಂಡತಿಯು ಹೇಗಿದ್ದಾಳೆ?" ಎಂದು ಚೇಷ್ಟೆಯ ಧ್ವನಿಯಿಂದ ಕೇಳಿದನು. ಅವಳು "ಅತ್ಯುತ್ತಮವಾಗಿದ್ದಾಳೆ. ಒಡೆಯರೆ, ನಿಜವಾಗಿಯೂ ಇವಳಿಗಿಂತ ಸುಂದರಿಯಾದ ಹೆಣ್ಣನ್ನೇ ನಾನು ನೋಡಿಲ್ಲ. ತಾವು ಕೊನೆಯವರೆಗೂ ಈ ಹೆಂಡತಿಯೊಡನೆ ಸೌಖ್ಯವಾಗಿಯೂ, ಭಾಗ್ಯಶಾಲಿಯಾಗಿಯೂ ಬಾಳಬೇಕೆಂಬದೇ ನನ್ನ ಪ್ರಾರ್ಥನೆಯು. ಆದರೆ ನನ್ನದೊಂದು ವಿನಂತಿಯೇನೆಂದರೆ— ಮೊದಲಿನವಳಿಗೆ ಮಾಡಿದಂತೆ ಇವಳಿಗೆ ಮಾಡಬಾರದು. ಯಾಕೆಂದರೆ ಸತ್ಕುಲಪ್ರಸೂತಳಾದ ಈ ಬಾಲೆಯು ದರಿದ್ರಳಂತೆ ಕಷ್ಟಗಳನ್ನು ಸಹಿಸಲಾರಳು" ಎಂದಳು.

ಈ ಸಮಯದಲ್ಲಿ ಸಹ ಆಕೆಯು ಕೊಂಚವಾದರೂ ಅಸಮಾಧಾನವನ್ನು ತೋರಿಸದೆ ಶಾಂತವೃತ್ತಿಯಲ್ಲಿರುವದನ್ನು ಕಂಡು ದೊರೆಯು ತನ್ನ ಕ್ರೂರತನದ ಬಗ್ಗೆ ಪಶ್ಚಾತ್ತಾಪಪಟ್ಟನು.

"ಪರಮಾವಧಿಯಾಯಿತು. ನನ್ನ ಪ್ರಿಯೆ, ಇನ್ನು ಮುಂದೆ ಅಸಂತುಷ್ಟಳಾಗಬೇಡ. ಪ್ರಿಯಳೇ, ನಿನ್ನ ಸೌಜನ್ಯವನ್ನೂ, ಪ್ರಾಮಾಣಿಕತನವನ್ನೂ, ದರಿದ್ರಾವಸ್ಥೆಯಲ್ಲಿಯೂ ಶ್ರೀಮಂತಿಕೆಯಲ್ಲಿಯೂ ಪರೀಕ್ಷಿಸಿ ನಿನ್ನ ಮನಸ್ಸಿನ ನಿಶ್ಚಲತೆಯನ್ನು ತಿಳಿದೆನು. ನಿನ್ನ ಸಹನಶೀಲತೆಯನ್ನು ಪರೀಕ್ಷಿಸಬೇಕೆಂದು ಹೀಗೆ ಮಾಡಿದೆನು, ಎಂದು ಎಲ್ಲ ವಿವರವನ್ನು ಹೇಳಿದನು. ಅದನ್ನು ಕೇಳಿ ಆ ಸಾಧ್ವಿಯು ತಟ್ಟನೆ ತನ್ನ ಮುದ್ದುಮಗಳನ್ನು ಗಟ್ಟಿಯಾಗಿ ಅಪ್ಪಿಕೊಂಡು ಆನಂದಾಶ್ರುಗಳಿಂದ ಮಜ್ಜನಮಾಡಿಸಿದಳು.

ಬಳಿಕ ರಾಣಿಯು "ದೊರೆಯೆ, ನನ್ನ ಮಗಳನ್ನು ಸುರಕ್ಷಿತವಾಗಿ ಕಾಪಾಡಿದುದಕ್ಕೆ ನಾನು ತಮಗೆ ಮನಃಪೂರ್ವಕವಾಗಿ ಕೃತಜ್ಞಳಾಗಿದ್ದೇನೆ. ಇಂದಿನವರೆಗೂ ನನ್ನಲ್ಲಿ ತಮ್ಮ ನಿಜವಾದ ಪ್ರೀತಿ ವಿಶ್ವಾಸಗಳು ಇವೆ ಎಂಬುದು ತಿಳಿದದ್ದರಿಂದ ಇಂದಿನ ದಿವಸವೇ ನನ್ನ ಆಯುಷ್ಯದ ಕೊನೆಯ ದಿವಸವಾದರೂ ನಾನು ಸಂತೋಷದಿಂದ ಸಾಯುವೆನು. ಓ, ನನ್ನ ಪ್ರಿಯಬಾಲಕಿಯೇ, ನೀನು [illegible] ಕೈಯೊಳಗಿಂದ ಪಾರಾಗಿ ಪುನಃ ನನ್ನ ಕಣ್ಣಿಗೆ ಬೀಳುವೆಯೆಂದು ನಾನು ತಿಳಿದಿರಲಿಲ್ಲ. ಆದರೆ ಆ ಅಪಾರ [illegible] ನಿನ್ನ ತಂದೆಯ [illegible] ನಾನು ನಿನ್ನನ್ನು ಸುರಕ್ಷಿತವಾಗಿ ಕಂಡೆನು." ಈ ಪ್ರಕಾರ [illegible] ಕಂಠದಿಂದ ಮಾತಾಡುತ್ತ, ಆ ಹುಡುಗಿಯನ್ನು ತೆಕ್ಕೆ ಹಿಡಿದವಳು ಹಾಗೇ ಮೂರ್ಛೆಹೋಗಿ ಮಗಳನ್ನು ಗಟ್ಟಿಯಾಗಿ [illegible] ಹಿಡಿದಿದ್ದಳು. ದೊರೆಗೆ ಆ ಹುಡುಗಿಯನ್ನು ಅವಳ ಕೈಯಿಂದ ಬಿಡಿಸುವದು ಕಷ್ಟವಾಯಿತು. [illegible] ಹಿಡಿದೆತ್ತಿ ಬಗೆಬಗೆ [illegible] ಕಣ್ಣೀರು

ಸುರಿಸದಂಥವರಾರೂ ಅಲ್ಲಿರಲಿಲ್ಲ. ಅವಳು ಮೂರ್ಛೆ ತಿಳಿದೆದ್ದ ಮೇಲೆ ಪೂರ್ಣವಾಗಿ ಶಾಂತಳಾಗುವ ವರೆಗೆ ಎಲ್ಲರೂ ಆಕೆಯನ್ನು ಸಮಾಧಾನಗೊಳಿಸಿದರು. ಅವರಿಬ್ಬರೂ ಸಂತೋಷದಿಂದ ಕೂಡಿದ್ದನ್ನು ನೋಡಿ ಎಲ್ಲರೂ ಹರ್ಷಭರಿತರಾದರು.

ರಾಣಿಗೆ ಲಗ್ನದ ದಿವಸಕ್ಕಿಂತ ಈ ದಿನ ಮಿಗಿಲಾದ ಸಂತೋಷವಾಯಿತು. ಮುಂದೆ ಆ ದಂಪತಿಗಳು ಬಹುಕಾಲ ಸುಖವಾಗಿ ಬಾಳಿದರು. ಮುಂದಿನ ವರುಷದಲ್ಲಿಯೇ ಅವರಿಗೆ ಒಬ್ಬ ಮಗನು ಹುಟ್ಟಿದನು. ಬಡ ಒಕ್ಕಲಿಗನಾದ ಮಾವನು ಅವರ ಬಳಿಯಲ್ಲಿಯೇ ಸುಖವಾಗಿದ್ದನು.

ಈ ಕಥೆಯಿಂದ ಸಹನಶೀಲತೆಯ ಪರಮಾವಧಿಯು ಎಷ್ಟು ಇರುವದೆಂಬದು ಚೆನ್ನಾಗಿ ಗೊತ್ತಾಗುವದು. ಆದರೆ ಈ ಪರಮಾವಧಿಗೆ ಮುಟ್ಟುವಂತೆ ಗಂಡಸನ್ನೇ ಆಗಲಿ, ಹೆಂಗಸನ್ನೇ ಆಗಲಿ ಕಾಡಬೇಕೆಂದು ಮಾತ್ರ ಯಾರೂ ತಿಳಿಯಬಾರದು. ತಮ್ಮಿಂದ ತಾವೇ ಒದಗುವ ಭಯಂಕರ ಸಂಕಟಗಳನ್ನು ಹೇಗೆ ಸಹಿಸಬೇಕೆಂಬದನ್ನು ತೋರಿಸುವದೇ ಈ ಕಥೆಯ ತಾತ್ಪರ್ಯವಾಗಿದೆ.

ರಮಾಬಾಯಿ ವಾರಗಾಂವಕರ.

ಕಥೆ—೩ ಚಳಿನಾಡಿನ ಬೆಗರಿಯು.

"ಬಂದೆಯಾ, ಅಕ್ಕಾ, ಬಾ; ಎಲ್ಲವೂ ನೆಟ್ಟಗೋ?" ಎಂದು ಗೌರಿಯೆಂಬ ಆಕಳು ಕಪ್ಪು ಬಣ್ಣದ ಕೃಷ್ಣೆಯೆಂಬ ಹೆಣ್ಣು ಕುದುರೆಯನ್ನು ಪ್ರೀತಿಯಿಂದ ಕರೆಯಿತು. ಗೌರಿಯು ದೊಡ್ಡದೊಂದು ಆಲದ ಗಿಡದ ನೆರಳಿನಲ್ಲಿ ಮೆಲಕಾಡಿಸುತ್ತ ಸಮಾಧಾನದಿಂದ

ನಿಂತಿತ್ತು. "ಅತ್ತ, ಬೇಲಿಯ ಆಚೆಗೆ ಹೊಸಬಳು ಒಬ್ಬಾಕೆ ಬಂದಿರುವಳಲ್ಲ! ಆಕೆಯನ್ನು ನೋಡಲಿಕ್ಕೆಂದು ನಾನು ಈಗ ಅತ್ತ ಹೋಗಿ ಬಂದೆನು. ಆಕೆ ಯಾವಳೆಂಬದು ನನಗಂತೂ ಗೊತ್ತೇ ಆಗಲೊಲ್ಲದು."

ಕೃಷ್ಣೆ:—ನೀನು ಆಕೆಯ ಹೆಸರು ಕೇಳಿದೇನು? ಆಕೆಯ ತವರು ಮನೆಯನ್ನಾದರೂ ಕೇಳಿದೇನು?

ಗೌರಿ:—ಓಹೋಹೋ, ಆಕೆ ಇಲ್ಲಿ ಬಂದ ದಿವಸವೇ ನಾನು ಆಕೆಗೆ ಎಷ್ಟೋ ಪ್ರಶ್ನೆಗಳನ್ನು ಕೇಳಿದೆನು. ಆವಳು ಉತ್ತರ ಕೊಟ್ಟಿರಷ್ಟೆ? ನನ್ನ ಮಾತು ಆವಳಿಗೆ ತಿಳಿದಂತೆ ನನಗೆ ಕಾಣಲಿಲ್ಲ. ಅವಳ ಮೋರೆಯು [illegible].

ಕೃಷ್ಣೆ:—(ಆಶ್ಚರ್ಯವಾಗಿ) ಬಹುಶಃ ಆಕೆಗೆ ಇನ್ನೂ ನಮ್ಮ ಮಾತು ತಿಳಿಯುತ್ತಿರಲಿಕ್ಕಿಲ್ಲ. ಯಾವುದೋ ದೇಶದ ಆಕೆ [illegible] ಆಕೆ [illegible].

ಗೌರಿ:—(ತನ್ನ [illegible] ತರುವಂತೆ ಮಾತಾಡಿ [illegible]) "ಏನು? ಆಕಳೇ. ಛೀ; ಆಕೆ ವಿಲ[illegible] ನನಗೆ ತೋರುತ್ತದೆ. ಇಷ್ಟು [illegible] ನೋಡಿದ್ದಾರೆ!!" "ಅಹಹ! [illegible] ನೋಡಿರುವರು." ಎಂದು [illegible] "ಆಕೆಯು ಯಾವುದೋ [illegible]" ಎಂದು [illegible]ವಾಗಿ ಕೃಷ್ಣೆಯು [illegible].

"[illegible] ಆ ಕೋಡುಗಳ ಗುಟ್ಟೇ [illegible]." ಎಂದು [illegible] ಸಮಾಧಾನದಿಂದ

ಗೌರಿಯು ನುಡಿದಳು. ಅವು ನಿಜವಾಗಿ ಕೋಡುಗಳಲ್ಲ. ಅವು ಗಿಡಗಳಿರಬೇಕೆಂದು ನನಗೆ ತೋರುತ್ತದೆ."

ಕೃಷ್ಣೆಯು ಗಟ್ಟಿಯಾಗಿ ಒಮ್ಮೆ ನಕ್ಕಳು.

ಗೌರಿ:—"ಇಗೋ; ಸಾಕು; ಇನ್ನು ನಿನ್ನ ಚೇಷ್ಟೆ. ಅವು ಗಿಡಗಳಂತೆಯೇ ಕಾಣುತ್ತವೆ. ಅವಳು ಸ್ವಲ್ಪ ದಿನಗಳ ಹಿಂದೆ ಬಂದಳಲ್ಲ, ಆಗ ಅವು ಸಣ್ಣ ಕೋಡುಗಳಂತೆ ಕಾಣುತ್ತಿದ್ದದ್ದು ನಿಜವು. ಆಗ ಅವುಗಳ ಮೇಲೆ ಸಣ್ಣ ಕೂದಲು ಮಾತ್ರ ಇತ್ತು. ಆದರೆ ಈಗ ಅವು ಬಹಳ ದೊಡ್ಡವಾಗಿವೆ; ಹಾಗೂ ಸಣ್ಣ ಗಿಡಗಳಂತೆ ಅವಕ್ಕೆ ಟೊಂಗೆಗಳು ಒಡೆಯಲಿಕ್ಕೆ ಹತ್ತಿವೆ. ಅವುಗಳನ್ನು ನೋಡಿದರೆ ನನಗೆ ಅಸಹ್ಯವಾಗುತ್ತದೆ. ಇತ್ತ ಬಾ. ಆ ಬೇಲಿಯ ಹತ್ತರ ಹೋಗಿ ನೀನು ಅವುಗಳನ್ನು ನೋಡೀಯಂತೆ."

ಇವೆರಡೂ ಕೂಡಿ ಆ ಹುಲ್ಲು ಭೂಮಿಯ ಮೇಲಿಂದ ಆಡ್ತಾಡುತ್ತ ಬೇಲಿಯ ವರೆಗೆ ಹೋದವು.

"ಎಲ್ಲಾ ನೆಟ್ಟಗೇನವ್ವಾ! ತಾಯಿ," ಎಂದು ಗೌರಿಯು ಎಂದಿನಂತೆ ಪ್ರೀತಿಯಿಂದ ಮಾತಾಡಿಸಿದಳು. "ಬಹಳ ದಿವಸಗಳಾದವು; ನಿನ್ನ ಭೆಟ್ಟಿಯಾಗಲಿಕ್ಕೆಂದು ನಾವಿಬ್ಬರೂ ಬಂದಿರುವೆವು. ನಾವು ನೆರೆಹೊರೆಯುವರಾದೆವಷ್ಟೆ? ನಿನ್ನ ಹೆಸರೇನವ್ವಾ?"

"ನನ್ನ ಹೆಸರು ರೇನ್‌ಡಿಯರ; ನಾನು ಚಿಗರಿಯು."

"ಅಹಹ! ಎಂಥ ಸವಿಯಾದ ಹೆಸರಿದು?" ಎಂದು ಕೃಷ್ಣೆಯು ನಡುವೆಯೇ ನುಡಿದಳು. ಗೌರಿಯು ಮಾತ್ರ ಟೊಂಗೆ ಟೊಂಗೆಯಾಗಿ ಹಬ್ಬುತ್ತಿರುವ ಆ ಕೋಡುಗಳನ್ನು ನೋಡುತ್ತ ಚಿರಗಾಗಿ ನಿಂತುಬಿಟ್ಟಿದ್ದಳು.

ಕೃಷ್ಣೆ:—"ನಮ್ಮ ದೇಶವು ನಿನಗೆ ಸೇರುತ್ತದಷ್ಟೆ?"

ಚಿಗರಿ:—"ಇಲ್ಲವ್ವಾ, ಇಲ್ಲಿ ಸೆಕೆ ಬಹಳ. ಗುಡ್ಡಗಳಂತೂ ಇಲ್ಲೇ ಇಲ್ಲ. ನಾನು ನಮ್ಮ ಲಾಪಲಂಡಕ್ಕೆ ಹೋಗಬೇಕೆನ್ನುತ್ತೇನೆ. ಗುಡ್ಡಗಳನ್ನೇರದೆ ಹೀಗೆಯೇ ಬೈಲಿನಲ್ಲಿ ಓಡಾಡುತ್ತಿದ್ದರೆ, ಗುಂಗಾಡುಗಳಾಗುವ ಕಾಲದಲ್ಲಿ ಅವು ಕಡಿದು ಕಡಿದು ನನ್ನನ್ನು ಕೊಂದು ಬಿಡುವವೆಂದು ನನಗೆ ಎನಿಸುತ್ತದೆ."

ಕೃಷ್ಣ:—"ಗುಂಗಾಡುಗಳು! ಅಂದರೇನು! ಅವುಗಳನ್ನು ನಾನು ನೋಡಿಯೇ ಇಲ್ಲ."

ಚಿಗರಿ:—ಅವು ಬಹಳ ಭಯಂಕರವಾದ ನೊಣಗಳು. ಅವು ಕಡಿದರೆ ಬಹಳ ನೋವೆನಿಸುತ್ತದೆ."

ಗೌರಿ:—(ತನ್ನ ಉದ್ದವಾದ ಬಾಲದಿಂದ ನೊಣಗಳನ್ನು ಬಾರಿಸುತ್ತ) ಈ ಚೊಟ್ಟ ದೊಡ್ಡ ಕೋಡುಗಳ ಬದಲು ನೀನು ಉದ್ದವಾದ ಬಾಲವನ್ನು ಯಾಕೆ ಬೆಳಸಿಕೊಂಡಿಲ್ಲ?"

ಚಿಗರಿ:—(ಗಾಬರಿಯಾಗಿ) "ಆದರೆ ಕೋಡುಗಳ ಕೆಲಸವನ್ನು ಬಾಲವು ಹೇಗೆ ಮಾಡೀತು? ಉದ್ದ ಬಾಲದಿಂದ ಹಿಮವನ್ನು ನಾನು ಅಗೆದು ತೆಗೆಯುವದು ಹೇಗೆ?"

ಮಕ್ಕಳಿಬ್ಬರೂ ಗೊಳ್ ಎಂದು ನಕ್ಕರು.

ಗೌರಿ:—"ಹಿಮವನ್ನು ಅಗೆದು ತೆಗೆಯುವದು ನಿನಗೆ ಯಾಕೆ ಬೇಕು?"

ಚಿಗರಿ:—(ಸೋಜಿಗದಿಂದ) ಯಾಕೆಂದರೆ? ಚಳಿಗಾಲದಲ್ಲಿ [illegible] ಚಳಿಗಾಲದಲ್ಲಿ ಇಲ್ಲಿ ನೆಲವೆಲ್ಲ ಹಿಮದಿಂದ ಮುಚ್ಚಿ ಹೋಗುವದಿಲ್ಲೇನು?"

ಗೌರಿ:—"ಇಲ್ಲ, ಆಗ ಇಲ್ಲಿ ಬಹಳ ಚಳಿ ಬೀಳುವದು. ನಮ್ಮ [illegible] (ಹಲ್ಲು ಚಪ್ಪರಿಸುತ್ತ) ನಾವು

ಸವಿಯಾದ ದಂಟು ತಿಂದು ಸುಖದಿಂದಿರುವೆವು." ಪಾಪ! ಗೌರಿಗೆ ಕಳೆದ ಚಳಿಗಾಲದ ಸವಿಸವಿ ನೆನಪಾಯಿತು.

ಚಿಗರಿ:—"ಅಹಹ! ನನಗೂ ನನ್ನ ಮನೆಯು ನೆನಪಾಗುವದು. ಆದರೆ ನನ್ನನ್ನು ಮನೆಯಲ್ಲಿಟ್ಟರೆ ನಾನು ಸತ್ತು ಹೋಗುವೆನು." (ನಿಟ್ಟುಸುರುಗರೆದು) "ಆದರೂ ನನಗೆ ನಮ್ಮೂರಿಗೆ ಹೋಗಬೇಕೆನಿಸುತ್ತದೆ."

ಗೌರಿಯು:—"ಹೌದವ್ವಾ, ಒಡೆಯನು ನಿನ್ನನ್ನು ಬೇಗನೆ ನಿಮ್ಮೂರಿಗೆ ಕಳಿಸುವಂತೆ ನನಗೆ ಕಾಣುತ್ತದೆ. ಚಿಗರಿಗಳನ್ನು ಚಂದಕ್ಕೋಸ್ಕರ ಮಾತ್ರ ಸಾಕುವದುಂಟು. (ನಿರ್ದಯದಿಂದ) ನಿನ್ನ ಚಂದವಂತೂ ಎಲ್ಲಿರುವದೋ? (ಡೌಲಿನಿಂದ) ಇಲ್ಲಿರುವವರೆಲ್ಲರಿಂದಲೂ ಏನಾದರೂ ಉಪಯೋಗವಾಗಬೇಕು. ನಾನಂತೂ, ಒಡೆಯನಿಗೂ ಆತನ ಕುಟುಂಬಕ್ಕೂ ಹಾಲು ಕೊಡುತ್ತೇನೆ."

ಚಿಗರಿ:—(ಮೆತ್ತಗೆ) "ನಾನಾದರೂ ನಮ್ಮೂರಲ್ಲಿ ಹಾಗೆಯೇ ಮಾಡುವೆನು."

ಕೃಷ್ಣ:—"ನೋಡಿದೆಯಾ. ಗೌರೀ? ನಾನು ನಿನಗೆ ಹೇಳಲಿಲ್ಲೇ? ಇವಳು ಒಂದು ತರದ ಆಕಳೆಂದು? ಇವಳು ಚಿಗರಿಯೆಂದರೆ ನಾನಂತೂ ನಂಬೆನು. (ಚಿಗರಿಯ ಕಡೆಗೆ ನೋಡಿ) ನಾನು ನಿಮಗಿಂತ ಹೆಚ್ಚು ಕೆಲಸ ಮಾಡುತ್ತೇನೆ. ನಮ್ಮೊಡೆಯನ ಗಾಡಿಯನ್ನು ಎಳೆಯುತ್ತೇನೆ."

ಚಿಗರಿ:—"ಹೀಗೇನು? ಅದೇಕೆ? ಲಾಪಲಂಡದಲ್ಲಿ ನಾವು ಈ ಕೆಲಸವನ್ನೂ ಮಾಡುತ್ತೇವೆ."

ಹಾ! ಹಾ! ಹಾ! ಎಂದು ಹಿಂದಿನಿಂದ ಬಂದ ಒಂದು ಕುದುರೆಯು ನಕ್ಕಿತು. "ನೀವಿಬ್ಬರು ಬಹಳ ದೊಡ್ಡವರೆಂದು ತಿಳಿದಿರುವಿರಿ. ಆದರೆ

ಈ ಚಿಗರಿಯು ನೀವಿಬ್ಬರೂ ಕೂಡಿ ಮಾಡುವ ಕೆಲಸವನ್ನು ಮಾಡುವದು. ಯಾವಾಗಲೂ ದೊಡ್ಡವರು ಮಾಡುವ ಕೆಲಸ ಸ್ವಲ್ಪವೇ."

ಇಷ್ಟರಲ್ಲಿಯೇ ಗೌರಿಯೂ ಕೃಷ್ಣೆಯೂ ತಿರುಗಿ ಮಾತಾಡದೆ ತಮ್ಮ ಹಾದಿ ಹಿಡಿದವು. ಕುರಿಯು ನಗೆಮೊಗದಿಂದ ಚಿಗರಿಯ ಕಡೆಗೆ ತಿರುಗಿ "ಕಡೆಗೆ ನೀನು ಅವರ ಸೊಕ್ಕಮುರಿದದ್ದನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ಕೇಳಿ ಕೇಳಿ ಸಾಕಾಯಿತವಮ್ಮಾ! ತಮಗಿಂತ ಹೆಚ್ಚಿನವರು ಯಾರೂ ಇಲ್ಲಂತೆ. ಹಾಲು ಕೊಡುವದು, ಬಂಡಿ ಎಳೆಯುವದು ಇವು ಕೆಲಸಗಳು ಸರಿಯೇ, ಆದರೆ ಕುರಿಗಳಾದ ನಾವೇ ಇನ್ನೂ ಹೆಚ್ಚು ಮಹತ್ವದ ಕೆಲಸ ಮಾಡುತ್ತೇವಲ್ಲ! ಜನರ ಆಹಾರವನ್ನೂ, ಅವರ ಅರಿವೆ ಅಂಚಡಿಗಳನ್ನೂ ನಾವು ತಾನೆ ಪೂರೈಸಿ ಕೊಡುತ್ತೇವಲ್ಲ!"

"ಹೌದು, ಹೌದು," ಎಂದು ಚಿಗರಿಯು ಶಾಂತವಾಗಿ ಅಂದಿತು. "ಇದು ಬಹಳ ಮಹತ್ವದ ಕೆಲಸವೇ ಸರಿ. ಲಾಪ [illegible] ನಾವೂ ಈ ಕೆಲಸವನ್ನು ಮಾಡುತ್ತೇವೆ."

ಕುರಿಗೆ ಬಹಳ ಸೋಜಿಗವೆನಿಸಿತು. ಅದರ ಬಾಯಿಂದ ಶಬ್ದವೇ ಹೊರಡಲಿಲ್ಲ. ಆದಾಗ್ಯೂ ಸಣ್ಣಮೋರೆ ಮಾಡಿಕೊಂಡು ಮೆಲ್ಲನೆ ತಿರುಗಿ ಹೋಗಿ ಗೌರಿಯನ್ನೂ, ಕೃಷ್ಣೆಯನ್ನೂ ಕೂಡಿಕೊಂಡಿತು. ಬಳಿಕ ಮೂರೂ ಕೂಡಿ "ಎಲ್ಲವೂ ತಮಗೇ ಬರುತ್ತದೆ. ಎಲ್ಲವನ್ನು ತಾವೇ ಮಾಡುತ್ತೇವೆ" ಎಂದು ಜಂಬ [illegible] ಬಗ್ಗೆ ಮಾತಾಡುತ್ತ ನಿಂತವು.

ಕೃಷ್ಣೆ:— ([illegible]) "ಹೌದಪ್ಪಾ, ಪ್ರತಿಯೊಬ್ಬರು ತಮ್ಮ ಕೆಲಸವನ್ನಷ್ಟು ಮಾಡಿದರೆ ತೀರಿತು. ಇನ್ನೊಬ್ಬರ ಕೆಲಸದ ಗೊಡವೆ ನಮಗೇಕೆ? [illegible] ಆ ಚಿಗರಿಯ ಸಂಗಡ [illegible]"

ಗೌರಿ:— (ಹುಬ್ಬು ಗಂಟು ಹಾಕಿ) "ನಾನು ಆಕೆ ಇರುವಲ್ಲಿಗೆ ಹೋಗುವದೇ ಇಲ್ಲ."

ಕುರಿ:— "ಬಹುಶಃ ನಮ್ಮ ಕೆಲಸವನ್ನೆಲ್ಲ ತಾನು ಮಾಡಿ, ನಮ್ಮನ್ನು ಇಲ್ಲಿಂದ ಅಟ್ಟಬೇಕೆಂದು ಆ ಚಿಗರಿಯು ಹಂಚಿಕೆ ತೋರುತ್ತದೆ. ಇರಲಿ, ನಾಯಿಗೆ ಈ ಮಾತು ಹೇಳುತ್ತೇನೆ. ಗಿಡದಂಥ ಕೋಡುಗಳುಳ್ಳ ಆ ಚಿಗರಿಯ ಹಿಂಡನ್ನು ಕಾಯುವಾಗ ನಾಯಿಗೆ ಏನೆನಿಸಬಹುದು?"

ಆದರೆ ಇವರ ಸಿಟ್ಟು ಬಹಳ ದಿವಸ ಉಳಿಯಲಿಲ್ಲ. ಪಾಪ! ಆ ಚಿಗರಿಗೆ ತನ್ನ ನಾಡಿನ ಸ್ವಚ್ಛವಾದ ತಂಪು ಹವೆಯನ್ನು ಬಿಟ್ಟು, ಕಾಯುವ ಬಿಸಿಲಿನ ತಾಪದಲ್ಲಿ ಇರುವದು ಆಗಲಿಲ್ಲ. ಮುಂದೆ ನಾಲ್ಕಾರು ವಾರಗಳಲ್ಲಿ ಅದು ಬೇನೆ ಬಿತ್ತು. ಹಾಗೂ ಸ್ವಲ್ಪ ದಿವಸಗಳಲ್ಲಿಯೇ ಸತ್ತುಹೋಯಿತು.

ಹುಡುಗೆಯರ ತಾಯಿತಂದೆಗಳ ಸಹಕಾರಿತ್ವದ ಅವಶ್ಯಕತೆಯು.

ಶಿಕ್ಷಿಕೆಯರ ಕೆಲಸವು ಸುಸೂತ್ರವಾಗಿ ಸಾಗುವದೂ ಅದರಲ್ಲಿ ಯಶದೊರೆಯುವದೂ ಹುಡುಗೆಯರ ಪಾಲಕರ ಸಹಕಾರಿತ್ವವನ್ನು ಕೆಲಮಟ್ಟಿಗೆ ಅವಲಂಬಿಸಿರುತ್ತದೆ. ಬಾಲಿಕೆಯರು ದಿನಾಲು ಶಾಲೆಗೆ ಬಂದು ತಮ್ಮ ಕೆಲಸವನ್ನು ಉತ್ತಮ ರೀತಿಯಿಂದ ಮಾಡಿದರೆ ಮಾತ್ರ ಶಿಕ್ಷಿಕೆಯು ಕೆಲಸದಲ್ಲಿ ಯಶದೊರೆಯುವದು; ಈ ಬಗ್ಗೆ ಅವರ ಪಾಲಕರು ವಿಶೇಷ ಕಾಳಜಿಯನ್ನು ತಕ್ಕೊಳ್ಳಬೇಕಾಗುವದು. ಹಳ್ಳಿಗಳಲ್ಲಿ ನೇಗಾರಿಕೆ, ಒಕ್ಕಲತನ ಕೂಲಿ ಮುಂತಾದ ಉದ್ಯೋಗಗಳಿಂದ ಜೀವಿಸುವ ಕುಟುಂಬಗಳೇ ಬಹಳ. ಇಂಥ ಕುಟುಂಬಗಳಲ್ಲಿಯ ಸ್ತ್ರೀಪುರುಷರಿಬ್ಬರೂ

ಯುಳ್ಳವರಾಗಿರಬೇಕು. "ಮೇಲಿನ ನಂಬರಿನ ಹುಡುಗೆಯರು ಕಲಿತರೆ ಸಾಕು. ನಾವು ಕಲಿಸಿದಂತಾಗಲಿಲ್ಲವೋ? ಉಳಿದವರು ಕಲಿಯಲಿ, ಬಿಡಲಿ," ಎಂದು ಅನ್ನದೆ ತಿಳಿಯದ ಹುಡುಗೆಯರಿಗೆ ತಿಳಿದ ಹುಡುಗೆಯರಿಂದ ತಿಳಿಸಲಿಕ್ಕೆ ಹಚ್ಚಬೇಕು; ಅವರ ಕಾಪಿ ಮುಂತಾದವುಗಳನ್ನು ನೋಡಲಿಕ್ಕೆ ಕೊಡಬೇಕು; ತಾನೂ ಹೇಳಬೇಕು. ಈ ರೀತಿ ಸಮಾನ ಪ್ರೀತಿಯಿಂದ ಅವರನ್ನು ಮುಂದು ಮಾಡಿದರೆ ಬಾಲಿಕೆಯರು ಸಂತೋಷಪಡುವರಲ್ಲದೆ ಶಿಕ್ಷಿಕೆಯರಲ್ಲಿಯೂ ಪೂಜ್ಯಬುದ್ಧಿಯುಳ್ಳವರಾಗುವರು.

೭. ಯಾವಾಗಲೂ ಹುಡುಗೆಯರ ಕಲ್ಯಾಣವನ್ನೇ ಚಿಂತಿಸುತ್ತ ಹಾಗು ಹಿತವಮಾಡುತ್ತ ಇರೋಣ:— ಶಿಕ್ಷಕೆಯರು ಯಾವಾಗಲೂ ಬಾಲಿಕೆಯರ ಸ್ವಚ್ಛತೆ, ಅಭ್ಯಾಸ, ನೀತಿಗಳ ಕಡೆಗೆ ಹೆಚ್ಚು ಲಕ್ಷ್ಯಕೊಡಬೇಕು. ಅವರ ಪಾಲಕರ ಮನಸ್ಸನ್ನು ಒಲಿಸಿಕೊಂಡು ಅವರಿಂದ ಹೆಚ್ಚಿನ ಅಭ್ಯಾಸವನ್ನು ಮಾಡಲಿಕ್ಕೆ ಹಚ್ಚಿಸಬೇಕು. ವಿದ್ಯಾರ್ಥಿನಿಯರು ಕಲಿತ ವಿಷಯಗಳಿಂದ ಅವರ ಕಲ್ಯಾಣವಾಗುತ್ತಿರಬೇಕು. ತಮ್ಮ ವಿದ್ಯಾರ್ಥಿನಿಯರು ಕಲಿತು ಬುದ್ಧಿವಂತರಾಗಿ ತಮ್ಮಂತೆ [illegible] ತಿಳಿಹೇಳಹತ್ತಿದರೆ ಅವರ ಕಲ್ಯಾಣದ ಸಲುವಾಗಿ ಚಿಂತಿಸಿದ್ದು ಕಲಿಸಿದ್ದು ಸಾರ್ಥಕವಾಯಿತೆಂದು ಶಿಕ್ಷಕೆಯರು [illegible].

೮. ಶಿಕ್ಷಕೆಯರು [illegible] ಮನೆಗೆ ಹೋಗದಿರೋಣ:— ಅಷ್ಟಕ್ಕೆ ಇಷ್ಟಕ್ಕೆ [illegible] ಮನೆಗೆ ಹೋದರೆ ಅವರ ವರ್ಚಸ್ಸು ಕಡಿಮೆಯಾಗುವದು. [illegible] ಹೋಗತಕ್ಕ ಮನೆಗಳ ಸ್ಥಿತಿರೀತಿಗಳನ್ನು ತಿಳಿದುಕೊಂಡು ಹೋಗುತ್ತಿರಬೇಕು. ದುಷ್ಟರ ನೆರಳಿಗೆ ಸಹ ಹೋಗಬಾರದು.

೯. ತಾನಿರುವ ಸ್ಥಳದಲ್ಲಿ ಮಂದಿಯ ಗುಂಪನ್ನು ಕೂಡಗೊಡದಿರೋಣ:— ಸುಮ್ಮಸುಮ್ಮನೆ ಹಿಂದೂ ಜನರು ಗುಂಪುಗೂಡುವದು ಸರಿಯಲ್ಲ. ಇಂಥ ಗುಂಪಿನಲ್ಲಿ ಶಿಕ್ಷಕೆಯು ತಾನು ಕೂಡುವದಾದರೆ ಅವರಿಗೆ ಪುರಾಣ, ಕಥೆ, ಶಾಸ್ತ್ರ ಮೊದಲಾದವುಗಳನ್ನು ಹೇಳುತ್ತ ಕೂಡ್ರಬೇಕು. ನಿರರ್ಥಕವಾಗಿ ಒಬ್ಬ ವ್ಯಕ್ತಿಗೆ ಸಂಬಂಧಿಸಿದ ಮಾತುಗಳನ್ನು ಆಡಬಾರದು. ಚೇಷ್ಟೆಯಲ್ಲಿ ಹೊತ್ತುಗಳೆಯಬಾರದು. ಇದರಿಂದ ಶಿಕ್ಷಕೆಯರ ದೊಡ್ಡಸ್ತಿಕೆಯು ಕಡಿಮೆಯಾಗುವದು.

೧೦. ವಿದ್ಯಾವ್ಯಾಸಂಗ ನೈತಿಕ ಗ್ರಂಥಾವಲೋಕನಗಳಲ್ಲಿ ಕಾಲ ಕಳೆಯೋಣ:— ಬರೇ ದುಡ್ಡು ಗಳಿಸುವದರಲ್ಲಿ ಕಾಲಕಳೆಯಬಾರದು. ಶಾಲೆಗೆ ಬಂದು ತಿಂಗಳಿಗೊಮ್ಮೆ ಪಗಾರ ತೆಗೆದುಕೊಂಡು ಉಳಿದ ಉದ್ಯೋಗದಲ್ಲಿ ತೊಡಗಿ ದುಡ್ಡು ಗಳಿಸುವದರಲ್ಲಿ ಹೊತ್ತುಗಳೆಯುವದು ಅವರ ಕರ್ತವ್ಯವಲ್ಲ. ನೀತಿಪರವಾದ ಪುಸ್ತಕಗಳನ್ನು ಓದಿ ತಿಳಕೊಳ್ಳುವದೂ ಹೆಚ್ಚಿನ ವಿಷಯಗಳ ಜ್ಞಾನಮಾಡಿಕೊಳ್ಳುವದೂ ಶಿಕ್ಷಕೆಯರ ಕರ್ತವ್ಯವಾಗಿದೆ.

೧೧. ಪ್ರತಿ ಆರು ತಿಂಗಳಿಗೊಮ್ಮೆ ವಿದ್ಯಾರ್ಥಿನಿಯರ ಪಾಲಕರ ಸಮ್ಮೇಲನ ಮಾಡಿಸಿ ತಾನು ಕಲಿಸಿದ ವಿಷಯಗಳನ್ನೂ ಕೈಕೆಲಸಗಳನ್ನೂ ತೋರಿಸೋಣ:— ಕಲಿಸಿದ ವಿಷಯಗಳನ್ನು ಅಂದರೆ ಕಸೂತಿ, ಹೊಲಿಗೆ, ಡ್ರಾಯಿಂಗ, ಕಥೆ, ಹಾಡು, ಡ್ರಿಲ್, ರಂಗವಲ್ಲಿ ಮುಂತಾದವುಗಳನ್ನು ತಯಾರಿಸಿ ತೋರಿಸಬೇಕು. ಮತ್ತು ತಾನು ಒಂದೆರಡು ವಿಷಯಗಳನ್ನು ಕಲಿಸಿ ತೋರಿಸಬೇಕು. ಅಂದರೆ ಹುಡುಗೆಯರ ಸಂಖ್ಯೆಯು ಬೆಳೆಯುವದು. ಶಿಕ್ಷಕೆಯನ್ನು ಜನರು ಸನ್ಮಾನಿಸುವರು. ಶಾಲೆಯ ಬಗ್ಗೆ ಅಭಿ

ಮಾನಿಗಳಾಗುವರು. ಶಾಲೆಯು ಸುಧಾರಿಸುವದು. ಬಾಲಿಕೆಯರು ಬುದ್ಧಿವಂತರಾಗುವರು.

೧೨. ಶಿಕ್ಷಕಿಯು ಮೃದು ನುಡಿಯುವಳಿದ್ದರೆ ವಿದ್ಯಾರ್ಥಿನಿಯರು ಅದರಂತೆ ಆಗುವರು:— ನಮ್ಮ ಕನ್ನಡ ಮಾತು ಬಿರುಸು. ಆದ್ದರಿಂದ ಮಕ್ಕಳಿಗೆ ಮೃದು ನುಡಿ ಕಲಿಸಬೇಕು. ಹಿರಿಯರ ಸಂಗಡ ನಡಕೊಳ್ಳುವ ಬಗೆ, ಚಿಕ್ಕಮಕ್ಕಳ ಕೂಡ ವರ್ತಿಸುವ ರೀತಿ, ಓರಿಗೆಯವರೊಡನೆ ನಡೆಯುವ ತರ, ಬಂದವರ ಆದರಾತಿಥ್ಯ ಮುಂತಾದ ಪ್ರಸಂಗದಲ್ಲಿ ನಡೆಯುವ ಶಿಷ್ಟಾಚಾರಗಳನ್ನು ಕಲಿಸಿ ಅವರು ಮನೆಯಲ್ಲಿ ಹಾಗೇ ನಡೆಯುವಂತೆ ಮಾಡಬೇಕು. ಹುಡುಗಿಯರ ಮಾತು-ಕಥೆ-ನಡತೆಗಳಿಂದ ಪಾಲಕರಿಗೆ ಬುದ್ಧಿ ಬರುವಂತೆ ಮಾಡಿದರೆ ನಿಜವಾಗಿ ತಮ್ಮ ಮಕ್ಕಳು ಸುಶಿಕ್ಷಿತರಾಗುತ್ತಾರೆಂಬ ನಂಬಿಗೆಯು ಪಾಲಕರಲ್ಲಿ ಹುಟ್ಟುವದು. ಶಾಲೆಯಲ್ಲಿ ಶಿಕ್ಷಕಿಯರು ತಮ್ಮ ವಿದ್ಯಾರ್ಥಿನಿಯರೊಡನೆ ಮಾತಾಡುವಾಗ '[illegible]' ಇತ್ಯಾದಿ. ಬಿರುಸು ಮಾತಿನಿಂದ ಕರೆದರೆ ಆ ಹುಡುಗಿಯರು ನಿರ್ವಾಹವಿಲ್ಲದೆ 'ಮಾಸ್ತರ! ಅಕ್ಕಾ! ಬಾಯಿ' ಎಂದು ಅನ್ನುವರು. ನಿಜವಾದ ಪೂಜ್ಯಬುದ್ಧಿಯು ಮಾತ್ರ ಶಿಕ್ಷಕಿಯ ಮೇಲೆ ಕಾಣುವದಿಲ್ಲ. ಗುರುಗಳೇ ಈ ಪ್ರಕಾರ ಮಾತಾಡಿದರೆ ವಿದ್ಯಾರ್ಥಿನಿಯರಿಗೆ ಅದೇ ಚಟ ಬಿದ್ದು ಬಿರುಸು ಮಾತುಗಳೇ ಕಾಣುವವು. ಕಡೆಗೆ ಯಾರು ತಪ್ಪಿಸಲಿಕ್ಕೆ [illegible] ತಪ್ಪುವದಿಲ್ಲ. ಗುರುಗಳು ಮೃದು ನುಡಿಯಿಂದ ವಿದ್ಯಾರ್ಥಿನಿಯರೊಡನೆ ಮಾತಾಡಿದರೆ ಹುಡುಗಿಯರು ಸಂತೋಷದಿಂದ "[illegible]" ಎಂದು ಅನ್ನುವರು. [illegible] ಹುಡುಗಿಯರು ಒಂದು ವೇಳೆ ಬಿರುಸು ಮಾತಾಡಿದರೆ "[illegible] ಅಕ್ಕನವರು [illegible] ಮರ್ಯಾದೆಯಿಂದ

ಮಾತಾಡುವರು; ನೀವೇಕೆ ಹೀಗೆ ಅನ್ನುವಿರಿ?" ಎಂದು ನಿರ್ಭೀಡೆಯಿಂದ ಕೇಳುವರು. ಹುಡುಗಿಯರು ತಮಗೆ ಇತರರಿಂದ ಮರ್ಯಾದೆ ದೊರೆಯಬೇಕೆಂಬ ಅಭಿಲಾಷೆಯುಳ್ಳವರಾಗುವರು. ಈ ಪ್ರಕಾರವಾಗಿ ನೀತಿಯನ್ನು ಕಲಿಸಬೇಕು.

ವಿಷಯಜ್ಞಾನವೊಂದೇ ಆದರೆ ಕಲಿಸಿದಂತಾಗಲಿಲ್ಲ; ಪ್ರಪಂಚದಲ್ಲಿ ನಡೆಯುವ ಯಾವತ್ತೂ ಶಿಷ್ಟಾಚಾರಗಳನ್ನು ಕಲಿಸಿ ತಯಾರ ಮಾಡುವದು ಮುಖ್ಯ ಕರ್ತವ್ಯವು. ಹೀಗೆ ಚಿಕ್ಕಮಕ್ಕಳು ಸುಶಿಕ್ಷಿತರಾದ ಮೇಲೆ ಮನೆಯವರಲ್ಲಿ ಶಿಕ್ಷಕಿಯರ ವಿಷಯಕ್ಕೆ ಪೂಜ್ಯಬುದ್ಧಿಯು ಹುಟ್ಟುವದು. ಶಿಕ್ಷಕಿಯು ಹುಡುಗಿಯರಿಗೆ ಕಿತ್ತೆಯಾಗಿರುವಳು. ಆಕೆಯ ಸ್ವಚ್ಛತನ, ಸಭ್ಯತನ, ಸಾಧಾವರ್ತನ, ಮೃದುನುಡಿ, ಪರರ ಕಲ್ಯಾಣದ ಕಾಳಜಿ ಇತ್ಯಾದಿ ಸದ್ಗುಣಗಳು ಅವಳ ಮುಖದಲ್ಲಿಯೂ ಕೃತಿಯಲ್ಲಿಯೂ ಕಾಣುತ್ತಿರಬೇಕು. ಶಿಕ್ಷಕಿಯರ ರೀತಿ ನಡತೆಗಳನ್ನು ನೋಡಿ, ಹುಡುಗಿಯರು ತಾವೂ ಅವರಂತೆ ಆಗಲಿಕ್ಕೆ ಯತ್ನಿಸುವರು. ಆಕೆಯಲ್ಲಿ ನೆಲೆಗೊಂಡ ಸಭ್ಯನಡತೆಗಳೆಲ್ಲ ಅವರಲ್ಲಿ ನೆಲೆಗೊಳ್ಳಲು ಸಂಶಯವಿಲ್ಲ. ಆಕೆಯು ಹುಡುಗಿಯರೊಡನೆ ಮಾತಾಡಬೇಕಾದರೆ ಪ್ರೀತಿಯೂ ಗಾಂಭೀರ್ಯವೂ ಉತ್ಸುಕತೆಯೂ ಆಕೆಯ ಮೋರೆಯಲ್ಲಿ ತೋರುತ್ತಿರಬೇಕು. ಅಂದರೆ ಶಿಕ್ಷಕಿಯರಂತೆ ವಿದ್ಯಾರ್ಥಿನಿಯರೂ ಆಗುವರು. ತಾಯಿಯಂತೆ ಮಗಳು, ಅತ್ತೆಯಂತೆ ಸೊಸೆ, ಗುರುವಿನಂತೆ ಶಿಷ್ಯ ಎಂಬ ನಾಣ್ನುಡಿಯು ಸುಳ್ಳಲ್ಲ. ಹೊತ್ತಿಗೆ ಶಾಲೆಗೆ ಹೋಗುವದು ಅವಶ್ಯವು; ಯಾಕಂದರೆ ಶಿಕ್ಷಕಿಯರು ಹೊತ್ತಿಗೆ ಶಾಲೆಗೆ ಬರುತ್ತಿದ್ದರೆ ನಮ್ಮ ಅಕ್ಕನವರು ತೀವ್ರವಾಗಿ ಶಾಲೆಗೆಬರುವರೆಂದು ಅರಿತು ತಮ್ಮ ತಾಯಿತಂದೆಗಳಿಗೆ ಹೇಳಿ ಕೂಡಲೆ ಬರುವರು. ಇದಕ್ಕೆ ಅನುಸರಿಸಿ ನುಡಿದಂತೆ ನಡೆಯುತ್ತಿರಬೇಕು. ಮುಖ್ಯವಾಗಿ ಶಿಕ್ಷಕಿಯರು ಪಾಲಕರ ಗುರುತು ಮಾಡಿಕೊಂಡು ಅವರ ಮಕ್ಕಳನ್ನು ತಮ್ಮ ಮಕ್ಕಳೆಂದು ಭಾವಿಸಿ

ಅವರ ಕೂಡ ಪ್ರೀತಿಯಿಂದ ನಡೆದು, ದಯಾ ದರ್ಪಗಳೆರಡನ್ನೂ ಬೆರಿಸಿ, ಹುಡುಗೆಯರ ಕಲ್ಯಾಣವನ್ನು ಕೃತಿಯಿಂದ ತೋರಿಸುತ್ತಿರಬೇಕು. ಅಂದರೆ ಪಾಲಕರು ಶಿಕ್ಷಕಿಯರಿಗೆ ಸಹಾಯಮಾಡುವರು. ಕಾರಣ ಶಿಕ್ಷಕಿಯು ಹುಡುಗೆಯರಿಗೆ ಮಿತ್ರೆಯಾಗಿರುವಳು. ಇನ್ನೂ ಅನೇಕ ಸಂಗತಿಗಳಿವೆ. ಹೀಗೆ ನಡೆದರೆ ಬಹುಶಃ ಪಾಲಕರ ಮನಸ್ಸು ಶಾಲೆಯ ಕಡೆಗೆ ಒಲಿಯುವದಲ್ಲದೆ ಶಿಕ್ಷಕಿಯರು ವಿದ್ಯಾರ್ಥಿನಿಯರ ಗುರುಗಳಷ್ಟೇ ಅಲ್ಲ, ಆ ಊರಲ್ಲಿರುವ ಚಿಕ್ಕ ದೊಡ್ಡ ಮನುಷ್ಯರಿಗೆಲ್ಲ ಗುರುಗಳಾಗಿ ಅವರಿಂದ ನಮಸ್ಕಾರ ಮಾಡಿಸಿಕೊಳ್ಳಲಿಕ್ಕೆ ತಕ್ಕವರಾಗುವರು.

ತುಳಸಾಬಾಯಿ ನೀಲಗಾರ

ವಸ್ತುಪಾಠಗಳು.

ಜ್ಞಾನಸಂಪಾದನೆಗೆ ಇಂದ್ರಿಯಗಳೇ ಮುಖ್ಯ ಸಾಧನಗಳು. ಇಂದ್ರಿಯಗಳ ದ್ವಾರವಾಗಿ ಹುಡುಗರಲ್ಲಿ ಜ್ಞಾನವನ್ನುಂಟುಮಾಡಲು, ವಸ್ತುಪಾಠವು ಅತ್ಯಂತ ಸಹಾಯಕಾರಿಯಾದದ್ದು. ಯಾಕಂದರೆ ವಸ್ತುಪಾಠವನ್ನು ವಸ್ತುಗಳ ಪ್ರತ್ಯಕ್ಷ ದರ್ಶನದಿಂದಲೇ ಕಲಿಸಬೇಕಾಗುವದು. ವಸ್ತುವಿನ ಗುಣಧರ್ಮಗಳನ್ನು ಪ್ರತ್ಯಕ್ಷ ವಸ್ತುಗಳನ್ನು ನೋಡಿ ಗೊತ್ತುಮಾಡುವದಿದ್ದದರಿಂದ, ಅಲ್ಲಿ ಇಂದ್ರಿಯಗಳ ಉಪಯೋಗವು ಅವಶ್ಯವಾಗಿ ಆಗುವದು.

(೧) ವಸ್ತುಪಾಠಗಳ ಉದ್ದೇಶಗಳು:— ಜ್ಞಾನೇಂದ್ರಿಯಗಳ ಬೆಳವಣಿಗೆಯೂ ಸುಧಾರಣೆಯೂ.— ಜ್ಞಾನೇಂದ್ರಿಯಗಳ ಮೂಲಕವಾಗಿಯೇ ಮನುಷ್ಯನಿಗೆ ಎಲ್ಲ ಜ್ಞಾನವುಂಟಾಗುವದು. ಆದ್ದರಿಂದ ಜ್ಞಾನೇಂದ್ರಿಯಗಳನ್ನು ಬಲಪಡಿಸುವದು ಅತ್ಯವಶ್ಯಕವು. ಜ್ಞಾನೇಂದ್ರಿಯಗಳ ಮೂಲಕವಾಗಿ ಪ್ರಾಪ್ತವಾದ ಜ್ಞಾನವು ಅಪೂರ್ಣವಾದದ್ದು, ದೋಷಪೂರ್ಣವಾದದ್ದೂ ಇದ್ದರೆ, ನಮ್ಮ [illegible], ನಾವು ತೆಗೆಯುವ ಸಿದ್ಧಾಂತಗಳೂ ನಿಶ್ಚಯ [illegible]. [illegible] ಇದ್ದಾಗ ಅದನ್ನು

ತ್ತಿದ್ದುವದೂ, ನಮಗೆ ಇಷ್ಟವಿದ್ದಂತೆ ಮಣಿಸುವದೂ ಎಷ್ಟು ಸಾಧ್ಯವಿರುವದೋ ಅಷ್ಟು ದೊಡ್ಡವಾದನಂತರ ಸಾಧ್ಯವಾಗುವದಿಲ್ಲ. ಅಂತೆಯೇ ಪ್ರೌಢವಯಸ್ಸಿಗಿಂತ ಚಿಕ್ಕ ವಯಸ್ಸಿನಲ್ಲಿಯೇ ಜ್ಞಾನೇಂದ್ರಿಯಗಳ ಬೆಳವಣಿಗೆಯನ್ನೂ, ಸುಧಾರಣೆಯನ್ನೂ ಮಾಡುವದು ಸಾಧ್ಯವಿರುವದು ಆದ್ದರಿಂದ ಚಿಕ್ಕಮಕ್ಕಳ ಶಿಕ್ಷಣದಲ್ಲಿ ವಸ್ತುಪಾಠದ ಉಪಯೋಗವಿರುವಷ್ಟು ಪ್ರೌಢವಯಸ್ಸಿನವರ ಶಿಕ್ಷಣದಲ್ಲಿಲ್ಲ.

ಎಲ್ಲ ಜ್ಞಾನೇಂದ್ರಿಯಗಳಲ್ಲಿ ಕೈ, ಕಣ್ಣು ಇವುಗಳ ಉಪಯೋಗವು ಹೆಚ್ಚಿರುವದರಿಂದ, ಇವುಗಳನ್ನು ನಾವು ವಿಶೇಷ ಬಲಪಡಿಸತಕ್ಕದ್ದು. ಇದರ ಮೇಲಿಂದ ಅನ್ಯ ಜ್ಞಾನೇಂದ್ರಿಯಗಳನ್ನು ದುರ್ಲಕ್ಷಿಸಬಹುದೆಂದಲ್ಲ; ಉಳಿದವುಗಳನ್ನಾದರೂ ಆದಷ್ಟು ಮಟ್ಟಿಗೆ ಉಪಯೋಗಿಸಿ ಬಲಪಡಿಸುವದು ಅವಶ್ಯವು. ವಸ್ತುಪಾಠದಲ್ಲಿ ಕೈ, ಮತ್ತು ಕಣ್ಣು ಇವುಗಳ ಉಪಯೋಗವೇ ಬಹಳವಾಗಿರುವದುಂಟು.

(೨) ವಿಚಾರಶಕ್ತಿಯ ಬೆಳವಣಿಗೆ.— ಉದಾಹರಣಾರ್ಥವಾಗಿ, ದನ ಮುಂತಾದವುಗಳಿಗೆ ಬಾಲದ ಅವಶ್ಯಕತೆಯೇನು? ಆನೆಗೆ ಸೊಂಡೆಯ ಉಪಯೋಗವೇನು? ಹೂಗಳಿಗೆ ತರತರದ ಬಣ್ಣವಿರಲಿಕ್ಕೆ ಕಾರಣವೇನು? ಸಹರಾ ಅರಣ್ಯದಲ್ಲಿ ಕುದುರೆಗಳ ಉಪಯೋಗವಾಗದೆ ಒಂಟೆಗಳ ಉಪಯೋಗವೇಕಾಗುವದು? ಇವೇ ಮುಂತಾದ ಪ್ರಶ್ನಗಳಲ್ಲಿ ವಿಚಾರಕ್ಕೆ ಎಷ್ಟೋ ಅವಕಾಶವಿರುವದು. ಇಂಥ ಪ್ರಶ್ನಗಳನ್ನು ಕೇಳುವದರಿಂದ ಹುಡುಗರ ವಿಚಾರಕ್ಕೆ ಚಲನೆಕೊಟ್ಟಂತಾಗುವದು. ಇದರಿಂದ ಬೇರೆ ಸಂಗತಿಗಳ ಬಗ್ಗೆ ವಿಚಾರ ಮಾಡುವ ಕುತೂಹಲವು ಅವರಲ್ಲಿ ಉಂಟಾಗುವದು. ವಿಚಾರಪೂರ್ವಕವಾಗಿ ದೊರಕಿಸಿದ ಜ್ಞಾನವು ಅತ್ಯಂತ ಮಹತ್ವದ್ದಾಗಿರುವದು.

(೩) ಹೊಸ ಸಂಗತಿಗಳ ಬಗ್ಗೆ ಜ್ಞಾನವನ್ನುಂಟು ಮಾಡುವದು:— ಜ್ಞಾನವನ್ನು ಗಳಿಸುವ ಬುದ್ಧಿಯು ಹುಟ್ಟಿದಂದಿನಿಂದ

ಪ್ರತಿಯೊಬ್ಬ ಮನುಷ್ಯನಲ್ಲಿ ಇದ್ದೇ ಇರುವದು. ಮಗುವಿನ ಕೈಯಲ್ಲಿ ಯಾವದಾದರೊಂದು ವಸ್ತುವನ್ನು ಕೊಟ್ಟರೆ ಮಗುವು ಒಮ್ಮೆಲೆ ಅದನ್ನು ಬಿಸಾಡಿ ಬಿಡುವದಿಲ್ಲ. ಆದರೂ ಈ ಶಕ್ತಿಯನ್ನು ಹೆಚ್ಚಾಗಿ ಬೆಳಿಸುವದು ಶಿಕ್ಷಕನ ಕರ್ತವ್ಯವು. ವಸ್ತುಪಾಠಗಳ ಮುಖಾಂತರವಾಗಿ ಮಕ್ಕಳಿಗೆ ಕೆಲವು ವಸ್ತುಗಳ ಜ್ಞಾನಮಾಡಿಕೊಟ್ಟರೆ ಅವರ ಮನಸ್ಸನ್ನು ಸಮಾಧಾನಪಡಿಸಿದಂತಾಗುತ್ತದೆ; ಇಷ್ಟೇ ಅಲ್ಲ, ಹೊಸ ಜ್ಞಾನವನ್ನುಂಟುಮಾಡಿಕೊಳ್ಳಲಿಕ್ಕೆ ಉತ್ತೇಜನಕೊಟ್ಟಂತಾಗುವದು.

(೪) ಸೃಷ್ಟಿಸೌಂದರ್ಯವನ್ನರಿತುಕೊಳ್ಳುವ ಕುತೂಹಲವನ್ನು ಹೆಚ್ಚಿಸುವದು:— ಸೃಷ್ಟಿಯಲ್ಲಿ ಸೌಂದರ್ಯವುಳ್ಳ ಎಷ್ಟೋ ಒಡವೆಗಳಿರುತ್ತವೆ. ತರತರದ ಪಶುಪಕ್ಷಿಗಳೂ, ಕೀಟಕಗಳೂ, ವೃಕ್ಷಗಳೂ, ಪುಷ್ಪಗಳೂ ಹುಡುಗರ ಮನಸ್ಸನ್ನಾಕರ್ಷಿಸುತ್ತಿರುವವು. ಇವುಗಳನ್ನು ಕುರಿತು ವಸ್ತುಪಾಠವನ್ನು ಕಲಿಸುತ್ತಿರುವಾಗ ಶಿಕ್ಷಕನು ಇವುಗಳ ಸೌಂದರ್ಯದ ಕಡೆಗೆ ಹುಡುಗರ ಚಿತ್ತವನ್ನು ಎಳೆಯಬೇಕು. ಇದಕ್ಕೆ ಚಿತ್ರಕಲೆಯನ್ನು ಜೋಡಿಸಿದರೆ ನಿಜವಾದ ಹಾಗೂ ಪೂರ್ಣವಾದ ಜ್ಞಾನವುಂಟಾಗುವದು. ಇದರಿಂದ ಸೃಷ್ಟಿಸೌಂದರ್ಯವನ್ನರಿತುಕೊಳ್ಳುವ ಕುತೂಹಲವು ಬೆಳೆಯುವದಲ್ಲದೆ ಕೈ ಕಣ್ಣುಗಳಿಗೆ ತಕ್ಕ ಕೆಲಸ ಸಿಕ್ಕಂತಾಗುವದು. [illegible] ಲಕ್ಷ್ಯಕೊಟ್ಟಾಗಿ ಪದಾರ್ಥಗಳನ್ನು ಕಲ್ಪಿಸುವ ಗುಣವಾದರೂ ಬೆಳೆಯುವದು.

(೫) ಭಾಷೆಯಲ್ಲಿ ಹುಡುಗರ ಪ್ರಗತಿಯೂ, ನಿಬಂಧರಚನೆಯ ಅಭ್ಯಾಸವೂ:— ವಸ್ತುಪಾಠಗಳನ್ನು ಕಲಿಸುವಾಗ್ಗೆ ಅನೇಕ ಸಮಯಗಳಲ್ಲಿ ಹೊಸ ಹೊಸ ಶಬ್ದಗಳನ್ನು ಹುಡುಗರು ಕಲಿಯಬೇಕಾಗುತ್ತದೆ. ಇದರಿಂದ ಅವರ ಭಾಷಾಜ್ಞಾನವು ಬೆಳೆಯುವದು. ಶಿಕ್ಷಕನು ಕೇಳುವ ಎಷ್ಟೋ ಪ್ರಸಂಗಗಳಲ್ಲಿ ಪ್ರಶ್ನೆಗಳಿಗೆ ಹುಡುಗರು ತಮ್ಮ ವಾಕ್ಯಗಳನ್ನು ಕೊಡಬೇಕಾಗುತ್ತದೆ.

ಆಗ ಉತ್ತರವನ್ನು ಸರಿಯಾದ ವಾಕ್ಯರೂಪದಿಂದ ಕೊಡಬೇಕೆಂದು ಶಿಕ್ಷಕನು ಹೇಳಬೇಕು. ಅಂದರೆ ವಾಕ್ಯರಚನೆಯಲ್ಲಿ ಅವರಿಗೆ ಜ್ಞಾನವುಂಟಾಗುವದು. ತಪ್ಪು ವಾಕ್ಯಗಳಿದ್ದಲ್ಲಿ ಅವುಗಳನ್ನು ತಿದ್ದಿ ಸರಿಯಾದ ಉತ್ತರವನ್ನು ಅವರಿಂದ ಹೊರಡಿಸತಕ್ಕದ್ದು. ಇದಕ್ಕೆ ಬಾಯಿಮಾತಿನ ನಿಬಂಧವೆನ್ನಬಹುದು. ಇದೇ ರೀತಿ, ಪಾಠವು ಮುಗಿದನಂತರ ಕಲಿಸಿದ ಪಾಠವನ್ನು ಕುರಿತು ಮುಖ್ಯ ಮುಖ್ಯ ಟಿಪ್ಪಣಿಗಳನ್ನು ಕರಿಯ ಹಲಿಗೆಯ ಮೇಲೆ ಬರೆದು, ಆ ಪಾಠದ ಬಗ್ಗೆ ಸಂಕ್ಷಿಪ್ತವಾಗಿ ನಿಬಂಧವನ್ನು ಬರೆಯಲಿಕ್ಕೆ ಹೇಳಬಹುದು. ಇದರಿಂದ ಹುಡುಗರ ನಿಬಂಧ ರಚನೆಯ ಸಾಮರ್ಥ್ಯ ಬೆಳಿಸಿದಂತಾಗುವದು.

(೬) ನೈತಿಕ ಶಿಕ್ಷಣದ ಬೆಳವಣಿಗೆಯು:—ಶಾಬ್ದಿಕ ವರ್ಣನೆಗಿಂತ ವಸ್ತುದರ್ಶನವು ಹುಡುಗರಿಗೆ ಬಹಳವಾಗಿ ಸೇರುವದು. ವಸ್ತುಪಾಠವು ನಡೆದಾಗ್ಗೆ ವಸ್ತುದರ್ಶನದಿಂದ ಅವರ ಮನಸಿನಲ್ಲಿ ಆನಂದವೂ, ಉತ್ಸಾಹವೂ ಉಂಟಾಗುವವು. ಈ ಉತ್ಸಾಹದ ಪ್ರವೃತ್ತಿಯು ಸದ್ಗುಣಗಳಿಗೆ ಬಹಳೇ ಆಸ್ಪದ ಕೊಡುವದಾಗಿರುತ್ತದೆ. ವಸ್ತುಪಾಠದಲ್ಲಿ ಹುಡುಗರು ತಾವಾಗಿ ವಸ್ತುಗಳನ್ನು ನಿರೀಕ್ಷಿಸಿ ಒಡವೆಗಳ ಗುಣಗಳನ್ನೂ, ಉಪಯೋಗವನ್ನೂ ಅರಿತುಕೊಳ್ಳುವದರಿಂದ ಅವರಲ್ಲಿ ಸ್ವಾವಲಂಬನಗುಣವು ಹೆಚ್ಚಾಗಿ ಬೆಳೆಯುವದು. ಪ್ರೌಢ ವಯಸ್ಸಿನಲ್ಲಿ ಸ್ವಾವಲಂಬನದಷ್ಟು ಉಪಯೋಗವುಳ್ಳ ಗುಣವು ಬೇರೊಂದಿಲ್ಲ. ಸಣ್ಣ ಹುಡುಗರಿಗೆ ಸುಮ್ಮನೆ ಕೂಡ್ರುವ ಮನಸಾಗುವದಿಲ್ಲ. ಅವರಿಗೆ ಸರಿಯಾದ ಕೆಲಸವು ದೊರೆಯದಿದ್ದರೆ ಕಿಡಿಗೇಡಿತನದಲ್ಲಿ ಅವರ ಮನಸು ತೊಡಗುವದು. ಈ ರೀತಿ ಕಿಡಿಗೇಡಿತನದಲ್ಲಿ ಪ್ರವೃತ್ತರಾದ ಎಷ್ಟೋ ಹುಡುಗರು ಸಣ್ಣ ಸಣ್ಣ ಪ್ರಾಣಿಗಳನ್ನು ಹಿಂಸಿಸುವರು; ಗಿಡಗಳ ಎಲೆಹೂ ಮೊದಲಾದವುಗಳನ್ನು ಹರಿದುಹಾಕುತ್ತಿರುವರು. ಇದು ಹುಡುಗರ ದೋಷವಲ್ಲ. ಆ ಹುಡುಗರ ತಾಯಿ-ತಂದೆ

ಗಳದ್ದೂ, ಶಿಕ್ಷಕರದ್ದೂ ಆಗಿರುವದು. ಪ್ರಾಣಿಗಳೂ ಎಲೆಹೂ ಮೊದಲಾದವುಗಳೂ ಮನುಷ್ಯರಿಗೆ ಮಾಡುತ್ತಿರುವ ಉಪಕಾರವನ್ನು ಹುಡುಗರಿಗೆ ಹೇಳಿ ಆ ವಸ್ತುಗಳ ಬಗ್ಗೆ ಅವರಲ್ಲಿ ಪೂಜ್ಯಬುದ್ಧಿಯನ್ನು ಹುಟ್ಟಿಸಬೇಕು.

ಕಲಿಸುವಾಗ ಶಿಕ್ಷಕರು ನೆನಪಿನಲ್ಲಿಡತಕ್ಕ ಸಂಗತಿಗಳು:— ೧. ವಸ್ತುವು ಇರಲೇಬೇಕು. ಸಾಧ್ಯವಿದ್ದರೆ ಒಬ್ಬೊಬ್ಬ ಹುಡುಗನಿಗೆ ಒಂದೊಂದು ವಸ್ತುವನ್ನು ಕೊಟ್ಟರೆ ಮತ್ತಿಷ್ಟು ಒಳ್ಳೆಯದು. ಇದರಿಂದ ಅವಲೋಕನಕ್ಕೆ ಹೆಚ್ಚು ಸಹಾಯವಾಗುವದು. ಕನಿಷ್ಠಪಕ್ಷಕ್ಕೆ ಎಲ್ಲ ಹುಡುಗರ ನಡುವೆ ಒಂದೊಂದು ವಸ್ತುವು ಬರುವಂತೆಯಾದರೂ ಇರಬೇಕು. ಮೇಜಿನ ಮೇಲಿಟ್ಟ ವಸ್ತುವು ಹುಡುಗರಿಗೆ ಸರಿಯಾಗಿ ಕಾಣಿಸಲಾರದು. ೨. ಪ್ರಶ್ನೆಗಳ ಸಹಾಯದಿಂದ ಅವಲೋಕನವನ್ನು ಮಾಡಿಸಿಕೊಳ್ಳತಕ್ಕದ್ದು. ಇದರಿಂದ ಹುಡುಗರು ಎಷ್ಟೋ ಹೊಸ ಸಂಗತಿಗಳನ್ನು ಕಂಡು ಹಿಡಿಯಬಹುದಾಗಿದೆ. ೩. ಕಲಿಸತಕ್ಕ ಒಡವೆಗಳನ್ನೂ, ಬೇರೆ ಒಡವೆಗಳನ್ನು ಹುಡುಗರ ಮುಂದೆ ಇಟ್ಟು ಅವೆರಡರಲ್ಲಿಯ ಹೋಲಿಕೆ ಭೇದಗಳನ್ನು ಗೊತ್ತು ಹಚ್ಚಿಸತಕ್ಕದ್ದು. ಉದಾಹರಣಾರ್ಥವಾಗಿ ಕಲ್ಲಿದ್ದಲಿಯ ಪಾಠವನ್ನು ಕಲಿಸುವ ಕಾಲಕ್ಕೆ ಇದ್ದಲಿಗೂ ಕಲ್ಲಿದ್ದಲಿಗೂ ಇರುವ ಭೇದಗಳನ್ನು ಅದರಿಂದ ಹೊರದಿಸಬಹುದು. ೪. ಸ್ಪಷ್ಟೀಕರಣಾರ್ಥವಾಗಿ ಚಿತ್ರಗಳನ್ನು ಕರೀ ಹಲಿಗೆಯ ಮೇಲಿನ ಆಕೃತಿಗಳನ್ನು ಉಪಯೋಗಿಸಬಹುದು. ೫. ಕೆಲಸಗಳನ್ನು ಹುಡುಗರಿಂದ ಮಾಡಿಸದೇ ಶಿಕ್ಷಕನು ಮಾಡಬಾರದು. ೬. ಮುಖ್ಯ ಮುಖ್ಯ ಸಂಗತಿಗಳನ್ನು ಕರೀ ಹಲಿಗೆಯ ಮೇಲೆ ಬರೆಯಬೇಕು. ಅವಶ್ಯವಿದ್ದರೆ ಆ ಪಾಠದ [illegible] ಹುಡುಗರಿಂದ ತೆಗೆಯಿಸಿಕೊಳ್ಳಬಹುದು. ಮತ್ತು ಆ ವಿಷಯದ ಬಗ್ಗೆ ನಿಬಂಧವನ್ನು ಬರೆಯಿಸಿಕೊಳ್ಳಬಹುದು.

[illegible]

ಕನ್ನಡ ಶಿಕ್ಷಕಿ

ಎಂಬ ತ್ರೈಮಾಸಿಕವು.

———:o:———

THE KANARESE MISTRESS

A Quarterly Journal for assisting teachers in the work of their schools and in their private study.

———:o:———

ಸಂಪುಟ ೧.

———:o:———

[ಅಕ್ಟೋಬರ ೧೯೧೫ ರಿಂದ ಜುಲೈ ೧೯೧೬ರ ವರೆಗೆ]

———

PRINTED BY **K. H. Mudvedkar** at the Karnatak Printing Works, Dharwar.
and
Published by MISS. **F. L. McAFEE** at the Training College for Women. Dharwar.

೧೯೧೫—೧೬

ಒಕ್ಕಲಿಗ

ಅಕ್ಟೋಬರ ೧೯೫೭

ಕರ್ನಾಟಕ ವಿದ್ಯಾವರ್ಧಕ ಸಂಘ
ಧಾರವಾಡ.

ಈ ಕೆಳಗಿನ ಅಧಿಕಾರಿಗಳಿಂದ ಸಲಹೆ ಸಹಾಯಗಳನ್ನು ಪಡೆಯಬಹುದು

ವಿಲಂಬ ತಪ್ಪಿಸಲು ವಿಳಾಸವನ್ನು ಸರಿಯಾಗಿ ಬರೆಯಿರಿ

ಅಧಿಕಾರಿಗಳು	ವಿಷಯ
(೧) ಆಯಾಯ ಜಿಲ್ಹೆಯ ಕಲೆಕ್ಟರ ಮತ್ತು ಚೇರಮನ್ ಡಿಸ್ಟ್ರಿಕ್ಟ ರೂರಲ್ ಡೆವಲಪ್ಮೆಂಟ ಬೋರ್ಡ.	ಬಾವಿಗಳ ರಚನೆ, ಎಲ್ಲ ಬಗೆಯ ತಗಾಯಿ ಸಾಲಗಳು, ಒಕ್ಕಲತನಕ್ಕಾಗಿ ಕಬ್ಬಿಣ [illegible] ಸಿಮೆಂಟ, ಡಿಜಲ್ ಎಣ್ಣೆ ಮತ್ತು ಸಾಗುವಳಿ [illegible] ಾಮಿ.
(೨) ಆಯಾಯ ಜಿಲ್ಹೆಯ ಡಿಸ್ಟ್ರಿಕ್ಟ ಎಗ್ರಿಕಲ್ಚರಲ್ ಆಫೀಸರರು.	ಗೊಬ್ಬರ (ಸೇಂಗಾ [illegible] ಗೊಬ್ಬರವನ್ನೊಳಗೊಂಡು) ಕ್ರಿಮಿನಾಶಕ ಔಷಧಿಗಳು, ಸುಧಾರಿಸಿದ ಬೀಜ ಇವುಗಳ ಪೂರೈಕೆ, ಹಿಪ್ಪೆ ಗೊಬ್ಬರ ತಯಾರಿಕೆ, ಸ್ಥಳಿಕ ಒಕ್ಕಲತನ ಪದ್ಧತಿಗಳ ಬಗ್ಗೆ ಸಲಹೆ.
(೩) ಗವರ್ನಮೆಂಟ ಹೊರ್ಟಿಕಲ್ಚರಿಸ್ಟ, ಮುಂಬಯಿ ರಾಜ್ಯ, ಅಗ್ರಿಕಲ್ಚರಲ್ ಕಾಲೇಜ, ಪುಣೆ ೫.	ಹಣ್ಣಿನ ಗಿಡ ಹಾಗು ಜಾತಿವಂತ ಕಲಮುಗಳು; ಕಾಯಿಪಲ್ಲೆ, ಗೆಣಸು ಹಾಗು ಬಾಳೆಯ ಕ್ಷೇತ್ರವನ್ನು ಹೆಚ್ಚಿಸುವದು ಹಾಗು ತೋಟದ ಬೆಳೆಗಳ ಬಗ್ಗೆ ತಾಂತ್ರಿಕ ಸಲಹೆ.
(೪) ಡೈರೆಕ್ಟರ ಆಫ್ ಪಾರ್ಕ್ಸ್ ಆ್ಯಂಡ ಗಾರ್ಡನ್ಸ, ೧೪, ಕ್ವೀನ್ಸ ಬರ್ಯಾಕ್ಸ, ಫೋರ್ಟ, ಮುಂಬಯಿ	ತೋಟ, ಉದ್ಯಾನ, ವಿಹಾರ ಸ್ಥಳ ಮೊದಲಾದವುಗಳ ರಚನೆಯ ಬಗ್ಗೆ ಸಲಹೆ ಸಹಾಯ ಹಾಗು ಅಂದದ ಹೂ, ಹುಲ್ಲು ಗಿಡ ಮೊದಲಾದವುಗಳ ಬಗ್ಗೆ ಮಾಹಿತಿ.
(೫) ಗವರ್ನಮೆಂಟ ಅಗ್ರಿಕಲ್ಚರಲ್ ಕೆಮಿಸ್ಟ, ಮುಂಬಯಿ ರಾಜ್ಯ, ಅಗ್ರಿಕಲ್ಚರಲ್ ಕಾಲೇಜ, ಪುಣೆ ೫.	ಭೂಮಿ ಗುಣ ಹಾಗು ಗೊಬ್ಬರದ ವಿಷಯಕ ಸಲಹೆ, ಮಣ್ಣಿನ ಪೃಥಕ್ಕರಣ, ಗೊಬ್ಬರ, ನೀರು, ಹಾಲು, ಆಹಾರ ಸಾಮಗ್ರಿಗಳ ಪೃಥಕ್ಕರಣ.
(೬) ಗವರ್ನಮೆಂಟ ಅಗ್ರಿಕಲ್ಚರಲ್ ಎಂಟೊಮೊಲಜಿಸ್ಟ, ಮುಂಬಯಿ ರಾಜ್ಯ, ಅಗ್ರಿಕಲ್ಚರಲ್ ಕಾಲೇಜ, ಪುಣೆ ೫.	ಬೆಳೆಗಳಿಗೆ ಗಂಟು ಬೀಳುವ ಕ್ರಿಮಿಕೀಟಗಳು ಹಾಗು ಅವುಗಳ ನಿವಾರಣೆ.
(೭) ಗವರ್ನಮೆಂಟ ಪ್ಲಾಂಟ ಪೆಥೊಲೊಜಿಸ್ಟ, ಮುಂಬಯಿ ರಾಜ್ಯ, ಅಗ್ರಿಕಲ್ಚರಲ್ ಕಾಲೇಜ, ಪುಣೆ ೫.	ಬೆಳೆಗಳಿಗೆ ತಗಲುವ [illegible] ರೋಗ ಹಾಗು ಅವಕ್ಕೆ [illegible]
(೮) ಗವರ್ನಮೆಂಟ ಎಕೊನೊಮಿಕ ಬೊಟ್ಯಾನಿಸ್ಟ, ಮುಂಬಯಿ ರಾಜ್ಯ, ಅಗ್ರಿಕಲ್ಚರಲ್ ಕಾಲೇಜ, ಪುಣೆ ೫.	[illegible] ಬೀಜಗಳ ಪರೀಕ್ಷಣೆ, [illegible] ಲಾಭದಾಯಕ ಗಿಡಗಳ [illegible] ಹಾಗು [illegible] ಹುಲ್ಲು ಬೆಳೆಗಳ [illegible]
(೯) ಎಗ್ರೊನೊಮಿ ಪ್ರೊಫೆಸರ, ಅಗ್ರಿಕಲ್ಚರಲ್ ಕಾಲೇಜ, ಪುಣೆ ೫.	ಒಕ್ಕಲತನದ [illegible] ಪುಣೆಯ ಒಕ್ಕಲತನದ ಕಾಲೇಜ [illegible] ಒಕ್ಕಲತನದ ಸಂಬಂಧಿ ಮಾಹಿತಿ.
(೧೦) ಸ್ಟ್ಯಾಟಿಸ್ಟೀಶಿಯನ್ [illegible] ಆಫ್ ಅಗ್ರಿಕಲ್ಚರ, ಅಗ್ರಿಕಲ್ಚರಲ್ ಕಾಲೇಜ, ಪುಣೆ ೫.	ಒಕ್ಕಲತನ [illegible] ಹಾಗು [illegible] ಪರಿಸ್ಥಿತಿ.
(೧೧) ಪ್ರಿನ್ಸಿಪಾಲ, ಅಗ್ರಿಕಲ್ಚರಲ್ ಕಾಲೇಜ, ಪುಣೆ, ಧಾರವಾಡ ಅಥವಾ ಆನಂದ.	ಒಕ್ಕಲತನ [illegible] ಸ್ನಾತಕೋತ್ತರ ಶಿಕ್ಷಣ [illegible] ಅಲ್ಪಾವಧಿ [illegible]
(೧೨) ಗವರ್ನಮೆಂಟ [illegible] ಮುಂಬಯಿ ರಾಜ್ಯ, [illegible]	[illegible] ಹಾಗು ಮಣ್ಣಿನ [illegible]
(೧೩) ಕಾಟನ ಬೊಟ್ಯಾನಿಸ್ಟ, [illegible] ಸುರತ.	[illegible] ನಿಯಂತ್ರಣ [illegible]
(೧೪) [illegible] ರಾಜ್ಯ, ಪುಣೆ ೧.	[illegible] ಗೊಬ್ಬರ.
(೧೫) ಪ್ರೊಫೆಸರ ಆಫ್ ಅಗ್ರಿಕಲ್ಚರಲ್ [illegible] ಒಕ್ಕಲತನದ ಕಾಲೇಜ, ಪುಣೆ ೫.	[illegible] ಹಾಗು ಸಂಬಂಧಿಸಿದ [illegible]
(೧೬) ಅಗ್ರಿಕಲ್ಚರ [illegible] ರಿಸರ್ಚ, ಅಗ್ರಿಕಲ್ಚರಲ್ ಕಾಲೇಜ, ಪುಣೆ ೫	[illegible]

([illegible])

ವರ್ಷ ೫ : ಸಂಚಿಕೆ ೩

ಅಕ್ಟೋಬರ ೧೯೫೨

ಊರಿಂಗೆ 'ಒಕ್ಕಲಿಗ' ಲೇಸು ಸರ್ವಜ್ಞ

ಒಕ್ಕಲಿಗ

ಬೇಸಾಯ ಹಾಗು ಹಳ್ಳಿಗಳ ಏಳ್ಗೆಗಾಗಿ ಮೀಸಲಾದ ಮಾಸಪತ್ರಿಕೆ

★

ಪ್ರತಿ ತಿಂಗಳ ೧೫ ನೇ ದಿನಾಂಕಕ್ಕೆ ಪ್ರಕಟವಾಗುತ್ತದೆ

"ಒಕ್ಕಲಿಗ" ಮಾಸ ಪತ್ರಿಕೆಗೆ ಚಂದಾದಾರರಾಗ ಬಯಸುವವರು ಡೈರೆಕ್ಟರ ಆಫ್ ಪಬ್ಲಿಸಿಟಿ, ಸೆಕ್ರೆಟೇರಿಯಟ್, ಮುಂಬಯಿ ಈ ವಿಳಾಸಕ್ಕೆ ಬರೆಯಬೇಕು.

ವಾರ್ಷಿಕ ಚಂದಾ : ೩ ರೂ.
ಬಿಡಿ ಪ್ರತಿ : ೪ ಆಣೆ.

(ಚಂದಾ ಹಣ ಮುಂಗಡ ಕಳಿಸಬೇಕು. ವ್ಹಿ. ಪಿ. ಕಳಿಸಲಾಗುವದಿಲ್ಲ.)

– ಈ ಸಂಚಿಕೆಯಲ್ಲಿ –

ಹರಿಜನರ ಸೇವೆ ೨
ಹೊಸ ದಾರಿಯಲ್ಲಿ ೩
ಮಾತು ಸಾಕು, ಕೃತಿ ಬರಲಿ ೫
ಬೆಳಗಾವಿ ಜಿಲ್ಹೆಯಲ್ಲಿ ಸಾಂಘಿಕ ಕಾರ್ಯದ ಶ್ರೀಕಾರ ೭
ಜನತೆಯ ಯೋಜನೆಗಳು ೯
ಸಮಾಜ ವಿಕಾಸದತ್ತ ಹೊಸ ಹೆಜ್ಜೆ ೧೧
ಗೋಡಂಬಿ ೧೬
ನ್ಯಾಯವಾದ ನಿರ್ಣಯ ಕೊಡಿರಿ ೨೧
ರಾಣೀಖೇತದಿಂದ ಕೋಳಿಗಳನ್ನು ಕಾಪಾಡಿರಿ ೨೩
ಜಪಾನದ ಒಕ್ಕಲಿಗನ ಒಲವು ನಿಲವು ೨೬
ಕಾರ್ಯದೊಂದಿಗೆ ಶಿಕ್ಷಣ ೨೯
ವಿಜಾಪುರದ ಎದೆಗಾರ ರೈತ ೩೨
ಬೇಸಿಗೆಯ ಸಜ್ಜೆ ೩೫
ತಂಬಾಕು ಬೆಳೆಯುವವರ ಸಹಕಾರಿ ಸಂಘ ೩೮
ಜಪಾನಿ ಪದ್ಧತಿಯ ಸಾಗುವಳಿ ೪೦
ರೈತರ ನೆನಪಿಗಾಗಿ ೪೧
ನವ್ಹೆಂಬರ ತಿಂಗಳದ ಹೊಲಗೆಲಸ ೪೫
ಬೇಸಾಯದ ವಾರ್ತೆ ೪೬
ವರಟೆ, ಬಾತುಕೋಳಿಗಳೂ ಉಪಯುಕ್ತವಿವೆ ೫೦



ಹರಿಜನರ ಸೇವೆ

"ಅಸ್ಪೃಶ್ಯ"ರೆಂದು ಕರೆಯಲ್ಪಡುವವರ ಸೇವೆಯು ಯಾವುದೇ ಬಗೆಯ ರಾಜಕೀಯ ಕಾರ್ಯಕ್ಕಿಂತ ಯಾವ ರೀತಿಯಲ್ಲೂ ಕಡಿಮೆಯಾದುದು ಎಂದು ನನಗೆ ಅನಿಸುವದಿಲ್ಲ.

ಏಕೆಂದರೆ, "ಅಸ್ಪೃಶ್ಯರ" ಸೇವೆ ಅಂದರೆ ಅವರಿಗೆ ನ್ಯಾಯ ಕೊಡುವದೆಂದರೇನು? ಶತಮಾನಗಳಿಂದ ಮುಟ್ಟಬಾರದವರಾಗಿದ್ದ ಜನರನ್ನು [illegible] ಹಾಗು ಕಾಲಕಾಲಾಂತರಗಳಿಂದ ನಮ್ಮ ಬಾಂಧವರನ್ನೇ ದಬ್ಬಾಳಿಕೆ ಹಾಗು ಅವಮಾನಗಳಿಗೆ ಗುರಿಪಡಿಸಿದ ಪಾಪಕ್ಕೆ ಕುರು ಮಟ್ಟಿಗೆ ಪ್ರಾಯಶ್ಚಿತ್ತ ಕೈಗೊಳ್ಳುವದಕ್ಕೆ [illegible] ಅಲ್ಲ.

ಇಷ್ಟೇ ಅಲ್ಲದೆ, ನಮ್ಮ [illegible] ಅಸ್ಪೃಶ್ಯತಾ ನಿವಾರಣೆಯು ಈ ಕಾರ್ಯಕ್ರಮವು, [illegible] ಪ್ರಾಯಶ್ಚಿತ್ತವಾಗಿದೆ. ಈ ಕಾರ್ಯ ಮುಖ್ಯವಾಗಿ ಪ್ರಾಯಶ್ಚಿತ್ತ [illegible] ಯಾವದೇ ರೀತಿ ಅಥವಾ ಉಪಕಾರ ಬುದ್ಧಿಯಿಂದ [illegible]

—ಮಹಾತ್ಮಾ ಗಾಂಧೀ

"ನಾವೆಲ್ಲವರೂ ಒಮ್ಮನಸ್ಸಿನಿಂದ ದುಡಿದರೆ ಇಂದು ನಾವು ನೆಡುತ್ತಿರುವ ಈ ಚಿಕ್ಕ ಬೀಜ ಕಾಲಾಂತರದಲ್ಲಿ ವಿಶಾಲ ಹೆಮ್ಮರವಾಗಿ ಬೆಳೆಯುವದರಲ್ಲಿ ಸಂದೇಹವಿಲ್ಲ."

★

ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದರು

ಅಕ್ಟೋಬರ ೨ರಂದು ದೇಶದಾದ್ಯಂತ ಸಮಾಜ ವಿಕಾಸ ಯೋಜನೆಗಳನ್ನು ಉದ್ಘಾಟಿಸುತ್ತ ಅಖಿಲ ಭಾರತ ಆಕಾಶವಾಣಿಯಿಂದ ಮಾಡಿದ ಭಾಷಣದ ಸಾರ

★

ಹೊಸ ದಾರಿಯಲ್ಲಿ

ಭಾರತವು ಮುಖ್ಯವಾಗಿ ಹಳ್ಳಿಗಳ ದೇಶ. ಇತ್ತೀಚೆಗೆ ಪಟ್ಟಣಗಳ ವಸತಿ ಹೆಚ್ಚುತ್ತಿದೆಯಾದರೂ ಇನ್ನೂವರೆಗೆ ಭಾರತದ ಬಹುಸಂಖ್ಯ ಜನತೆ ಹಳ್ಳಿಗಳಲ್ಲಿದೆ. ಆದ್ದರಿಂದ ಹಳ್ಳಿಗಳ ಹಾಗು ಹಳ್ಳಿಗರ ಸರ್ವಾಂಗೀಣ ಉನ್ನತಿಗಾಗಿ ನಡೆಯುವ ಯಾವದೆ ಕಾರ್ಯಕ್ಕೆ ಸರಕಾರ ಹಾಗು ಜನತೆ ಪ್ರೋತ್ಸಾಹಿಸಬೇಕಾದದು ಅವಶ್ಯವಿದೆ. ಮಹಾತ್ಮಾ ಗಾಂಧೀಜಿಯವರು ಹಳ್ಳಿಗಳ ಉನ್ನತಿಗೆ ಬಹಳ ಮಹತ್ವ ಕೊಡುತ್ತಿದ್ದರು. ಅವರ ಜನ್ಮದಿನದಂದು ಸಮಾಜ ವಿಕಾಸ ಯೋಜನೆಗಳ ಉದ್ಘಾಟನೆಯಾಗುತ್ತಿರುವದು ಈ ದೃಷ್ಟಿಯಿಂದ ಅತ್ಯಂತ ಸುಸಂಗತವಾಗಿದೆ.

ಸಮಾಜದ ಅಭಿವೃದ್ಧಿ, ಸಮಾಜ ವಿಕಾಸಯೋಜನೆ ಈ ಶಬ್ದಗಳು ಹೊಸವೆನಿಸಿದರೂ ಅವರ ಹಿಂದಿನ ಕಲ್ಪನೆ ತೀರ ಹಳೆಯದು. ಯಾವದೊಂದು ವಿಶಿಷ್ಟ ಅಂಗದ ಅಭಿವೃದ್ಧಿಗೆ ವ್ಯತಿರಿಕ್ತವಾಗಿ ಇಡಿ ಗ್ರಾಮೀಣ ಸಮಾಜದ ಸರ್ವಾಂಗೀಣ ಅಭಿವೃದ್ಧಿಯನ್ನು ಗುರಿಯಾಗಿಟ್ಟುಕೊಂಡಿರುವದೆ ಈ ಕಲ್ಪನೆಯ ಮೂಲ ವೈಶಿಷ್ಟ್ಯವಾಗಿದೆ. ಸರಕಾರ ಹಾಗು ಸಾರ್ವಜನಿಕ ಮುಂದಾಳುಗಳು ಕೂಡಿ ಸರ್ವ ಶಕ್ತಿಗಳನ್ನು ಕೇಂದ್ರೀಕರಿಸಿ ಜನರಲ್ಲಿ ಕಾರ್ಯಸ್ಫೂರ್ತಿಯನ್ನು ಹುಟ್ಟಿಸಬೇಕು; ಇವೆಲ್ಲದರ ಬಲದಿಂದ ಒಕ್ಕಲತನ, ಶಿಕ್ಷಣ, ಆರೋಗ್ಯ, ಸ್ವಚ್ಛತೆ, ದನಕರುಗಳ ಅಭಿವೃದ್ಧಿ ಇತ್ಯಾದಿ ಸಮಾಜ ಜೀವನದ ಸರ್ವಾಂಗೀಣ ಉನ್ನತಿಗಾಗಿ ದುಡಿಯಬೇಕು; ಅಂದರೆ ಮಾತ್ರ ಯಶ ಸಾಧಿಸಬಲ್ಲದು. ಗಾಂಧೀಜಿಯವರು ನೀಡಿದ ಸ್ಫೂರ್ತಿಯಿಂದ ದೇಶದ ಅನೇಕ ಭಾಗಗಳಲ್ಲಿ ಅವರ ಅನುಯಾಯಿಗಳು ಎಷ್ಟೋ ನಿಸ್ವಾರ್ಥ ಕಾರ್ಯ ಮಾಡಿದ್ದಾರೆ. ಅನೇಕ ಸಂಘ ಸಂಸ್ಥೆಗಳು, ಹಾಗು ವ್ಯಕ್ತಿಗಳಿಂದ ಈ ದಿಶೆಯಲ್ಲಿ ಎಷ್ಟೋ ಕಾರ್ಯ ನಡೆದಿದೆ. ಆದರೆ ಎಷ್ಟಾದರೂ ಅವರಿಗೆ ದೊರೆಯುವ ಸಾಧನ ಸಾಮುಗ್ರಿ ಹಾಗು ಹಣ ಮರ್ಯಾದಿತವಾದ್ದರಿಂದ ಅಪೇಕ್ಷಿಸಿದಷ್ಟು ತೀವ್ರತರವಾಗಿ ಹಾಗು ವಿಸ್ತಾರವಾಗಿ ಪ್ರಗತಿಯಾಗುವದು ಸಾಧ್ಯವಾಗಿಲ್ಲ. ಆದರೆ ಜನೆವರಿ ೧೯೫೨ರಲ್ಲಿ ಭಾರತ ಹಾಗು ಅಮೇರಿಕೆಗಳಲ್ಲಾದ ತಾಂತ್ರಿಕ ಸಹಕಾರ ಒಡಂಬಡಿಕೆಯಿಂದಾಗಿ ಈ ಕ್ಷೇತ್ರದಲ್ಲಿ ಮತ್ತೆ ಮುಂದುವರಿಯಲು ಅವಕಾಶ ದೊರೆತಿದೆ.

ಆಹಾರ ಸಮಸ್ಯೆ

ಇಂದು ದೇಶವನ್ನೆದಿರುಸಿರುವ ಅತಿ ಗಂಭೀರ ಸಮಸ್ಯೆಯೆಂದರೆ ದೇಶದ ಆಹಾರೋತ್ಪಾದನೆಯಲ್ಲಿರುವ ಕೊರತೆ. ದೇಶದ ಆಹಾರೋತ್ಪಾದನೆ ಹಾಗು ದೇಶದ ಆಹಾರ ಆವಶ್ಯಕತೆ ಇವುಗಳಲ್ಲಿ ಬಹು ದೊಡ್ಡ ಅಂತರವಿದೆ. ಈ ಅಂತರವನ್ನು ತುಂಬುವದಕ್ಕಾಗಿ ಆಹಾರೋತ್ಪಾದನೆಯನ್ನು ಹೆಚ್ಚಿಸುವ ರೀತಿನೀತಿಗಳನ್ನು ಕುರಿತು ನಮ್ಮ ಯೋಜನಾ ಆಯೋಗ, ನಮ್ಮ ಸರಕಾರ ಹಾಗು ನಮ್ಮಲ್ಲಿಯ ವಿಚಾರವಂತರೆಲ್ಲ ಬಹುಪರಿಯಿಂದ ಆಲೋಚಿಸುತ್ತಿದ್ದಾರೆ. ಅನೇಕ ದೊಡ್ಡ ದೊಡ್ಡ ನದೀ ಕೊಳ್ಳದ ಯೋಜನೆಗಳಲ್ಲಿ ಕೆಲವು ಈಗಾಗಲೆ ಕೈಕೊಳ್ಳಲ್ಪಟ್ಟಿವೆ; ಕೆಲವು ಬೇಗನೆ ಪ್ರಾರಂಭವಾಗಲಿವೆ. ಆದರೆ ಅವೆಲ್ಲ ಮುಗಿಯಲು, ಅವುಗಳಿಂದ ಫಲ ದೊರೆಯಲು ಇನ್ನೂ ಬಹಳ ಕಾಲಾವಧಿ ಬೇಕಾಗುತ್ತದೆ. ಸದ್ಯದ ಕೊರತೆಯನ್ನು ನೀಗಲು ನಾವು ಕೆರೆ, ಬಾವಿ, ಒಡ್ಡು ಇತ್ಯಾದಿ ಚಿಕ್ಕಪುಟ್ಟ ನೀರಾವರಿ ಸೌಕರ್ಯಗಳ ಮೇಲೆಯೆ ಸದ್ಯಕ್ಕೆ ಅವಲಂಬಿಸಬೇಕಾಗಿದೆ. ಆದ್ದರಿಂದ, ಇಂದು ಪ್ರಾರಂಭವಾಗಲಿರುವ ಸಮಾಜವಿಕಾಸ ಯೋಜನೆಗಳಲ್ಲಿ ಮೂರರಲ್ಲೊಂದು ಪಾಲಿನಷ್ಟು ವೆಚ್ಚ ಚಿಕ್ಕ ಪುಟ್ಟ ನೀರಾವರಿ ಯೋಜನೆಗಳಿಗಾಗಿ ಆಗಲಿದೆಂಬುದು ಸಂತೋಷದ ಸಂಗತಿ. ಈ ಚಿಕ್ಕ ಪುಟ್ಟ ನೀರಾವರಿ ಕಾರ್ಯಗಳಲ್ಲಿ ಮಜೂರಿಗಾಗಿ ಆಗುವ ವೆಚ್ಚ ಬಹಳ.

ಆದ್ದರಿಂದ ಸಹಕಾರಿ ರೀತಿಯಲ್ಲಿ, ಆಯಾ ಭಾಗದಲ್ಲಿ ವಾಸಿಸುವ ಜನತೆ ದುಡಿತದ ರೂಪದಲ್ಲಿ ಕೈನೀಡಿದರೆ ಈ ಕಾರ್ಯಕ್ಕಾಗಿ ಮೀಸಲಿರಿಸಿದ ಹಣದಿಂದ ತುಂಬಾ ಕಾರ್ಯವಾಗಬಲ್ಲದೆಂದು ನನಗೆ ಅನಿಸುತ್ತದೆ. ಜನತೆ ಸ್ವಯಂಸ್ಫೂರ್ತಿಯಿಂದ ತಂಡತಂಡವಾಗಿ ದುಡಿಯಲು ಮುಂದೆ ಬಂದರೆ, ಕೇವಲ ಹಣಕೊಟ್ಟು ಆಗುವ ಕಾರ್ಯಕ್ಕಿಂತ ಎಷ್ಟೋ ಪಾಲು ಹೆಚ್ಚಿನ ಕಾರ್ಯ ಲಭ್ಯವಿರುವ ಹಣದಲ್ಲಿಯೇ ಆಗಿ ಯೋಜನೆ ಯಶಸ್ವಿಯಾಗುವದೆಂದು ನಾನು ಆಶಿಸುತ್ತೇನೆ.

ಗೊಬ್ಬರದ ಮಹತ್ವ

ನೀರಿನ ನಂತರ ಬೇಸಾಯದಲ್ಲಿ ಮಹತ್ವದ್ದೆಂದರೆ ಗೊಬ್ಬರ. ಅದು ರಾಸಾಯನಿಕವಿರಲಿ ಜೀವಜನ್ಯವಿರಲಿ, ಅಥವಾ ಎರಡರ ಮಿಶ್ರಣವಿರಲಿ. ತಾಂತ್ರಿಕ ಸಹಕಾರ ಒಡಂಬಡಿಕೆಯನ್ವಯ ೧೧೮,೦೦೦ ಟನ್. ರಾಸಾಯನಿಕ ಪೂರೈಕೆಗಾಗಿ ಗೊಬ್ಬರದ ವ್ಯವಸ್ಥೆ ಮಾಡಲಾಗಿದೆ. ಇವಕ್ಕೆ ಪೂರಕವಾಗಿ ಸಿಂದ್ರಿ ಗೊಬ್ಬರ ಕಾರಖಾನೆಯ ಉತ್ಪಾದನೆಯನ್ನೂ ಬಳಸಲಾಗುವದು. ಅವಲ್ಲದೆ ಹಸಿರು ಗೊಬ್ಬರ ಹಾಗು ತಿಪ್ಪೆಗೊಬ್ಬರಗಳನ್ನು ಸಾಧ್ಯವಿದ್ದಷ್ಟು ಹೆಚ್ಚಿಗೆ ಉಪಯೋಗಿಸುವ ಪ್ರಯತ್ನ ನಡೆಯಬೇಕಾಗಿದೆ. ಈ ವರೆಗೆ ಈ ಸಾಧನೆಗಳ [illegible] ಯೋಗವು. ಆಗಬೇಕನ್ನು [illegible]. ಹುಟ್ಟುವಳಿ ಹೆಚ್ಚಬೇಕಾದರೆ ಒಕ್ಕಲಿಗನಿಗೆ ಸುಧಾರಿಸಿದ ಬೀಜ, ಸುಧಾರಿಸಿದ ಬೇಸಾಯ ಪದ್ಧತಿಗಳು ಹಾಗು ಸುಧಾರಿಸಿದ ಸಾಧನ ಸಲಕರಣೆಗಳನ್ನು ಒದಗಿಸಬೇಕಾಗುತ್ತದೆ.

ಈ ಎಲ್ಲ ಕಾರ್ಯಗಳಿಗಾಗಿ [illegible] ನೆಯ ಫಲಿತಾಂಶಗಳ ಉಪಯೋಗ ಮಾಡಿಕೊಳ್ಳಲಾಗುವದು. ಈ ವರೆಗೆ [illegible] ಯಂತ್ರದ ಮುಖಾಂತರ [illegible] ತ್ತಿತ್ತು. ಈ ಯೋಜನೆಯಲ್ಲಿ [illegible] ಕಟ್ಟಿಕೊಂಡು ಅಧಿಕಾರಿಯೊಬ್ಬನಿಗೆ [illegible]. ಸಮಾಜ ವಿಕಾಸ ಯೋಜನೆಯಲ್ಲಿ ಈ [illegible] ನಿವಾರಣೆಗಾಗಿ ಗ್ರಾಮೀಣ ಕಾರ್ಯಕರ್ತರ [illegible] ಸಂಘಟನೆಯನ್ನೇ ಕಲ್ಪಿಸಲಾಗುವದು. [illegible] "ವಿಸ್ತರಣ ಶಾಖೆ" ಅಥವಾ [illegible] "[illegible] ಸಂಸ್ಥೆ"ಗಳ [illegible] ರೀತಿ ಇದೆ. [illegible] ತತ್ವವನ್ನು ಈ [illegible] ಮುಖ್ಯ ಕ್ಷೇತ್ರದಲ್ಲಿ ಒಕ್ಕಲುತನ, [illegible] ಇತ್ಯಾದಿ ವಿಷಯಗಳ [illegible]

ಗುಂಪಿಗೆ ಗ್ರಾಮ ಕಾರ್ಯಕರ್ತ ಅಥವಾ ಗ್ರಾಮ ಸೇವಕರಿರುತ್ತಾರೆ. ಅವರಿಗೆ ಒಕ್ಕಲತನ ಶಾಸ್ತ್ರ, ಪಶುಸಂಗೋಪನ ಇತ್ಯಾದಿ ವಿಷಯಗಳಲ್ಲಿ ತರಬೇತಿ ಕೊಡಲಾಗಿರುತ್ತದಲ್ಲದೆ ವಿಸ್ತರಣ ಪದ್ಧತಿಗಳಲ್ಲೂ ಆತನಿಗೆ ಗಾಢ ಶಿಕ್ಷಣ ಕೊಡಲಾಗಿರುತ್ತದೆ. ಹಳ್ಳಿಗರ ಮನೆ ಮನೆಗೆ ಸಂದೇಶ ಮುಟ್ಟಿಸುವ ಈತನೆ ಆಯಾ ಭಾಗದಲ್ಲಿ ಯೋಜನೆಯ ಮಹತ್ವದ ಕಾರ್ಯವಾಹಕ. ಆತ ಒಬ್ಬ ವಿವಿಧೋಪಯೋಗಿ ಮನುಷ್ಯ. ಯಾವದೊಂದು ಖಾತೆಯ ಕಟ್ಟುನಿಟ್ಟಿನಲ್ಲಿ ಆತನ ಕಾರ್ಯ ನಡೆಯದೆ ಹಳ್ಳಿಗರನ್ನು ಹುರುದುಂಬಿಸಿ ಪೂರ್ಣತರ ಜೀವನದೆಡೆಗೆ, ಅದನ್ನು ಸಾಧಿಸುವ ಮಾರ್ಗದಲ್ಲಿ, ಅವರನ್ನು ನಡೆಸುವ ಮಾರ್ಗದರ್ಶಕನಾಗುತ್ತಾನೆ.

ಒಕ್ಕಲತನ ಹಣಕಾಸು

ಒಕ್ಕಲತನಕ್ಕೆ ಹಣವನ್ನು ಪೂರೈಸುವ ವ್ಯವಸ್ಥೆಯಿಲ್ಲದೆ ಯಾವ ಒಕ್ಕಲತನ ಅಭಿವೃದ್ಧಿಯೋಜನೆಯೂ ಯಶಸ್ವಿಯಾಗಲಾರದು. ಚಿಕ್ಕ ನೀರಾವರಿ ಕಾಮಗಿರಿ, ಬೀಳು ಭೂಮಿ [illegible] ಇತ್ಯಾದಿಗಳಿಗೆ ಬೇಕಾಗುವ ದೀರ್ಘಾವಧಿ [illegible] ಸಮಾಜ ವಿಕಾಸ ಯೋಜನೆಗಳ ಅಂದಾಜು ಪತ್ರಿಕೆಗಳಲ್ಲಿ ತುಸುಮಟ್ಟಿಗೆ ವ್ಯವಸ್ಥೆ ಮಾಡಲಾಗಿದೆ. ಆದರೆ ಅಲ್ಪಾವಧಿ ಸಾಲದ ಪೂರೈಕೆಗಾಗಿ ಮಾತ್ರ ಅದರಲ್ಲಿ ವ್ಯವಸ್ಥೆ ಇಲ್ಲದಿರುವದರಿಂದ ಸಹಕಾರಿ ಚಳವಳಿಯ ಬೆಳವಣಿಗೆ ಮಾತ್ರ ಅದನ್ನು ಒದಗಿಸಬಲ್ಲದು. ಆದ್ದರಿಂದ ಯೋಜನಾ ಕ್ಷೇತ್ರದಲ್ಲಿಯ ಕಾರ್ಯಕರ್ತರು ಪ್ರತಿ ಹಳ್ಳಿಯಲ್ಲಿ ಅಥವಾ ಕೆಲ ಹಳ್ಳಿಗಳಿಗೊಂದರಂತೆ ವಿವಿಧೋದ್ದೇಶ ಸಹಕಾರಿ ಸಂಘಗಳನ್ನು ಸ್ಥಾಪಿಸಲು ಪ್ರಯತ್ನಿಸಬೇಕು. ಈ ಸಂಘಗಳಿಂದ ಹಳ್ಳಿಗರಿಗೆ ಅಲ್ಪಾವಧಿ ಸಾಲ ದೊರೆಯುವದಲ್ಲದೆ [illegible] ಅವು ಹಳ್ಳಿಗರಿಗೆ ನೆರವಾಗಬಲ್ಲವು.

[illegible] ಯೋಜನಾ ಕ್ಷೇತ್ರದಲ್ಲಿ ಸುಮಾರು [illegible] ಜನಸಂಖ್ಯೆ ಇದೆ. ಅಂದರೆ ಸುಮಾರು ೫೦,೦೦೦ [illegible] ಉದ್ಯೋಗ ಒದಗಿಸಬೇಕಾಗುತ್ತದೆ. ಒಕ್ಕಲಿಗರು, [illegible] ವರ್ಷದಲ್ಲಿ ಮೂರು [illegible] ಇರುತ್ತಾರೆ. ನೀರಾವರಿ [illegible] ಅವಧಿ ಐದು ಆರು ತಿಂಗಳು [illegible]. ಈ [illegible] ಅವಧಿಯಲ್ಲಿ ತುಸು [illegible] ಅವರು [illegible] ಈ ಯೋಜನೆ [illegible] ಈ ಕಾರ್ಯಕ್ರಮ [illegible] ಕಲ್ಪಿಸಿದಂತಾಗು

(ಮುಂದಿನ ಪುಟ ನೋಡಿರಿ)

ಮಾತು ಸಾಕು, ಕೃತಿ ಬರ[illegible]

ಕರ್ನಾಟಕ ವಿದ್ಯಾವರ್ಧಕ ಸಂಘ ... ಧಾರವಾಡ.

ಪ್ರಧಾನ ಮಂತ್ರಿ ಶ್ರೀ. ನೆಹರೂ ಅವರ ಕರೆ

ಪ್ರಧಾನ ಮಂತ್ರಿ ಶ್ರೀ. ಜವಾಹರಲಾಲ ನೆಹರೂ ಅವರು ದಿಲ್ಲಿಯಿಂದ ೧೮ ಮೈಲು ದೂರದಲ್ಲಿರುವ ಅಲಿಪುರದಲ್ಲಿ ಸಮಾಜ ವಿಕಾಸ ಯೋಜನೆಯ ಅಂಗವಾಗಿ ಹಳ್ಳಿಯ ರಸ್ತೆ ರಚನೆ ಕಾರ್ಯಾರಂಭವನ್ನು ಮಾಡುತ್ತ, ಕೆಲಸ ಹೆಚ್ಚಾಗಿ ಮಾತು ಕಡಿಮೆಯಾಗಬೇಕೆಂದು ಹೇಳಿದರು.

ಅವರು ಭಾಷಣವನ್ನು ಮುಂದುವರಿಸುತ್ತ, "ಇದೊಂದು ಶುಭದಿನ. ಇಂದು ನಮ್ಮ ದೇಶದಲ್ಲಿ ಮಹಾತ್ಮಾ ಗಾಂಧೀಯವರಿಗೆ ಪ್ರೀತ್ಯಾಸ್ಪದವಾದ, ಹಳ್ಳಿಯ ಜನತೆಯ ಹಿತಕ್ಕಾಗಿ ಸಮಾಜ ವಿಕಾಸ ಯೋಜನೆಯ ಕಾರ್ಯವನ್ನು ಪ್ರಾರಂಭಿಸುತ್ತಿರುವದು ಯೋಗ್ಯವಾಗಿದೆ. ಈ ಸಮಾರಂಭದಲ್ಲಿ ಭಾಷಣ, ಮೆರವಣಿಗೆಗಳು ಕಡಿಮೆಯಾಗಿ, ಹೆಚ್ಚಿಚ್ಚು ಕಾರ್ಯವಾಗಲಿ.

"ನಾವು ಭಾರತ ಭೂಮಿಯಲ್ಲಿ ಜನಿಸಿದ್ದೇವೆ. ಆದುದರಿಂದ ನಮ್ಮ ಬೆವರು-ನೆತ್ತರು ಸುರಿಸಿ, ಭಾರತ ಮಾತೆಯ ಮಕ್ಕಳ ದಾರಿದ್ರ್ಯವನ್ನು ನಿರ್ಮೂಲಗೊಳಿಸಬೇಕು," ಎಂದು ನುಡಿದರು.



ಫೋರ್ಡ್‌ಸನ್ ಮೇಜರದಿಂದ ಹುಟ್ಟುವಳಿ ಖಂಡಿತ ಹೆಚ್ಚುವದು ...

ಬೇಗನೆ ಕೆಲಸ ಮಾಡಿಕೊಡುವ ಉಪಕರಣಗಳು

Fordson

MAJOR TRACTOR

ಬೆಳಗಾವಿ ಜಿಲ್ಲೆಯಲ್ಲಿ

ಸಾಂಘಿಕ ಕಾರ್ಯದ ಶ್ರೀಕಾರ

ಬೆಳಗಾವಿ ಜಿಲ್ಲೆಯ ಸಮಾಜ ವಿಕಾಸ ಯೋಜನೆಯ ಕಾರ್ಯಾರಂಭವು ಗುರುವಾರ ಮುಂಜಾನೆ ಕೊಣ್ಣೂರಲ್ಲಿ ರಾಜ್ಯದ ಸಹಕಾರಿ ಖಾತೆಯ ಮಂತ್ರಿ ಶ್ರೀ. ಪಾಟೀಲ ಮಲ್ಲನಗೌಡರ ಹಿರಿತನದಲ್ಲಿ ಆಯಿತು. ಭಾರತದ ಏಳ್ಗೆಯು ಬೇಗನೆ ಆಗಬೇಕಾದರೆ ಸಾಂಘಿಕ ಸಹಕಾರ ಪ್ರಯತ್ನವು ಅವಶ್ಯವೆಂದೂ ಅದೇ ಸಮಾಜ ವಿಕಾಸ ಯೋಜನೆಯ ತಳಹದಿಯೆಂದೂ ಮಂತ್ರಿಗಳು ಹೇಳಿದರು.

ಇಂಥ ಪ್ರಯತ್ನದ ಪ್ರತೀಕವಾದ ಕೊಣ್ಣೂರ ಘಾಟದ ಅಡಿಗಲ್ಲನ್ನು ಮಂತ್ರಿಗಳು ಸ್ಥಾಪಿಸಿದರು.

ಕೊಣ್ಣೂರಲ್ಲಿ ಕಟ್ಟಲ್ಪಡಲಿರುವ ನದಿಯ ಘಾಟಿಗೆ ಕಲ್ಲುಗಳನ್ನು ತರುವ ೬೦ ಸಿಂಗರಿಸಿದ ಬಂಡಿಗಳ ಸಾಲು ಹಾಗು ಅದರ ಹಿಂದೆ ಇದ್ದ ಹಳ್ಳಿಗರ ಸ್ವಯಂಸ್ಫೂರ್ತಿಯ ಕಾರ್ಯವು ಯೋಜನೆಯ ಕಾರ್ಯಾರಂಭದ ಶ್ರೀಕಾರವಾಯಿತು.

ಕೊಣ್ಣೂರಲ್ಲಿ (ಬೆಳಗಾವಿ ಜಿಲ್ಲೆ) ಮಂತ್ರಿ ಶ್ರೀ. ಪಾಟೀಲ ಮಲ್ಲನಗೌಡರು ಒಡ್ಡರ ಹಾಗು ಬೇಡರ ಸಹಕಾರಿ ಮನೆಕಟ್ಟುವ ಸಂಘವು ಒಡ್ಡರ ವಸಾಹತಿನಲ್ಲಿ ನಿರ್ಮಿಸಿದ ಮನೆಗಳ ಉದ್ಘಾಟನ ಮಾಡುತ್ತಿದ್ದಾರೆ.

೯೦ ಅಡಿ ಉದ್ದ ಹಾಗು ೮೦ ಅಡಿ ಅಗಲವಾಗಲಿರುವ ಈ ಘಾಟಿಗೆ ೧೨ ಸಾವಿರ ರೂ. ವೆಚ್ಚಬರಬಹುದೆಂದು ಅಂದಾಜಿದೆ. ಆದರೆ ಹಳ್ಳಿಗರ ಸ್ವಯಂಸ್ಫೂರ್ತಿಯ ಕಾರ್ಯದ ಫಲವಾಗಿ ಅದು ಕೇವಲ ೬ ಸಾವಿರ ರೂ. ವೆಚ್ಚದಿಂದ ಕೈಗೂಡಲಿದೆ. ಒಡ್ಡರು ಪುಕ್ಕಟೆ ಕಲ್ಲು ಒಡೆದು ಕೊಡುವರು, ಒಕ್ಕಲಿಗರುಅವನ್ನು ತರಲು ಬಂಡಿಗಳನ್ನು ಒದಗಿಸುವರು, ಇತರರು ಶ್ರಮದ ರೂಪವಾಗಿ ಈ ಸಾರ್ವಜನಿಕ ಕಾರ್ಯಕ್ಕೆ ಕೈನೀಡುವರು.

ಅದೇ ಊರಲ್ಲಿ ಒಡ್ಡರ ಹಾಗು ಬೇಡರ ಸಹಕಾರಿ ಮನೆಕಟ್ಟುವ ಸಂಘವು ಗುಡಿಸಲುಗಳ ಸ್ಥಳದಲ್ಲಿ ಒಡ್ಡರ ವಸಾಹತಿನಲ್ಲಿ ನಿರ್ಮಿಸಿದ ಮನೆಗಳ ಉದ್ಘಾಟನವೂ ಮಂತ್ರಿಗಳ ಹಸ್ತದಿಂದ ನೆರವೇರಿತು. ಆಗ ಮಾಡಿದ ತಮ್ಮ ಭಾಷಣದಲ್ಲಿ ಮಂತ್ರಿಗಳು ಮಹಾತ್ಮಾ ಗಾಂಧೀಯವರ ಜನ್ಮ ದಿನದ ಮಹತ್ವವನ್ನು, ಅದರ ಆಚರಣೆಯ ವೈಶಿಷ್ಟ್ಯವನ್ನು ಅರುಹಿ ರಾಷ್ಟ್ರಪಿತನಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ರಾಜಕೀಯ ಸ್ವಾತಂತ್ರ್ಯವು ಆರ್ಥಿಕ ಸ್ವಾತಂತ್ರ್ಯವಾಗಬೇಕಾದರೆ, ಬಡವರಲ್ಲಿಯ ಬಡವರಿಗೂ ಅನ್ನ, ವಸ್ತ್ರ, ವಸತಿ ಈ ಮೂಲ ಬೇಡಿಕೆಗಳು ಈಡೇರಬೇಕಾದರೆ, ಜನರೇ ಮುಂದಾಗಿ ಕಾರ್ಯ ಪ್ರಾರಂಭಿಸಬೇಕೆಂದೂ ಇಲ್ಲವಾದರೆ ಕೋಟ್ಯವಧಿ ರೂಪಾಯಿ ಸುರುವಿದರೂ ಆ ಕಾರ್ಯವು ಬೇಗನೆ ಸಾಧಿಸಲಿಕ್ಕಿಲ್ಲವೆಂದೂ ಅವರು ಹೇಳಿದರು. ಭಾರತದ ಜನಬಲವು ಅಪಾರವಿದೆ. ಅದರ ಪೂರ್ಣ ಲಾಭವನ್ನು ನಾವು ಪಡೆಯಬೇಕು. ಈ ಜನಬಲದ ವಿಶ್ವಾಸದಿಂದಲೇ ಮಹಾತ್ಮರು ತಾವು ಭಾರತದ ಬಡತನವನ್ನು ಹೊಡೆದೋಡಿಸಬಲ್ಲೆವೆಂದು ಹೇಳುತ್ತಿದ್ದರು ಎಂದರು. ಸಾಂಘಿಕ ಸಹಕಾರಿ ಪ್ರಯತ್ನವೇ ಸಮಾಜ ವಿಕಾಸ ಯೋಜನೆಯ ತಳಹದಿ, ಎಂದು ಹೇಳಿ ಮಂತ್ರಿಗಳು ಯೋಜನೆಯ ಬಗ್ಗೆ ನಾಲ್ಕು ಮಾತು ಹೇಳಿದರು.

ಒಡ್ಡರ ಮತ್ತು ಬೇಡರ ಸಹಕಾರಿ ಮನೆಕಟ್ಟುವ ಸಂಘವು ಶ್ರೀ. ಕಲಿಂಗ ಮಾಸ್ತರರ ನೇತೃತ್ವದಲ್ಲಿ ಸ್ಥಾಪಿತವಾಗಿ ೯೪ ಮನೆಗಳನ್ನು ಕಟ್ಟುವ ಕಾರ್ಯವನ್ನು ವಹಿಸಿತು.

ಎಡಗಡೆ : ಮಂತ್ರಿ ಶ್ರೀ. ಪಾಟೀಲರು [illegible] ಆವರಿಗೆ ಒಬ್ಬರ ಮಹಿಳೆಯೊಬ್ಬಳು ಸ್ವಾಗತ ಬಯಸುತ್ತಿದ್ದಾಳೆ. ಬಲಗಡೆ : ಮಂತ್ರಿಗಳು [illegible] ಅಡಿಗಲ್ಲನ್ನಿಡುತ್ತಿದ್ದಾರೆ.

ಇವುಗಳಲ್ಲಿ ೧೬ ಮನೆಗಳು ಪೂರ್ಣವಾಗಿದ್ದು ೬೨ ಮನೆಗಳ ಕೆಲಸ ಭರದಿಂದ ಸಾಗಿದೆ. ಮನೆಗೆ ೧೫೦೦ ರೂ. ದಂತೆ ಸರಕಾರವು ಸಾಲವನ್ನು ಕೊಟ್ಟಿದೆ. ಅವುಗಳ ಭಾವಿ ಒಡೆಯರು ದೈಹಿಕ ಶ್ರಮವನ್ನು ದಾನ ಮಾಡಿ ಮನೆಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ.

ಮಧ್ಯಾಹ್ನದಲ್ಲಿ ಮಂತ್ರಿಗಳು ಕಲ್ಲೋಳ್ಳಿ, ಗುರ್ಲಾಪುರ, ಹಳ್ಳೂರ, ಮತ್ತು ಮೂಡಲಗಿಗೆ ಭೆಟ್ಟಿಕೊಟ್ಟು ಅಲ್ಲಿ ನಡೆದ ಸಹಕಾರಿ ಸಾಂಘಿಕ ಚಟುವಟಿಕೆಗಳಿಗೆ ಹುರುಪು ಕೊಟ್ಟರು. ಗುರುವಾರ ಯೋಜನೆಯ ಕ್ಷೇತ್ರದಲ್ಲಿಯ ಎಲ್ಲ ಹಳ್ಳಿಗಳಲ್ಲಿ ಯೋಜನೆಯ ಪ್ರಾರಂಭವಾಯಿತು. ಮೊದಲು ೮೦ ಹಳ್ಳಿಗಳಲ್ಲಿ ಪ್ರತ್ಯಕ್ಷ ಕಾರ್ಯದ ರೂಪವಾಗಿ ಪ್ರಾರಂಭೋತ್ಸವವಾಯಿತು.

★ ಶಾಲೆಗೆ ಬೇಸಾಯದ ಹಿನ್ನೆಲೆ ★

[illegible]

ಇಂದು ಭಾರತವು ಜಗತ್ತಿನಲ್ಲಿಯೇ ಅತಿ ಕಠಿಣ ಮಾನವೀಯ ಸಮಸ್ಯೆಗಳಲ್ಲೊಂದನ್ನು, ಗ್ರಾಮೀಣ ಜೀವನದ ಸುಧಾರಣೆಯ ಸಮಸ್ಯೆಯನ್ನು, ಎದುರಿಸುತ್ತಿದೆ. ಸಮಾಜ ವಿಕಾಸ ಯೋಜನೆಗಳು ಈ ಸಮಸ್ಯೆಗೆ ಪರಿಹಾರ ಒದಗಿಸಬಲ್ಲವು.

ಮುಂಬಯಿ ರಾಜ್ಯದ ಮುಖ್ಯ ಮಂತ್ರಿ
ಶ್ರೀ. ಮುರಾರಜಿ ದೇಸಾಯಿ
ಅವರಿಂದ

★

ಜನತೆಯ ಯೋಜನೆಗಳು

ಇಂದು, ರಾಷ್ಟ್ರಪಿತ ಗಾಂಧೀಜಿಯ ೮೪ನೇ ಜನ್ಮದಿನದಂದು, ಅವರ ಪ್ರೀತಿಯ ರಚನಾತ್ಮಕ ಕಾರ್ಯದ ಒಂದು ಅಂಗವಾದ ಸಮಾಜ ವಿಕಾಸ ಯೋಜನೆಯ ಕಾರ್ಯಕ್ರಮವನ್ನು ನಾವು ದೇಶದಾದಂತ್ಯ ಪ್ರಾರಂಭಿಸುತ್ತಿದ್ದೇವೆ. ನೀವು ಈಗಾಗಲೆ ಈ ಬಗ್ಗೆ ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದರ ಸಂದೇಶವನ್ನು ಕೇಳಿದ್ದೀರಿ. ಈ ಸಂದರ್ಭದಲ್ಲಿ ಮುಂಬಯಿ ರಾಜ್ಯದಲ್ಲಿಯ ಸಮಾಜ ವಿಕಾಸ ಯೋಜನೆಗಳ ಬಗ್ಗೆ ನಾನು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ.

ಮೂಲಭೂತ ತತ್ವ

ಸಮಾಜವಿಕಾಸ ಯೋಜನೆಗಳ ಮೂಲ ಭೂತ ತತ್ವ ನಮಗೇನು ಹೊಸದಲ್ಲ. ಗ್ರಾಮೀಣ ಸಂಪದಾಭಿವೃದ್ಧಿ ಹಾಗು ಸ್ವಯಂಪೂರ್ಣತೆಯ ಘಟಕವಾಗಿ ಹಳ್ಳಿಯ ಪುನರುಜ್ಜೀವನದ ಆದರ್ಶವನ್ನು ಮಹಾತ್ಮಾಜಿಯವರು ರೂಪಿಸಿದರು ಹಾಗು ಆ ಆದರ್ಶ ಸಾಧನೆಗಾಗಿ ಜನತೆಯನ್ನು ಹುರಿದುಂಬಿಸಿದರು.

ಮುಂಬಯಿ ರಾಜ್ಯದಲ್ಲಿ ಈ ಯೋಜನೆಗಳನ್ನು ಕೊಲ್ಹಾಪುರ, ಬೆಳಗಾವಿ, ಮೆಹಸಾಣಾ, ಸಾಬರಕಾಂಠಾ ಹಾಗು ಠಾಣೆ-ಕುಲಾಬಾ ಜಿಲ್ಹೆಗಳಲ್ಲಿ ಕೈಕೊಳ್ಳಲಾಗಿದೆ. ನಮ್ಮ ಪ್ರಧಾನ ಮಂತ್ರಿ ಪಂಡಿತ ನೆಹರು ಅವರು ಇತ್ತೀಚಿಗೆ ಹೇಳಿದಂತೆ, ಇದು ಕೇವಲ ಪ್ರಾರಂಭವಷ್ಟೆ. ಇಡೀ ದೇಶದಲ್ಲಿಯ ಈ ೫೫ ಕೇಂದ್ರಗಳಲ್ಲದೆ, ಕ್ರಮೇಣ ಮತ್ತೆ ಕೆಲ ಕೇಂದ್ರಗಳನ್ನು ಪ್ರಾರಂಭಿಸಲಾಗುವದು; ಕೊನೆಗೆ ಈ ರಚನಾತ್ಮಕ ಕಾರ್ಯದಲ್ಲಿ ೩೫ ಕೋಟಿ ಭಾರತೀಯರೆಲ್ಲ ಸೇರಿಕೊಳ್ಳುವರು.

ಯೋಜನಾ ಕ್ಷೇತ್ರಗಳು

ಮುಂಬಯಿ ರಾಜ್ಯದಲ್ಲಿ ನಾಲ್ಕು ಯೋಜನಾ ಕ್ಷೇತ್ರಗಳನ್ನು ಹಾಗು ೧ ಅಭಿವೃದ್ಧಿ ಗುಂಪನ್ನು ಆರಿಸಲಾಗಿದ್ದು, ಅವು ೧,೫೬೨ ಹಳ್ಳಿಗಳನ್ನೂ ೧೨ ಲಕ್ಷ ಜನರನ್ನೂ ಒಳಗೊಂಡಿವೆ. ಒಟ್ಟು ಕ್ಷೇತ್ರ ೨,೮೧೯ ಚೌ. ಮೈಲುಗಳಾಗುವದು. ೩೦೦ ಹಳ್ಳಿಗಳನ್ನು ಸುಮಾರು ೨ ಲಕ್ಷ ಜನಸಂಖ್ಯೆಯನ್ನೂ ಒಳಗೊಳ್ಳುವ ಪ್ರತಿ ಯೋಜನಾ ಕ್ಷೇತ್ರದ ವೆಚ್ಚ ೩ ವರುಷಗಳಲ್ಲಿ ೬೫ ಲಕ್ಷ ರೂ. ಆಗುವದು. ಈ ರೀತಿ ಮುಂಬಯಿ ರಾಜ್ಯದಲ್ಲಿ ವಿಕಾಸ ಯೋಜನೆಗಳಿಗಾಗಿ ೩ ಕೋಟಿ ರೂ. ವೆಚ್ಚ ಮಾಡಲಾಗುವದು.

ಹಳ್ಳಿಯ ಜೀವನದ ಎಲ್ಲ ಅಂಗಗಳು ಒಂದಕ್ಕೊಂದು ಸಂಬಂಧ ಪಟ್ಟಿರುತ್ತವೆ. ಅದ್ದರಿಂದ ಯಾವದೊಂದು ಅಂಗವನ್ನು ಪ್ರತ್ಯೇಕವಾಗಿ ಕೈಗೆತ್ತಿಕೊಂಡರೆ ಬಹಳ ದಿನ ಬಾಳಬಲ್ಲ ಪ್ರತಿಫಲ ದೊರೆಯಲಾರದು. ಆದುದರಿಂದ ಸರ್ವಾಂಗೀಣ, ಸಂಯೋಜಿತ ಹಾಗು ಸಮನ್ವಯುತ ಅಭಿವೃದ್ಧಿಯೇ ನಮ್ಮ ಗುರಿಯಾಗಬೇಕು. ಇದುವೆ ಸಮಾಜ ವಿಕಾಸ ಯೋಜನೆಗಳ ಮೂಲಭೂತ ತತ್ವವಾಗಿದೆ.

ಮಾನವೀಯ ಸಮಸ್ಯೆ

ಜನಕಲ್ಯಾಣ ರಾಷ್ಟ್ರವಾಗಬಯಸುವ ಭಾರತವು ಇಂದು ಜಗತ್ತಿನಲ್ಲಿಯೆ ಅತಿ ಕಠಿಣ ಮಾನವೀಯ ಸಮಸ್ಯೆಗಳಲ್ಲೊಂದನ್ನು ಎದುರಿಸುತ್ತಿದೆ. ಭಾರತೀಯ ಜನಸಂಖ್ಯೆ

ಯಲ್ಲಿ ನೂರಕ್ಕೆ ೮೦ ರಷ್ಟು ಹಳ್ಳಿಗಳಲ್ಲಿರುವದರಿಂದ, ಹಳ್ಳಿಯ ಜೀವನದ ಸುಧಾರಣೆಯು ಮೂಲಭೂತವಾಗಿ ಮಾನವೀಯ ಸಮಸ್ಯೆಯಾಗಿದೆ. ಆರು ಕೋಟಿ ಕುಟುಂಬಗಳಲ್ಲಿ ತಮ್ಮ ಹಳೆಯ ದೃಷ್ಟಿಯನ್ನು ಬದಲಿಸಿಕೊಳ್ಳುವ ಪ್ರಬಲ ಬಯಕೆಯನ್ನು ಹುಟ್ಟಿಸುವ, ಹೊಸ ಜ್ಞಾನ ಮತ್ತು ಹೊಸ ಜೀವನದ ರೀತಿನೀತಿಗಳ ಬಗ್ಗೆ ಉತ್ಸಾಹವನ್ನು ಪ್ರಚೋದಿಸುವ ಹಾಗು ಉತ್ತಮ ಜೀವನ ಜೀವಿಸಬೇಕೆಂಬ ಮನೋಬಲವನ್ನು ಹುಟ್ಟಿಸುವದೇ ಈ ಮಹತ್ತರ ಕಾರ್ಯವಾಗಿದೆ.

ಸಮಾಜ ವಿಕಾಸ ಯೋಜನೆಗಳು, ಜನತೆಯು, ಜನತೆಯಿಂದ ಹಾಗು ಜನತೆಗಾಗಿ ಇರುವ ಯೋಜನೆಗಳಾಗಿವೆ. ಅವುಗಳ ಕಾರ್ಯಾಚರಣೆಯಲ್ಲಿ ಜನತೆಯು ಮಾಡುವ ಪ್ರಯತ್ನದ ಮೇಲೆಯೆ ಅವುಗಳ ಯಶಸ್ಸು ಸಂಪೂರ್ಣವಾಗಿ ಅವಲಂಬಿಸಿದೆ. ಯೋಜನಾಧಿಕಾರಿಗಳೂ, ತಾಂತ್ರಿಕ ಸಿಬ್ಬಂದಿಯೂ ಶಕ್ತಿಮೀರಿ ಪ್ರಯತ್ನಿಸುವದರಲ್ಲಿ ಸಂದೇಹವಿಲ್ಲ. ಆದರೆ ಈ ಸಹಕಾರಿ ಪ್ರಯತ್ನದಲ್ಲಿ ಜನತೆಗೆ ನೆರವೀಯಲು ಹಾಗು ಮಾರ್ಗದರ್ಶನ ಮಾಡಲು ಮಾತ್ರ ಅವರಿದ್ದಾರೆ.

ಯೋಜನೆಯ ಕಾರ್ಯಕ್ರಮ

ಯೋಜನೆಯನ್ನು ೩ ವರುಷಗಳ ಕಾರ್ಯಕ್ರಮವೊಂದನ್ನು ತಯಾರಿಸಲಾಗಿದೆ. ಒಕ್ಕಲತನ, ಪಶುಸಂಗೋಪನ ಹಾಗು ಗ್ರಾಮೋದ್ಯೋಗಗಳಲ್ಲಿ ಉತ್ಪಾದನೆ ಶೀಘ್ರಗತಿಯಿಂದ ಹೆಚ್ಚಬೇಕೆಂಬ ಉದ್ದೇಶವಿದೆ. [illegible] ಸುಧಾರಿಸಿದ ಬೀಜ, ಗೊಬ್ಬರ ಹಾಗು [illegible] ಗಳಲ್ಲದೆ ಬಂಧಾರ, ಬಾವಿ, [illegible] ಟ್ರಾಕ್ಟರ ಸಹಾಯದಿಂದ [illegible] ಸಮಪಾತಳಿ ಒಡ್ಡುಗಳು, [illegible] ಗಳನ್ನೂ ಕಾರ್ಯಕ್ರಮದಲ್ಲಿ ಸೇರಿಸಲಾಗಿದೆ. [illegible] ಪೂರೈಕೆ, ಗಟಾರಗಳು, [illegible] ಆರೋಗ್ಯ ಯೋಜನೆಗಳು ಹಾಗು [illegible] ಇತ್ಯಾದಿ ಸೌಲಭ್ಯ [illegible] ಮಾಡಿಕೊಡಲಾಗಿದೆ. [illegible] ಗೊಂಡ ಶಿಕ್ಷಣಕ್ಕೆ ಮಹತ್ವ ಕೊಡಲಾಗಿದೆ. [illegible] ಹಾಗು ಮೂಲ ಶಿಕ್ಷಣ ಶಾಲೆಗಳನ್ನು [illegible] ದಲ್ಲದೆ, ಶಾಲೆಗಳಿಗಾಗಿ [illegible] ಗ್ರಂಥಾಲಯ ಹಾಗು ವಾಚನಾಲಯಗಳನ್ನು ಸ್ಥಾಪಿಸಲಾಗುವದಲ್ಲದೆ, ಆಟ ಹಾಗು ಮನರಂಜನೆಗಾಗಿಯೂ ವ್ಯವಸ್ಥೆ ಮಾಡಲಾಗುವದು. ಸಾರಿಗೆ ಸಂಪರ್ಕಗಳ ಅನುಕೂಲತೆ ಹಾಗು ಸಹಕಾರಿ ಉಗ್ರಾಣಗಳನ್ನೊಳಗೊಂಡು ಪೇಟೆಯ ಸೌಕರ್ಯಗಳನ್ನು ಒದಗಿಸುವದು ಇನ್ನೊಂದು ಮಹತ್ವದ ಕಾರ್ಯ. ಬೇರೆ ಬೇರೆ ಗ್ರಾಮೋದ್ಯೋಗಗಳನ್ನೂ, ಸಹಕಾರಿ ಚಟುವಟಿಕೆಗಳನ್ನೂ ಪ್ರೋತ್ಸಾಹಿಸಲಾಗುವದು.

ಹಳ್ಳಿಯಲ್ಲಿಯ ಪ್ರತಿಯೊಬ್ಬ ಗಂಡಸು, ಹೆಂಗಸು ಹಾಗು ಮಗುವು, ಯೋಜನೆಯ ಕಾರ್ಯವನ್ನು ತನ್ನ ಕಾರ್ಯವೆಂದೆ ಭಾವಿಸಬೇಕು. ಅವರು ಹಣದ ರೂಪದಲ್ಲಾಗಲಿ [illegible] ರೂಪದಲ್ಲಾಗಲಿ ತಮ್ಮ ಕೊಡುಗೆಯನ್ನು ಸಲ್ಲಿಸಬಹುದು. ಹಳ್ಳಿಯ ಜೀವನವನ್ನು ಸುಧಾರಿಸಿ, ಅದು ಸ್ವಚ್ಛವೂ ಸುಖ ಸಂಪತ್ತುಳ್ಳದ್ದೂ ಹಾಗು ಹೆಚ್ಚು ಉತ್ಪಾ[illegible] ಆಗುವಂತೆ ಅವರು ದುಡಿಯಬೇಕು. ತೊಡಗಿಸಿದ ಹಣಕ್ಕೆ ಯೋಗ್ಯ ಫಲ ದೊರೆಯುವಂತೆ ಹಾಗು ಜನತೆಯ [illegible] ಅಭಿವೃದ್ಧಿಯಾಗುವಂತೆ ಯೋಜನೆಯನ್ನು ರೂಪಿಸಲಾಗಿದೆ.

[illegible] ಬಹು ದೊಡ್ಡ ಆಶೆ ಹಾಗು ವಿಶ್ವಾಸಗಳನ್ನಿಟ್ಟುಕೊಂಡು ಹೊರಟಿದ್ದೇವೆ. ಏಕೆಂದರೆ ಹಳ್ಳಿಯ ಶಾಲೆಯನ್ನೇ [illegible] ಬಂಧಾರವನ್ನೇ ಆಗಲಿ ಕಟ್ಟಿ [illegible] ಪ್ರಯತ್ನ ಹಾಗು ಸ್ವಯಂಸ್ಫೂರ್ತಿಯ [illegible] ಬಲ್ಲದು ಎಂಬುದನ್ನು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿಯ ಜನ ತೋರಿಸಿ ಕೊಟ್ಟಿದ್ದಾರೆ.

ಮಹತ್ತರ ಕಾರ್ಯ

ಯೋಜನಾ ಕ್ಷೇತ್ರಗಳಲ್ಲಿಯ ಹಾಗು ನೆರೆಯ ಜನತೆ [illegible] ಉದ್ದೇಶದಿಂದಲೂ ಮುಂದೆ [illegible] ಹಾಗು ಕಾರ್ಯದಲ್ಲಿ ತೊಡಗಿದ [illegible] ಯೋಜನೆಗಳನ್ನು ಯಶಸ್ವಿಯಾಗಿ [illegible] ಮಹತ್ತರವೂ [illegible] ಒಂದನ್ನು ನೀವು [illegible] ಶುಭೇಚ್ಛೆಗಳು. ನೀವು [illegible] ಎಂಬುದರಲ್ಲಿ [illegible]

([illegible] ಭಾಷಣ)

★ ಸಮಾಜ ವಿಕಾಸದತ್ತ ಹೊಸ ಹೆಜ್ಜೆ ★

ಮುಂಬಯಿ ರಾಜ್ಯದ ಐದು ಕ್ಷೇತ್ರಗಳಲ್ಲಿ ಗಾಂಧೀ ಜಯಂತಿ ದಿನದಂದು ಸಮಾಜ ವಿಕಾಸ ಯೋಜನೆಗಳು ಉದ್ಘಾಟಿಸಲ್ಪಟ್ಟವು. ಮುಂಬರುವ ವರ್ಷಗಳಲ್ಲಿ ಇಡಿ ರಾಜ್ಯದ ಅಭಿವೃದ್ಧಿಗಾಗಿ ಸರಕಾರವು ರೂಪಿಸಿದ ವಿಸ್ತೃತ ಕಾರ್ಯಕ್ರಮದಲ್ಲಿ ಇದು ಪ್ರಥಮ ಹೆಜ್ಜೆ. ಐದೂ ಕ್ಷೇತ್ರಗಳ ವಿಸ್ತಾರ ಜನಸಂಖ್ಯೆ ಹಾಗು ಅವುಗಳಲ್ಲಿ ಆಗಲಿರುವ ವೆಚ್ಚ ಇತ್ಯಾದಿ ವಿವರಗಳನ್ನು ಈ ಲೇಖದಲ್ಲಿ ಒದಗಿಸಲಾಗಿದೆ.

ಪೂಜ್ಯ ಗಾಂಧೀಜೀಯವರ ಜನ್ಮ ದಿನವಾದ ಅಕ್ಟೋಬರ ೨ರಂದು ಮುಂಬಯಿ ರಾಜ್ಯದ ಐದು ಪ್ರದೇಶಗಳಲ್ಲಿ ಸಮಾಜ ವಿಕಾಸದ ಹೊಸ ಪ್ರಯೋಗದ ಉದ್ಘಾಟನೆಯಾಯಿತು. ಭಾರತದಲ್ಲಿ ಇತರ ಐವತ್ತು ಪ್ರದೇಶಗಳಲ್ಲಿಯೂ ಇಂಥದೇ ಕಾರ್ಯ ಅಂದು ಪ್ರಾರಂಭವಾಯಿತು. ಇಡಿ ದೇಶದ ಆತ್ಯಂತಿಕ ಅಭಿವೃದ್ಧಿಗಾಗಿ ರೂಪಿಸಿದ ಆಂದೋಲನೆಯಲ್ಲಿ ಈ ಐವತ್ತೈದು ಕೇಂದ್ರಗಳ ಪ್ರಾರಂಭ ಪ್ರಥಮ ಹೆಜ್ಜೆಯಾಗಿದೆ.

ಸಮಾಜ ವಿಕಾಸ ಯೋಜನಾ ಕ್ಷೇತ್ರಗಳೆಂದು ಅವುಗಳ ಹೆಸರು. ಮುಂಬಯಿ ರಾಜ್ಯದಲ್ಲಿ ಇಂಥ ಐದು ಕ್ಷೇತ್ರಗಳು ಕೊಲ್ಹಾಪುರ, ಬೆಳಗಾವಿ, ಮೆಹಸಾಣಾ, ಬನಾಸಕಾಂಠಾ ಹಾಗು ಠಾಣೆ ಮತ್ತು ಕುಲಾಬಾ ಜಿಲ್ಹೆಗಳಲ್ಲಿ ಇವೆ.

ಹೊಲದ ಹುಟ್ಟುವಳಿ ಹೆಚ್ಚಿ ಹಳ್ಳಿಯ ಜನತೆಯ ಜೀವನಮಟ್ಟ ಉನ್ನತವಾಗುವಂತೆ ನೆರವಾಗಬೇಕೆಂದು ಯೋಜನಾ ಕ್ಷೇತ್ರಗಳಲ್ಲಿ ಹಲವಾರು ಬಗೆಯಾಗಿ ಒಕ್ಕಲತನ ಸುಧಾರಣೆಯ ಉಪಾಯಗಳನ್ನು ಕೈಕೊಳ್ಳಲಾಗುವದು.

ಆಯಾ ಪ್ರದೇಶವಲ್ಲಿಯ ಭೌತಿಕ ಹಾಗು ಮಾನವ ಸಾಧನ ಸಂಪತ್ತಿಯನ್ನು ಪರಿಪೂರ್ಣವಾಗಿ ಅಭಿವೃದ್ಧಿಗೊಳಿಸುವದೇ ಈ ಸಮಾಜ ವಿಕಾಸ ಯೋಜನೆಗಳ ಮೂಲ ಉದ್ದೇಶವಾಗಿದೆ. ಯಾವ ರೀತಿಯಲ್ಲಿ ಅವುಗಳನ್ನು ಅಭಿವೃದ್ಧಿಗೊಳಿಸಬೇಕೆಂಬುದು ಆಯಾ ಪ್ರದೇಶದಲ್ಲಿಯ ವಿಶಿಷ್ಟ ಪರಿಸ್ಥಿತಿಯನ್ನವಲಂಬಿಸಿದೆ. ಈಗ ಆರಿಸಿದ ಗ್ರಾಮೀಣ ಪ್ರದೇಶಗಳಲ್ಲಿ ಒಕ್ಕಲತನದ ವಿಕಾಸ ಸ್ವಾಭಾವಿಕವಾಗಿಯೆ ಮಹತ್ವದ ಕಾರ್ಯವಾಗಿದ್ದರೂ ಅಷ್ಟಕ್ಕೆ ಎಲ್ಲ ಕೆಲಸ ಮುಗಿದಂತಾಗಲಿಲ್ಲ. ಸಾಮಾಜಿಕ ಶಿಕ್ಷಣ, ಜನತೆಯ ಆರೋಗ್ಯದಲ್ಲಿ ಸುಧಾರಣೆ, ಹೊಸ ಹೊಸ ಉದ್ಯೋಗ ಧಂದೆಗಳ ಪ್ರಾರಂಭ ಇತ್ಯಾದಿಗಳಿಗಾಗಿಯೂ ಬಲವತ್ತರ ಕಾರ್ಯಕ್ರಮವನ್ನು ಯೋಜಿಸಲಾಗಿದೆ. ಈ ಸರ್ವಾಂಗೀಣ ಕಾರ್ಯಕ್ರಮದ ಫಲವಾಗಿ ಹಳ್ಳಿಯ ಸಮಾಜ ಸಂಘಟನೆ ಉನ್ನತ ಮಟ್ಟಕ್ಕೇರಿ ಜನತೆಯಲ್ಲಿ ಹೊಸ ಬಗೆಯ ಅರಿವು, ಜೀವನದ ಹೊಸ ಹೊಸ ರೀತಿನೀತಿಗಳ ಬಗ್ಗೆ ಆಕ್ಕೆ ಉತ್ಸಾಹ ಹೆಚ್ಚುವದು.

ಎಲ್ಲ ಯೋಜನಾ ಕ್ಷೇತ್ರಗಳಲ್ಲಿ ಒಕ್ಕಲತನ ಉತ್ಪಾದನೆಯನ್ನು ಹೆಚ್ಚಿಸುವಂಥ ಉಪಾಯಗಳನ್ನು ಕೈಕೊಂಡು, ಪಶುಸಂಗೋಪನೆ, ಪಶುವೈದ್ಯಕೀ ಇತ್ಯಾದಿ ಸೌಕರ್ಯಗಳ ವ್ಯವಸ್ಥೆ ಮಾಡಿ ಒಕ್ಕಲತನವನ್ನು ಅಭಿವೃದ್ಧಿಗೊಳಿಸಬೇಕೆಂದು ಯೋಜಿಸಲಾಗಿದೆ. ಒಳ ಪ್ರದೇಶದಲ್ಲಿಯ [illegible] ಗಾರಿಕೆ, ಕಾಯಿಪಲ್ಲೆ ಹಾಗು ಹಣ್ಣು [illegible] ಇವುಗಳ ಸುಧಾರಣೆ; [illegible] ವ್ಯವಸ್ಥೆ; ಪತ್ತು, ಮಾರಾಟ, [illegible] ಬೇತಿಯ ಸೌಕರ್ಯಗಳು [illegible] ಸಾಮಾಜಿಕ [illegible] ಕಾರ್ಯದಲ್ಲಿ ಬರುವವು.

ಚಿಕ್ಕ ಪುಟ್ಟ [illegible] ನೀರಾವರಿ ವ್ಯವಸ್ಥೆ, [illegible] ಬೀಜದ ಹೆಚ್ಚಳ ಹಾಗು [illegible] ಕೃತ್ರಿಮ ಗೊಬ್ಬರಗಳ [illegible] ಹುಲ್ಲುಗಾವಲುಗಳ [illegible] ವಲ ಅರಣ್ಯಗಳ ವ್ಯವಸ್ಥೆ [illegible] ಉಪಾಯಗಳು ಇತ್ಯಾದಿಗಳ [illegible] ಉತ್ಪಾದನೆಯನ್ನು ಹೆಚ್ಚಿಸಲು ಪ್ರಯತ್ನಿಸಲಾಗುವದು.

ಕೆಲವು [illegible]

ಸಂಗೋಪನೆಯನ್ನು ಕೈಕೊಂಡು, ಹಳ್ಳಿಗರಿಗೆ ಪಶುವೈದ್ಯಕೀ ಸೌಕರ್ಯಗಳನ್ನು ಒದಗಿಸಿ ಹಾಗು ಅಲ್ಲಲ್ಲಿ ಕೃತ್ರಿಮ ಗರ್ಭಧಾರಣೆ ಕೇಂದ್ರಗಳನ್ನು ತೆರೆದು ಹಳ್ಳಿಯ ದನಕರುಗಳ ಸುಧಾರಣೆಗೆ ಪ್ರಯತ್ನಿಸಲಾಗುವದು.

ಹಳ್ಳಿಗಳಲ್ಲಿಯ ನಿರುದ್ಯೋಗತನ ಅಥವಾ ಅಪೂರ್ಣಾವಧಿ ಕೆಲಸಗಾರರ ಸಮಸ್ಯೆಯನ್ನು ಬಿಡಿಸಲು ಗ್ರಾಮೋದ್ಯೋಗಗಳು ಹಾಗು ಚಿಕ್ಕ ಪುಟ್ಟ ಉದ್ದಿಮೆಗಳನ್ನು ಸ್ಥಾಪಿಸುವದು ಈ ಕಾರ್ಯಕ್ರಮದ ಒಂದು ಮಹತ್ವದ ಅಂಗವಾಗಿದೆ.

ಶಿಕ್ಷಣ

ಯೋಜನಾ ಕ್ಷೇತ್ರದಲ್ಲಿ ಲೋಕ ಶಿಕ್ಷಣವನ್ನೊದಗಿಸಲು [illegible] ರೀತಿಯಲ್ಲಿ ಪ್ರಯತ್ನಿಸಲಾಗುವದು. ಪ್ರಾಥಮಿಕ ಹಾಗು ಮಾಧ್ಯಮಿಕ ಶಿಕ್ಷಣದ ವಿಸ್ತರಣೆ ಹಾಗು ಸುಧಾರಣೆ, ಮುದಿಯುವ ಬಾಲಕರಿಗೆ ಶಿಕ್ಷಣದ ಸೌಕರ್ಯಗಳು ಹಾಗು ಯುವಕ ಕಲ್ಯಾಣ ಇವುಗಳಿಗಾಗಿಯೂ ಪ್ರಯತ್ನ ನಡೆಯುವದು. ಹಳ್ಳಿಗಳಲ್ಲಿ ಅಸ್ತಿತ್ವದಲ್ಲಿರುವ ಕೈಗಾರಿಕೆಗಳ ಸುಧಾರಣೆಗೂ ಹೊಸ ಕೈಗಾರಿಕೆಗಳ [illegible] ಅನುಕೂಲವಾಗಲೆಂದು ವೃತ್ತಿ ಹಾಗು [illegible] ಶಿಕ್ಷಣಕ್ಕೆ ಹೆಚ್ಚು ಮಹತ್ವ ಕೊಡಲಾಗುವದು.

ಹಳ್ಳಿಯ ಆರೋಗ್ಯ ಸುಧಾರಿಸಬೇಕಾದರೆ ಮೊದಲು [illegible] ಆರೋಗ್ಯಕರ ವಾತಾವರಣ ಬೇಕು; [illegible] ಅದು ಕೆಡದಂತೆ ಕಾಪಾಡ [illegible] ಹಾಗು ರೋಗರುಜಿನ [illegible] ಆರೋಗ್ಯ ಸೂತ್ರಗಳ ಬಗ್ಗೆ [illegible] ಮಾಡುವದೇ ಮುಂತಾದ [illegible] ಯೋಜನಾ ಕ್ಷೇತ್ರಗಳಲ್ಲಿ ಆಸ್ಪತ್ರೆ [illegible] ಆರೋಗ್ಯ [illegible]ಗಳಿಂದ ಸುಸಜ್ಜಿತ [illegible] ಆರೋಗ್ಯ ಘಟಕಗಳನ್ನಿಡಲಾಗುವದು.

[illegible] ವಿಶೇಷವಾಗಿ ಭೂಮಿಕಾಣಿ [illegible] ಗಮನವೀ [illegible] ಅಭಿವೃದ್ಧಿಗೊಳಿಸಿ [illegible] ಹಳ್ಳಿಗರಿಗೆ ನೆರವೀಯ [illegible]

ಈ [illegible] ಸಾಧನಗಳಿಗೂ [illegible] ಹಾಗು ಹಳ್ಳಿಹಳ್ಳಿಗಳ [illegible] ಹಳ್ಳಿಗರ ಸಹಕಾರ [illegible] ಪ್ರಯತ್ನ ನಡೆಸಲಾಗುವದು.

ಸಕಲ ಸಾಧನಗಳಿಂದ ಸುಸಜ್ಜಿತವಿರುವ ಆರೋಗ್ಯ ಘಟಕಗಳು ಹಳ್ಳಿಹಳ್ಳಿಗೆ ಹೋಗಿ ಹಳ್ಳಿಗರಿಗೆ ವೈದ್ಯಕೀಯ ನೆರವನ್ನೀಯುವದಲ್ಲದೆ ಹಳ್ಳಿಗಳು ಹೆಚ್ಚೆಚ್ಚು ಆರೋಗ್ಯಕರವಾಗುವಂತೆ ಅನೇಕ ಕಾರ್ಯಗಳನ್ನು ಕೈಕೊಳ್ಳುವವು.

ರಾಜ್ಯದ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಜ್ಯ ಅಭಿವೃದ್ಧಿ ಮಂಡಳವು ಯೋಜನೆಯ ಕಾರ್ಯದ ಮೇಲ್ವಿಚಾರಣೆ ಮಾಡುವದು. ಪ್ರತಿಯೊಂದು ಕ್ಷೇತ್ರಕ್ಕೆ ಒಂದೊಂದು ಕ್ಷೇತ್ರ ಅಭಿವೃದ್ಧಿ ಸಮಿತಿಯಿದ್ದು ಅದು ಯೋಜನಾಧಿಕಾರಿಗಳಿಗೆ ಹಾಗು ಅವರ ಸಿಬ್ಬಂದಿಗೆ ಯೋಜನೆಯನ್ನು ಕಾರ್ಯಕಾರಿಮಾಡುವಲ್ಲಿ ಸಲಹೆ ಸೂಚನೆಗಳನ್ನಿತ್ತು ನೆರವಾಗುವದು.

ಮುಂಬಯಿ ರಾಜ್ಯದಲ್ಲಿಯ ಎಲ್ಲ ಅಭಿವೃದ್ಧಿ ಕ್ಷೇತ್ರಗಳಲ್ಲಿ (ಸಾಬರಕಾಂಠಾ ಒಂದನ್ನು ಬಿಟ್ಟು) ಮೂರು ಮೂರು ಅಭಿವೃದ್ಧಿ ಗುಂಪುಗಳನ್ನು ಮಾಡಲಾಗಿದೆ. ಸಾಬರಕಾಂಠಾದಲ್ಲಿ ಇಂಥ ಒಂದೇ ಗುಂಪು ಇದೆ ಕೆಲವು ಹಳ್ಳಿಗಳು ಕೂಡಿ ಇಂಥ ಒಂದು ಗುಂಪು ಆಗಿದೆ.

ಬೆಳಗಾವಿ ಯೋಜನೆ

ಬೆಳಗಾವಿಯ ಯೋಜನಾ ಕ್ಷೇತ್ರದಲ್ಲಿ ಮೂರು ಅಭಿವೃದ್ಧಿ ಗುಂಪುಗಳಿವೆ. ಅವು ಹುಕ್ಕೇರಿ ಹಾಗು ಗೋಕಾಕ ತಾಲೂಕುಗಳಲ್ಲಿವೆ. ಒಟ್ಟು ಕ್ಷೇತ್ರ ೩,೫೫,೨೦೪ ಎಕರೆ ಇದ್ದು ಜನಸಂಖ್ಯೆ ೨,೫೩,೦೦೦ ಇದೆ. ಮೊದಲನೆಯ ಗುಂಪಿನಲ್ಲಿ ಗೋಕಾಕ ತಾಲೂಕಿನ ೫೫ ಹಳ್ಳಿಗಳೂ, ಹುಕ್ಕೇರಿ ತಾಲೂಕಿನ ಎಂಟು ಹಳ್ಳಿಗಳೂ ಸೇರಿ ೬೩ ಹಳ್ಳಿಗಳಿವೆ. ಇವುಗಳ ಕ್ಷೇತ್ರ ೧,೬೬,೦೨೭ ಎಕರೆ ಹಾಗು ಜನಸಂಖ್ಯೆ ೧,೦೧,೦೧೮ ಇದೆ. ಎರಡನೆಯ ಗುಂಪಿನಲ್ಲಿ ಹುಕ್ಕೇರಿ ತಾಲೂಕಿನ ೫೨ ಹಳ್ಳಿಗಳು ಬರುತ್ತವೆ. ಅವುಗಳ ಕ್ಷೇತ್ರ ೧,೦೪,೬೦೧ ಎಕರೆ ಹಾಗು ಜನಸಂಖ್ಯೆ ೭೦,೮೭೬ ಇದೆ. ಮೂರನೆಯ ಗುಂಪು ಅದೇ ತಾಲೂಕಿನ ೪೭ ಹಳ್ಳಿಗಳನ್ನೊಳಗೊಂಡಿದ್ದು ಆ ಗುಂಪಿನ ಜನಸಂಖ್ಯೆ ೮೪,೫೯೬ ಇದೆ.

ಪ್ರತಿಯೊಂದು ಯೋಜನಾಕ್ಷೇತ್ರಕ್ಕೆ ಮೂರು ವರ್ಷಗಳ ಅವಧಿಗಾಗಿ ಸರ್ವಸಾಧಾರಣ ೬೫ ಲಕ್ಷ ರೂಪಾಯಿಗಳನ್ನು ಒಪ್ಪಿಸಲಾಗಿದೆ. ಬೆಳಗಾವಿ ಯೋಜನಾ ಕ್ಷೇತ್ರದಲ್ಲಿ ಮಹತ್ವದ ಬೇರೆ ಬೇರೆ ವಿಷಯಗಳಿಗಾಗಿ ವೆಚ್ಚವಾಗಲಿರುವ ಹಣದ ವಿವರ ಈ ಕೆಳಗಿನಂತಿದೆ: ಒಕ್ಕಲತನ ಹಾಗು ಪಶು ಸಂಗೋಪನ ವಿಸ್ತರಣೆಗಾಗಿ ೧೫,೫೨,೬೬೫ ರೂ. ವೆಚ್ಚ ಮಾಡಲಾಗುವದು. ಇದರಲ್ಲಿ ದನಕರುಗಳ ಸುಧಾರಣೆ, ಕೋಳಿ ಸಾಕುವಿಕೆ, ಕುರಿ ಸಂಗೋಪನ,

ಒಕ್ಕಲತನ ಪ್ರಾತ್ಯಕ್ಷಿಕೆ ಕೇಂದ್ರ ಇವೆಲ್ಲ ಬರುವವು. ಬಂಧಾರ ಹಾಗು ಕೆರೆಗಳ ರಚನೆ, ಬಾವಿಗಳನ್ನು ತೋಡುವದು, ಪಂಪುಗಳ ಖರೀದಿ, ಯಾತದ ನೀರಾವರಿ ಯೋಜನೆ ಇತ್ಯಾದಿಗಳನ್ನೊಳಗೊಂಡ ನೀರಾವರಿ ಕಾಮಗಿರಿಗಳಿಗಾಗಿ ೧೭,೮೨,೦೦೦ ರೂ.; ಭೂಮಿಯನ್ನು ಸಾಗುವಳಿಗಾಗಿ ಅಣಿಗೊಳಿಸುವದು, ಅದಕ್ಕಾಗಿ ಕೊಡುವ ಸಾಲ, ಅಲ್ಲಿ ಒಡ್ಡು ಹಾಕುವ ವೆಚ್ಚ ಇತ್ಯಾದಿಗಳಿಗಾಗಿ ೩,೬೦,೦೦೦ ರೂ.; ಹಳ್ಳಿಗಳಿಗೆ ಕುಡಿಯುವ ನೀರಿನ ಪೂರೈಕೆ, ಗಾವಠಾಣೆಯ ವಿಸ್ತರಣೆ, ಗೊಬ್ಬರ ಕುಣಿ, ಕಕ್ಕಸಗಳು, ದವಾಖಾನೆಗಳು ಇತ್ಯಾದಿಗಳನ್ನೊಳಗೊಂಡು ಹಳ್ಳಿಯ ಆರೋಗ್ಯ ಹಾಗು ಸ್ವಚ್ಛತೆಯ ಕಾರ್ಯಕ್ಕೆ ೫,೪೬,೬೩೨ ರೂ.; ಶಾಲಾ ಕಟ್ಟಡಗಳ ರಚನೆ, ಪ್ರಾಥಮಿಕ ಶಾಲೆಗಳನ್ನು ಮೂಲ ಶಿಕ್ಷಣ ಶಾಲೆಗಳನ್ನಾಗಿ ಮಾರ್ಪಡಿಸುವದು ಇತ್ಯಾದಿಗಳಿಗಾಗಿ ೧,೩೦,೦೦೦ ರೂ.; ಮನರಂಜನ ಕೇಂದ್ರಗಳು, ಭಾವಗೀತೆ ಹಾಗು ಜಾನಪದ ಗೀತ ಹಾಡುವ ಮೇಳ ಇವನ್ನೊಳಗೊಂಡ ಒಟ್ಟು ಲೋಕ ಶಿಕ್ಷಣಕ್ಕಾಗಿ ೩,೬೫,೭೪೯ ರೂ.; ಹಳ್ಳಿಯ ಕವಲುದಾರಿಗಳನ್ನೊಳಗೊಂಡು ಸಂಪರ್ಕ ಸಾಧನಗಳಿಗೆ ೮,೭೭,೯೦೬ ರೂ.; ಗ್ರಾಮೀಣ ಕಲೆ, ಕೈಗಾರಿಕೆ ಹಾಗು ಉದ್ದಿಮೆಗಳಿಗಾಗಿ-ಇವುಗಳಲ್ಲಿ ಖಾದಿ ನೇಯುವದು ಹಾಗು ನೂಲುವದು, ಕೈಯಿಂದ ಕಾಗದದ ತಯಾರಿಕೆ, ಬೀಡಿ ಕಟ್ಟುವದು, ಚಾಪೆ ಹೆಣೆಯುವದು, ತಾಳೆ ಬೆಲ್ಲದ ತಯಾರಿಕೆ, ರೇಷ್ಮೆ ವ್ಯವಸಾಯ ಇವೆಲ್ಲ ಬರುವವು—೧,೩೬,೬೪೦ ರೂ.; ಸಿಬ್ಬಂದಿ ಹಾಗು ಗ್ರಾಮ ಕಾರ್ಯಕರ್ತರ ತರಬೇತಿಗಾಗಿ ೨೨,೦೦೦ ರೂ.

ಕೊಲ್ಹಾಪುರ ಯೋಜನಾಕ್ಷೇತ್ರ

ಕೊಲ್ಹಾಪುರ ವಿಕಾಸ ಯೋಜನೆಯ ಕ್ಷೇತ್ರವಿಡೀ ಒಂದೇ ಹಾಸಿನಲ್ಲಿದ್ದು ಆದರಲ್ಲೂ ಬೆಳಗಾವಿಯ ಕ್ಷೇತ್ರದಂತೆ ಮೂರು ಗುಂಪುಗಳಿವೆ. ಈ ಕ್ಷೇತ್ರದಲ್ಲಿ ಕರವೀರ ತಾಲೂಕು ಹಾಗು ಪನ್ಹಾಳಾ ಮಹಾಲಿನ ೨೦೭ ಹಳ್ಳಿಗಳು ಸೇರುತ್ತವೆ. ಒಟ್ಟು ಕ್ಷೇತ್ರ ೪೫೯ ಚದರ ಮೈಲು ಹಾಗು ಜನಸಂಖ್ಯೆ ೨,೫೯,೦೦೦ ಇದೆ.

ಮೊದಲನೆಯ ಅಭಿವೃದ್ಧಿ ಗುಂಪಿನಲ್ಲಿ ಕರವೀರ ತಾಲೂಕಿನ ೬೩ ಹಳ್ಳಿಗಳೂ, ಪನ್ಹಾಳಾ ಮಹಾಲಿನ ೧೬ ಹಳ್ಳಿಗಳೂ ಬರುತ್ತವೆ. ಈ ಗುಂಪಿನ ಕ್ಷೇತ್ರ ೧೪೧·೩೨ ಚದರ ಮೈಲುಗಳಿದ್ದು ಜನಸಂಖ್ಯೆ ೭೧,೪೪೦ ಇದೆ. ಎರಡನೆಯ ಗುಂಪಿನಲ್ಲಿ ಬರುವ ಪನ್ಹಾಳಾ ಮಹಾಲಿನ ೨೨ ಹಾಗು ಕರವೀರ ತಾಲೂಕಿನ ೩೪ ಹೀಗೆ ಒಟ್ಟು ೫೬ ಹಳ್ಳಿಗಳ ಜನಸಂಖ್ಯೆ ೯೦,೬೦೨ ಇದ್ದೆ. ಮೂರನೆಯ ಗುಂಪಿನಲ್ಲಿ ಕರವೀರದ ಎಂಟು ಹಾಗು ಪನ್ಹಾಳಾದ ೬೪ ಹಳ್ಳಿಗಳು ಕೂಡಿ ೬೭,೦೩೩ ಜನಸಂಖ್ಯೆಯುಳ್ಳ ೧೪೪·೨ ಚದರ ಮೈಲು ವಿಸ್ತೀರ್ಣವಾದ ಪ್ರದೇಶ ಬರುತ್ತದೆ.

ಕೊಲ್ಹಾಪುರ ಯೋಜನಾ ಕ್ಷೇತ್ರದಲ್ಲಿ ಮಹತ್ವದ ವಿಷಯಗಳ ಸಂಬಂಧದ ವೆಚ್ಚದ ವಿವರ ಇಂತಿದೆ: ಒಕ್ಕಲತನ ಹಾಗು ಪಶುಸಂಗೋಪನ, ಪೇಟೆ ಉಗ್ರಾಣಗಳು, ದನಕರುಗಳು, ತೋಟಗಾರಿಕೆಯ ಪ್ರಾತ್ಯಕ್ಷಿಕಾ ಕೇಂದ್ರಗಳು, ದನಗಳ ಪ್ರದರ್ಶನಗಳು, ಪಶು ಚಿಕಿತ್ಸಾಲಯಗಳು, ಬೋರಿಂಗ ಯಂತ್ರಗಳು ಇತ್ಯಾದಿಗಳಿಗಾಗಿ ೪,೩೮,೯೦೦ ರೂ. ಬಂಧಾರಾ, ಕೋಡಿಗಳು, ಕೆರೆಗಳ ದುರಸ್ತಿ, ಬಾವಿ, ನೀರಾವರಿ ಯಂತ್ರೋಪಕರಣಗಳು ಇತ್ಯಾದಿ ಒಟ್ಟು ನೀರಾವರಿಗಾಗಿ ೧೮,೪೪,೩೫೦ ರೂ.; ಬೀಳು ಭೂಮಿಗಳ ಸಾಗುವಳಿಗಾಗಿ ೩,೩೨,೦೦೦ ರೂ.; ಆರೋಗ್ಯ ಹಾಗು ಹಳ್ಳಿಯ ಸ್ವಚ್ಛತೆ, ಕುಡಿಯುವ ನೀರಿನ ಪೂರೈಕೆ, ಗಟಾರ, ದವಾಖಾನೆ, ದಾಯಿಗಳ ತರಬೇತಿ, ಸಂಚಾರಿ ಆಸ್ಪತ್ರೆ, ಶಾಲಾ ಬಾಲಕರಿಗೆ ಆಹಾರ ಸತ್ವಗಳ ಪೂರೈಕೆ ಇತ್ಯಾದಿಗಳಿಗಾಗಿ ೬,೭೪,೫೦೦ ರೂ., ಶಾಲಾ ಕಟ್ಟಡಗಳ ರಚನೆ, ಮೂಲ ಶಿಕ್ಷಣ ಶಾಲೆಗಳು ಇತ್ಯಾದಿಗಳನ್ನೊಳಗೊಂಡು ಒಟ್ಟು ಶಿಕ್ಷಣ ಕಾರ್ಯಕ್ಕೆ ೬,೦೫,೪೯೦ ರೂ.; ಪ್ರೌಢ ಶಿಕ್ಷಣ, ಹಳ್ಳಿ ವಾಚನಾಲಯಗಳು, ಆಟಪಾಟ, ಮನರಂಜನ ಇತ್ಯಾದಿಗಳನ್ನೊಳಗೊಂಡ ಲೋಕ ಶಿಕ್ಷಣಕ್ಕಾಗಿ ೧,೯೭,೦೦೦ ರೂ.; ಹಳ್ಳಿಯ ಕವಲು ದಾರಿಗಳು, ಜಿಲ್ಹಾ ರಸ್ತೆಗಳು, ಸೇತುವೆಗಳು ಮುಂತಾದ ಸಂಪರ್ಕ ಸಾಧನಗಳಿಗಾಗಿ ೧೨,೮೩,೩೫೦ ರೂ.; ಗ್ರಾಮೀಣ ಕಲಾ ಕೈಗಾರಿಕೆ, ಉದ್ದಿಮೆಗಳು, ಗ್ರಾಮೋದ್ಯೋಗಗಳು, ಬಡಿಗಾರಿಕೆ, ಕಮ್ಮಾರಿಕೆ, ಜೇನು ಸಾಕುವಿಕೆ ಇತ್ಯಾದಿ ಕಾರ್ಯಕ್ರಮಕ್ಕೆ ೪,೨೩,೫೬೦ ರೂ.; ಗ್ರಾಮೀಣ ಅಭಿವೃದ್ಧಿ ಕಾರ್ಯಕ್ಕೆ ವಿದ್ಯಾರ್ಥಿಗಳನ್ನು ತರ

(ಅ) ಒಕ್ಕಲಿಗರಿಗೆ ... ಉದ್ದೇಶ ... ಗ್ರಾಮೋದ್ಯೋಗ ... ಗಮನ ...

★

(ಬ) ... ಶಿಕ್ಷಣದ ವ್ಯವಸ್ಥೆ ...

(ಅ) ಯೋಜನಾ ಕ್ಷೇತ್ರದಲ್ಲಿ ಕೆಲಸಗಾರರಿಗೆ ವಸತಿ ಸೌಕರ್ಯ ಒದಗಿಸುವದಕ್ಕೂ ಲಕ್ಷ್ಯ ಕೊಡಲಾಗಿದೆ.

★



(ಬ) ಹಳ್ಳಿಯೊಳಗೆ ಹಾಗು ಹಳ್ಳಿ ಹಳ್ಳಿಗಳ ನಡುವೆ ಸಂಪರ್ಕ ಸಾಧನೆಗಳನ್ನು ಪೂರೈಸುವದೂ ಸಮಾಜ ವಿಕಾಸ ಯೋಜನೆಯ ಕಾರ್ಯಗಳಲ್ಲೊಂದಾಗಿದೆ. ಹಳ್ಳಿಯ ರಸ್ತೆಗಳ ರಚನೆ ಹಾಗು ವ್ಯವಸ್ಥೆಯ ಕಾರ್ಯಗಳಲ್ಲಿ ಹಳ್ಳಿಗರ ಸಂಪೂರ್ಣ ಸಹಕಾರವನ್ನು ಕೋರಲಾಗುವದು.

ಚೇತಿಗೊಳಿಸಲು ೧೨,೦೦೦ ರೂ.; ಪೊಲಿಟೆಕ್ನಿಕ್ ಕಟ್ಟಡ ಮುಂತಾದ ಕಟ್ಟಡ ರಚನೆಗಾಗಿ ೩,೦೦,೦೦೦ ರೂ.

ಠಾಣೆ-ಕುಲಾಬಾ ಯೋಜನೆ

ಈ ಎರಡೂ ಜಿಲ್ಲೆಗಳಲ್ಲಿಯ ಒಂದು ಯೋಜನಾ ಕ್ಷೇತ್ರದಲ್ಲಿಯೂ ಮೂರು ಗುಂಪುಗಳಿವೆ. ಮೊದಲನೆಯ ಗುಂಪಿನಲ್ಲಿ ಠಾಣೆ ಜಿಲ್ಲೆಯ ಕಲ್ಯಾಣ ತಾಲೂಕಿನ ೧೫೫ ಹಳ್ಳಿಗಳು ಬರುತ್ತವೆ. ಅವುಗಳ ಜನಸಂಖ್ಯೆ ೮೮,೮೬೧ ಎರಡನೆಯ ಗುಂಪಿನಲ್ಲಿ ಕುಲಾಬಾ ಜಿಲ್ಲೆಯ ಕರ್ಜತ ತಾಲೂಕಿನ ೧೫೭ ಹಳ್ಳಿಗಳಿದ್ದು ಅವುಗಳ ಜನಸಂಖ್ಯೆ ೫೭,೩೭೫. ಮೂರನೆಯ ಗುಂಪಿನಲ್ಲಿ ಖಾಲಾಪುರ ತಾಲೂಕಿನ ೧೫೧ ಹಳ್ಳಿಗಳು ಹಾಗು ಪನವೇಲ (ಕುಲಾಬಾ) ತಾಲೂಕಿನ ೩೭ ಹಳ್ಳಿಗಳು ಹೀಗೆ ಒಟ್ಟು ೧೫೮ ಹಳ್ಳಿಗಳು ಸೇರಿ ೫೪,೧೩೭ ಜನಸಂಖ್ಯೆ ಹಾಗು ೧೬೬ ಚೌರಸ ಮೈಲು ಕ್ಷೇತ್ರವಿದೆ.

ಈ ಯೋಜನಾ ಕ್ಷೇತ್ರದಲ್ಲಿ ಮಹತ್ವದ ವಿಷಯಗಳಿಗಾಗಿ ಈ ಕೆಳಗಿನಂತೆ ವೆಚ್ಚ ಮಾಡಲಾಗುವದು: ಒಕ್ಕಲುತನ ಹಾಗು ಪಶುಸಂಗೋಪನೆ ವಿಸ್ತರಣೆ ಕಾರ್ಯಗಳಿಗಾಗಿ ೫,೫೭,೬೦೦ ರೂ.; ೧೫ ಮೈಲು ಕಾಲುವೆಯ ರಚನೆ, ಎರಡು ಪಿಕಅಪ್ ವೇಅರ್‌ಗಳ ರಚನೆ, ಅದಕ್ಕೆ ತಗಲುವ ಭೂಮಿಗೆ ಪರಿಹಾರ ಇತ್ಯಾದಿ ಒಟ್ಟು [illegible] ೨೧,೩೮,೦೦೦ ರೂ.; ಆಸ್ಪತ್ರೆಗಳ ರಚನೆ, [illegible] ಗಳ ಖರೀದಿ, ಮೂರು ಸಂಚಾರಿ [illegible] ಹಾಗು ಕುಡಿಯುವ ನೀರಿನ ಪೂರೈಕೆ ಇತ್ಯಾದಿ [illegible] ಆರೋಗ್ಯ ಮತ್ತು ಸ್ವಚ್ಛತೆಯ ಕಾರ್ಯಕ್ಕೆ [illegible] ರೂ.; ಶಾಲಾ ಕಟ್ಟಡಗಳ ರಚನೆ, [illegible] ಗಳನ್ನು ಮೂಲ ಶಿಕ್ಷಣ [illegible] ನ್ನೊಳಗೊಂಡು ಶಿಕ್ಷಣಕ್ಕೆ [illegible] ಸಂಚಾರಿ ಚಿತ್ರಪಟ [illegible] ರಂಜನ ಚಟುವಟಿಕೆಗಳ [illegible] ಪ್ರೌಢ ಶಿಕ್ಷಣ ಇವನ್ನೊಳಗೊಂಡು [illegible] ೧,೦೬,೪೪೦ ರೂ.; [illegible] ದಾರಿಗಳ ರಚನೆ ಇತ್ಯಾದಿ [illegible] ೧೦,೫೪,೦೫೦ ರೂ.; ಗ್ರಾಮೀಣ [illegible] ಗ್ರಾಮೋದ್ಯೋಗಗಳಿಗಾಗಿ [illegible] ಯುಕ ಯೋಜನಾಧಿಕಾರಿಗಳು, [illegible] ಪ್ರೌಢ ಶಿಕ್ಷಣ ಅಧಿಕಾರಿಗಳು [illegible]

ಗಾಗಿ ೧೫,೦೦೦ ರೂ.; ಮಾರಾಟ ಕೇಂದ್ರಗಳ ಸ್ಥಾಪನೆಗಾಗಿ ೭೫,೦೦೦ ರೂ.

ಮೆಹಸಾಣಾ ಯೋಜನೆ

ಮೆಹಸಾಣಾ ಯೋಜನಾ ಕ್ಷೇತ್ರದಲ್ಲಿ ೧೮೮ ಹಳ್ಳಿಗಳಿವೆ. ಅದರ ವಿಸ್ತಾರ ೩,೫೨,೩೨೧ ಎಕರೆ ಹಾಗು ಜನಸಂಖ್ಯೆ ೨,೪೫,೭೫೦ ಇದೆ. ಮೊದಲಿನೆರಡು ಗುಂಪುಗಳಲ್ಲಿ ವಿಜಾಪುರ ತಾಲೂಕಿನ ೫೯ ಹಾಗು ೬೮ ಹಳ್ಳಿಗಳೂ ಮೂರನೆಯ ಗುಂಪಿನಲ್ಲಿ ಕಲೋಲ ತಾಲೂಕಿನ ೬೧ ಹಳ್ಳಿಗಳೂ ಬರುತ್ತವೆ.

ಈ ಯೋಜನೆಯ ಕ್ಷೇತ್ರದಲ್ಲಿ ಬೇರೆ ಬೇರೆ ಕಾರ್ಯಗಳಿಗಾಗಿ ಆಗಲಿರುವ ವೆಚ್ಚದ ವಿವರ ಇಂತಿದೆ: ಒಕ್ಕಲತನ ಹಾಗು ಪಶುಸಂಗೋಪನ ವಿಸ್ತರಣೆಗಾಗಿ ೪,೮೬,೪೩೦ ರೂ.; ಹೊಸಬಾವಿಗಳನ್ನು ತೋಡುವದು, ನೀರಾವರಿ ಪಂಪುಗಳನ್ನು ಕೂಡ್ರಿಸುವದು, ವಿಶೇಷ ಶಕ್ತಿಯ ಬೋರಿಂಗ ಯಂತ್ರಗಳ ಖರೀದಿ ಇತ್ಯಾದಿ ನೀರಾವರಿ ಕಾರ್ಯಕ್ಕಾಗಿ [illegible] ರೂ.; ಬೀಳುಭೂಮಿಗಳ ಸಾಗುವಳಿ, [illegible] ಇತ್ಯಾದಿ ಕಾರ್ಯಕ್ಕೆ ೩,೦೦,೦೦೦ ರೂ.; ಆರೋಗ್ಯ ಹಾಗು ಗ್ರಾಮೀಣ ಸ್ವಚ್ಛತೆ, ಕುಡಿಯುವ ನೀರಿನ ಪೂರೈಕೆ, ಗಟಾರಗಳ ರಚನೆ ಇ. ಗಳಿಗಾಗಿ [illegible] ರೂ.; ಪ್ರಾಥಮಿಕ ಹಾಗು ತಾಂತ್ರಿಕ ಶಿಕ್ಷಣ, [illegible] ಪ್ರಾಥಮಿಕ ಶಾಲೆಗಳನ್ನು ಮೂಲ ಶಿಕ್ಷಣ [illegible] ಇತ್ಯಾದಿಗಳ [illegible] ರೂ.; ೫೦,೦೦೦ [illegible] ಗ್ರಂಥಾಲಯಗಳ ಹೆಚ್ಚಳ, [illegible] ಇವುಗಳನ್ನೊಳಗೊಂಡು [illegible] ರೂ.; ರಸ್ತೆ ಸೌಕರ್ಯ [illegible] ರೂ.; ಕೈಮಗ್ಗದ ನೇಕಾರಿಕೆ; [illegible] ಚರ್ಮದ ಕೆಲಸ, ಬಣ್ಣ [illegible] ಇತ್ಯಾದಿಗಳನ್ನೊ [illegible] ಕೈಗಾರಿಕೆ ಹಾಗು ಗ್ರಾಮೋ [illegible] ರೂ.; ಕಾರ್ಯ [illegible] ೨೫,೬೬೦ ರೂ.; [illegible] ರೂ.

[illegible]

[illegible]

ಗೋಡಂಬಿ

★

ಲೇಖಕರು:
ಡಾ. ಆರ್. ಎಲ್. ನಾಗಪಾಲ,
ಬಿ. ಎಸ್‌ಸಿ. (ಅಗ್ರಿ), ಪಿಎಚ್. ಡಿ. (ಫ್ಲೋರಿಡಾ),
ಸರಕಾರದ ಹೊರ್ಟಿಕಲ್ಚರಿಸ್ಟ
ಹಾಗು
ಶ್ರೀ. ಆಯ್. ಎಸ್. ಸಯ್ಯದ, ಬಿ. ಎಜಿ.,
ಅಸಿಸ್ಟಂಟ ಹೊರ್ಟಿಕಲ್ಚರಿಸ್ಟ, ಪುಣೆ ೫.

ನಮ್ಮ ದೇಶಕ್ಕೆ ಡಾಲರ ಗಳಿಸಿಕೊಡುವ ಸರಕುಗಳಲ್ಲಿ ಗೋಡಂಬಿ ಒಂದು. ಇಂಥ ಲಾಭದಾಯಕವಾದ ಗೋಡಂಬಿಯ ಕಡೆಗೆ ಮುಂಬಯಿ ರೈತರು ಇನ್ನೂ ಹೆಚ್ಚಿಗೆ ಗಮನ ಕೊಡುವದು ಅವಶ್ಯವಿದೆ. ಗೋಡಂಬಿ ಗಿಡದ ಪರಿಚಯವಿಲ್ಲದವರಿಗೆ, ಆ ಗಿಡ ನೆಡುವ ಬಗ್ಗೆ ಸಾದ್ಯಂತ ಮಾಹಿತಿ ಕೊಡುವದು ಈ ಲೇಖ.

ಗೋಡಂಬಿ ಅಥವಾ ಕಾಜೂ ಗಿಡ ಮಾವಿನ ಬಳಗಕ್ಕೇ ಸೇರಿದ ಗಿಡ. ಆದರೆ ಇದರ ತವರು ನಮ್ಮ ದೇಶವಲ್ಲ. ಮೂಲದಲ್ಲಿ ಇದು ಅಟ್ಲಾಂಟಿಕ್ ಸಮುದ್ರದ ಪೂರ್ವ ಬದಿಗಿರುವ ಪನಾಮಾ, ವೆನೆಝುಎಲಾ, ಬ್ರಾಝಿಲ ಮುಂತಾದ ರಾಷ್ಟ್ರಗಳ ಗಿಡ. ಕೇವಲ ೧೬ನೆಯ ಶತಮಾನದ ಮೊದಲ ಭಾಗದಲ್ಲಿ ಪೋರ್ತುಗೀಜರು ಇದನ್ನು ನಮ್ಮ ದೇಶಕ್ಕೆ ತಂದು ಕರಾವಳಿ ಪ್ರದೇಶಗಳಲ್ಲಿ ಬಿಟ್ಟರು. ಈ ಪ್ರದೇಶದ ಭೂಮಿ ಹವಾಮಾನಾದಿಗಳೆಲ್ಲ ಅದಕ್ಕೆ ಅತ್ಯಂತ ಅನುಕೂಲವೆನಿಸಿ ಅದು ಅಲ್ಲಿ ತಳವೂರಿತು. ಯಾವ ಬೆಳೆಗಳ ಸಾಗುವಳಿಗೂ ಅಯೋಗ್ಯವೆನಿಸಿದ್ದ ಹಕ್ಕಲು (ಏರಕಸ) ಭೂಮಿ ಹಾಗು ಗುಡ್ಡಗಳ ಓರೆಗುಂಟ ಅದು ಬೆಳೆಯತೊಡಗಿತು. ಈಗಂತೂ ಅದು ಅರಣ್ಯಗಳಲ್ಲಿ ವಿಪುಲವಾಗಿ ಬೆಳೆಯುತ್ತಿರುವದು ಕಂಡು ಬರುತ್ತದೆ. ಹೀಗೆ ಹೊರಗಿನಿಂದ ಬಂದು ನಮ್ಮ ನಾಡಿನಲ್ಲಿ ವಲಸೆ ನಿಂತ ಈ ಗೋಡಂಬಿ ಅಂತರ್ರಾಷ್ಟ್ರೀಯ ವ್ಯಾಪಾರದ ಒಂದು ಮಹತ್ವದ ಸರಕಾಗಿದೆ. ಆದರೆ ಅದರ ಹುಟ್ಟು ನಾಡಿನಲ್ಲಿ ಆ ಉದ್ದಿಮೆಯ ಅಸ್ತಿತ್ವ ಕೂಡ ಇಲ್ಲವೆಂದು ಹೇಳಬಹುದು.

ಗೋಡಂಬಿಯ ತವರ್ಮನೆಯ ನೆರೆ ನಾಡಾದ ಅಮೇರಿಕೆಯು ೧೯೩೭ ರಲ್ಲಿ, ಅದರ ಸಾಕು ದೇಶವಾದ ಭಾರತದಿಂದ ೨೪೫ ಲಕ್ಷ ಪೌಂಡು ಗೋಡಂಬಿಯನ್ನು ತರಿಸಿಕೊಂಡಿತು. ಅದರ ಮೂಲ ದೇಶ ಬ್ರಾಝಿಲದಿಂದ ಕೇವಲ ೨-೨॥ ಲಕ್ಷ ಪೌಂಡು ಮಾತ್ರ ಅಮೇರಿಕೆಗೆ ಹೋಯಿತು.

ಗೋಡಂಬಿ ಗಿಡಗಳಿಗಾಗುವ ಗೋಡಂಬಿ ಹಣ್ಣು ಅಥವಾ ಗೋವೆ ಹಣ್ಣಿನ ತುದಿಗೆ ಗೋಡಂಬಿ ಬೀಜ ಅಂಟಿಕೊಂಡಿರುತ್ತದೆ. ಶಾಸ್ತ್ರೀಯವಾಗಿ ಹೇಳುವದಾದರೆ ಗೋಡಂಬಿ ಹಣ್ಣೆಂದು ನಾವು ಕರೆಯುವದು ನಿಜವಾದ ಹಣ್ಣಲ್ಲ; ಅದು ಕೇವಲ ಹಣ್ಣಿನ ದೇಟು. ನಾವು ಬೀಜವೆಂದು ಕರೆಯುವದೇ ನಿಜವಾದ ಹಣ್ಣು. ಪಾನಪ್ರತಿಬಂಧವಾಗುವ ಮೊದಲು ಗೋಡಂಬಿ ಹಣ್ಣನ್ನು ಮದ್ಯದ ತಯಾರಿಕೆಗೆ ವಿಶೇಷವಾಗಿ ಬಳಸಲಾಗುತ್ತಿತ್ತು. ಪಾನಪ್ರತಿಬಂಧದಿಂದ ಈ ಹಣ್ಣಿನ ಮಹತ್ವ ಎಷ್ಟೋ ಕಡಿಮೆಯಾಗಿದೆ. ಆದರೂ ಅದರಿಂದ ಗುಂಳಬ, ಜೆಲಿ, ಪಾಕ, ಪಾನೀಯ ಮೊದಲಾದವುಗಳನ್ನು ತಯಾರಿಸುವ ಬಗ್ಗೆ ಅನೇಕ ಪ್ರಯತ್ನಗಳು ನಡೆದಿವೆ. ಗೋಡಂಬಿ ಬೀಜದ ಮೇಲಿನ ಸಿಪ್ಪೆ ಅತಿ ಬಿರುಸಾದುದಿದ್ದು ಅದರಿಂದ ಎಣ್ಣೆ ಹೊರಡುತ್ತದೆ. ಈ ಎಣ್ಣೆಯು ಅನೇಕ ಬಗೆಯ ವಾರ್ನಿಸು, ಮೌಲ್ಡಿಂಗ ಸಾಧನಗಳು, ಇನ್‌ಸುಲೇಟಿಂಗ ಆವರಣ, ಮಸಿ ಇತ್ಯಾದಿ ಅನೇಕ ಉದ್ದಿಮೆಗಳಲ್ಲಿ ಬಳಸ

ಳ್ಳುಡುತ್ತದೆ. ಒಳಗಿನ ಬೀಜವು ಅತಿ ಪೌಷ್ಟಿಕವಾದ ಆಹಾರ ಪದಾರ್ಥವಾಗಿದೆ. ಅದರ ಪೌಷ್ಟಿಕತೆ ಹಾಗು ಮಾಧುರ್ಯಗಳ ಮೂಲಕ ಗೋಡಂಬಿಯು ಮಿಠಾಯಿ ಹಾಗು ಬೇಕರಿ ತಯಾರಿಕೆಗಳಲ್ಲಿ ಬದಾಮಿನ ಬದಲಾಗಿ ವಿಶೇಷ ಉಪಯೋಗಿಸಲ್ಪಡುತ್ತಿದೆ. ಗೋಡಂಬಿ ಉದ್ದಿಮೆ ಭಾರತದಲ್ಲಿ ಅತಿ ತೀವ್ರಗತಿಯಿಂದ ಪ್ರಗತಿ ಹೊಂದಿದೆ. ಹೊರ ದೇಶಗಳಿಗೆ ಗೋಡಂಬಿ ಪೂರೈಸುವ ಗುತ್ತಿಗೆಯನ್ನೆ ನಮ್ಮ ದೇಶ ಹಿಡಿದಂತಿದ್ದು ಜಗತ್ತಿನಲ್ಲಿ ನೂರಕ್ಕೆ ೯೦ ರಷ್ಟನ್ನು ನಮ್ಮ ದೇಶವೊಂದೇ ಪೂರೈಸುತ್ತಿದೆಂಬ ಮಾತನ್ನು ಗಮನಿಸಿದರೆ ಆ ಉದ್ದಿಮೆಯು ಪ್ರಗತಿಯು ಅರಿವಾದೀತು. ಅಮೇರಿಕೆ ನಮ್ಮ ದೊಡ್ಡ ಗಿರಾಕಿ. ತನಗೆ ಬೇಕಾಗುವ ಗೋಡಂಬಿಯಲ್ಲಿ ನೂರಕ್ಕೆ ೯೦ ರಷ್ಟನ್ನು ಅದು ನಮ್ಮ ಭಾರತದಿಂದ ತರಿಸಿಕೊಳ್ಳುತ್ತದೆ. ಆದ್ದರಿಂದ [illegible] ಗಳಿಸುವ ಸರಕಾದ ಈ ಗೋಡಂಬಿಯ ಉತ್ಪಾದನೆಯನ್ನು ಹೆಚ್ಚಿಸುವ ಬಗ್ಗೆ ಪ್ರಯತ್ನಿಸಬೇಕಾದುದು ಅವಶ್ಯವಿದೆ.

ಮುಂಬಯಿ ರಾಜ್ಯದಲ್ಲಿ

ಇದು ಉಷ್ಣವಲಯ ಹಾಗು [illegible] ಪರಿಸ್ಥಿತಿಗಳಲ್ಲಿ ಬೆಳೆಯಬಲ್ಲದು. [illegible] ಹಿಮವನ್ನು ಅದು ತಾಳಲಾರದು. [illegible] ಬೆಳೆಯಬಲ್ಲ ಉತ್ತರದ [illegible] ಪ್ರತಿ ವರ್ಷ ೩೦ರಿಂದ [illegible] ಪ್ರದೇಶಗಳಲ್ಲಿ ಉಸುಕಿನ [illegible] ಭೂಮಿಯ ವರೆಗೆ ಎಲ್ಲ ಪ್ರಕಾರದ [illegible] ಬೆಳೆಯಬಲ್ಲದು. ಗೋಡಂಬಿಯು [illegible] ತ್ರಾವಣಕೋರ-ಕೊಚೀನ, ಮುಂಬಯಿ ಹಾಗು [illegible] ಗಳ ಕರಾವಳಿ ಪ್ರದೇಶಗಳಲ್ಲಿಯೇ [illegible] ಉತ್ಪಾದನೆಯ ಅರ್ಧದಷ್ಟು [illegible] ಕ್ಕಿ ದಷ್ಟು ತ್ರಾವಣಕೋರ-ಕೊಚೀನ [illegible] ಮುಂಬಯಿ ರಾಜ್ಯದ [illegible]

ಮುಂಬಯಿ ರಾಜ್ಯದಲ್ಲಿ [illegible] ರತ್ನಾಗಿರಿ ಜಿಲ್ಲೆಗಳಲ್ಲಿ [illegible] ಉತ್ತರ ಕನ್ನಡಕ್ಕಿಂತ ರತ್ನಾಗಿರಿ [illegible] ಹೆಚ್ಚು. ಈ ಜಿಲ್ಲೆಗಳಲ್ಲಿ [illegible] ಹಾಗು ಇತರ [illegible] ದಲ್ಲಿ ಬೆಳೆಯುತ್ತದೆ. [illegible] ಗಳಲ್ಲಿಯೂ ಈ [illegible]

ಅವನ್ನು ಹೊಲಗಳ ದಂಡೆಗುಂಟ ಹಾಗು ಮನೆ ಅಂಗಳಗಳಲ್ಲಿ ಹಚ್ಚುವದುಂಟು. ಈ ಗಿಡಗಳಿಗೆ ಸಾಮಾನ್ಯವಾಗಿ ಯಾವ ಆರೈಕೆಯನ್ನೂ ಕೈಕೊಳ್ಳಲಾಗುವದಿಲ್ಲ. ಹಂಗಾಮಿನಲ್ಲಿ ಆಗುವ ಎಲ್ಲ ಬೀಜಗಳನ್ನೂ ಸಂಗ್ರಹಿಸುವದು ಸಾಧ್ಯವಾಗುವದಿಲ್ಲವಾದ್ದರಿಂದ ಈ ಅಮೌಲ್ಯ ಸರಕಿನ ಉತ್ಪಾದನೆಯಲ್ಲಿ ಎಷ್ಟೋ ಪಾಲು ವ್ಯರ್ಥವಾಗಿ ಹಾಳಾಗುತ್ತದೆ. ಅರಣ್ಯವಾಸಿಗಳು ಹಾಗು ಸ್ಥಾನಿಕ ರೈತರು ಶಕ್ಯವಿರುವಷ್ಟೆಲ್ಲ ಬೀಜಗಳನ್ನು ಹಿಡಿದು ಕೂಡು ಹಾಕಿ ಅವನ್ನು ಚಿಕ್ಕ ಪುಟ್ಟ ವ್ಯಾಪಾರಸ್ಥರಿಗೆ ತೀರ ಅಲ್ಪ ಬೆಲೆಗೆ ಮಾರುತ್ತಾರೆ.

ವಿಸ್ತಾರಕ್ಕೆ ಅವಕಾಶ

ರತ್ನಾಗಿರಿ, ಉತ್ತರ ಕನ್ನಡ ಹಾಗು ಕುಲಾಬಾ ಜಿಲ್ಲೆಗಳನ್ನೊಳಗೊಂಡ ಇಡಿ ಕೊಂಕಣ ಪಟ್ಟಿಯು ಗೋಡಂಬಿ ಗಿಡಗಳ ಬೆಳವಣಿಗೆಗೆ ಅತ್ಯಂತ ಯೋಗ್ಯವಿದೆ. ಉತ್ತರ ಕನ್ನಡ ಹಾಗು ರತ್ನಾಗಿರಿ ಜಿಲ್ಲೆಗಳಲ್ಲಿ ಅದರಲ್ಲೂ ವಿಶೇಷವಾಗಿ ರತ್ನಾಗಿರಿ ಜಿಲ್ಲೆಯಲ್ಲಿ ಈ ಮಹತ್ವದ ಬೆಳೆಯ ಕ್ಷೇತ್ರವನ್ನು ಹೆಚ್ಚಿಸಲು ತುಂಬಾ ಅವಕಾಶವಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಗುಡ್ಡಗಳ ಇಳುಕಲಗುಂಟ ಅರಣ್ಯ ಗಿಡಗಳನ್ನು ಹೆಚ್ಚಾಗಿದ್ದು ಇನ್ನು ಗೋಡಂಬಿ ಗಿಡಗಳನ್ನು ಬೆಳೆಯುವ ದಕ್ಕೆ [illegible] ಅವಕಾಶವಿಲ್ಲ. ಆದರೆ ರತ್ನಾಗಿರಿ ಜಿಲ್ಲೆಯಲ್ಲಿ [illegible] ಗಿಡಗಳನ್ನು ಹಚ್ಚುವ ನಿಯಮಿತ ಯೋಜನೆ [illegible] ದೊಡ್ಡ ಪ್ರಮಾಣದಲ್ಲಿ ಗಿಡಗಳನ್ನು ಕಡಿ [illegible] ಸಾವಂತವಾಡಿ ಹಾಗು [illegible] ಕೆಲ ತಾಲೂಕುಗಳನ್ನು ಬಿಟ್ಟರೆ ಇಡಿ ರತ್ನಾಗಿರಿ ಜಿಲ್ಲೆಯಲ್ಲಿ [illegible] ದಕ್ಷಿಣದ ವರೆಗೆ ಗುಡ್ಡದ [illegible] ಪ್ರದೇಶವಾಗಿ ತೋರುತ್ತವೆ. [illegible] ಪ್ರವಾಹದ ಪರಿಣಾಮ [illegible] ಮಣ್ಣಿನ ಸವಕಳಿ [illegible] ಇಡಿ ಜಿಲ್ಲೆಯ ಅರ್ಥ ವ್ಯವಸ್ಥೆಗೇ [illegible]

[illegible] ಮುಂಬಯಿ ಸರಕಾರವು [illegible] ಹಾಗು ಇತರ ರೀತಿಗಳಲ್ಲಿ [illegible] ಯೋಗ್ಯವಾದ ಮಹತ್ವವನ್ನು [illegible] ಆದರೂ ಆ ಜಿಲ್ಲೆಯ [illegible] ಜಿಲ್ಲೆಯಲ್ಲಿ ಗಿಡ [illegible] ಕಾರ್ಯಕ್ರಮದ [illegible] ಈ ಪ್ರದೇಶಗಳಲ್ಲೆಲ್ಲ ಗೋಡಂಬಿ ಗಿಡಗಳನ್ನು ನೆಡುವದರಿಂದ ಮಣ್ಣಿನ ಸವಕಳಿಗೆ ತಡೆಯುಂಟಾಗಿ ಇತರ ಅಪ್ರತ್ಯಕ್ಷ ಲಾಭಗಳಾಗುವವಿಷ್ಟೇ ಅಲ್ಲದೆ ಗೋಡಂಬಿ ಬೀಜಗಳ ಮಾರಾಟದಿಂದ ನಿಯಮಿತವಾದ ಉತ್ಪನ್ನವೂ ಒದಗುತ್ತದೆ. ಈಗ ಸಂಪೂರ್ಣ ಬರಡಾಗಿ ಕಾಣುತ್ತಿರುವ ಗುಡ್ಡಗಳ ಓರೆಗಳಲ್ಲಿ ಗೋಡಂಬಿ ಗಿಡಗಳನ್ನು ಒಳ್ಳೆ ಸುಲಭವಾಗಿ ಬೆಳೆಸಬಹುದು. ರತ್ನಾಗಿರಿ ಹಾಗು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಈಗ ನಿರುಪಯೋಗಿಯಾಗಿ ಬಿದ್ದಿರುವ ಅಥವಾ ಉರುಟು ಧಾನ್ಯಗಳನ್ನು ಬೆಳೆಯಲು ಅರ್ಧಮರ್ಧ ಉಪಯೋಗಿಸಲ್ಪಡುತ್ತಿರುವ ವಿಸ್ತೃತವಾದ ಹಕ್ಕಲು(ವರಕಸ)ಭೂಮಿಯನ್ನು ಗೋಡಂಬಿ ಗಿಡಗಳನ್ನು ಬೆಳೆಯಲು ಉಪಯೋಗಿಸಬಹುದು. ಕೊಂಕಣ ಪಟ್ಟಿಗೆ ಹೊಂದಿಕೊಂಡಿರುವ ಕೊಲ್ಹಾಪುರ ಜಿಲ್ಲೆಯ ಪಶ್ಚಿಮ ಭಾಗದ ಪ್ರದೇಶವೂ ಗೋಡಂಬಿ ಗಿಡ ಬೆಳೆಸಲು ಯೋಗ್ಯವಾಗಿದೆ. ಈ ರೀತಿ ಗೋಡಂಬಿಯ ಕ್ಷೇತ್ರವನ್ನು ವಿಸ್ತರಿಸಿ ಅದರ ಉತ್ಪಾದನೆಯನ್ನು ಹೆಚ್ಚಿಸಿ ಗೋಡಂಬಿಯ ನಿರ್ಯಾತವನ್ನು ಇನ್ನೂ ಹೆಚ್ಚಿಗೆ ಬೆಳೆಸುವದರಿಂದ ಈ ಭಾಗದ ಆರ್ಥಿಕ ವ್ಯವಸ್ಥೆಯನ್ನು ಭದ್ರಗೊಳಿಸಿದಂತಾಗುವದು; ಅಲ್ಲಿಯ ರೈತರ ದೈವ ಇದರಿಂದ ತೆರೆಯುವದು ಎಂಬುದನ್ನು ಬೇರೆ ಹೇಳಬೇಕೆ?

ತುಲನಾತ್ಮಕವಾಗಿ ನೋಡಿದರೆ ಗೋಡಂಬಿ ಗಿಡದ ಸಾಗುವಳಿ ಎಷ್ಟೋ ಸುಲಭ. ಅದರ ತೋಟ ಮಾಡಲು ಬಹಳ ಹಣವನ್ನೂ ತೊಡಗಿಸಬೇಕಾಗಿಲ್ಲ. ಚೆನ್ನಾಗಿ ಬೀಜ ಊರಿದರೆ ಯಾವ ವಿಶೇಷ ಆರೈಕೆಯೂ ಇಲ್ಲದೆ ಗಿಡಗಳು ಕಸುವಿನಿಂದ ಬೆಳೆದು ಕೈತುಂಬ ಹುಟ್ಟುವಳಿಯನ್ನು ಕೊಡಬಲ್ಲವು.

ಎಲ್ಲಿ ಬೆಳೆಯಬಹುದು

ಸಮುದ್ರದ ಸಮೀಪದಲ್ಲಿ ಗೋಡಂಬಿ ಗಿಡಗಳು ಚೆನ್ನಾಗಿ ಬೆಳೆದು ಒಳ್ಳೆಯ ಫಲ ಕೊಡುತ್ತವೆ. ಇದಕ್ಕೆ ಸಾಮಾನ್ಯವಾಗಿ ಮಳೆ ಕಡಿಮೆ ಬೇಕು. ಆದರೆ ಅದು ವರ್ಷದಲ್ಲೆಲ್ಲ ಸಮನಾಗಿ ಹಂಚಿ ಬೀಳಬೇಕು. ಆದರೂ ಇದು ೧೦೦–೧೫೦ ಇಂಚು ಮಳೆಯನ್ನೂ ತಾಳಿಕೊಳ್ಳಬಲ್ಲದು. ಸಮುದ್ರದಿಂದ ದೂರ ಒಳಪ್ರದೇಶದಲ್ಲಿ ಬೆಳೆದರೆ ಗಿಡ ಚೆನ್ನಾಗಿ ಬೆಳೆಯುತ್ತದಾದರೂ ಫಲ ಕಡಿಮೆ. ಹಸಿಗಾಗಿ ಅದು ಮಳೆಯ ಮೇಲೆಯೆ ಅವಲಂಬಿಸುತ್ತದಾದ್ದರಿಂದ ಹುಟ್ಟುವಳಿಯ ಮೇಲೆ ಮಳೆಗಾಲದ ಪ್ರಭಾವ ಹೆಚ್ಚು. ಆದರೂ ಒಮ್ಮೆ ಗಿಡ ಚೆನ್ನಾಗಿ ಬೇರೂರಿತೆಂದರೆ ಎಂತಹ ಅನಾವೃಷ್ಟಿಯಲ್ಲೂ ಬದುಕಬಲ್ಲದು. ಗೋಡಂಬಿ ಗಿಡವು ಉಸುಕಿನ ಹಾಗು ಕೆಂಪು ಮಣ್ಣಿನ ಭೂಮಿಗಳಲ್ಲೂ ಇತರ ಬೆಳೆಗಳಿಗೆ ಅಯೋಗ್ಯವೆನಿಸುವ ಬಡ ಭೂಮಿಗಳಲ್ಲೂ ಬೆಳೆಯಬಲ್ಲದು.

ಬೀಜಗಳನ್ನು ಊರಿಯೇ ಗೋಡಂಬಿ ಗಿಡಗಳನ್ನು ಬೆಳೆಸುತ್ತಾರೆ. ಆದ್ದರಿಂದ ಊರುವದಕ್ಕಾಗಿ ಒಳ್ಳೆಯ ಬಲಿತ ಬೀಜಗಳನ್ನೆ ಆರಿಸಬೇಕು. ದೊಡ್ಡ ಆಕಾರದ ಬೀಜಗಳುಳ್ಳ ಕಾಯಿ ಬಿಡುವ ಬಗ್ಗೆ ಪ್ರಖ್ಯಾತವಿದ್ದ ಗಿಡಗಳಿಂದಲೇ, ಶಕ್ಯವಿದ್ದಷ್ಟು ಬೀಜಗಳನ್ನು ಸಂಗ್ರಹಿಸಬೇಕು.

ಗೋಡಂಬಿಯು ಅತಿ ಒರಟು ಗಿಡವಾಗಿದ್ದು ಒಮ್ಮೆ ನಾಟಿದ ನಂತರ ಅದಕ್ಕೆ ವಿಶೇಷ ದಕ್ಷತೆ ಹಾಗು ಆರೈಕೆಗಳ ಆವಶ್ಯಕತೆಯಿಲ್ಲ. ಗಿಡಗಳನ್ನು ಬೆಳೆಸಬೇಕಾದ ಸ್ಥಳಗಳಲ್ಲಿಯೇ ನೇರವಾಗಿ ಬೀಜಗಳನ್ನು ಊರಬಹುದು; ಪ್ರತ್ಯೇಕವಾಗಿ ಸಸಿಗಳನ್ನು ತಯಾರಿಸಿ ಕಿತ್ತಿ ಹಚ್ಚುವ ಕಾರಣವಿಲ್ಲ. ಬೀಜಗಳನ್ನು ಊರುವದಕ್ಕಾಗಿ ಒಂದು ಅಡಿ ಉದ್ದ, ಒಂದು ಅಡಿ ಅಗಲ ಹಾಗು ಒಂದು ಅಡಿ ಆಳದ ಕುಣಿಗಳನ್ನು ಹತ್ತು ಅಡಿ ಅಂತರಕ್ಕೊಂದರಂತೆ ತೋಡಿ ಅದರಲ್ಲಿ ಒಂದು ಬುಟ್ಟಿ ತಿಪ್ಪೆ ಗೊಬ್ಬರ ಹಾಗು ಒಂದು ಬುಟ್ಟಿ ಬೂದಿಗಳನ್ನು ಕೂಡಿಸಿದ ಮಣ್ಣನ್ನು ತುಂಬಬೇಕು.

ಬಿತ್ತಿಗೆ ಹಾಗು ಆರೈಕೆ

ಜೂನ ಅಥವಾ ಜುಲೈ ತಿಂಗಳಲ್ಲಿ ಮಳೆಗಾಲ ಪ್ರಾರಂಭವಾದೊಡನೆ ಪ್ರತಿಯೊಂದು ಕುಣಿಯಲ್ಲಿ ಎರಡೆರಡು ಅಥವಾ ಮೂರು ಮೂರು ಆಯ್ದ ಬೀಜಗಳನ್ನು ನೆಡಬೇಕು. ಬೀಜಗಳು ಮೊಳಕೆಯೊಡೆಯಲು ೮–೧೦ ದಿನ ಹಿಡಿಯುತ್ತದೆ. ಗೋಡಂಬಿಯ ಗಿಡದಲ್ಲಿರುವ ಒಂದು ಬಗೆಯ ಎಣ್ಣೆಯ ಮೂಲಕ ತಿನಿಸಿನಲ್ಲಿ ಸೊಗಡಾದ ದನಗಳಂತೂ ಆ ಗಿಡಗಳನ್ನು ಮುಟ್ಟುವದೇ ಇಲ್ಲ. ಇಷ್ಟೇ ಅಲ್ಲ, "ಆಡು ಮುಟ್ಟದ ಗಿಡವಿಲ್ಲ" ಎಂಬ ಹೇಳಿಕೆ ಕೂಡ ಗೋಡಂಬಿ ಗಿಡದ ವಿಷಯಕ್ಕೆ ಅನ್ವಯಿಸುವದಿಲ್ಲವೆಂದು ಹೇಳಬಹುದು. ಏಕೆಂದರೆ ಈ ಗಿಡ ೩–೪ ತಿಂಗಳದ್ದಾದ ಬಳಿಕ ಆಡುಗಳು ಕೂಡ ಅದರ ತೊಪ್ಪಲನ್ನು ತಿನ್ನುವದಿಲ್ಲ. ಇದೊಂದು ದೊಡ್ಡ ಲಾಭದ ವಿಷಯ. ಏಕೆಂದರೆ ಎಲ್ಲ ಬಗೆಯ ಸಸ್ಯಾದಿಗಳನ್ನು ತಿಂದು ಹಾಳು ಮಾಡುವ ದನ ಕರು ಹಾಗು ಕುರಿ ಆಡುಗಳಿಂದ ಅವನ್ನು ರಕ್ಷಿಸಲು ನಿರಂತರ ಬೇಲಿಯನ್ನು ಹಚ್ಚುವ ಪ್ರಸಂಗ ಬರುವದಿಲ್ಲ. ಆದರೆ ಅದೇ ಮೊಳಕೆ ಯೊಡೆದ ಎಳೆ ಸಸಿಗಳನ್ನು ಮಾತ್ರ ಪಕ್ಷಿಗಳಿಂದಲೂ ಆಡು

ಗಳಿಂದಲೂ ರಕ್ಷಿಸುವದು ಅವಶ್ಯವಿದೆ. ಏಕೆಂದರೆ ಎಳೆಯ ರಸರಸಿತ ಚಿಗುರುಗಳನ್ನು ಅವು ಬಹಳ ಮೆಚ್ಚುತ್ತವೆ. ಸುತ್ತಲೂ ಮುಳ್ಳು ಟೊಂಗೆಗಳನ್ನಿಟ್ಟು ಈ ತೊಂದರೆಯನ್ನು ನಿವಾರಿಸಬಹುದು.

ಸುಮಾರು ೪ ತಿಂಗಳ ಅವಧಿಯಲ್ಲಿ ಸಸಿಗಳು ೨ ಅಡಿ ಎತ್ತರ ಬೆಳೆಯುತ್ತವೆ. ಆ ನಂತರ ಅವುಗಳಿಗೆ ಯಾವ ಸಂರಕ್ಷಣೆಯೂ ಬೇಕಾಗಿಲ್ಲ. ಪ್ರತಿಯೊಂದು ಕುಣಿಯಲ್ಲಿ ಅಶಕ್ತವಾದ ಹಾಗು ಮುರುಟಿದ ಸಸಿಗಳನ್ನು ತೆಗೆದೊಗೆದು ಕಸುವಿನಿಂದ ಬೆಳೆದವುಗಳನ್ನಷ್ಟೇ ಬೆಳೆಸಬೇಕು. ಗಿಡಗಳು ಬೆಳೆಯುತ್ತ ಹೋದಂತೆ ಅವುಗಳಲ್ಲಿ ಮತ್ತೆ ಅಶಕ್ತವಾದವು ಗಳನ್ನು ತೆಗೆದೊಗೆದು ಕೊನೆಗೆ ಗಿಡಗಳ ನಡುವೆ ೨೦ × ೨೦ ಅಡಿ ಅಂತರವುಳಿಯುವಂತೆ ಮಾಡಬೇಕು. ಈ ಲೆಕ್ಕದಂತೆ ಒಂದು ಎಕರೆಗೆ ೧೧೦ ಗಿಡಗಳು ಕೂಡುತ್ತವೆ. ಬೀಜಗಳನ್ನು ಮೊದಲು ಪ್ರತ್ಯೇಕ ಅಗಿಮಡಿಗಳಲ್ಲಿ ನೆಟ್ಟು ಒಂದು ಅಥವಾ ಎರಡು ತಿಂಗಳ ಸಸಿಗಳನ್ನು ಕಾಯಂ ತೋಟದ ಸ್ಥಳದಲ್ಲಿ ನೆಡಬಹುದು. ಕಿತ್ತಿ ಹಚ್ಚುವ ಕಾರ್ಯವನ್ನು ಮಾತ್ರ ಮಳೆಗಾಲದಲ್ಲಿಯೇ ಮಾಡಬೇಕು. ಒಂದು ವೇಳೆ ಬಹಳ ದೀರ್ಘಾವಧಿಯ ವರೆಗೆ ಮಳೆ ಸೆಳೆದಿದ್ದರೆ ಹೊಸದಾಗಿ ಹಚ್ಚಿದ ಸಸಿಗಳಿಗೆ ನೆಲಲು ಒದಗಿಸಿ ಅವು [illegible] ವರೆಗೆ ನೀರು ಹಣಿಸಬೇಕಾಗುತ್ತದೆ. [illegible] ಗುಂಟಲೂ ಗೋದಂಬಿ ಗಿಡಗಳನ್ನು ಹಚ್ಚಬಹುದು. [illegible] ರಿಂದ ಹೊಲಕ್ಕೆ ಬೇಲಿಯಾದಂತಾಗುವದಲ್ಲದೆ [illegible] ಬೆಳೆಗಳ ರಕ್ಷಣೆಯೂ ಆಗುವದು. [illegible] ಕಲಲ್ಲೊ ಈ ಗಿಡಗಳನ್ನು [illegible] ಬಹುದು. ತೋಟ ಮಾಡಿದ್ದರೆ ಗಿಡಗಳ [illegible] ಹುಲ್ಲು ಬೆಳೆಸಬಹುದು. [illegible] ತಡೆಯಾಗುತ್ತದೆ; ಹಾಗು [illegible] ದೊರೆಯುತ್ತದೆ.

ಗೊಬ್ಬರ

ಈಗ ಸದ್ಯಕ್ಕೆ ಗೋದಂಬಿ ಗಿಡಗಳಿಗೆ [illegible] ಗೊಬ್ಬರ ಹಾಕುವದಿಲ್ಲ. [illegible] ಖಂಡಿತವಾಗಿಯೂ [illegible] ಕವಾಗುವೆಂದೂ ಹೇಳಬಹುದು. [illegible] ಅನುಕೂಲತೆಯುಳ್ಳವರು [illegible] ಬಳಿಕ ಪ್ರತಿ ಗಿಡಕ್ಕೆ ಒಂದು [illegible] ಹಾಕಬೇಕು. ಅವು [illegible]

ಗೊಬ್ಬರದ ಪ್ರಮಾಣವನ್ನು ಪ್ರತಿ ವರ್ಷ ಒಂದೊಂದು ಬುಟ್ಟಿಯಂತೆ ಹೆಚ್ಚಿಸಬೇಕು. ಗಿಡಗಳು ನಾಲ್ಕು ವರ್ಷದ ವಾದವೆಂದರೆ ಮುಂದೆ ಪ್ರತಿ ವರ್ಷ ಗಿಡಕ್ಕೆ ನಾಲ್ಕು ಅಥವಾ ಐದು ಬುಟ್ಟಿ ಗೊಬ್ಬರ ಹಾಕಿದರೆ ಸಾಕು. ಒಂದು ವೇಳೆ ಪ್ರತಿ ವರುಷ ಗೊಬ್ಬರ ಹಾಕುವದು ಸಾಧ್ಯವಿಲ್ಲದಿದ್ದರೆ ಕನಿಷ್ಠ ಎರಡು ವರುಷಗಳಿಗೊಮ್ಮೆಯಾದರೂ ಹಾಕಬೇಕು. ಗೊಬ್ಬರವನ್ನು ಸಪ್ಟೆಂಬರ ತಿಂಗಳಲ್ಲಿ ಮಳೆಯ ರಭಸ ಕಡಿಮೆಯಾದ ನಂತರ ಹಾಕುವದು ಒಳಿತು.

ನಡುವಿನ ಭೂಮಿಯ ಸದುಪಯೋಗ

ಗೋದಂಬಿ ಗಿಡಗಳನ್ನು ಹಚ್ಚಿದ ಹಕ್ಕಲು ಭೂಮಿ ಗಳಲ್ಲಿ ಗಿಡಗಳು ಬೆಳೆದು ದೊಡ್ಡವಾಗಿ ಇಡಿ ಭೂಮಿಯನ್ನು ಮುಚ್ಚುವ ವರೆಗೆ ಅಲ್ಲಿ ನಡುವೆ ಇತರ ಧಾನ್ಯಗಳನ್ನು ಬೆಳೆದು ಕೊಂಡು ಲಾಭ ಮಾಡಿಕೊಳ್ಳಬಹುದು. ಇಳುಕಲು ಗುಂಟ ಗಿಡ ನೆಟ್ಟಾಗ ನಡುವೆ ಯಾವ ಬೆಳೆಯನ್ನೂ ತೆಗೆದು ಕೊಳ್ಳುವದು ಸಾಧ್ಯವಿಲ್ಲದಿದ್ದರೆ ಅಲ್ಲಿ ಹುಲ್ಲು ಬೆಳೆಯಗೊಡ ಬೇಕು. ಇದರಿಂದ ನಿಮ್ಮ ದನಗಳಿಗೆ ಸಾಕಷ್ಟು ಹಸಿ ಮೇವು ದೊರೆಯುವದಲ್ಲದೆ ಮಣ್ಣಿನ ಸಂರಕ್ಷಣೆಯೂ ಆಗುವದು.

ಗೋದಂಬಿ ಗಿಡವು ಮೂರು ವರುಷದ್ವಾದೊಡನೆ [illegible] ಪ್ರಾರಂಭಿಸುವದು. ಏಳನೆಯ ಅಥವಾ [illegible] ಪೂರ್ಣ ಫಲ ನೀಡ ಹತ್ತು [illegible] ಗಿಡ ೩೦-೩೫ ವರ್ಷ [illegible] ಫಲ ಕೊಡುತ್ತಲೇ ಇರುವದು. ಆ [illegible] ಹೋಗುವದು. ಡಿಸೆಂಬರ [illegible] ಗಿಡಗಳು ಹೂ ಬಿಡ ತೊಡಗಿ [illegible] ಬಿಡುತ್ತಲಿರುತ್ತವೆ. ಮಾರ್ಚ [illegible] ಹಣ್ಣುಗಳನ್ನು ಸಂಗ್ರಹಿಸಬಹುದು. [illegible] ಆಕಾರ್ಕೃತಿಯ ಬೀಜ [illegible] ಹಣ್ಣುಗಳ ತುದಿಗೆ ಅಂಟಿ [illegible] ಕೆಂಪಿನ [illegible] ಚೆನ್ನಾಗಿ ಪರಿಪಕ್ವ [illegible] ಹಣ್ಣುಗಳನ್ನು [illegible] ಅವು [illegible] ಕೆಳತ ಹಣ್ಣು [illegible] ಕಣ್ಣು [illegible] ತಿಂದು [illegible] ಪ್ರದೇಶ

(ಮುಂದುವರಿಯುವದು)

ಲೇಖಕರು:
ಶ್ರೀ. ಎಸ್. ಎಸ್. ಪಾಟೀಲ,
ಬಿ. ಎಸ್‌ಸಿ. (ಅಗ್ರಿ.)
ಜ್ಯೂನಿಯರ ಸ್ಟ್ಯಾಟಿಸ್ಟಿಕಲ ಅಸಿಸ್ಟಂಟ ಪುಣೆ

★

ನ್ಯಾಯವಾದ ನಿರ್ಣಯ ಕೊಡಿರಿ

ಕೇವಲ ತೋರಿಕೆಯ ಮೇಲಿಂದ ಅನೇಕ ಸಲ ಮೋಸಹೋಗುವ ಸಂಭವವಿರುತ್ತದೆ. ಉತ್ಪಾದನಾ ಶಕ್ತಿ ಹಾಗು ತಳಿ ಪರೀಕ್ಷೆಯ ಮೇಲಿಂದ ದನಗಳ ನಿರ್ಣಯ ಮಾಡಬೇಕು.

ದನಕರುಗಳ ಸುಧಾರಣೆಯಲ್ಲಿ, ಪ್ರದರ್ಶನಗಳು ಬಹಳ ದೊಡ್ಡ ಪಾತ್ರ ವಹಿಸಿವೆ, ವಹಿಸುತ್ತಲಿವೆ. ಒಕ್ಕಲಿಗರಿಗೂ, ಪಶುಸಂಗೋಪಕರಿಗೂ ತಮ್ಮ ದನಕರುಗಳನ್ನು ಇತರರ ದನಕರುಗಳೊಡನೆ ಹೋಲಿಸಿ ನೋಡುವ ಹಾಗು ಆದರ್ಶ ದನಕರುಗಳ ಕಲ್ಪನೆಯನ್ನು ಸ್ಥಿರವಾಗಿ ರೂಪಿಸಿ ಕೊಳ್ಳುವ ಸುಸಂಧಿಯನ್ನು ಅವು ಒದಗಿಸಿವೆ. ಉತ್ತಮ ತಳಿಯ ದನಗಳ ಸಂಗೋಪನೆಯಲ್ಲಿ ಆಸ್ಥೆಯನ್ನೂ ಸ್ಪರ್ಧೆಯ ಮನೋವೃತ್ತಿಯನ್ನೂ ಅವು ಪ್ರಚೋದಿಸಿವೆ. ಬೇರೆ ಬೇರೆ ಜಾತಿಯ ದನಕರುಗಳಲ್ಲಿಯ ಉತ್ತಮ ಅಪೇಕ್ಷಣೀಯ ಗುಣಗಳನ್ನು ತೋರಿಸಿಕೊಡುವ ಉಪಯುಕ್ತ ಶೈಕ್ಷಣಿಕ ಕಾರ್ಯವನ್ನೂ ಅವು ಮಾಡಿವೆ. ಸೊಲ್ಲಾಪುರ ಹಾಗು ಸಾತಾರೆ ಜಿಲ್ಲೆಗಳ ಯಶಸ್ವಿ ಪಶುಸಂಗೋಪಕರಿಗೆ ಲಾಭದಾಯಕ ವ್ಯಾಪಾರವೂ ಅವುಗಳಿಂದ ದೊರೆತಿದೆ. ಖಿಲಾರಿ ಜಾತಿಯ ದನಗಳಲ್ಲಾದ ಸುಧಾರಣೆಗೆ ಮಾಹೂಡ, ಸಾಂಗೋಲಾ, ಜಾವಲಾ, ಪಂಢರಪುರ, ಮ್ಹಸವಾಡ, ಖರಸುಂಡಿ, ಕರಭಾವಿ, ಪಿಲಿವಾ ಹಾಗು ಇತರ ಸ್ಥಳಗಳಲ್ಲಿ ಪ್ರತಿ ವರುಷ ಜರಗುವ ದನಗಳ ಪ್ರದರ್ಶನಗಳೇ ಮುಖ್ಯ ಕಾರಣ. ಈ ಪ್ರದರ್ಶನಗಳು ಸಂಗೋಪಕರಲ್ಲಿ ಸ್ಪರ್ಧೆಯ ಮನೋವೃತ್ತಿಯನ್ನು ಪ್ರಚೋದಿಸಿ, ಅಪೇಕ್ಷಣೀಯ ಗುಣಗಳುಳ್ಳ ಉತ್ತಮ ತಳಿಯ ದನಗಳನ್ನು ಹುಟ್ಟಿಸಲು ಹಚ್ಚಿವೆ. ಪುಣೆ, ಅಹಮ್ಮದನಗರ, ಕೊಲ್ಹಾಪುರ, ಅಷ್ಟೇ ಏಕೆ ನಾಸಿಕ ಹಾಗು ಖಾನದೇಶ ಜಿಲ್ಲೆಗಳಿಂದಲೂ ಕೂಡ ಒಕ್ಕಲಿಗರು ಉತ್ತಮ ತಳಿಯ ದನಕರುಗಳನ್ನು ಕೊಳ್ಳಲು ಈ ಪ್ರದರ್ಶನಗಳಿಗೆ ಬರುತ್ತಾರೆ; ಪಶುಸಂಗೋಪಕರಿಗೆ ಲಾಭದಾಯಕ ವ್ಯಾಪಾರ ದೊರಕಿಸಿಕೊಡುತ್ತಾರೆ.

ನಿರ್ಣಾಯಕರ ದೋಷ

ಆದರೆ ಈ ದನಗಳ ಪ್ರದರ್ಶನಗಳಲ್ಲಿ ಒಂದು ದೋಷ— ಅದೂ, ದನಗಳ ಬಗ್ಗೆ ನಿರ್ಣಯ ಕೊಡುವಲ್ಲಿ ಇದೆ. ಉತ್ತಮ ದನಗಳೆಂದು ನಿರ್ಣಯ ಕೊಡುವಾಗ, ರೂಪ ಹಾಗು ಆಯಾ ಜಾತಿಯ ವಿಶಿಷ್ಟ ಬಾಹ್ಯ ಲಕ್ಷಣಗಳಿಗೆ

ದನಗಳ ಪ್ರದರ್ಶನದಲ್ಲಿ, ಬಂದ ದನಕರುಗಳ ಬಗ್ಗೆ ನಿರ್ಣಯ ಕೊಡುವಾಗ, ನಾವು ಅಂಗಣದಲ್ಲಿಯ ದನಗಳಿಗೆ ಸಂಪೂರ್ಣ ನ್ಯಾಯ ಬಗೆಯುತ್ತೇವೆಯೆ? ಎಷ್ಟೋ ಸಲ ಉಪಯುಕ್ತತೆಯ ಅಂಶವನ್ನೆ ಮರೆತು ಕೇವಲ ತೋರಿಕೆಗೆ ನಾವು ಮರುಳಾಗುವದಿಲ್ಲವೆ? ಪರೀಕ್ಷಕರಾಗಲಿರುವವರಿಗೆ ಇಲ್ಲಿ ಉಪಯುಕ್ತ ಸಲಹೆಯಿದೆ.

ಹೆಚ್ಚು ಮಹತ್ವ ಕೊಡಲಾಗುತ್ತದೆ. ತಳಿಯ ಶುದ್ಧತೆ, ದನಗಳ ಉತ್ಪಾದನ ಶಕ್ತಿ ಇವುಗಳನ್ನು, ಮೈಬಣ್ಣ, ಬಣ್ಣದ ಕಲೆಗಳು, ಆಕಾರ, ಕೋಡುಗಳು, ತಲೆ ಕಿವಿ ಇತ್ಯಾದಿ ತಳಿಯಿಂದ ಪಡೆದ ಬಾಹ್ಯ ಲಕ್ಷಣಗಳ ಮೇಲಿಂದ ನಿರ್ಣಯಿಸಲಾಗುತ್ತದೆ. ಈ ವಿಶಿಷ್ಟ ಲಕ್ಷಣಗಳು ತಳಿಯ ಶುದ್ಧತೆಯ ಬಗ್ಗೆ ವಿಶ್ವಸನೀಯ ಅಂಶಗಳಾಗಿವೆ ಎಂದು ನಂಬಲಾಗುತ್ತದೆ. ಪರೀಕ್ಷಕರಿಗೂ ನಿಜವಾದ ವೈಯಕ್ತಿಕ ಗುಣಗಳನ್ನಲ್ಲದೆ ವಿಶಿಷ್ಟ ಜಾತೀಯ ಲಕ್ಷಣಗಳನ್ನನುಸರಿಸಿ ಹೋಗದೆ ಬೇರೆ ಮಾರ್ಗವೆ ಇಲ್ಲ. ಇದು ಸುಲಭವೂ ಬೇಗ ಮುಗಿಯುವಂಥದೂ ಆದ ಮಾರ್ಗವಾಗಿದೆ. ಪರೀಕ್ಷಕರಿಗೆ, ತಳಿಯ ಕೂಲಂಕಷ ಪರೀಕ್ಷೆ ತೆಗೆದುಕೊಳ್ಳಲು ಸಮಯವೂ ಇರುವದಿಲ್ಲ. ಜಾತಿಯ ವಿಶಿಷ್ಟ ಬಾಹ್ಯ ಲಕ್ಷಣಗಳಿಗೂ ಉತ್ಪಾದಕ ಶಕ್ತಿಗೂ ತೀರ ಅಲ್ಪಸಂಬಂಧವಿರುವದರಿಂದ ಕೇವಲ ಅವುಗಳ ಮೇಲೆಯೆ ಅವಲಂಬಿಸುವದು ಸುರಕ್ಷಿತವಾಗಲಾರದು, ಯೋಗ್ಯವಾಗಲಾರದು.

ಮಹತ್ವದ ಅಂಶಗಳು

ಆದುದರಿಂದ, ದನಗಳ ಬಗ್ಗೆ ನಿರ್ಣಯಿಸುವಾಗ, ಅವುಗಳ ಉಪಯುಕ್ತತೆಗೇನೆ ಹೆಚ್ಚು ಮಹತ್ವ ಕೊಡಬೇಕು. ತಳಿ ಪರೀಕ್ಷೆಯನ್ನು [illegible] ಎತ್ತು ಆಕಳುಗಳನ್ನು ಅವುಗಳ ಉತ್ಪಾದಕ ಶಕ್ತಿಯ ಮೇಲೆ ಅವುಗಳ ಪೀಳಿಗೆಯ ಮೇಲೆ ನಿರ್ಣಯಿಸಬೇಕು. ಪ್ರದರ್ಶಕರಿಗೆ ತಮ್ಮ ದನಕರುಗಳು [illegible] ಅಥವಾ ಹಿಂದಿನ ಹಾಲಿನ ಬಗ್ಗೆ [illegible] ಕೇಳಿಕೊಳ್ಳಬೇಕು.

ಒಟ್ಟಿನಲ್ಲಿ ಹೇಳುವದೆಂದರೆ [illegible] ಕೆಯ ಮೇಲೆಯೆ ಹೋಗದೆ, [illegible] ಹಾಗು ಅವುಗಳ ಕೆಲಸದ [illegible] ಅಥವಾ ಉತ್ತಮ ಪೀಳಿಗೆಯನ್ನು [illegible] ಗಮನಿಸಿ ನಿರ್ಣಯ ಕೊಡಬೇಕು.

ಹಾಲಿನ ಹೊಳೆ

ಅಮೇರಿಕೆಯಲ್ಲಿ [illegible] ೩,೦೦೦ ಮೈಲು [illegible] ಆಳವಾದ ಒಂದು ಹೊಳೆಯನ್ನು [illegible]

★ ಗೋಡಂಬಿ ★

(೧೨ನೇ ಪುಟದಿಂದ)

ದಲ್ಲಿ ಹಬ್ಬಿರುವದರಿಂದ ಉತ್ಪಾದನೆಯ ಸರಿಯಾದ ಅಂದಾಜನ್ನು ಹೇಳುವದು ಸಾಧ್ಯವಿಲ್ಲ. ಆದರೂ ೧೦-೧೫ ವರ್ಷ ವಯಸ್ಸಿನ ಗಿಡ ಪ್ರತಿ ವರ್ಷ ಸರಾಸರಿ ೨೦ ಪೌಂಡು ಬೀಜವನ್ನೂ, ೧೫೦ ಪೌಂಡು "ಹಣ್ಣು"ಗಳನ್ನೂ ಕೊಡುತ್ತದೆ. ಒಂದೊಂದು ಗಿಡ ೮೦ ಪೌಂಡಿನ ವರೆಗೆ ಬೀಜಗಳನ್ನು ಕೊಟ್ಟ ಉದಾಹರಣೆಗಳೂ ಉಂಟು.

ರೋಗರುಜಿನಗಳಿಂದ ಮುಕ್ತ

ಗೋಡಂಬಿ ಗಿಡಕ್ಕೆ ಹೇಳಿಕೊಳ್ಳುವಂಥ ಕಠಿಣ ರೋಗರುಜಿನಗಳಾವವೂ ತಗಲುವದಿಲ್ಲ. ಆದರೂ ಡಿಸೆಂಬರ ಹಾಗು ಜನೆವರಿ ತಿಂಗಳುಗಳಲ್ಲಿ ಗಿಡಗಳು ಹೂ ಬಿಡುವಾಗ ಒಂದೇ ಸವನೆ ಮೋಡವಿದ್ದು ಹನಿಯಿದ್ದರೆ ಹೂಗಳಿಗೆ ಒಂದು ಬಗೆಯ ಬೂಸು ತಗಲಿ ಅವು ಉದುರತೊಡಗಿ ಹುಟ್ಟುವಳಿ ಕುಗ್ಗುತ್ತದೆ. ಆದರೆ ಗಂಧಕದ ಹುಡಿ ಹೊಡೆಯುವದರಿಂದ ಬೂಸನ್ನು ಒಳ್ಳೆ ಪರಿಣಾಮಕಾರಿಯಾಗಿ [illegible]. ಗಿಡಗಳು ಹೂ ಬಿಡಲು ಪ್ರಾರಂಭಿಸಿದೊಡನೆ ಒಮ್ಮೆ ಗಂಧಕದ ಹುಡಿ ಹೊಡೆದು ಮುಂದೆ [illegible] ಕಾಣಿಸಿಕೊಂಡಾಗ ಮತ್ತೊಮ್ಮೆ ಹುಡಿ ಹೊಡೆಯುವದು ಒಳ್ಳೆಯದು.

[illegible] ಒಂದೇ ಒಂದು ಕ್ರಿಮಿ [illegible]. ಈ ಕೊರೆಯುವ ಹುಳವು [illegible] ಅವು ಒಂದಕ್ಕೊಂದು [illegible] ತಗಲುತ್ತದೆ. ಕಟ್ಟಿಗೆ [illegible] ಗಿಡಗಳ ಅಡಿಯಲ್ಲಿ [illegible] ಒಂದರೆ ಈ ಹುಳ ಇದೆ [illegible]. ಹುಳ ತಗಲಿದ ಪ್ರಾರಂಭದಲ್ಲಿ [illegible] ನಾಶಗೊಳಿಸ [illegible] ಲೆಡ್ ಆರ್ಸನೇಟ [illegible] ಅದನ್ನು ನಿಯಂತ್ರಿಸ [illegible] ಒಂದು [illegible] ಲೆಡ್ [illegible]

[illegible] ಕನ್ನಡ [illegible] ಅಧಿಕಾರಿಗಳಿಂದ [illegible] ಬೇಕಾ [illegible] ಕೊಳ್ಳಬಹುದು, [illegible]

ರಾಣೀಖೇತದಿಂದ ಕೋಳಿಗಳನ್ನು ಕಾಪಾಡಿರಿ

ಲೇ:– ಶ್ರೀ. ಎಸ್. ಆರ್. ನಾದಗೀರ, ಜಿ. ಬಿ. ವಿ. ಸಿ.
[ಪುಣೆಯಲ್ಲಿಯ ರಾಣೀಖೇತ ರೋಗದ ಚುಚ್ಚುಮದ್ದಿನ ಪ್ರಯೋಗ ಶಾಲೆಯ ಸಂಶೋಧನ ಸಹಾಯಕರು]

ರಾಣೀಖೇತ ರೋಗವು ಕೋಳಿಗಳ ಒಂದು ಹಿಂಡಿನಿಂದ ಇನ್ನೊಂದು ಹಿಂಡಿಗೆ ಭರದಿಂದ ಹಬ್ಬುತ್ತ ಹೋಗಿ ಒಮ್ಮೊಮ್ಮೆ ಹಳ್ಳಿಯಲ್ಲಿಯ ಎಲ್ಲ ಕೋಳಿಗಳನ್ನು ನಾಶ ಮಾಡುವದುಂಟು. ಈ ಪಿಡುಗಿನಿಂದ ಕೋಳಿಗಳನ್ನು ಸಂರಕ್ಷಿಸಲು ಚುಚ್ಚುಮದ್ದೊಂದೇ ಅತ್ಯುತ್ತಮ ಉಪಾಯ

ಕೋಳಿಗಳಲ್ಲಿ ರಾಣೀಖೇತ ಒಂದು ಅತಿ ಭಯಂಕರ ರೋಗ. ಒಂದೊಂದು ಕೋಳಿಗೆ ಐದೈದು ರೂಪಾಯಿ ಹಾಗು ತತ್ತಿಯೊಂದಕ್ಕೆ ಎರಡಾಣೆ ಬೆಲೆಯಿರುವ ಈ ಕಾಲದಲ್ಲಿ, ರಾಣೀಖೇತ ರೋಗವು ಪ್ರತಿ ವರ್ಷ ಬಲಿ ತೆಗೆದುಕೊಳ್ಳುವ ಅಸಂಖ್ಯ ಕೋಳಿಗಳಿಂದಾಗುವ ಹಾನಿ ಎಷ್ಟು ವಿಪರೀತವೆಂಬುದನ್ನು ಊಹಿಸಬಹುದು. ಈ ಬೇನೆ ವರ್ಷದ ಯಾವದೆ ಅವಧಿಯಲ್ಲಿ ಹಬ್ಬಬಹುದಾದರೂ ಬೇಸಿಗೆಯಲ್ಲಿ ಅದರ ಹಾವಳಿ ಹೆಚ್ಚು. ಚಿಕ್ಕ ದೊಡ್ಡವೆನ್ನದೆ, ಹೆಣ್ಣುಗಂಡೆನ್ನದೆ ಎಲ್ಲ ಜಾತಿಯ ಎಲ್ಲ ಬಗೆಯ ಕೋಳಿ ಹುಂಜಗಳು ಈ ಬೇನೆಗೆ ತುತ್ತಾಗುತ್ತವೆ. ಒಮ್ಮೆ ಒಂದು ಹಳ್ಳಿಯಲ್ಲಿ ಈ ರೋಗ ಕಾಲಿಟ್ಟಿತೆಂದರೆ ಅಲ್ಪಾವಧಿಯಲ್ಲಿಯೆ ಹಳ್ಳಿಯಲ್ಲಿಯ ಕೋಳಿಗಳೆಲ್ಲ ಸಾವಿಗೀಡಾಗಬಹುದು. ಏಕೆಂದರೆ ಈ ರೋಗ ಬಹು ಭರದಿಂದ ಹಿಂಡಿನಿಂದ ಹಿಂಡಿಗೆ ವ್ಯಾಪಿಸುತ್ತದೆ ಹಾಗು ತಗಲಿದ ಕೋಳಿಗಳಲ್ಲಿ ನೂರಕ್ಕೆ ನೂರು ಮರಣ ಹೊಂದುತ್ತವೆ.

ರೋಗದ ಲಕ್ಷಣಗಳು

ಈ ರೋಗವನ್ನು ಗುರುತಿಸುವ ಲಕ್ಷಣಗಳೆಂದರೆ ಕೋಳಿಗಳಿಗೆ ಜ್ವರ ಬರುತ್ತದೆ; ತುರಾಯಿ ಹಾಗು ಚುಂಚು

★

ಮರಿಯಾಗುವ ತತ್ತಿಗಳಲ್ಲಿ ನಂಜನ್ನು ಸೇರಿಸುವಿಕೆ: ಇದರಿಂದ ತತ್ತಿಯಲ್ಲಿಯ ಗರ್ಭವು ರೋಗದಿಂದ ಸಾಯುತ್ತದೆ. ಆನಂತರ ಅದರಿಂದ ಚುಚ್ಚುಮದ್ದನ್ನು ತೆಗೆಯಲಾಗುತ್ತದೆ.

★



★

ಪುಣೆಯಲ್ಲಿಯ ಚುಚ್ಚುಮದ್ದಿನ ಪ್ರಯೋಗ ಶಾಲೆಯಲ್ಲಿ ಒಂದು ಕೋಳಿಗೆ ಮದ್ದನ್ನು ಚುಚ್ಚಲಾಗುತ್ತಿದೆ. ಈ ಚುಚ್ಚುಮದ್ದು ರಾಜ್ಯದಲ್ಲಿಯ ಸಾವಿರಾರು ಕೋಳೀ ಹಿಂಡುಗಳನ್ನು ರಾಣೀಖೇತದಿಂದ ಬದುಕಿಸಿದೆ.

★

ಕಪ್ಪಾಗುತ್ತವೆ; ಉಸಿರಾಡಿಸಲು ಅವುಗಳಿಗೆ ತೊಂದರೆಯಾಗುತ್ತದೆ; ಬಾಯಿ ಜಿಗುಟಾಗುತ್ತದೆ; ಕೈಕಾಲು ಹಾಗು ಗೋಣುಗಳಲ್ಲಿಯ ಶಕ್ತಿ [illegible] ಹಾಗು ಹೊಟ್ಟೆ ಜಾಡಿಸತೊಡಗಿ ಬಿಳಿ [illegible] ತ್ತದೆ. ನಾಲ್ಕರಿಂದ ಏಳು ದಿವಸಗಳೊಳಗಾಗಿ [illegible] ತ್ತದೆ. ದುರ್ದೈವದಿಂದ, ರೋಗವನ್ನು [illegible] ಚಾರದ ಪ್ರಯತ್ನಗಳೆಲ್ಲ ವ್ಯರ್ಥವಾಗಿದೆ. [illegible] ಜ್ಞರು ಹುಡುಕಿ ತೆಗೆದ ಒಂದು ಚುಚ್ಚು ಮದ್ದು [illegible] ಪ್ರತಿಬಂಧಕ ಉಪಾಯವಾಗಿದ್ದು [illegible] ಸ್ವಿಯಾಗಿ ರೋಗವನ್ನು ನಿವಾರಿಸಲು [illegible]. ಈ ಚುಚ್ಚು ಮದ್ದು ತಾಳಿಕೆಯಲ್ಲಿ ಅತಿ ಸೂಕ್ಷ್ಮ [illegible] ಸದ್ಯಕ್ಕೆ ಅದರ ಉಪಯೋಗ [illegible] ದಿತವಾಗಿದೆ. ಆದರೂ [illegible] ಮಾರು ದೂರವಿರಿಸುವಲ್ಲಿ [illegible] ವಹಿಸುತ್ತದೆ.

ಚುಚ್ಚು ಮದ್ದಿನ [illegible]

ಪುಣೆಯಲ್ಲಿ [illegible] ವಿಶೇಷ ಸಲಕರಣೆಗಳುಳ್ಳ [illegible] ಶಾಲೆಯಲ್ಲಿ ಈ ಚುಚ್ಚು ಮದ್ದು [illegible] ತ್ತಿದೆ. ಬೆಳವಣಿಗೆ [illegible]

[illegible] ಗರ್ಭವೇಷ್ಟನದೊ [illegible] ಈ ಚುಚ್ಚು ಮದ್ದನ್ನು ತಯಾ [illegible].

[illegible] ತತ್ತಿಗಳನ್ನು ತೆಗೆದುಕೊಂಡು [illegible] ಪೆಟ್ಟಿಗೆಗಳಲ್ಲಿಟ್ಟು ೧೦ [illegible] ಆ ನಂತರ [illegible] ಶಕ್ತಿ [illegible] ಅವುಗಳ ಕವಚದಲ್ಲಿ [illegible] ನಂಜನ್ನು [illegible]. ನಂತರ [illegible] ದಿಂದ [illegible] ಈ [illegible] ಅವಕ್ಕೆ [illegible].

[illegible]

ವಿಷವಾಗಿದ್ದು ಅದೇ ರಾಣಿಖೇತದ ಚುಚ್ಚುಮದ್ದು. ಸಾಕಷ್ಟು ರಸವನ್ನು ಈ ರೀತಿ ಸಂಗ್ರಹಿಸಿದ ಬಳಿಕ ಅದರ ಸಾಮರ್ಥ್ಯ ಹಾಗು ಸುರಕ್ಷಿತತೆಗಳ ಬಗ್ಗೆ ಪ್ರಯೋಗ ಮಾಡಲಾಗುತ್ತದೆ. ಪ್ರಯೋಗಕ್ಕಾಗಿ ಅದನ್ನು ೧ಕ್ಕೆ ೧೦ರಿಂದ ೧ಕ್ಕೆ ೧೦,೦೦,೦೦೦ಗಳ ವರೆಗೆ ವಿವಿಧ ಪ್ರಮಾಣದಲ್ಲಿ ಸೌಮ್ಯಗೊಳಿಸಲಾಗುತ್ತದೆ.

ಪ್ರತ್ಯಕ್ಷ ಪ್ರಯೋಗ

೧,೦೦೦ ದಲ್ಲಿ ೧, ೧೦,೦೦೦ ದಲ್ಲಿ ೧೦೦,೦೦೦ದಲ್ಲಿ ೧ ಹಾಗು ೧೦,೦೦,೦೦೦ ದಲ್ಲಿ ೧ ಈ ರೀತಿ ನಾಲ್ಕು ಭಿನ್ನ ಪ್ರಮಾಣಗಳಲ್ಲಿ ಸೌಮ್ಯಗೊಳಿಸಿದ ಚುಚ್ಚುಮದ್ದನ್ನು ನಾಲ್ಕು ಬೇರೆ ಬೇರೆ ನಿರೋಗಿ ಕೋಳಿಗಳಿಗೆ ಚುಚ್ಚಲಾಗುತ್ತದೆ. ಮುಂದೆ ಹತ್ತು ದಿನಗಳ ನಂತರ, ರಾಣೀಖೇತ ರೋಗದಿಂದ ಸತ್ತ ಕೋಳಿಗಳ ಯಕೃತ ಹಾಗು ಪ್ಲೀಹಗಳಿಂದ ತೆಗೆದ ಸಾಂಕ್ರಾಮಿಕ ದ್ರವ್ಯವನ್ನು ಮದ್ದು ಚುಚ್ಚಿದ ಕೋಳಿಗಳ ಮೇಲೆ ಪ್ರಯೋಗಿಸಲಾಗುತ್ತದೆ. ಆ ಕೋಳಿಗಳೊಂದಿಗೆ, ಚುಚ್ಚು ಮದ್ದು ಚುಚ್ಚದಿದ್ದ ಎರಡು ಕೋಳಿಗಳ ಮೇಲೂ ಸಾಂಕ್ರಮಿಕವನ್ನು ಪ್ರಯೋಗಿಸಲಾಗುತ್ತದೆ. ಔಷಧಿಯ ಸಾಮರ್ಥ್ಯವನ್ನು ಪರೀಕ್ಷಿಸಲು ಇವು ಸಾಧನಗಳಾಗುತ್ತವೆ. ಮದ್ದು ಚುಚ್ಚದಿದ್ದ ಕೋಳಿಗಳು ೪ ರಿಂದ ೭ ದಿನಗಳೊಳಗಾಗಿ ರಾಣೀಖೇತ ರೋಗದ ಸಕಲ ಲಕ್ಷಣಗಳನ್ನು ತೋರಿಸಿ ಸತ್ತು ಹೋಗುತ್ತವೆ ಹಾಗು ಮದ್ದು ಚುಚ್ಚಿದ ಕೋಳಿಗಳು ರೋಗದ ಆಹ್ವಾನವನ್ನೂ ಎದುರಿಸಿ ಬದುಕುತ್ತವೆ.

ಈ ರೀತಿ ಪರೀಕ್ಷೆ ಮುಗಿದ ನಂತರ ಚುಚ್ಚು ಮದ್ದನ್ನು ಅರ್ಧ ಸಿ. ಸಿ. ಪ್ರಮಾಣಗಳಲ್ಲಿ ತುಂಬಲಾಗುತ್ತದೆ. ತುಂಬುವ ದಿನ ಅದರ ಸುರಕ್ಷಿತತೆಯ ಪರೀಕ್ಷೆಗಾಗಿ ೨೫ ದಿನ ವಯಸ್ಸಿನ ನಾಲ್ಕು ಕೋಳೀ ಮರಿಗಳಿಗೆ ಉಗ್ರ ರೂಪದಲ್ಲಿಯೆ ಚುಚ್ಚಲಾಗುತ್ತದೆ. ಈ ಪರೀಕ್ಷೆ ಮುಗಿದ ಬಳಿಕ ಮದ್ದು ಉಪಯೋಗಕ್ಕೆ ಸಿದ್ಧವಾದಂತಾಯಿತು. ಔಷಧಿಯನ್ನು ಅರ್ಧ ಸಿ. ಸಿ. ಪ್ರಮಾಣದಲ್ಲಿ ಉಗ್ರರೂಪದಲ್ಲಿ ಪೂರೈಸಲಾಗುತ್ತದೆ ಹಾಗು ಉಪಯೋಗಿಸುವ ಮೊದಲು ಅದನ್ನು ೨೫೦ ಸಿ. ಸಿ. ನೀರಿನಲ್ಲಿ ಬೆರೆಸಿ ಸೌಮ್ಯಗೊಳಿಸಲಾಗುತ್ತದೆ. ಪ್ರತಿ ಕೋಳಿಗೆ ಅರ್ಧ ಸಿ. ಸಿ. ಯಂತೆ ಇದು ೫೦೦ ಕೋಳಿಗೆ ಚುಚ್ಚಲು ಸಾಲುತ್ತದೆ.

ನಾಜೂಕಾದ ಔಷಧಿ

ಈ ಚುಚ್ಚು ಮದ್ದು ಅತಿ ನಾಜೂಕಾದ ದ್ರವ್ಯವಾಗಿರುವದರಿಂದ ದೂರ ಕಳಿಸುವದಕ್ಕಾಗಲಿ ಸಿಕ್ಕ ಹಾಗೆ ಹಿಡಿದಾಡಲಿಕ್ಕಾಗಲಿ ಸಾಧ್ಯವಿಲ್ಲ. ಅದನ್ನು ಯಾವಾಗಲೂ ಬರ್ಫದಿಂದ ತುಂಬಿದ ಥರ್ಮಾಸ, ಫ್ಲಾಸ್ಕಗಳಲ್ಲಿ ಒಯ್ಯಲಾಗುತ್ತದೆ. ಅದು ಕೋಳಿಯ ದೇಹದಲ್ಲಿ ಸೇರುವ ವರೆಗೂ ಅದನ್ನು ಹೆಪ್ಪುಗಟ್ಟುವ ವಾತಾವರಣದಲ್ಲಿಡಬೇಕಾಗುತ್ತದೆ. ಇಲ್ಲವಾದರೆ ಅದು ಬೇಗನೆ ಕೆಟ್ಟುಹೋಗುತ್ತದೆ. ಈ ಮದ್ದಿನ ಯಶಸ್ವಿ ಉಪಯೋಗಕ್ಕೆ ಬರ್ಫ ಅತ್ಯಾವಶ್ಯಕ ಸಾಮುಗ್ರಿ. ಅದಿಲ್ಲದೆ ಈ ಚುಚ್ಚು ಮದ್ದಿನ ಕಾರ್ಯ ನಡೆಸುವದೇ ಸಾಧ್ಯವಿಲ್ಲ.

ಪ್ರತಿಕ್ರಿಯೆ

ಪ್ರತ್ಯಕ್ಷ ಸಜೀವ ವಿಷವನ್ನೆ ಕೋಳಿಗಳ ಮೈಯಲ್ಲಿ ಸೇರಿಸಲಾಗುವದರಿಂದ ಮದ್ದು ಚುಚ್ಚಲ್ಪಟ್ಟ ಕೋಳಿಗಳು ತುಸು ಪ್ರತಿಕ್ರಿಯೆಯನ್ನು ತೋರಿಸುವದು ಸ್ವಾಭಾವಿಕವಾಗಿದೆ. ಕೆಲವು ಕೋಳಿಗಳು ಇದರಿಂದ ಅಸ್ವಸ್ಥವಾಗಬಹುದು; ಮತ್ತೆ ಕೆಲ ಕೋಳಿಗಳ ಮೈ ಕಾಯಬಹುದು. ನೂರಕ್ಕೆ ಒಂದೆರಡು ಕುಂಟಾಗಬಹುದು ಹಾಗು ಒಂದೆರಡು ಅತಿ ಪ್ರತಿಕ್ರಿಯೆಯಿಂದ ಸಾಯಲೂ ಬಹುದು. ಅತಿ ಅಶಕ್ತ ಕೋಳಿಗಳು ಮಾತ್ರ ಸಾವಿಗೀಡಾಗುವವು. ಆದರೆ ಈ ಅಲ್ಪ ಹಾನಿಗಾಗಿ ಯಾರೂ ಹೆದರಕೂಡದು. ಇಡಿ ಹಿಂಡಿನ ಸಂರಕ್ಷಣೆಗಾಗಿ ಏನು ಇಳಿಸಿ ಒಂದೆರಡು ಕೋಳಿಗಳನ್ನು ಕಂತಿನ ರೂಪದಲ್ಲಿ ಕೊಟ್ಟೆನೆಂದು ಭಾವಿಸಬೇಕು.

ಈ ಮದ್ದು ಚುಚ್ಚಿಸಿದ ಕೋಳಿಗಳಿಗೆ ಕನಿಷ್ಠ ಹನ್ನೊಂದು ತಿಂಗಳು ರಾಣೀಖೇತದ ಭಯವಿಲ್ಲೆಂದು ಕಂಡುಬಂದಿದೆ. ಆ ನಂತರ ಮಾತ್ರ ಸಂರಕ್ಷಣೆಯ ಕವಚ ಸಡಿಲಾಗುತ್ತದೆ.

ಜಿಲ್ಲೆಗಳಲ್ಲಿಯ ಪಶುವೈದ್ಯಕೀ ಅಧಿಕಾರಿಗಳು ಹಾಗು ಪುಣೆಯಲ್ಲಿಯ ಪ್ರಯೋಗ ಶಾಲೆಯ ಅಧಿಕಾರಿಗಳು ಈ ಮದ್ದನ್ನು ಪುಕ್ಕಟೆಯಾಗಿ ಚುಚ್ಚುತ್ತಾರೆ. ಪ್ರಯೋಗ ಶಾಲೆಯಲ್ಲಿ ಪ್ರತಿ ಶನಿವಾರ ಮುಂಜಾನೆ ೧೦ ರಿಂದ ಮಧ್ಯಾಹ್ನ ೨ ರ ವರೆಗೆ ಮದ್ದು ಚುಚ್ಚಲಾಗುತ್ತದೆ.

ರಾಣೀಖೇತದಂಥ ಭಯಂಕರ ರೋಗವನ್ನು ನಿವಾರಿಸಲು ಚುಚ್ಚುಮದ್ದೊಂದೇ ಸಾಕಷ್ಟು ಪರಿಣಾಮಕಾರಿ ಉಪಾಯವಾಗಿದೆಂಬುವದನ್ನು ಕೋಳೀ ಸಾಕುವವರೆಲ್ಲ ಮನಗಾಣುತ್ತಿದ್ದಾರೆ.

ಜಪಾನದ ಒಕ್ಕಲಿಗನ ಒಲವು ನಿಲವು

ಲೇ: ಶ್ರೀ. ಎಚ್. ಜಿ. ಪಾಟೀಲ,
ಒಕ್ಕಲತನ ಶಾಲೆಯ ಸುಪರಿಂಟೆಂಡೆಂಟ, ಕೋಸಬಾದ.

ಜಪಾನದ ಒಕ್ಕಲಿಗ ಸತತೋದ್ಯೋಗಿ. ಯಾವ ಹೊಲ ನೋಡಿದರೂ, ಒಕ್ಕಲತನವನ್ನು ಅರೆ ಮನಸ್ಸಿನಿಂದ ಮಾಡಿದ್ದು ಕಾಣುವದಿಲ್ಲ. ಅಲ್ಲಿಯ ಹೊಲಗಳಿಗೆ ಬೇಲಿಯೇ ಬೇಕಿಲ್ಲ. ಸಾಗಾಗಬಲ್ಲ ಭೂಮಿ ಸಾಗಾಗದೆ ಉಳಿದಿರುವದು ಒಂದು ಇಂಚಿನಷ್ಟೂ ಕೂಡಾ ಕಣ್ಣಿಗೆ ಬೀಳುವದಿಲ್ಲ. ಜಪಾನದ ಒಕ್ಕಲತನದಲ್ಲಿ ಕಂಡು ಬರುವ ಕೆಲವು ಮನಸೆಳೆಯುವ ಒಲವು ನಿಲವುಗಳಿವು.

ಜಪಾನದಲ್ಲಿ ಸಂದರ್ಶಕರ ಮನಸೆಳೆಯುವ ಸಂಗತಿಗಳು ಅನೇಕವಿವೆ. ಆದರೆ ಅಲ್ಲಿಯ ಒಕ್ಕಲಿಗರು ತಮ್ಮ ಉದ್ಯೋಗದಲ್ಲಿ ಸತತ ತೊಡಗಿದ ಸಂಗತಿಗೆ [illegible] ಕೆಳ ಭಾಗದ ಬತ್ತದ ಗದ್ದೆಗಳನ್ನು ಬಿಟ್ಟರೆ [illegible] ಜಪಾನಿನ ಭೂಮಿ ಬಡವಾಗಿದೆಂದರೆ [illegible] ಗೊಳ್ಳಬಹುದು. ಅದರಲ್ಲೂ ಗುಡ್ಡದ [illegible] ಮಣ್ಣು ಯಾತಕ್ಕೂ ಬೇಡ; [illegible] ಜಾಣತನದ ವ್ಯವಸ್ಥೆ, ಮಳೆಯ [illegible] ನೀರಾವರಿ ಸೌಕರ್ಯ ಇವುಗಳ [illegible] ಒಕ್ಕಲಿಗ ಸಾಮಾನ್ಯವಾಗಿ ಒಳ್ಳೆ ಬೆಳೆ ತೆಗೆದುಕೊಳ್ಳುತ್ತಾನೆ.

ಜಪಾನಿನ ಮಣ್ಣಿನಲ್ಲಿ [illegible] ಫಾಸ್ಫರಸ್ ಹಾಗು [illegible] ಕಂಡುಬಂದಿದೆ. ಆದರೆ ಈ [illegible] ಒಕ್ಕಲಿಗನು ಕೈಕೊಳ್ಳುವ [illegible] ವಾಗಿ ಭೂಮಿಯ ಫಲವತ್ತತೆಗೆ ಧಕ್ಕೆ [illegible] ಗೊಬ್ಬರ ಇಲ್ಲವೆ ಇತರ [illegible] ವಿಚಾರ, ಅಲ್ಲಿಯ ಒಕ್ಕಲಿಗನ [illegible] ವದಿಲ್ಲ. ಹೀಗಾಗಿ ಭೂಮಿ [illegible] ಯುವದಿಲ್ಲ. [illegible] ವಂತಹದಿದೆ. ಇತ್ತ ಒಕ್ಕಲಿಗರು [illegible] ಸುಧಾರಿಸಿದ ಒಕ್ಕಲತನ [illegible] ಭೂಮಿಯ ಫಲವತ್ತತೆಯನ್ನು [illegible] ಹುಟ್ಟುವಳಿ ತೆಗೆದುಕೊಳ್ಳುತ್ತಾನೆ.

[illegible] ಗುಡ್ಡಗಾಡು. ಒಟ್ಟು ಭೂಮಿಯಲ್ಲಿ [illegible] ಕೇವಲ ೧೬ ಭಾಗ ಮಾತ್ರ ಒಕ್ಕಲತನಕ್ಕೆ ತಕ್ಕುದಾಗಿದೆ. ಆದರೆ ಸಾಗು ಮಾಡಲು ತಕ್ಕುದಾದ ಎಲ್ಲ ಭೂಮಿಯನ್ನು [illegible] ಬಿಡದೆ ಸಾಗು ಮಾಡಲಾಗಿದೆ. [illegible] ಬಂಜೆಯಾಗಲು ಅವಕಾಶ [illegible]

[illegible]

[illegible] ಒಕ್ಕಲತನಕ್ಕೆ [illegible] ಓರೆಗಳಲ್ಲಿ [illegible] ಹಚ್ಚಿದ್ದಾರೆ. ಇದ [illegible] ಗುಡ್ಡ ಬಹಳ [illegible] ಅತಿ ಎತ್ತರವಾದ [illegible] ಕಟ್ಟುವನು. [illegible] ಹೀಗೆ [illegible] ತೆಗೆಯಲಾಗು [illegible] ಈ [illegible]

[illegible] ಈ ಭೂಮಿಯಲ್ಲಿ [illegible] ಇಲ್ಲಿ ಇನ್ನೊಂದು

ಸೌಕರ್ಯವಿದೆ, ಹನ್ನೆರಡು ತಿಂಗಳೂ ಮಳೆ ಹನಿಯುತ್ತದೆ. ಆದುದರಿಂದ ಅಷ್ಟೊಂದು ನೀರಾವರಿ ಅಗತ್ಯವೆನಿಸುವದಿಲ್ಲ.

ಬೇಲಿ ಬೇಕಾಗಿಲ್ಲ

ಒಂದು ಮಾತು ಅಚ್ಚರಿ ಉಂಟುಮಾಡಬಹುದು. ಅದೆಂದರೆ ಜಪಾನಿನ ಹೊಲಗಳಿಗೆ ಬೇಲಿಯೇ ಬೇಕಾಗಿಲ್ಲ. ಈ ಬೇಲಿಗಾಗಿ ಹೊಲದ ಕೆಲಭಾಗ ಹಾಳು ಮಾಡಲು ಒಕ್ಕಲಿಗನು ಬಯಸುವದಿಲ್ಲ. ಒಡ್ಡಿನ ಮೇಲೂ ಬಿತ್ತುವರು. ಹೀಗಾಗಿ ಬೇಲಿಗಾಗಿ ಸ್ಥಳವೇ ಇರುವದಿಲ್ಲ. ಜಪಾನಿನಲ್ಲಿ ಬಿಡಾಡಿ ದನಗಳ ಕಾಟವೇ ಇಲ್ಲ. ಮೇಯ್ದು ಬರಲೆಂದು ಅಲ್ಲಿ ಒಂದು ದನವನ್ನೂ ಬಿಚ್ಚಿ ಹೊಡೆಯುವದಿಲ್ಲ. ಒಂದು ಹೊಲದಿಂದ ಇನ್ನೊಂದು ಹೊಲಕ್ಕೆ ಎತ್ತು ಎಮ್ಮೆಗಳನ್ನು ಒಯ್ಯುವಾಗ, ಅವಕ್ಕೆ ಬಾಯಿಕಲ್ಲಿ ಹಾಕುವರು. ನೆರೆಹೊರೆಯವರ ಬೆಳೆ ಹಾಳಾಗಬಾರದೆಂದು ಅವರು ಎಚ್ಚರವಹಿಸುವರು. ಇನ್ನೊಬ್ಬರ ಆಸ್ತಿಪಾಸ್ತಿಯ ಬಗ್ಗೆ ಅವರಲ್ಲಿ ಪರಸ್ಪರ ಆದರ ಭಾವನೆಯಿದೆ. ಒಟ್ಟು, ಅಲ್ಲಿ ಬೆಳೆಯನ್ನು ಕದಿವವರು ಇಲ್ಲ. ಅದಕ್ಕೆ ಹಾನಿ ಮಾಡುವವರು ಇಲ್ಲವೆ ಇಲ್ಲ.

ಚಿಕ್ಕ ಮಕ್ಕಳಲ್ಲೂ ಈ ಪ್ರವೃತ್ತಿ ಚಿಗಿತಿದೆ. ಇನ್ನೊಬ್ಬರ ತೋಟದಲ್ಲಿಯ ಹಣ್ಣಿಗೆ ಅವರು ಕೈ ಹಚ್ಚುವದಿಲ್ಲ. ಬುದ್ಧಿ ಪುರಸ್ಸರವಾಗಿ ಗಿಡಬಳ್ಳಿಗಳಿಗೆ ಧಕ್ಕೆ ಮಾಡುವದಿಲ್ಲ. ಹೊಲಗಳ ರಕ್ಷಣೆಯ ಎದೆಗುದಿ ಅಲ್ಲಿಲ್ಲ. ಎರಡು ಹೊಲಗಳ ನಡುವೆ ಬರಿದಾದ ಒಂದು ಪಟ್ಟಿಯೇ ಅವುಗಳ ಮೇರೆಯ ಕುರುಹು. ಒಬ್ಬರೊಬ್ಬರ ಭೂಮಿಯನ್ನು ಆಕ್ರಮಿಸುವದಿಲ್ಲ. ಒಂದು ವೇಳೆ ಹಾಗಾಗಿದ್ದರೆ ಪರಸ್ಪರರಲ್ಲಿಯೇ ಜಗಳ ಬಗೆಹರಿಸಿಕೊಳ್ಳುವರು ಹೊಲಗದ್ದೆಯ ನ್ಯಾಯಕ್ಕಾಗಿ ಕೋರ್ಟುಕಚೇರಿಗಳ ಕಟ್ಟೆಯನ್ನು ಹತ್ತುವದು ಅಲ್ಲಿಯ ಒಕ್ಕಲಿಗನಿಗೆ ಗೊತ್ತಿಲ್ಲದ ಮಾತು.

ಹೊಲದೊಳಗಿನ ದಾರಿ

ಕೈಗಾಡಿಯಿಂದ ಹೊಲಗಳಿಗೆ ಗೊಬ್ಬರ-ಕಾಳುಕಡಿ ಸಾಗಿಸಲು ಅವಶ್ಯವಾದ ದಾರಿಗಳನ್ನು ವ್ಯವಸ್ಥಿತವಾಗಿ ರಚಿಸಲಾಗಿದೆ. ಹೊಲಗಳಲ್ಲಿ ಅನೇಕ ದಾರಿಗಳಿವೆ. ಎರಡು ಹೊಲಗಳಿಗೆ ಒಂದರಂತಾದರೂ ದಾರಿಯಿದೆ. ಅಲ್ಲಿಯ ಒಕ್ಕಲಿಗರಿಂದ ಕಲಿಯತಕ್ಕ ಮಾತು ಒಂದಿದೆ. ಪ್ರತಿಯೊಬ್ಬನ ಹೊಲವೂ ಚೌಕಾಗಿರಬೇಕೆಂದು, ಪರಸ್ಪರರು ತಮ್ಮ ಹೊಲದಲ್ಲಿಯ ತುಸುಭಾಗ, ಅವಶ್ಯವಿದ್ದೆಡೆ ಬಿಟ್ಟುಕೊಟ್ಟಿದ್ದಾರೆ. ಹೀಗೆ ವ್ಯವಸ್ಥಿತವಾದ ದಾರಿ ಹಾಗು ಚೌಕು ಆಕಾರದ ಹೊಲಗಳು ಕಣ್ಣಿಗೆ ಹಬ್ಬವನ್ನುಂಟು ಮಾಡುವವು. ಹೊಸದಾರಿಯನ್ನು ರಚಿಸಬೇಕಾದರೆ, ಸಂಬಂಧಪಟ್ಟ ಹೊಲಗಳ ಒಕ್ಕಲಿಗರೆಲ್ಲ ಒಂದೆಡೆ ಸೇರಿ, ದಾರಿಯ ಯೋಜನೆಯನ್ನು ಚರ್ಚಿಸಿ ನಿರ್ಣಯಿಸುವರು. ಈ ದಾರಿಯ ಗುರುತುಗಳ ಗೂಟಗಳನ್ನು ನೆಡಲು ಬಂದಾಗ ಒಕ್ಕಲಿಗರು ಯಾವ ಮರು ಮಾತಾಡದೆ, ತಮ್ಮ ಹೊಲದ ಭಾಗವನ್ನು ಬಿಟ್ಟುಕೊಡುವರು. ನನ್ನ ಅನುಭವದ ಮಾತನ್ನೇ ಹೇಳುವೆ. ನಾವಿಳಿದುಕೊಂಡಿದ್ದ ಹೊಲದ ಮನೆಯ ಸಮೀಪದಲ್ಲಿಯೇ ಒಂದು ದಾರಿಯನ್ನು ರಚಿಸಬೇಕಾಗಿತ್ತು. ಸಂಬಂಧಿಸಿದ ಒಕ್ಕಲಿಗರೆಲ್ಲ ಒಂದೆಡೆ ಸೇರಿ ತಮ್ಮ ಹೊಲದ ಭಾಗವನ್ನು ಬಿಟ್ಟುಕೊಡಲು ಸಮ್ಮತಿಸಿದ್ದನ್ನು ಕಂಡು ನಾನು ಬೆಟ್ಟು ಕಚ್ಚಿದೆ. ಇಷ್ಟೇ ಅಲ್ಲ, ಪ್ರತಿಯೊಬ್ಬ ಒಕ್ಕಲಿಗರಿಂದ ವಂತಿಗೆಯನ್ನೂ ಎತ್ತಿ ಹೊಲ ಕೊಡಬೇಕಾಗಿ ಬಂದವರಿಗೆ ಪರಿಹಾರ ಕೊಟ್ಟರು.

ವಿಶಿಷ್ಟವಾದ ಕಲೆ

ಜಪಾನಿನ ಒಕ್ಕಲತನವೆಂದರೆ ತೋಟಗಾರಿಕೆ. ಎಲ್ಲ ಭೂಮಿಯನ್ನೂ ರಂಟೆ ಹೊಡೆದು ಹದಗೊಳಿಸುತ್ತಾರೆ. ಅಲಕ್ಷಿಸಿದ ಹೊಲದ ತುಂಡು ಇಲ್ಲವೆ ಅರೆ ಮನಸ್ಸಿನಿಂದ ಒಕ್ಕಲತನ ಮಾಡಿದ್ದು ಎಲ್ಲಿಯೂ ಕಣ್ಣಿಗೆ ಬೀಳುವದಿಲ್ಲ. ಕಸಕಳೆ ತೆಗೆದು ಹಸನುಗೊಳಿಸಿದ ಹೊಲ ಕುಲು ಕುಲು ನಗುತ್ತಿರುವಂತೆ ಕಾಣುವದು. ಒಕ್ಕಲತನದ ಬಹುಭಾಗ ಕೈಯಿಂದಲೇ ನಡೆಯುವದು ಬಹಳ ಹೊಗಳತಕ್ಕ ಸಂಗತಿ. ಹಳ್ಳಿಯ ಪ್ರದೇಶವೆಲ್ಲ ವ್ಯವಸ್ಥಿತವಾಗಿ ರಚಿಸಿದ ದೊಡ್ಡ ತೋಟದಂತೆ ಕಂಗೊಳಿಸುವದು.

ಉದ್ದನ್ನ ಗುದ್ದಲಿಯಿಂದ ನೆಲ ಅಗಿಯುವರು. ಅದು ಆಳವಾಗಿ ಅಗಿಯುವದು. ಮಣ್ಣನ್ನು ತಿರುವಿ ಹಾಕಿ, ಸಣ್ಣಗೆ-ನುಣ್ಣಗೆ ಮಾಡುವರು. ಬತ್ತವನ್ನು ಬಿಟ್ಟು ಉಳಿದುದನ್ನೆಲ್ಲ ಒಂಡೆಯ ಮೇಲೆ ಬೆಳೆಯುವರು. ಒಂಡೆಯನ್ನು ಕೂಡ ಕೈಯ ಸಾಧನ-ಸಲಕರಣೆಗಳಿಂದಲೇ ಮಾಡುವರು. ಕೈಗುಂಟೆಯಿಂದ ಎಡೆ ಹೊಡೆದು, ಆಗಾಗ ಬೆಳೆಗೆ ಮಣ್ಣು ಏರಿಸುವರು. ಒಂಡೆಯ ಮೇಲೆ ಒಂದು ಬೆಳೆಯಿರುವಾಗ, ನಡುವಿನ ಸಾಲನ್ನು ನಡಸಾಲಬೆಳೆಗಾಗಿ ಅಗಿಯುವರು. ಒಂಡೆಯ ಮೇಲಿನ ಬೆಳೆ ಮಾಗುವದರೊಳಗಾಗಿ ನಡಸಾಲ ಬೀಜವನ್ನು ಬಿತ್ತುವರು. ನೇರವಾದ ಸಾಲುಗಳಲ್ಲಿ ಅಲ್ಲಲ್ಲಿಗೆ ಅಂತರ ಬಿಟ್ಟು ಈ ರೀತಿ ಬಿತ್ತುವರು.

ಒಂಡೆಯ ಮೇಲಿನ ಬೆಳೆಯ ರಾಶಿಯಾದ ಮೇಲೆ, ಈ ನಡಸಾಲ ಬೆಳೆ, ಬೆಳೆದು ಬರುವದು. ಕೆಲಸಮಯದ ನಂತರ. ಒಂಡೆಗಳನ್ನು ಅಗಿದು ಈ ನಡಸಾಲ ಬೆಳೆಗೆ ಮಣ್ಣೇರಿಸುವರು. ಹೀಗೆ ಈ ನಡಸಾಲೇ ಒಂಡೆಯಾಗುವದು. ಒಂಡೆಯಿದ್ದಲ್ಲಿ ತಗ್ಗು ಸಾಲಾಗುವದು. ಈ ತಗ್ಗು ಸಾಲಿನಲ್ಲಿ ಮೇಲೆ ಹೇಳಿದಂತೆ ನಡಸಾಲ ಬೆಳೆ ತೆಗೆಯುವರು. ಈ ರೀತಿ ಇಡಿ ವರುಷ ನಡೆದಿರುತ್ತದೆ. ಹೀಗೆ, ಮಣ್ಣನ್ನು ಚನ್ನಾಗಿ ಪುಡಿಪುಡಿ ಮಾಡಿಡುವದಲ್ಲದೆ, ಎಳ್ಳಷ್ಟು ಹೊತ್ತು ಕಳೆಯದೆ ಒಂದರ ಬೆನ್ನ ಮೇಲೆ ಇನ್ನೊಂದು ಹುಟ್ಟುವಳಿ ತೆಗೆದು ಕೊಳ್ಳುವರು.

ಗೋದಿಯ ತರುವಾಯ

ಘಟ್ಟದ ಭಾಗದಲ್ಲಿ ಮೇ ತಿಂಗಳಲ್ಲಿ ಗೋದಿಯ ರಾಶಿ ಮಾಡುವರು. ಎಪ್ರಿಲದಲ್ಲಿ [illegible] ಇಲ್ಲವೆ ಅವರೆ (ಸೋಯಬೀನ) ಗಳನ್ನು [illegible] ಬಿತ್ತುವರು. ಕೆಲಸಮಯ [illegible] ದುಂಟು. ಹೀಗೆ ಗೋದಿ ಕೈಗೆ ಬರುವ [illegible] ಬೆಳೆಗೆ ಒಂದು ತಿಂಗಳ ಅವಧಿ ದೊರೆಯುವದು. [illegible] ಕೊಯಲಾದ ಮೇಲೆ [illegible] ಹುಗಿದು ಬಿಡುವದು. [illegible] ಯನ್ನು ಮಣ್ಣಿನಿಂದ ಮುಚ್ಚಿ ಬಿಡುವದು. [illegible] ಇನ್ನೊಂದು ಬೆಳೆಗೆ [illegible] ವಾಗಿ ದೊರೆಯುವದು; ಮಣ್ಣು [illegible] ಜೊತೆಗೆ ಹೊಸ ಬೆಳೆಗೆ ಮಣ್ಣೇ[illegible]

ಇನ್ನು ಹಸಿಗದ್ದೆಗಳನ್ನು [illegible] ಆಳವಾಗಿರುವದು. [illegible] ಚೌಕುಗಳನ್ನು ಮಾಡುವದು. [illegible] ಗಳಲ್ಲಿ [illegible] ಗಾಲದ ಬೆಳೆಗಳಾದ [illegible] ಬಿತ್ತುವರು. [illegible] ರಚಿಸಿ ಈ ಬೆಳೆಗಳನ್ನು [illegible] ಬಿತ್ತುವರು. [illegible] ನೀರುವದು. [illegible] ಯುವದು. ಈ [illegible] ತಾಳ್ಮೆಯಿಂದ [illegible] ಒಕ್ಕಲಿಗನನ್ನು [illegible]

ಬೆಳೆಯ ಕೊಯಲಾದ ಮೇಲೆ ಈ ಒಂಡೆಗಳನ್ನು ಒಡೆದು ಸಮಗೊಳಿಸುವರು, ಬತ್ತದ ಬಿತ್ತಿಗೆಗೆ ಗದ್ದೆ ಸಿದ್ಧವಾಗುವದು.

ವಿಶಿಷ್ಟ ಒಕ್ಕಲತನ

ನೇರವಾದ ಬೆಳೆಯ ಸಾಲುಗಳಿಂದ ಕೂಡಿದ ಕುಲಕುಲ ನಗುವ ಹಸನಾದ ಹೊಲಗಳು ಜಪಾನದ ಒಕ್ಕಲತನದ ವೈಶಿಷ್ಟ್ಯವಾಗಿದೆ. ಸಾಮಾನ್ಯವಾಗಿ ಕ್ರಮವಾದ ಅಂತರದಲ್ಲಿ ಬೀಜ ಊರುವರು. ಆದರೆ ಬತ್ತದ ಬಿತ್ತಿಗೆಯಲ್ಲಿ ಮಾತ್ರ ಬೀಜ ತೂರುವರು. ನೇರವಾದ ಸಾಲಿನಲ್ಲಿ ಬಿತ್ತುವದರಿಂದ ಬೀಜದಲ್ಲಿ ಉಳಿತಾಯವಾಗುವದು. ಅಲ್ಲದೆ ಎಡೆಹೊಡೆಯುವದಕ್ಕೂ ಹಗುರಾಗುವದು. ಗೊಬ್ಬರವನ್ನು ಸುಲಭವಾಗಿ ಹಾಕಬರುವದು. ಮೇಲಿಂದ ಮೇಲೆ ಅವರು ಗೊಬ್ಬರ ಹಾಕಲು ಮರೆಯುವದಿಲ್ಲ. [illegible] ಅಗಿಗಳಲ್ಲಿ ಸಾಕಷ್ಟು ಅಂತರ [illegible] ಬೇಕಾದಷ್ಟು ದೊರೆಯುವಂತಾಗುವದು. ಇದಲ್ಲದೆ ಈ ಪದ್ಧತಿಯು ಮೊದಲನೆ ಬೆಳೆ ಇನ್ನು [illegible] ಎರಡನೆಯ ಬೆಳೆಗೆ ಅನುಕೂಲಮಾಡಿಕೊಡುವದು. ಅಲ್ಲದೆ ಬೆಳೆಯನ್ನು ಕಣ್ಣಲ್ಲಿ ಕಣ್ಣಿಟ್ಟು ಚನ್ನಾಗಿ ನೋಡಿಕೊಳ್ಳಲು ಅವಕಾಶವಾಗುವದು.

[illegible] ಕಲ್ಲುಗಳಿರುವದೇ ಕಡಿಮೆ. ಎಲ್ಲಿ [illegible] ದಂಡೆಗುಂಟ ಹಾಕುವರು. [illegible] ತಡೆಯುವದು. ಗುಡ್ಡದ [illegible] ಗೋಡೆ ಕಟ್ಟಲು ಇಲ್ಲವೆ [illegible] ಭೂಮಿಯನ್ನು ಚನ್ನಾಗಿ [illegible] ಎಲ್ಲಿಯೂ ಉಬ್ಬು ಇಳಕಲು [illegible]

[illegible] ಪದರಾಗುವಂತೆ [illegible] ಇದಕ್ಕಾಗಿ [illegible] ಮಣ್ಣನ್ನು [illegible] ಹಸಿರು [illegible] ದೊರೆಯುವವು [illegible] ಹಾಕಿ ಫಲವತ್ತತೆ [illegible] ಇಂಥ [illegible] ಒಕ್ಕಲಿಗ [illegible] ಹೆಚ್ಚಿಸುತ್ತ [illegible]

★ ಕಾರ್ಯದೊಂದಿಗೆ ಶಿಕ್ಷಣ ★

ಆನಂದದಲ್ಲಿ ಇತ್ತೀಚೆಗೆ ಪ್ರಾರಂಭಿಸಲ್ಪಟ್ಟ ತರಬೇತಿ ಮತ್ತು ಅಭಿವೃದ್ಧಿ ಕೇಂದ್ರದಲ್ಲಿ ಒಕ್ಕಲತನ ವಿಸ್ತರಣ ಕಾರ್ಯದ ಬಗ್ಗೆ ಹೊಸ ಬಗೆಯ ತರಬೇತಿಯನ್ನು ಒದಗಿಸಲಾಗುತ್ತಿದೆ. ನಮ್ಮ ಒಕ್ಕಲತನ ಕಾರ್ಯಕರ್ತರು ಸಂಪೂರ್ಣ ಹೊಸ ದೃಷ್ಟಿಯನ್ನಿಟ್ಟುಕೊಂಡು ಹಳ್ಳಿಗಳಿಗೆ ಹೋಗುವಂತೆ ಅವರನ್ನು ಸಜ್ಜುಗೊಳಿಸುವದೆ ಈ ತರಬೇತಿಯ ಉದ್ದೇಶ. ತರಬೇತಿ ಹೊಂದುತ್ತಿರುವವರು ಆಗಲೆ "ಕಾರ್ಯದೊಂದಿಗೆ ಶಿಕ್ಷಣ" ಎಂಬ ಹೊಸ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ. ಈ ಪದ್ಧತಿ ಅಮೇರಿಕದಲ್ಲಿ ಯಶಸ್ವಿಯೂ ಆಗಿದೆ; ಮೆಚ್ಚಿಗೆಯನ್ನೂ ಪಡೆದಿದೆ.

ಕಳೆದ ಜೂನ ತಿಂಗಳಲ್ಲಿ ಮುಂಬಯಿ, ಸೌರಾಷ್ಟ್ರ ಹಾಗು ಕಚ್ಛ ಈ ಮೂರು ರಾಜ್ಯಗಳಿಂದ ಆರಿಸಲ್ಪಟ್ಟ ೧೮ ಜನರು ಗ್ರಾಮೀಣ ಮುಖಂಡತ್ವ ಹಾಗು ಸಂಘಟನೆಯಲ್ಲಿ ತರಬೇತಿಹೊಂದುವದಕ್ಕಾಗಿ ಮುಂಬಯಿ ರಾಜ್ಯದಲ್ಲಿಯ ಖೇಡಾ ಜಿಲ್ಲೆಯ ಆನಂದ ಎಂಬಲ್ಲಿ ಒಂದೆಡೆ ಸೇರಿದರು. "ಉತ್ತಮ ಬೇಸಾಯ: ಉತ್ತಮ ಜೀವನ" ಸಂದೇಶವನ್ನು ಹೊಲ ಹೊಲಕ್ಕೂ ಮನೆ ಮನೆಗೂ ಒಯ್ದು ಮುಟ್ಟಿಸುವದಕ್ಕಾಗಿ ಪ್ರಥಮ ದರ್ಜೆಯ ಒಕ್ಕಲತನ ವಿಸ್ತರಣ ಕಾರ್ಯಕರ್ತರಾಗಬೇಕು, ಅದಕ್ಕಾಗಿ ಸನ್ನದ್ಧರಾಗಬೇಕು ಎಂಬುದೆ ಅವರ ಉದ್ದೇಶ. ಒಕ್ಕಲತನ ಕಾರ್ಯಕರ್ತರ ಮೊದಲನೆಯ ಪಡೆ ಇದು. ಇವರು ತರಬೇತಿಯ ನಂತರ ಬಲವತ್ತರ ಅಭಿವೃದ್ಧಿಗಾಗಿ ಆರಿಸಲ್ಪಟ್ಟ ಹಳ್ಳಿಗಳಿಗೆ ಹೋಗುವರು. ಇಂಥ ಇನ್ನೂ ಹಲವು ಪಡೆಗಳು ಕ್ರಮೇಣ ತರಬೇತಿ ಹೊಂದಿ ಹಳ್ಳಿಗಳಿಗೆ ಹೋಗಿ ತಮ್ಮ ಕಾರ್ಯ ಕೈಕೊಳ್ಳಲಿವೆ.

ಸರ್ವೋದಯ ಆದರ್ಶ

ಆನಂದದಲ್ಲಿಯ ಈ ತರಬೇತಿ ಮತ್ತು ಅಭಿವೃದ್ಧಿ ಕೇಂದ್ರವು ಭಾರತೀಯ ಒಕ್ಕಲತನ ಸಂಶೋಧನ ಕೌನ್ಸಿಲ್ಲು ಫೋರ್ಡ ಫೌಂಡೇಶನ್ನದ ಹಣದ ನೆರವಿನಿಂದ ಪ್ರಾರಂಭಿಸಿದ

★

ತರಬೇತಿ ಪಡೆಯುತ್ತಿರುವ ಜನರು ಒಂದು ಬೆಳೆಯ ಬಗ್ಗೆ ಚರ್ಚಿಸುತ್ತಿದ್ದಾರೆ. ಬೇಸಾಯದ ಸ್ಥಾನಿಕ ಪದ್ಧತಿಗಳ ಸಂಪೂರ್ಣ ಜ್ಞಾನ ಅವರಿಗಿದ್ದರೆ ಅವುಗಳಲ್ಲಿ ಸುಧಾರಣೆ ಕೈಕೊಳ್ಳುವಂತೆ ಒಕ್ಕಲಿಗರ ಮನ ಒಲಿಸಲು ನೆರವಾಗುವದು. ಬೀಜಕ್ಕಾಗಿ ಉತ್ತಮ ತೆನೆಯನ್ನು ಆರಿಸುವ ವಿಷಯವನ್ನು "ಮುಖಂಡ"ರು (ತಲೆಯ ಮೇಲೆ ಟೊಪ್ಪಿಗೆಯಿದ್ದವರು) ತಿಳಿಸುತ್ತಿದ್ದಾರೆ.

★

೫ ಕೇಂದ್ರಗಳಲ್ಲೊಂದಾಗಿದೆ. ಇಲ್ಲಿ ಕೊಡಲಾಗುತ್ತಿರುವ ತರಬೇತಿ ಒಕ್ಕಲತನ ವಿಸ್ತರಣ ಪದ್ಧತಿಗಳಲ್ಲಿಯೆ ಒಂದು ಹೊಸ ಪ್ರಯೋಗವಾಗಿದೆ. ಇದು ಅಮೇರಿಕೆಯಲ್ಲಿಯ ವಿಸ್ತರಣ ಕಾರ್ಯದ ಮಾದರಿಯ ಮೇಲೆಯೆ ಇದ್ದರೂ ತತ್ವದಲ್ಲೂ ಕ್ರಮದಲ್ಲೂ ಪ್ರಜಾಸತ್ತಾತ್ಮಕವಾಗಿದೆಯಲ್ಲದೆ ಭಾರತೀಯ ಜೀವನದ ಪುನರ್ರಚನೆಯ ಸರ್ವೋದಯ ಆದರ್ಶವನ್ನೇ ಸ್ವೀಕರಿಸಿದೆ.

ಒಕ್ಕಲತನ ವಿಸ್ತರಣ ಸೇವೆ ಯಶಸ್ವಿಯಾಗಬೇಕಾದರೆ ಚನ್ನಾಗಿ ತರಬೇತಿ ಹೊಂದಿದ ಸಿಬ್ಬಂದಿ ಅತ್ಯಗತ್ಯ. ಇದಲ್ಲದೆ ಯಾವದೆ ಗ್ರಾಮಾಭಿವೃದ್ಧಿ ಕಾರ್ಯಕ್ರಮದಲ್ಲಿ ಒಕ್ಕಲತನಕ್ಕೇನೆ ಅಗ್ರಸ್ಥಾನವಿದ್ದರೂ, ಆರೋಗ್ಯ, ಸ್ವಚ್ಛತೆ, ಶಿಕ್ಷಣ ಇತ್ಯಾದಿ ಇತರ ವಿಷಯಗಳಲ್ಲೂ ಹಳ್ಳಿಯ ಜೀವನವನ್ನು ಸುಧಾರಿಸುವದು ಹಾಗು ಸ್ಥಳೀಯ ಸಂಘಸಂಸ್ಥೆಗಳ ಮೂಲಕ ಸುಧಾರಣೆಯನ್ನು ಕೈಕೊಳ್ಳುವದು ಅತ್ಯವಶ್ಯ. ಇದಲ್ಲದೆ ವಿಸ್ತರಣ ಸೇವಾ ಕಾರ್ಯಕ್ರಮವು ಹಳ್ಳಿಗಳಲ್ಲಿ ಅಸ್ತಿತ್ವದಲ್ಲಿರುವ ಸಮಾಜ ವ್ಯವಸ್ಥೆಗೆ ಹೊಂದಿಕೊಂಡು ಹೋಗುವಂಥದೂ ಹಳ್ಳಿಯ ಸಮಾಜದ ಪ್ರಜಾಸತ್ತಾತ್ಮಕ ವಿಧಿವಿಧಾನಗಳನ್ನು ಬಲಗೊಳಿಸುವಂಥದ್ದೂ ಇರಬೇಕಾಗುತ್ತದೆ.

ಆನಂದದಲ್ಲಿಯ ಈ ತರಬೇತಿ ಮತ್ತು ಅಭಿವೃದ್ಧಿ ಕೇಂದ್ರವನ್ನು ಪ್ರಾರಂಭಿಸುವಾಗ ಈ ಎಲ್ಲ ವಿಷಯಗಳನ್ನು ಗಮನಿಸಲಾಗಿದೆ. ಇಲ್ಲಿ ತರಬೇತಿ ಹೊಂದುತ್ತಿರುವ ಜನರು ತಮ್ಮ ತಮ್ಮ ಭಾಗದಲ್ಲಿ ಕಾರ್ಯ ಕೈಕೊಳ್ಳಲು ಉತ್ತಮ ರೀತಿಯಲ್ಲಿ ಸನ್ನದ್ಧರಾಗುವರಲ್ಲದೆ ಹೆಚ್ಚು ಕಾರ್ಯಕ್ಷಮರಾಗುವರು ಅವರದು ಮೂರು ಬಗೆಯ ಕಾರ್ಯವಾಗುವದು: ಆಡಳಿತೆಗಾರರೆಂದು, ಸರಕಾರ ಹಾಗು ಜನತೆಯ ನಡುವೆ ಸಂಪರ್ಕಾಧಿಕಾರಿಗಳೆಂದು ಹಾಗು ಗ್ರಾಮ ಕಾರ್ಯಕರ್ತರೆಂದು.

ಹಳ್ಳಿಯ ವಾತಾವರಣ

ಅವರಿಗೆ ಕೊಡಲಾಗುತ್ತಿರುವ ತರಬೇತಿ ಸಾಧ್ಯವಿರುವಷ್ಟು ವ್ಯಾವಹಾರಿಕವಾಗಬೇಕು, ಹಳ್ಳಿಯ ವಾತಾವರಣದಲ್ಲಿ ನಡೆಯಬೇಕು ಎಂಬ ಉದ್ದೇಶದಿಂದ ತರಬೇತಿ ಕೇಂದ್ರದ ಅಂಗವಾಗಿ ಅಭಿವೃದ್ಧಿ ಯೋಜನೆಯೊಂದನ್ನು ಪ್ರಾರಂಭಿಸಲಾಗಿದೆ. ಈ ಕೇಂದ್ರವು ಗ್ರಾಮೀಣ ಕಾರ್ಯ ಶಾಲೆಯಾಗಿದೆ. ಅಲ್ಲಿ ತರಬೇತಿ ಹೊಂದುತ್ತಿರುವವರು ತರಬೇತಿಯ ಆರೂ ತಿಂಗಳು ಪ್ರತ್ಯಕ್ಷ ಕಾರ್ಯದಲ್ಲಿ ತೊಡಗಿರುತ್ತಾರೆ.

ಅಭಿವೃದ್ಧಿ ಯೋಜನೆಯಲ್ಲಿ ಕೇಂದ್ರದ ಸುತ್ತಲೂ ೯ ಮೈಲು ಪ್ರದೇಶದಲ್ಲಿಯ ೧೦೦ ಹಳ್ಳಿಗಳು ಬರುತ್ತವೆ. ಇವು ಅಭಿವೃದ್ಧಿಗೆ ಯೋಗ್ಯವಿವೆ. ಅಭಿವೃದ್ಧಿ ಕಾರ್ಯಕ್ರಮ ೧೭೮ ಚದರ ಮೈಲ್ ಬೇಸಾಯ ಹಾಗು ಬೀಳು ಭೂಮಿಯನ್ನು ಒಳಗೊಂಡಿದ್ದು, ೬೬,೦೦೦ ಜನ ಅದರ ಲಾಭ ಪಡೆಯುವರು.

[illegible]

ಕೇಂದ್ರದಲ್ಲಿಯ ೧೮ ಜನರು ರಾಜ್ಯದ ಒಕ್ಕಲತನ ಖಾತೆಯ ಹಿರಿಯ ಅಧಿಕಾರಿಗಳೊಬ್ಬರ ಮುಖಂಡತ್ವದಲ್ಲಿ ತರಬೇತಿ ಹೊಂದುತ್ತಿದ್ದಾರೆ. ಒಕ್ಕಲತನ, ಆರೋಗ್ಯ, ಶಿಕ್ಷಣ, ಹಾಗು ಸಹಕಾರ ಖಾತೆಗಳ ಅಧಿಕಾರಿಗಳು ಅವರ ನೆರವಿಗಿದ್ದಾರೆ. ಒಕ್ಕಲತನ ಖಾತೆಯ ವಿಸ್ತರಣ ಕಾರ್ಯದ ಜಾಯಿಂಟ ಡೈರೆಕ್ಟರರು ಕಾರ್ಯದ ಮೇಲ್ವಿಚಾರಣೆ ಮಾಡುತ್ತಾರೆ. ಆ ಪ್ರದೇಶದಲ್ಲಿಯ ಪರಿಸ್ಥಿತಿಗೆ ಅನುಕೂಲವಾಗುವಂಥ ಕಾರ್ಯಕ್ರಮವೊಂದನ್ನು ತಯಾರಿಸಲಾಗಿದೆ. ಅದರಲ್ಲಿ, ಒಕ್ಕಲತನ ಹುಟ್ಟುವಳಿಯ ಹೆಚ್ಚಳ, ಹಳ್ಳಿಯ, ಸಾಮಾಜಿಕ ಹಾಗು ಆರ್ಥಿಕ ಜೀವನದ ಸುಧಾರಣೆ ಇವೆಲ್ಲ ಬರುತ್ತವೆ. ಆರೋಗ್ಯ, ಸ್ವಚ್ಛತೆ, ಪ್ರೌಢ ಶಿಕ್ಷಣ, ಬೆಳೆಗಳ ಮೇಲೆ ಹಣಕಾಸು, ಪೂರಕ ಗ್ರಾಮೋದ್ಯೋಗಗಳು, ಗ್ರಾಮ ಪಂಚಾಯತಿಗಳು, ಕೌಟುಂಬಿಕ ಅರ್ಥ ವ್ಯವಸ್ಥೆ, ಹುಟ್ಟುವಳಿ ಸಂಗ್ರಹ ಹಾಗು ಮಾರಾಟ ಇತ್ಯಾದಿ ಸಮಸ್ಯೆಗಳನ್ನೆಲ್ಲ ಕೈಗೆತ್ತಿಕೊಳ್ಳಲಾಗಿದೆ. ಬಲವತ್ತರ ಬೇಸಾಯ, ಬೀಳು ಭೂಮಿಯ ಸಾಗುವಳಿ, ಭೂ ಸೈನ್ಯ ನಿರ್ಮಾಣ, ಗೋ ಸಂವರ್ಧನ, ಗಿಡ ನೆಡುವದು ಇವೂ ಕಾರ್ಯಕ್ರಮದಲ್ಲಿ ಬರುವವು.

ತರಬೇತಿ ಹೊಂದುತ್ತಿರುವ ಜನರು ಪ್ರತಿ ಸೋಮವಾರ ಹಾಗು ಮಂಗಳವಾರ ಮುಖ್ಯ ಸ್ಥಳದಲ್ಲಿ ಒಂದೆಡೆ ಸೇರಿ ತಮ್ಮ ತಮ್ಮ ಹಳ್ಳಿಗಳ ಸಮಸ್ಯೆಗಳನ್ನು ಚರ್ಚಿಸುತ್ತಾರೆ ಹಾಗು ಕಾರ್ಯದ ದಿಶೆಯನ್ನು ನಿರ್ಧರಿಸಿಕೊಳ್ಳುತ್ತಾರೆ. ವಾರದ ಉಳಿದ ದಿನ ಅವರು ಹಳ್ಳಿಗಳಲ್ಲಿ ಸಂಚರಿಸಿ ಜನರೊಡನೆ ಸಂಪರ್ಕ ಬೆಳೆಸುತ್ತಾರೆ. ಸಭೆ ಜರುಗಿಸುತ್ತಾರೆ. ಚರ್ಚೆಗಳಲ್ಲಿ ಭಾಗ ವಹಿಸುತ್ತಾರೆ. ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುತ್ತಾರೆ ಹಾಗು ಸುಧಾರಿಸಿದ ಬೇಸಾಯ ಪದ್ಧತಿಗಳನ್ನು ಅನುಸರಿಸಲು ಜನರ ಮನವೊಲಿಸುತ್ತಾರೆ. ಜನರ ವಿಶ್ವಾಸವನ್ನು ಗಳಿಸುವ ಈ ಹೊಸ ವಿಧಾನ, ತನ್ನ ಅಭಿಪ್ರಾಯಗಳನ್ನು ಮಂಡಿಸಲು ಒಕ್ಕಲಿಗನಿಗೆ ಕೊಡಲಾದ ಸ್ವಾತಂತ್ರ್ಯ ಇವುಗಳಿಂದಾಗಿ ಕಾರ್ಯಕ್ರಮದ ಲೋಪದೋಷಗಳನ್ನೂ ತೊಂದರೆಗಳನ್ನೂ ಪ್ರತ್ಯಕ್ಷವಾಗಿ ಅರಿತುಕೊಳ್ಳಲು ಕಾರ್ಯಕರ್ತರಿಗೆ ಅನುಕೂಲವಾಗುತ್ತದೆ ಹಾಗು ಸರಕಾರಿ ಅಧಿಕಾರಿಗಳೊಂದಿಗೆ ಚರ್ಚಿಸಿ ಸಮಸ್ಯೆಗಳಿಗೆ ಉತ್ತಮ ಪರಿಹಾರವನ್ನು ಕಂಡು ಹಿಡಿಯಲು ಸುಲಭವಾಗುತ್ತದೆ.

ಅಭಿವೃದ್ಧಿ ಪ್ರದೇಶ

ನೂರು ಹಳ್ಳಿಗಳ ಅಭಿವೃದ್ಧಿ ಪ್ರದೇಶದಲ್ಲಿ ೪ ಭಾಗಗಳನ್ನು ಮಾಡಲಾಗಿದೆ. ಪ್ರತಿಯೊಂದು ಭಾಗಕ್ಕೆ ಇಬ್ಬರು ಶಿಕ್ಷಕರು ಹಾಗು ೪ ರಿಂದ ೫ ಜನ ತರಬೇತಿ ಹೊಂದುತ್ತಿರುವವರೂ ಇದ್ದಾರೆ. ಪ್ರತಿಯೊಬ್ಬರೂ ಬೇರೆ ಬೇರೆ ಹಳ್ಳಿಯಲ್ಲಿ ಇರುತ್ತಾರೆ. ಪ್ರತಿಯೊಂದು ಭಾಗದಲ್ಲಿ ೨ ಅಥವಾ ೩ ಡಿಪೋಗಳಿವೆ. ಅಲ್ಲಿ ಸುಧಾರಿಸಿದ ಬೀಜ, ಗೊಬ್ಬರ, ಉಪಕರಣ, ಕ್ರಿಮಿನಾಶಕ, ಬೂರಸುನಾಶಕ ಇತ್ಯಾದಿ ಒಕ್ಕಲತನೋಪಯೋಗಿ ಸರಕುಗಳು ದೊರೆಯುತ್ತವೆ.

ಈ ಕೇಂದ್ರದಲ್ಲಿ ಅನುಸರಿಸಲಾಗುತ್ತಿರುವ "ಕಾರ್ಯದೊಂದಿಗೆ ಶಿಕ್ಷಣ" ಪದ್ಧತಿಯು ತರಬೇತಿ ಹೊಂದುತ್ತಿರುವವರಿಗೆ ಗ್ರಾಮಾಭಿವೃದ್ಧಿ ಕಾರ್ಯದ ಬಗ್ಗೆ ಹೊಸ ದೃಷ್ಟಿಯೊಂದನ್ನು ಬೆಳೆಯಿಸಿಕೊಳ್ಳಲು ಸಹಾಯಕವಾಗುತ್ತದೆ. ಈ ಪ್ರಯೋಗ ಬಹಳ ತೃಪ್ತಿಕರ ಫಲ ಕೊಡುತ್ತಿದೆ. ಹಳ್ಳಿಯ ಜನತೆಗೆ ಉತ್ತಮ ಬೇಸಾಯ ಉತ್ತಮ ಜೀವನದ ಸಂದೇಶವನ್ನು ಒಯ್ಯುವ ಹೊಸ, ಚೈತನ್ಯಪೂರ್ಣ ಪದ್ಧತಿಯೊಂದು ಈ ಮೂಲಕ ರೂಪಗೊಳ್ಳಲಿದೆ. ಸುಧಾರಣೆ ಕಾರ್ಯವನ್ನು ಕೈಕೊಳ್ಳಲು ಹಳ್ಳಿಗಳಿಗೆ ಬೇಕಾಗುವಂಥ ಜನರನ್ನು ಈ ಕೇಂದ್ರವು ತಯಾರಿಸುತ್ತದೆ. ಇಂಥ ಇನ್ನೆರಡು ಕೇಂದ್ರಗಳನ್ನು ಇಷ್ಟರಲ್ಲಿ ಕೊಲ್ಹಾಪುರ ಹಾಗು ಅರಭಾವಿ (ಬೆಳಗಾವಿ ಜಿಲ್ಲೆ) ಯಲ್ಲಿ ಪ್ರಾರಂಭಿಸಲಾಗುವದು. ನಮ್ಮ ಸಮಾಜ ವಿಕಾಸ ಯೋಜನೆಗಳ ಕಾರ್ಯ ಭರದಿಂದ ಸಾಗಲು ಅವಶ್ಯವಿರುವ ಹೊಸ ಮಾದರಿಯ ಒಕ್ಕಲತನ ವಿಸ್ತರಣ ಅಧಿಕಾರಿಗಳನ್ನು, ಗ್ರಾಮ ಕಾರ್ಯಕರ್ತರನ್ನು ಇವು ತಯಾರಿಸುವವು.

ವಿಜಾಪುರದ ಎದೆಗಾರ ರೈತ

ಲೇ. ಶ್ರೀ. ಎಸ್. ಎಛ್. ಕೋಟೂರ,
ಜಿಲ್ಹಾ ಒಕ್ಕಲುತನ ಅಧಿಕಾರಿ, ವಿಜಾಪುರ.

★

ಈ ತಿಂಗಳು ವಿಜಾಪುರ ಜಿಲ್ಹೆಯ ಎದೆಗಾರ ರೈತರೊಬ್ಬರ ಪರಿಚಯವನ್ನು ನಿಮಗೆ ಮಾಡಿಕೊಡುತ್ತಿದ್ದೇನೆ. ಎಂತೆಂತಹರೂ ಹಿಂಜರಿಯಬಹುದಾಗಿದ್ದ ಸಾಹಸಕ್ಕೆ ಅವರು ಕೈಹಾಕಿ ಯಶಸ್ವಿಯಾಗಿದ್ದಾರೆ. ಅವರ ಪ್ರಯತ್ನದಿಂದ ೨೦ ಎಕರೆ ಬರಡು ಬೀಳು ಇಂದು ಕುಲುಕುಲು ನಗುವ ತೋಟವಟ್ಟಿಯಾಗಿದೆ.

ವಿಜಾಪುರದಿಂದ ಹದಿನೈದು ಮೈಲು ದೂರದಲ್ಲಿ ಬಬಲೇಶ್ವರವೆಂಬ ಚಿಕ್ಕ ಹಳ್ಳಿಯಿದೆ. ಈ ಹಳ್ಳಿಯ ಒಬ್ಬ ರೈತ ಒಕ್ಕಲತನದಲ್ಲಿ ಒಂದು ಅದ್ಭುತವನ್ನೇ ಸಾಧಿಸಿದ್ದಾರೆ. ಕೇವಲ ನಾಲ್ಕು ವರ್ಷಗಳ ಅಲ್ಪಾವಧಿಯಲ್ಲಿ ೨೦ ಎಕರೆ ಬೀಳು ಭೂಮಿಯ ರೂಪವನ್ನೇ ಬದಲಿಸಿ ಬಿಟ್ಟಿದ್ದಾರೆ. ಅದನ್ನು ಇಂದು ನೋಡಿದವರು, ನಾಲ್ಕು ವರ್ಷಗಳ ಹಿಂದೆ ಅದು ಬರಡು ಬೀಳಾಗಿತ್ತೆಂಬುದನ್ನು ಯಾರೂ ನಂಬಲಾರರು.



[illegible] ಶ್ರೀ. ಈಶ್ವರಪ್ಪ ಶಿರೋಳ

ಅವರ ಹೆಸರು ಈಶ್ವರಪ್ಪ ರಾಮುಪ್ಪ ಶಿರೋಳ ಎಂದು. ವಿಜಾಪುರ-ಕಾಖಂಡಕಿ ರಸ್ತೆಗೆ ಅರ್ಧ ಮೈಲು ದೂರದಲ್ಲಿ ಅವರ ಈ ಹೊಸ ತೋಟ ಕಂಗೊಳಿಸುತ್ತದೆ. ಈ ತೋಟ ಈಶ್ವರಪ್ಪನವರಿಗೆ ಕೀರ್ತಿಯನ್ನು ತಂದಿದೆ. ಆದರೆ ಅದರ ರಚನೆಯು ಹಿಂದೆ ಒಳ್ಳೆ ಆಶ್ಚರ್ಯಜನಕ ಕತೆಯಿದೆ.

ಶ್ರೀ. ಶಿರೋಳರು ಪ್ರಗತಿಶೀಲ ವಿಚಾರದ ರೈತರು. ಒಕ್ಕಲತನದಲ್ಲಿ ತುಂಬ ಪ್ರೀತಿಯುಳ್ಳ ಅವರು ಕಳೆದ ಅನೇಕ ವರ್ಷಗಳಿಂದ ತಮ್ಮ ಸ್ವಂತದ ೩೦ ಎಕರೆ ಹೊಲದಲ್ಲಿ ದುಡಿಯುತ್ತಿದ್ದಾರೆ. ಉತ್ತಮ ಪೀಕು ಬೆಳೆಯುವಲ್ಲಿ ಹೆಸರುವಾಸಿಯಾಗಿದ್ದಾರೆ. [illegible] ಬೀಳು ಭೂಮಿಯನ್ನು ಅವರು [illegible] ಕೊಂಡಿದ್ದರು. ಆದರೆ ಅದನ್ನು [illegible] ಕಾರ್ಯ ಕೇವಲ ೧೯೪೮ರಲ್ಲಿ ಪ್ರಾರಂಭಿಸಿದರು.

ಆ ಭೂಮಿ ಗಿಡಗಂಟಿಗಳಿಂದ ತುಂಬಿ ಹೋಗಿತ್ತು. ಅದನ್ನೆಲ್ಲ [illegible] ಅದನ್ನು ಸಾಗು ಮಾಡುವದು ದುಸ್ತರ [illegible] ಎಂತೆಂತಹ ಧೈರ್ಯಶಾಲಿ ರೈತರೂ ಹಿಂಜರಿಯಬಹುದಾಗಿತ್ತು. ಆದರೆ ಒಕ್ಕಲತನದಲ್ಲಿ ಅನೇಕ ಮಳೆಗಾಲಗಳನ್ನು ಕಳೆದ ಅನುಭವಸ್ಥರಾದ ಈಶ್ವರಪ್ಪನವರು ಎದೆಗುಂದಲಿಲ್ಲ. ಆ ಭೂಮಿಯ [illegible] ಗಿಡಗಂಟಿಗಳನ್ನೆಲ್ಲ ಸವ[illegible] ಕೆಲಸಕ್ಕೆ ಕೈಹಾಕಿ ಪೂರ್ಣಗೊಳಿಸಿದರು. ಕಬ್ಬಿಣ ನೇಗಿ[illegible] ಬೇರು, ಕಲ್ಲುಗಳ[illegible] ಹತ್ತು ಸಲ [illegible] ಹೊಡೆದು [illegible] ಮಾಡಿದರು. [illegible] ಸಮಗೊಳಿಸಿದರು. ಈ [illegible] ಹುಣ್ಣು [illegible] ಒಂದು [illegible] ಸಾಧಾರಣ [illegible] ಆ ಹೊತ್ತಿನ [illegible] ಒಕ್ಕ[illegible] ಹೊಂದಿಸಿದಾಗ [illegible] ಅವುಗಳಿಂದ [illegible]

ಅವರು ಚೆನ್ನಾಗಿ ಬಲ್ಲರು. ಒಕ್ಕಲತನ ಖಾತೆಯ ಸಹಾಯದಿಂದ ಆ ಭೂಮಿಯಲ್ಲಿ ಸಮಪಾತಳಿ ಒಡ್ಡುಗಳು ರಚಿಸಲ್ಪಟ್ಟವು.

ಆ ಬೀಳು ಭೂಮಿಯಲ್ಲಿ ಮೊದಲಿಗೆ ಇದ್ದ ಎರಡು ಬಾವಿಗಳು ಕೂಡ ದುರಸ್ತಿಯಿಲ್ಲದೆ ಹಾಳು ಬಿದ್ದಿದ್ದವು. ಈಶ್ವರಪ್ಪನವರು ಅವೆರಡನ್ನೂ ಕಟ್ಟಿ ದುರಸ್ತಿ ಮಾಡಿ ಸುಸ್ಥಿತಿಗೆ ತಂದರು. ಇದರಿಂದ ೧೯೪೯ರಲ್ಲಿ ಸುಮಾರು ೨-೩ ಎಕರೆಗೆ ನೀರು ಹಾಯಿಸಿ ಪೈರು ತೆಗೆದುಕೊಳ್ಳಲು ಅನುವಾಯಿತು. ಮುಂದಿನ ವರ್ಷ, ೧೯೫೦ರಲ್ಲಿ ೧೦ ಎಕರೆ ಭೂಮಿಯಲ್ಲಿ ಬೆಳೆ ನೀರುಣ್ಣುವಂತಾಯಿತು. ಇನ್ನೂ ಹೆಚ್ಚಿನ ಭೂಮಿಗೆ ನೀರಿನಾಸರ ಮಾಡಲು ಅಲ್ಲಿ ಆಯಿಲ್ ಇಂಜಿನುಗಳನ್ನು ಕೂಡಿಸುವ ವಿಚಾರದಲ್ಲಿದ್ದಾರೆ.

ಗೊಬ್ಬರದಲ್ಲಿ ನಂಬಿಗೆ

ಬೆಳೆಯಿಂದ ಉತ್ತಮ ಹುಟ್ಟುವಳಿ ದೊರೆಯಬೇಕಾದರೆ ಗೊಬ್ಬರ ಹಾಕಲೇಬೇಕೆಂದು ಈಶ್ವರಪ್ಪನವರು ದೃಢವಾಗಿ ನಂಬುತ್ತಾರೆ. "ಗೊಬ್ಬರಕ್ಕಾಗಿ ಹಣ ತೊಡಗಿಸಿದರೆ ಅದನ್ನು ಬ್ಯಾಂಕಿನಲ್ಲಿ ಇಟ್ಟಂತೆಯೆ; ಅಥವಾ ಅದಕ್ಕೂ ಹೆಚ್ಚು ಲಾಭಕರ; ಏಕೆಂದರೆ ಬ್ಯಾಂಕಿನ ಬಡ್ಡಿಗಿಂತ ಇದು ಹೆಚ್ಚು ಪ್ರತಿ ಫಲ ನೀಡುತ್ತದೆ," ಎಂದು ಅವರು ರೈತ

ತನ್ನು ಹೊಲದ ನಿಲುವಿನಲ್ಲಿ ನಿಂತ ಈಶ್ವರಪ್ಪನವರು. ಅವರ ಹಿಂದೆ ಅಲ್ಲಿಯ ಒಕ್ಕಲತನ ಅಸಿಸ್ಟಂಟರಿದ್ದಾರೆ.

ಬಂಧುಗಳಿಗೆ ಹೇಳುವದುಂಟು. ಪ್ರತಿ ಎಕರೆಗೆ ಕನಿಷ್ಠ ೨೦ ಚಕ್ಕಡಿ ಚೆನ್ನಾಗಿ ಕಳಿತ ದಡ್ಡೀ ಗೊಬ್ಬರ ಅಥವಾ ತಿಪ್ಪೆಗೊಬ್ಬರ ಹಾಕದಿದ್ದರೆ ಈಶ್ವರಪ್ಪನವರಿಗೆ ಸಮಾಧಾನವಿಲ್ಲ. ತಾವು ಬೆಳೆಯುವ ಎಲ್ಲ ಬೆಳೆಗಳಿಗೆ ತಿಪ್ಪೆಗೊಬ್ಬರ ಅತ್ಯುತ್ತಮವೆಂದು ಇವರು ಮನಗಂಡಿದ್ದಾರೆ; ಅಂತೆಯೇ ಅನೇಕ ವರ್ಷಗಳಿಂದ ಅವರು ಕಂಪೋಸ್ಟ ತಯಾರಿಸುತ್ತಿದ್ದಾರೆ. ಅವರು ಹೊಸ ತೋಟದಲ್ಲಿ ೧೦'×೬'×೩' ಅಳತೆಯ ೪೦ ತಿಪ್ಪೆಗೊಬ್ಬರ ಕುಣಿಗಳಿವೆ. ಹೊಲದಲ್ಲಿಯ ಎಲ್ಲ ಕಸ ಕಡ್ಡಿ, ದನಗಳ ಸಗಣಿ ಮೂತ್ರ ಇವನ್ನೆಲ್ಲ ಕುಣಿಗೆ ತುಂಬುತ್ತಾರೆ. ಇದರಿಂದ ಅವರಿಗೆ ಪ್ರತಿ ವರ್ಷ ೨೦೦ ಚಕ್ಕಡಿ ತಿಪ್ಪೆಗೊಬ್ಬರ ದೊರೆಯುತ್ತದೆ. ಇದಲ್ಲದೆ ಒಕ್ಕಲತನ ಖಾತೆಯವರು ಪೂರೈಸುವ ಸೇಂಗಾಹಿಂಡಿ, ಅಮೋನಿಯಮ್ ಸಲ್ಫೇಟ, ಗೊಬ್ಬರ-ಮಿಶ್ರಣ ಇತ್ಯಾದಿ ಮೇಲುಗೊಬ್ಬರಗಳನ್ನೂ ಅವರು ಬೆಳೆಗಳಿಗೆ ಹಾಕುತ್ತಾರೆ.

ಒಳ್ಳೆಯ ಬೀಜದ ಸಂಗ್ರಹ

ಬೆಳೆ ಕೊಯ್ಲಿಗೆ ಬಂದಾಗ ಈಶ್ವರಪ್ಪನವರು ತಮ್ಮ ಹೊಲದ ಸುತ್ತಲೂ ಒಳ್ಳೆಯ ತೆನೆಗಳ ಕಡೆಗೆ ಕಣ್ಣು ಹಾಯಿಸುತ್ತ ತಿರುಗುತ್ತಿರುತ್ತಾರೆ. ಏಕೆ ಗೊತ್ತೆ? ಮುಂದಿನ ಹಂಗಾಮಿನ ಬಿತ್ತಿಗೆಗಾಗಿ ಒಳ್ಳೆಯ ತೆನೆಗಳನ್ನು ಆರಿಸಿ ಪ್ರತ್ಯೇಕವಾಗಿ ಒಳ್ಳೆ ಬೀಜಗಳನ್ನು ಸಂಗ್ರಹಿಸಿಡಬೇಕೆಂಬುದೇ ಅವರ ಉದ್ದೇಶ. ಅನೇಕ ಒಕ್ಕಲಿಗರು ಈ ಮಹತ್ವದ ಕಾರ್ಯವನ್ನು ನಿರ್ಲಕ್ಷಿಸಿ ರಾಶಿಯ ಬೀಜವನ್ನೇ ಬಿತ್ತಿ ಹಾನಿಗೀಡಾಗುತ್ತಾರೆಂದು ಈಶ್ವರಪ್ಪನವರು ಹೇಳುತ್ತಾರೆ. ಒಕ್ಕಲತನ ಖಾತೆಯು ಯಾವ ಯಾವ ಹೊಸ ಜಾತಿಯ ಬೀಜಗಳನ್ನು ಹುಟ್ಟಿಸಿದೆಂಬುದನ್ನು ಅವರು ಮೇಲಿಂದ ಮೇಲೆ ವಿಚಾರಿಸುತ್ತಾರೆ. ಅಂದರೆ ಹೊಸ ಸುಧಾರಿಸಿದ ಬೀಜಗಳನ್ನು ತಾವೇ ಮೊದಲಿಗೆ ಬಿತ್ತಿ ನೋಡಬೇಕೆಂಬುದು ಅವರ ಉತ್ಸುಕತೆ.

ಬಬಲೇಶ್ವರದ ತೋಟದಲ್ಲಿ ಅರ್ಧದಷ್ಟು ಕ್ಷೇತ್ರವನ್ನು ಆಹಾರ ಬೆಳೆಗಳಿಗಾಗಿ ಈಶ್ವರಪ್ಪನವರು ಮೀಸಲಿಟ್ಟಿದ್ದಾರೆ. ಜೋಳ, ಗೋದಿ, ಕಡಲೆ, ಹಾಗು ಬತ್ತ ಇವು ಅಲ್ಲಿಯ ಮುಖ್ಯ ಬೆಳೆಗಳು. ಉಳಿದರ್ಧ ಭಾಗದಲ್ಲಿ ಹಣ್ಣುಹಂಪಲ ಹಾಗು ಕಾಯಿಪಲ್ಲೆಗಳನ್ನು ಬೆಳೆಯುತ್ತಾರೆ. ಹಣ್ಣುಹಂಪಲಗಳಲ್ಲಿ ದ್ರಾಕ್ಷೆ, ಬಾಳೆ, ಲಿಂಬೆ ಹಾಗು ಮಾವು ಇತ್ಯಾದಿಗಳು ಮುಖ್ಯವಾದವು. ಬಗೆಬಗೆಯ ಕಾಯಿಪಲ್ಲೆಗಳನ್ನು ಅವರು ಬೆಳೆಯುತ್ತಾರೆ. ಅವುಗಳಲ್ಲಿ ಬದನೆ, ಗೆಣಸು,

ನವಲಕೋಲು, ಕ್ಯಾಬೀಜ, ಕಾಲಿಫ್ಲಾವರ ಹಾಗು ಹಲ ವಾರು ಬಗೆಯ ತೊಪ್ಪಲ ಪಲ್ಲೆಗಳು ಮಹತ್ವದವಾಗಿವೆ.

ಸುಂದರ ತೋಟ

ತಮ್ಮ ಹಣ್ಣಿನ ತೋಟದಲ್ಲಿ ಈಶ್ವರಪ್ಪನವರು ಉತ್ಕಟ ಆಸ್ಥೆಯನ್ನು ವಹಿಸುತ್ತಾರೆ. ೧೯೪೯ ರಲ್ಲಿ ಅಲ್ಲಿ ಕೇವಲ ೪೦ ಗಿಡಗಳನ್ನು ಹಚ್ಚಿ ಅವರು ಕಾರ್ಯವನ್ನು ಪ್ರಾರಂಭಿಸಿದರು. ಈ ಸಲದ ವನಮಹೋತ್ಸವದಲ್ಲಿ ಅವರು ೨೦೦೦ ಕ್ಯಾಸುರಿನಾ ಗಿಡಗಳನ್ನು ಹಚ್ಚಿದ್ದಾರೆ. ಅವುಗಳಲ್ಲಿ ವಿವಿಧ ಜಾತಿಯ ಹಣ್ಣಿನ ಗಿಡಗಳೂ ಬೇಗನೆ ಬೆಳೆಯುವ ಇತರ ಗಿಡಗಳೂ ಇವೆ. ಹಣ್ಣಿನ ಗಿಡಗಳಲ್ಲಿ ಮಾವು, ಸೀತಾಫಲ, ರಾಮಫಲ, ಚಿಕ್ಕು, [illegible] ಮುಂತಾದವುಗಳೂ ಇತರ ಗಿಡಗಳಲ್ಲಿ ಹುಣಸಿ, ಬೇವು, ಜಾಲಿ, ಸಾಗುವಾನಿ ಇತ್ಯಾದಿ ಉಪಯುಕ್ತ ಗಿಡಗಳೂ ಇವೆ.

ಈಶ್ವರಪ್ಪನವರು ಈಗಾಗಲೆ ಪ್ರಗತಿಶೀಲ ಒಕ್ಕಲಿಗ ರೆಂದು ಗಣಿಸಲ್ಪಡುತ್ತಿದ್ದರೂ ತಮ್ಮ ಹೊಲವನ್ನು [illegible] ಅತ್ಯಾಧುನಿಕ ಹಾಗು ಶಾಸ್ತ್ರೀಯ ಪದ್ಧತಿಗಳಿಂದ [illegible] ಬೇಕೆಂದು ಅವರ ಹಂಬಲ. [illegible] ಕೈಬಿಟ್ಟು ಗೊಬ್ಬರದ ಬಳಕೆ, [illegible] ಯೋಗ ಇವುಗಳ [illegible] ಹುಟ್ಟುವಳಿ ವರುಷವರುಷಕ್ಕೂ [illegible] ಅಚ್ಚರಿಯಲ್ಲ. ಕಳೆದ ವರ್ಷ ಎಕರೆಗೆ [illegible] (ಆ ಭಾಗದ ಸರಾಸರಿ ಎಕರೆವಾರು ಹುಟ್ಟುವಳಿ [illegible] ಪೌಂಡು ಎಂಬುದನ್ನು ಗಮನಿಸಿರಿ) [illegible] ಹೇಗೆ ಪಡೆದರೆಂಬುದಕ್ಕೆ [illegible]

[illegible]

ಈಶ್ವರಪ್ಪನವರಿಗೆ [illegible] ಯಿದೆ. [illegible] ಫಲಕೊಟ್ಟು ಜೊತೆಗೆ [illegible] ಪರಿಚಯವಾಗಬಲ್ಲದು [illegible] ಅವರು ಮಾಡುವ [illegible] ದರ್ಶಕವಾಗಿದೆ. [illegible] ದ್ದಾರೆ. ಎಲ್ಲರೂ [illegible] ಈಶ್ವರಪ್ಪನವರಿಗೆ [illegible]

[illegible] ಹಣ್ಣಿನ ತೋಟದ ಒಂದು ನೋಟ. ಮನಮುಟ್ಟಿ [illegible] ಅಲ್ಲಿ ದ್ರಾಕ್ಷಿ ಬಳ್ಳಿ [illegible] ಬೆಳೆಯುತ್ತಿದೆ.

[illegible] ತಮ್ಮ [illegible] ಎತ್ತಿನ ದೊಡ್ಡ ಕಮತ [illegible]

[illegible] ಬದಿಗೆ ಹೋಗು [illegible] ಈ ಎಡೆಗಾರ ರೈತ [illegible] ಅವರ ಹೆಚ್ಚಿನ ಪರಿ [illegible] ಬಗ್ಗೆ ಹೆಚ್ಚಿನ ಅರಿವು ನಿಮಗೆ [illegible] ಈಶ್ವರಪ್ಪನಂತಹ [illegible] ಸಾಕು, ಅನ್ನ [illegible]

[illegible]

[illegible] ಪ್ರೂನಿಂಗ [illegible] ಇದ್ದು [illegible] ಪೂರ್ಣಾವಧಿ [illegible] ಒಬ್ಬರು ತಮ್ಮ [illegible] ಅವ [illegible]

ಖೇಡಾ ಜಿಲ್ಹೆಯ ಪ್ರಗತಿಶೀಲ ಒಕ್ಕಲಿಗರೊಬ್ಬರು ತಮ್ಮ ಸ್ವಂತ ಹೊಲದಲ್ಲಿ ನಡೆಸಿದ ಪ್ರಯೋಗದ ಮನ ಸೆಳೆಯುವ ಕತೆ ಇಲ್ಲಿದೆ. ಅವರು ಪಡೆದ ಸೆಜ್ಜೆಯ ಅತ್ಯುತ್ತಮ ಹುಟ್ಟುವಳಿ ಬೆರಗುಗೊಳಿಸುವಂಥದಿದೆ. ಆ ಬಗ್ಗೆ ಅವರು ಕೈಕೊಂಡ ಪ್ರಯತ್ನದ ಫಲಿತಾಂಶಗಳನ್ನು ಇಲ್ಲಿ ಲೇಖಕರು ವಿವರಿಸಿದ್ದಾರೆ.

ಲೇಖಕರು :
ಶ್ರೀ. ಎಚ್. ಎಮ್. ದೇಸಾಯಿ,
ಎಮ್. ಎಸ್ಸಿ. (ಕಾರ್ನೆಲ್)

★ ಬೇಸಿಗೆಯ ಸೆಜ್ಜೆ ★

ಖೇಡಾ ಜಿಲ್ಹೆಯಲ್ಲಿ ಸುಮಾರು ೨॥ ಲಕ್ಷ ಎಕರೆ ಭೂಮಿಯಲ್ಲಿ ಬೇಸಿಗೆಯ ಸೆಜ್ಜೆಯನ್ನು ಬೆಳೆಯಲಾಗುತ್ತಿದೆ. ಕೊರತೆಯ ವರ್ಷಗಳಲ್ಲಿ ಈ ಕ್ಷೇತ್ರ ಮೂರು ಲಕ್ಷ ಎಕರೆಗಳ ವರೆಗೂ ಹೆಚ್ಚುತ್ತದೆ. ಇದನ್ನು ಸಾಮಾನ್ಯವಾಗಿ ಸುಂಢಿಯಾ (ಕಣಿಕೆ) ಜೋಳದೊಂದಿಗೆ ಬಾವಿಯ ನೀರಿನಿಂದಾಗಲಿ, ನದಿಯ ಒಡಲುಗಳಲ್ಲಿ ಯಾತದ ನೀರಾವರಿಯಿಂದಾಗಲಿ ಬೆಳೆಯುತ್ತಾರೆ. ಆಯಿಲ ಎಂಜಿನುಗಳು ಬಳಕೆಯಲ್ಲಿ ಬಂದಂದಿನಿಂದ ಇದರ ಕ್ಷೇತ್ರ ಮತ್ತಷ್ಟು ಹೆಚ್ಚಾಗಿದೆ. ಖೇಡಾ ಜಿಲ್ಹೆಯಲ್ಲಿ ೩,೦೦೦ ಆಯಿಲ ಎಂಜಿನುಗಳಿದ್ದು ಅವುಗಳಲ್ಲಿ ನೂರಕ್ಕೆ ೮೦ ರಷ್ಟು ಚಾರೋತರ ಭಾಗದಲ್ಲಿಯೇ ಇವೆ. ಆನಂದ, ಬೋರಸಾದ, ಪೆಟಲಾಡ, ಹಾಗು ನಡಿಯಾದ ತಾಲೂಕಿನ ಕೆಲಭಾಗ ಕೂಡಿ ಆದ ಪ್ರದೇಶಕ್ಕೆ ಚಾರೋತರ ಭಾಗವೆನ್ನುತ್ತಾರೆ.

ಉತ್ಸಾಹಿ ಪ್ರಯತ್ನಗಳು

ಪಂಪುಗಳನ್ನಿಟ್ಟ ಕೆಲವರು ಸ್ವತಃ ಬೇಸಾಯ ಮಾಡುವ ರೈತರಾಗಿದ್ದು ಉತ್ಸಾಹಿಗಳೂ ಪ್ರಗತಿಶೀಲರೂ ಆದ ಅವರು ಪರಮಾವಧಿ ಹುಟ್ಟುವಳಿ ಪಡೆಯುವ ಬಗ್ಗೆ ಅನೇಕಾನೇಕ ಪ್ರಯೋಗಗಳನ್ನು ನಡೆಸುತ್ತಲೇ ಇರುತ್ತಾರೆ. ಇಂಥ ಅನೇಕರ ಪ್ರಯತ್ನದ ಫಲಿತಾಂಶ ಯಾರ ಗಮನಕ್ಕೂ ಬಾರದೆ ಹೋಗುವದುಂಟು. ಉತ್ಸಾಹದ ಭರ ಇಳಿದ ನಂತರ ಅಥವಾ ಮುಂದಿನ ವರ್ಷ ಬೇರೆ ಬೆಳೆ ತೆಗೆದುಕೊಳ್ಳುವ ಮೂಲಕ ಪ್ರಯೋಗಗಳು ಮುಂದುವರಿಯುವದಿಲ್ಲ. ನಮ್ಮ ಹಳ್ಳಿಗಳಲ್ಲಿ ಸುಸಂಘಟಿತ ಮುಂದಾಳುತನವಿಲ್ಲದಿರುವದರಿಂದ ಒಕ್ಕಲತನ ಖಾತೆಯ ಮುಖಾಂತರ, ಪತ್ರಿಕೆಗಳ ಮುಖಾಂತರ ಇಲ್ಲವೆ ಇತರ ರೀತಿಯಲ್ಲಿ ಇಂಥ ಪ್ರಯೋಗದ ಪರಿಣಾಮಗಳನ್ನು ಇತರ ರೈತ ಬಾಂಧವರಿಗೆ ತಿಳಿಸುವದು ಸಾಧ್ಯವಾಗುವದಿಲ್ಲ. ಇಂಥ ಸಂಗತಿಗಳನ್ನು ಗೊತ್ತು ಹಚ್ಚಿ ಅವನ್ನು ಸುದ್ದಿಯ ರೂಪದಲ್ಲಿ ಪ್ರಸಿದ್ಧಿಸುವ ಕಾರ್ಯದಲ್ಲಿ ಸ್ಥಾನಿಕ ವೃತ್ತ ಪತ್ರಗಳು ಮುಂದರಿಯುತ್ತಿಲ್ಲ. ಒಕ್ಕಲತನ ಖಾತೆಯ ಜಿಲ್ಹಾ ಸಿಬ್ಬಂದಿಗೆ ಇಂಥ ಸುದ್ದಿ ತಿಳಿದರೆ ಅವರು ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಿ ಆ ಭಾಗದ ರೈತರಿಗೆ ಅದರ ಪರಿಚಯ ಮಾಡಿಕೊಡುತ್ತಾರೆ.

ಖೇಡಾ ಜಿಲ್ಹೆಯಲ್ಲಿಯ ಇಂಥ ಒಂದು ಸಾಹಸದ ಕತೆ ಅಲ್ಲಿಯ ಜಿಲ್ಹಾ ಒಕ್ಕಲತನ ಅಧಿಕಾರಿಗಳ ಮುಖಾಂತರ ನನಗೆ ತಿಳಿಯಿತು. ಅದು ತುಂಬಾ ಮನ ಸೆಳೆಯುವಂಥದಿದೆ.

ಒಂದು ಯಶಸ್ವಿ ಪ್ರಯೋಗ

ಶ್ರೀ. ಗಿರಧರ ಭಾಯಿ ನೋತಿ ಭಾಯಿ ಪಟೇಲ ಎಂಬವರು ನಡಿಯಾದ ತಾಲೂಕಿನ ಕೇರಿಯಾವಿ ಎಂಬಲ್ಲಿಯ ಒಬ್ಬ ದೊಡ್ಡ ಜಮೀನದಾರರು. ಅವರು ಸುಮಾರು ೬೫ ಬಿಘೆ ಭೂಮಿಯನ್ನು ಪಂಪಿನ ನೀರಾವರಿಯಿಂದ ಸ್ವಂತ ಸಾಗು ಮಾಡುತ್ತಾರೆ. ಈ ಸಲದ ಬೇಸಿಗೆ ಹಂಗಾಮಿನಲ್ಲಿ ಅವರು ತಾವಾಗಿಯೆ ಒಂದು ಪ್ರಯೋಗ ಮಾಡಿ ನೋಡಿ ಒಂದು ಎಕರೆ ಭೂಮಿಯಲ್ಲಿ ಬೇಸಿಗೆ ಬತ್ತದ ಪರಮಾವಧಿ ಹುಟ್ಟುವಳಿ ಪಡೆಯುವ ಕ್ರಮ ಕಂಡು ಹಿಡಿಯಬೇಕೆಂದು ನಿರ್ಧರಿಸಿದರು. ಈ ಪ್ರಯೋಗದ ಫಲವಾಗಿ ಅವರು ಎಕರೆಗೆ ೧೩೩ ಮಣ—ಅಂದರೆ ೫,೩೨೦ ಪೌಂಡು-ಸೆಜ್ಜೆ ಹಾಗು ೨,೬೦೦ ಪೆಂಡಿ ಕಣಿಕೆಯನ್ನು ಪಡೆದರು. ನಿಜವಾಗಿಯೂ ಇದು ಒಳ್ಳೆಯ ಹುಟ್ಟುವಳಿ. ಅಲ್ಲಿಯ ಸಾಮಾನ್ಯ ಬೇಸಿಗೆ ಸೆಜ್ಜೆಯ ಹುಟ್ಟುವಳಿಯ ३-४ ಪಟ್ಟು ಹಾಗು ಮಳೆಗಾಲದ ಸೆಜ್ಜೆಯ ಹುಟ್ಟುವಳಿಯ ಆರೇಳು ಪಟ್ಟಿನಷ್ಟು ಇದೆ ಈ ಉತ್ಪಾದನೆ. ಶ್ರೀ. ಪಟೇಲರು ಅನುಸರಿಸಿದ ಪದ್ಧತಿಯು ಈ ರೀತಿ ಇದೆ.

ಪ್ರಾರಂಭಿಕ ಸಾಗುವಳಿ

ಹಿಂದಿನ ವರ್ಷ ಆ ಭೂಮಿಯಲ್ಲಿ ಕೋದ್ರಾ ಮಿಶ್ರಣವನ್ನು ಬಿತ್ತಲಾಗಿತ್ತು. ಆಗ ಗೊಬ್ಬರ ಹಾಕಿದ್ದಿಲ್ಲ. ಚಳಿಗಾಲದಲ್ಲಿ ಎಕರೆಗೆ ೧೦೦ ಚಕ್ಕಡಿ ದಡ್ಡೀ ಗೊಬ್ಬರ ಹಾಕಿ ಅದನ್ನು ಚೆನ್ನಾಗಿ ಮಣ್ಣಿನಲ್ಲಿ ಬೆರೆಸಲು ಜವಾರಿ ರೆಂಟೆಯಿಂದ ಐದು ಸಲ ನೇಗಿಲು ಹೊಡೆಯಲಾಯಿತು.

ಬಿತ್ತಿಗೆ

ಬಿತ್ತುವ ಮೊದಲು ನೀರು ಹಾಯಿಸಿ ಫೆಬ್ರುವರಿ ೧೦, ೧೯೫೨ರಂದು ಉದ್ದಕ್ಕೂ ಅಡ್ಡಕ್ಕೂ ೧೮ ಇಂಚು ಅಂತರದ ಮೇಲೆ ಗುರುತು ಹಾಕಿ ಒಂದೊಂದು ಸ್ಥಳದಲ್ಲಿ ಜವಾರಿ ಸಜ್ಜೆಯ ೪-೬ ಬೀಜಗಳನ್ನು ಊರಲಾಯಿತು. ಬೀಜಗಳು ಮೊಳಕೆಯೊಡೆದ ನಂತರ ಸಸಿಗಳನ್ನು [illegible] ಒಂದೊಂದು ಸ್ಥಳದಲ್ಲಿ ೨-೩ ಸಸಿಗಳನ್ನಷ್ಟೆ ಬಿಡಲಾಯಿತು. ಬೀಜದ ಪ್ರಮಾಣ ಎಕರೆಗೆ ೫ ಪೌಂಡು ಬಿತ್ತು. ಬಿತ್ತಿದ ನಂತರ ನೀರಾವರಿ ಅನುಕೂಲತೆಗಾಗಿ ಹೊಲದಲ್ಲಿ ಉದ್ದ ಮಡಿಗಳನ್ನು (೬೦ ಅಡಿ ಉದ್ದ ೧೨ ಅಡಿ ಅಗಲ) ಮಾಡಲಾಯಿತು.

ಉಪಚಾರ

ಮೊಳಕೆಯೊಡೆದ ನಂತರ [illegible] ಗಳ ನಂತರ ಮೊದಲನೆಯ ಸಲ ನೀರು ಹಾಯಿಸಲಾಯಿತು. ಮುಂದೆ ಎಂಟು ದಿನಗಳಿಗೊಮ್ಮೆಯಂತೆ ನೀರು [illegible] ದರು. ಕೊನೆಯ ಮೂರು ನೀರಾವರಿಗಳನ್ನು ಮಾತ್ರ ನಾಲ್ಕು ನಾಲ್ಕು ದಿನ ಅಂತರ ಬಿಟ್ಟು [illegible]. ಕೊಯ್ಯಲು ಒಂದು ವಾರವಿರುವಾಗ ನೀರು [illegible] ದನ್ನು ನಿಲ್ಲಿಸಲಾಯಿತು. ಒಟ್ಟು ೧೫ ಸಲ ನೀರು ಹಾಯಿಸಿದರು, ನಾಲ್ಕು ಸಲ ಎಡೆ ಹೊಡೆದರು. [illegible] ಮರಿ ಬಿಡಲು ಪ್ರಚೋದನೆ [illegible] ಒಮ್ಮೆ [illegible] ಹೊಡೆಯಲಾಯಿತು.

ಬೆಳವಣಿಗೆ

ಬೆಳೆಯು ನಿಲವು ೮ ಅಡಿ ಎತ್ತರವಿತ್ತು. ಒಂದೊಂದು ಗಡ್ಡೆಗೆ ಸರಾಸರಿ ೨೫ ಮರಿಗಳಿದ್ದವು. [illegible] ಮರಿಗಳಿದ್ದ ಗಡ್ಡೆಗಳೂ ಅನೇಕವಿದ್ದವು. [illegible] ಚೆನ್ನಾಗಿ ತುಂಬಿಕೊಂಡಿದ್ದ [illegible] ಸ್ಥಳಗಳಲ್ಲಿ ತೀರ [illegible] ಮಾತಾಗಿದೆ. [illegible] ವಲ್ಲದೆ ಚೆನ್ನಾಗಿ ತುಂಬಿಕೊಂಡಿದ್ದವು. [illegible] ರುಜಿನ ಅಥವಾ ಕ್ರಿಮಿಕೀಟಗಳ [illegible]

ಉತ್ಪಾದನೆ

ಮೇ ಮಧ್ಯದ ಸುಮಾರಿಗೆ ([illegible] ತಿಂಗಳ ಮೇಲೆ) ಬೆಳೆಯನ್ನು ಕೊಯ್ದು [illegible] ಮಣ (೪೦ ಪೌಂಡಿನ ಮಣ) ಕಾಳು ಹಾಗು ೨,೭೦೦ ಪೆಂಡಿ ಕಣಿಕೆ ಉತ್ಪಾದನೆ ದೊರೆಯಿತು.

ಈ ಎಲ್ಲ ವಿವರಗಳಿಂದ ಕಂಡುಬರುವ ಈ ಕೆಳಗಿನ ಕೆಲವು ಸಂಗತಿಗಳು ಪ್ರಾಮುಖ್ಯವಾಗಿ ಮನಸೆಳೆಯುವಂಥವಿವೆ:

ಜವಾರಿ ಜಾತಿಯ ಸಜ್ಜೆಯು ಮುಖ್ಯವಾಗಿ ಮಳೆಗಾಲದ ಸಜ್ಜೆಯಾಗಿದ್ದು ಅದನ್ನೆ ಬೇಸಿಗೆಯಲ್ಲೂ ಬಿತ್ತುತ್ತಾರೆ. ಆದರೆ ಬೇಸಿಗೆಯಲ್ಲಿ ಬಿತ್ತಲು ಅದು ಅಯೋಗ್ಯವಿದೆ. ಮರಿಗಳಿಗೆ ಬಿಟ್ಟ ತೆನೆಗಳು ಕೂಡ ಚೆನ್ನಾಗಿ ಕಾಳು ತುಂಬಿಕೊಳ್ಳುವಂಥ ಒಂದು ಹೊಸ ಜಾತಿಯನ್ನೆ ಬೇಸಿಗೆಗಾಗಿ ಹುಡುಕುವದು ಅವಶ್ಯವಿದೆ.

ಗೊಬ್ಬರ

ಗೊಬ್ಬರ ಹಾಕಿದ್ದರ ಸಂಪೂರ್ಣ ಲಾಭ ದೊರೆಯಬೇಕಾದರೆ ಮುಂಚಿನ ಮಳೆಗಾಲದಲ್ಲಿಯೆ ಬೇಸಿಗೆ ಸಜ್ಜೆಗಾಗಿ ದಡ್ಡೀ ಗೊಬ್ಬರವನ್ನು ಹಾಕಬೇಕು. ಬೇಸಿಗೆ ಸಜ್ಜೆಗೆ ಕೃತ್ರಿಮ ಗೊಬ್ಬರ ಹಾಕುವದಿದ್ದರೆ ಅದನ್ನು ಸೇಂಗಾ ಹಿಂಡಿ ಹಾಗು ಅಮೋನಿಯಮ ಸಲ್ಫೇಟಿನ ಮಿಶ್ರಣ ರೂಪದಲ್ಲಿ ಮೇಲ್ಗೊಬ್ಬರವೆಂದು [illegible]. ಬಿತ್ತಿಗೆಯ ಕಾಲಕ್ಕೆ ಸುಪರ್ ಫಾಸ್ಫೇಟ ಹಾಕಿದರೆ ಆಗುವ ಪರಿಣಾಮವೇನೆಂಬುದನ್ನು ಪ್ರಯೋಗ ಮಾಡಿ ನೋಡಬೇಕು.

ಒಂದೊಂದು ಸ್ಥಳದಲ್ಲಿ ಹೆಚ್ಚಿಗೆ ಬೀಜಗಳನ್ನು ಬಿತ್ತಿದರೆ [illegible] ಹೆಚ್ಚು ಸಸಿಗಳನ್ನು ಕಾಯಲು [illegible] ಇದರಿಂದ ಮುಂದೆ ಚೆನ್ನಾಗಿ [illegible] ಗಡ್ಡೆಯಲ್ಲೂ [illegible] ಸಸಿಗಳನ್ನು ತೆಗೆದೊಗೆದು [illegible] ಅವಕಾಶ ಮಾಡಿ [illegible]

[illegible]

ಬ್ರಿಟನ್ನದಲ್ಲಿ ದನಗಳ ಕಾಲುಬೇನೆ ಬಾಯಿಬೇನೆ ಹಬ್ಬಿತ್ತೆಂದರೆ ಅದನ್ನು ತಡೆಯಲು ಒಳ್ಳೆ ಕಠೋರ ಮುಂಜಾಗ್ರತೆಗಳನ್ನು ಕೈಕೊಳ್ಳುತ್ತಾರೆ. ಇಲ್ಲಿ ಕೆಲಸಗಾರರು ಹೊಲದಲ್ಲಿ ಸೇರುವ ಮೊದಲು ತಮ್ಮ ಬೂಟುಗಳಿಗೆ ಕ್ರಿಮಿನಾಶಕ ಹೊಡೆಯುತ್ತಿದ್ದಾರೆ.

ಕಾಲುಬೇನೆ - ಬಾಯಿಬೇನೆಯ ನಿಯಂತ್ರಣ

ಕಳೆದ ನವೆಂಬರ ತಿಂಗಳಿಂದ ಬ್ರಿಟನ್ನಿನಲ್ಲಿ ಕಾಲುಬೇನೆ-ಬಾಯಿಬೇನೆಯ ಪಿಡುಗು ಹಬ್ಬಿದೆ. ೫೫೦ ಸ್ಥಳಗಳಲ್ಲಿ ಪಿಡುಗು ಹಬ್ಬಿತು ಹಾಗು ಅದರ ಹಬ್ಬುಗೆಯನ್ನು ತಡೆಯಲು ೫೫,೦೦೦ ದನಕರುಗಳನ್ನು ಕಡಿಯಬೇಕಾಯಿತು.

ಈ ಬೇನೆ ತಲೆದೋರಿದೊಡನೆ, ಸಂಬಂಧಿಸಿದ ಫಾರ್ಮಿನ ಸುತ್ತುಮುತ್ತಲಿನ ಕೆಲ ಕ್ಷೇತ್ರವನ್ನು "ರೋಗ ಪೀಡಿತ ಪ್ರದೇಶವೆಂದು" ಸಾರಲಾಗಿದೆ. ದನಕರುಗಳ ಸಾಗಾಟವನ್ನು ನಿರ್ಬಂಧಿಸಿ ಬೇನೆ ತಗಲಿದ ದನಗಳನ್ನು ಸಂಹರಿಸಿ ಬೇನೆಯ ಸಂಸರ್ಗವಾದ ದನಕರುಗಳನ್ನೆಲ್ಲ ಬೇರ್ಪಡಿಸಲಾಗುತ್ತದೆ.

ಅತ್ಯಂತ ಸಾಂಸರ್ಗಿಕವಾದ ಈ ಬೇನೆಯನ್ನು ನಿಯಂತ್ರಿಸುವ ಆಂದೋಲನದಲ್ಲಿ ಇಂಗ್ಲಂಡ ಅಗ್ರಗಾಮಿಯಾಗಿದೆ. [illegible]ದಲ್ಲಿರುವ ಸಂಶೋಧನ ಕೇಂದ್ರದಲ್ಲಿ ಈ ಬೇನೆಯ ಬಗ್ಗೆ ಸಂಶೋಧನೆ ನಡೆದಿದೆ. ಈ ಸಂಸ್ಥೆ ಇಡೀ ಜಗತ್ತಿಗೆ ಚುಚ್ಚುಮದ್ದನ್ನು ಪೂರೈಸುತ್ತದೆ.

ಹೆಚ್ಚು ಒಳ್ಳೆಯ ಪದ್ಧತಿಗಳನ್ನು ಹುಡುಕುವ ಪ್ರಯತ್ನ ಎಡೆಬಿಡದೆ ನಡೆದಿದೆ. ಆದರೆ ನಿಯಂತ್ರಣದ ಪರಿಪೂರ್ಣ ಉಪಾಯ ದೊರೆಯುವ ವರೆಗೆ, ಬೇನೆ ತಗಲಿದ ದನಗಳನ್ನು ಸಂಹರಿಸುವದೆ ಅದರ ನಿಯಂತ್ರಣೆಗೆ ಉತ್ತಮ ಉಪಾಯ ಬ್ರಿಟನ್ನಿನ ತಜ್ಞರ ಅಭಿಪ್ರಾಯವಾಗಿದೆ.

ವೇಳೆಯು ಭಿನ್ನ ಭಿನ್ನ ರೈತರ ಬೇರೆ ಬೇರೆ ಪ್ರಯೋಗಗಳ ಅನುಭವದಿಂದ ಉಳಿಯುವದರಲ್ಲಿ ಸಂದೇಹವಿಲ್ಲ.

ಇಷ್ಟೇ ಅಲ್ಲದೆ ಇಂಥ ರೈತರ ಅನುಭವಗಳಿಂದ ಸರಕಾರಿ ಫಾರ್ಮುಗಳಲ್ಲಿ ಶಾಸ್ತ್ರೀಯವಾಗಿ ಈ ಪ್ರಯೋಗಗಳನ್ನು ನಡೆಸಿ ನೋಡಲು ಅಮೌಲ್ಯ ಸಹಾಯವಾಗುತ್ತದೆ.

ನಮ್ಮ ದೇಶದ ಭೂ ಪರಿವರ್ತನೆಯ ಕಾರ್ಯಕ್ರಮದಲ್ಲಿ ಭೂಮಿಯ ಉತ್ಪಾದನಾ ಶಕ್ತಿಯನ್ನು ಹೆಚ್ಚಿಸುವ ಕಾರ್ಯಕ್ಕೆ ಮಹತ್ವದ ಸ್ಥಾನವಿದೆ. ಸರಕಾರಿ ಸಂಸ್ಥೆಗಳು, ಶಾಸ್ತ್ರಜ್ಞರು ಹಾಗು ರೈತರು ತಂತಮ್ಮ ಅನುಭವಗಳನ್ನು ಒಂದುಗೂಡಿಸಿದರೆ ಈ ಪ್ರಯೋಗಗಳಿಂದ ವ್ಯವಹಾರ್ಯ ಬೇಸಾಯ ಪದ್ಧತಿಗಳನ್ನು ರೂಪಿಸುವದು ಸುಲಭಸಾಧ್ಯವಾಗುತ್ತದೆ. ಇಂಥ ಸಹಕಾರದಿಂದಲೇ ನಮ್ಮ ಸಾಧನ ಸಾಮಗ್ರಿಗಳ ಸಂಪೂರ್ಣ ಲಾಭವನ್ನು ನಾವು ಪಡೆಯಬಲ್ಲೆವು.

[illegible]

ತಂಬಾಕು ಬೆಳೆಯುವವರ ಸಹಕಾರಿ ಸಂಘ

ಟಾಂಗಾನ್ಯಿಕಾದ [illegible]
ತಂಬಾಕು ಹದ [illegible]
ಕಟ್ಟಲ್ಪಟ್ಟಿದೆ. [illegible]
ಕಿನ ಎಲೆಗಳನ್ನು [illegible]

ಈ [illegible]
ಮೆಯ ಅಭಿವೃದ್ಧಿ [illegible]
೧೯೫೦ ರಲ್ಲಿ [illegible]
ತಂಬಾಕಿನ [illegible]
ಈಗ [illegible]

ಆಫ್ರಿಕೆಯ [illegible]
ಯನ್ನು ಒಂದು [illegible]
ಮಾರುತ್ತಾರೆ. [illegible]

[illegible] ಸಹಕಾರಿ ಸಂಘಗಳು [illegible]

[illegible]

ಸೋಂಗಿಯಾ ಜಿಲ್ಲೆಯಲ್ಲಿಯ ಜಡ ಪಾಶ್ಚಿಮಾತ್ಯ ತಂಬಾಕಿನ ಒಂದು ಹೊಲ. ೪,೦೦೦ ದಿಂದ ೪,೫೦೦ ಅಡಿ ಎತ್ತರದ ಮೇಲೆ ಇದೆ. ಹೊಲದಲ್ಲಿ ಕೊಯ್ಲು ನಡೆದಿದೆ. ಒಕ್ಕಲಿಗರಿಗೆ ತಂಬಾಕಿನ ಸಾಗುವಳಿ ಸಂಬಂಧದಲ್ಲಿ ಸಲಹೆಯನ್ನೀಯುತ್ತ ಸಂಚರಿಸುವ ಕ್ಷೇತ್ರ ಅಧಿಕಾರಿಗಳಲ್ಲೊಬ್ಬರು ಹೊಲದಲ್ಲಿ ನಿಂತಿದ್ದಾರೆ.

ನಂತರ ಮಾರಾಟಕ್ಕಾಗಿ ತಮ್ಮ ಸಂಘಕ್ಕೆ ಒಯ್ಯುತ್ತಾರೆ. ಹೀಗೆ ಒಯ್ದ ವೇಳೆಗೆ ಅವರಿಗೆ, ತಂಬಾಕಿನ ತರಗತಿ ಹಾಗು ತೂಕಗಳ ಮೇರೆಗೆ, ತುಸು ಮುಂಗಡ ಹಣ ದೊರೆಯುತ್ತದೆ. ಎಲ್ಲ ಉತ್ಪಾದನೆಯ ಮಾರಾಟವಾದ ಬಳಿಕ, ವೆಚ್ಚವನ್ನು ಮುರಿದುಕೊಂಡು "ಉಳಿದ ಹಣ"ವನ್ನು ಅವನಿಗೆ ಕೊಡಲಾಗುತ್ತದೆ.

ಆ ಜಿಲ್ಲೆಗೆ ತಂಬಾಕಿನ ಮಹತ್ವವೆಷ್ಟಿದೆಂಬುದರ ಅರಿವಾಗಬೇಕಾದರೆ ಈ ಅಂಕಿ-ಸಂಖ್ಯೆಗಳನ್ನು ನೋಡಿರಿ: ೧೯೫೦ ರಲ್ಲಿ ೫೯೨,೭೦೦-೦೦ ಶಿಲಿಂಗುಗಳನ್ನು ಮುಂಗಡವೆಂದೂ, ೬೮೫,೩೦೦-೦೦ ಶಿಲಿಂಗುಗಳನ್ನು ಮಾರಾಟದ ನಂತರ ಉಳಿದ ಹಣವೆಂದೂ ಈ ರೀತಿ ಒಟ್ಟು ೧,೨೭೮,೦೦೦ ಶಿಲಿಂಗುಗಳನ್ನು ರೈತರಿಗೆ ಕೊಡಲಾಯಿತು.

★

ತಂಬಾಕಿನ ಎಲೆಗಳ ವರ್ಗೀಕರಣ: ಎಲೆಯ ಉದ್ದಳತೆ, ರಚನೆ ಹಾಗು ಬಣ್ಣಗಳ ಮೇಲಿಂದ ತಂಬಾಕನ್ನು ವರ್ಗೀಕರಿಸಲಾಗುತ್ತದೆ. ಕೆಟ್ಟ ಎಲೆಗಳ ಬಗ್ಗೆ ವಿಶೇಷ ದಕ್ಷತೆ ವಹಿಸಲಾಗುತ್ತದೆ.

★

ಜಪಾನದಲ್ಲಿ ಅನುಸರಿಸಲಾಗುವ ಪದ್ಧತಿಯಿಂದ ಬತ್ತವನ್ನು ಬೆಳೆಸುವ ಪ್ರಯೋಗಗಳು ಮುಂಬಯಿ ರಾಜ್ಯದಲ್ಲಿ ಯಶಸ್ವಿಯಾಗಿವೆ. ಠಾಣೆ ಜಿಲ್ಹೆಯ ಕೋಸಬಾದ ಒಕ್ಕಲತನ ಶಾಲೆ ಹಾಗು ಬೋರಿವಿಲಿಯಲ್ಲಿಯ ಕೋರಾ ಗ್ರಾಮೋದ್ಯೋಗ ಕೇಂದ್ರಗಳ ಫಾರ್ಮುಗಳಲ್ಲಿ ಕಳೆದ ಎರಡು ಮೂರು ವರ್ಷಗಳಿಂದ ಈ ಬಗ್ಗೆ ಪ್ರಾಥಮಿಕ ಪ್ರಯೋಗಗಳು ನಡೆದಿವೆ. ಕಳೆದ ತಿಂಗಳು ಈ ಸ್ಥಳಗಳಿಗೆ ಮುಂಬಯಿ ಕಂದಾಯ, ಒಕ್ಕಲತನ ಹಾಗು ಅರಣ್ಯ ಖಾತೆಗಳ ಮಂತ್ರಿ ಶ್ರೀ. ಬಿ. ಎಸ್. ಹಿರೆಮಠರು ಭೆಟ್ಟಿ ಕೊಟ್ಟಾಗ ಅಲ್ಲಿಯ ಬತ್ತದ ಬೆಳೆ ಹಾಗು ಅದನ್ನು ಬೆಳೆಯುವಲ್ಲಿ ಅನುಸರಿಸಲಾದ ಪದ್ಧತಿ



ಜಪಾನಿ ಪದ್ಧತಿಯ ಬತ್ತದ ಸಾಗುವಳಿ

ಗಳು ಅವರ ಗಮನವನ್ನು ಸೆಳೆದವು. ಮೇಲಿನ ಚಿತ್ರದಲ್ಲಿ ಕೋಸಬಾದ ಶಾಲೆಯಲ್ಲಿ ಪ್ರಥಮ ಬಾರಿ ಸಾಗು ಮಾಡಲ್ಪಟ್ಟ ಗದ್ದೆಯಲ್ಲಿಯ ಬತ್ತದ ಕೃಷಿಯನ್ನು ಮಂತ್ರಿಗಳು ವೀಕ್ಷಿಸುತ್ತಿದ್ದಾರೆ. ನಡುವಿನ ಚಿತ್ರದಲ್ಲಿ [illegible] ಪದ್ಧತಿಯನ್ನು [illegible] ಹಾಗು [illegible] ರೀತಿಯನ್ನು ಶ್ರೀ. [illegible] ವಿವರಿಸಲಾಗುತ್ತಿದೆ. ಕೆಳಗಿನ ಚಿತ್ರದಲ್ಲಿ ಮಂತ್ರಿಗಳು [illegible] ಕೋಸ್ಬಾದ ಫಾರ್ಮಿನಲ್ಲಿ [illegible] ವೀಕ್ಷಿಸುತ್ತಿದ್ದಾರೆ. ಈ [illegible] ಒಕ್ಕಲಿಗರ [illegible] ಪ್ರಾತ್ಯಕ್ಷಿಕೆಗಳನ್ನು [illegible]

ರೈತರ ನೆನಪಿಗಾಗಿ . . . . .

ತಂಬಾಕಿನ ಬೇಸಾಯದ ಮೇಲಿನ ನಿರ್ಬಂಧ

ಬೆಳಗಾವಿ ಕೊಲ್ಹಾಪುರ, ಉತ್ತರ ಹಾಗು ದಕ್ಷಿಣ ಸಾತಾರೆ ಜಿಲ್ಹೆಗಳಲ್ಲಿಯ ಕೆಲ ಹಳ್ಳಿಗಳಲ್ಲಿ ತಂಬಾಕು ಬೆಳೆಯಿಸುವ ಪರಿಮಿತಿಯನ್ನು ಒಕ್ಕಲಿಗರ ಹಿಡುವಳಿಯ ೩ದ ವರೆಗೆ ಹೆಚ್ಚಿಸಲಾಗಿದೆ.

ಬೆಳಗಾವಿ ಜಿಲ್ಹೆಯಲ್ಲಿಯ ಹಳ್ಳಿಗಳು ಈ ಕೆಳಗಿನಂತಿವೆ:

ಚಿಕ್ಕೋಡಿ ತಾಲೂಕು: ಸುಳಗಾಂವ, ಮತ್ತಿವಾಡೆ, ಹದನಾಳ, ಭಾಟನಾಗನೂರ, ಕುರುಳಿ, ಸೌಂದಲಗ, ಕೊಂಗನೋಳಿ, ಹಂಚಿನಾಳ, ಅಡಿ, ಬೇನಾಡಿ, ಕುನ್ನೂರ, ಮಂಗೂರ, ಬಾರವಾಡ, ಕರಡಗೆ, ಭೋಜ, ಶಿರದವಾಡ, ಜಾನವಾಡ, ಬೋರಗಾವ, ಕಸ್ನಾಳ, ಮನಕಾಪುರ, ಸದಲಗಾ, ಮಲ್ಲಕವಾಡ, ಬೆಡಿಕಿಹಾಳ, ನೇಜ, ಗಳತಗಿ, ಮಮದಾಪುರ, ಅಕ್ಕೋಳ, ಪಡ್ಲಿಹಾಳ, ಲಖಮಾಪುರ, ನಿಪ್ಪಾಣಿ, ಜಾಗನೂರ, ಯಮಗರನಿ, ಜಾತ್ರಾಟ, ಸಿದ್ನಾಳ, ಹುನ್ನರಗಿ, ಬುದಲಮುಖಿ, ಪಾಂಗೇರಿ, ಶೇಂದೂರ, ಗೊಂಡಿಕುಪ್ಪಿ, ತಾವಡಿ, ಗವಾಣಿ, ಯರನಾಳ, ಶಿರಗುಪ್ಪಿ, ವಾಳ್ಕಿ, ಪಟ್ಟಣಕುಡಿ, ರಾಮಪುರ, ಪಾಂಗೀರೆ, ಪೂರಣವಾಡಿ, ಚಿಕ್ಕಲ್‌ವಾಳ, ಖಡಕಲಾಟ, ಶಿರಗಾವ, ನವಲಹಾಳ, ನಾಹಿಂಗ್ಲಜ, ಕೋತಾಳಿ, ಗಿರಗಾವ, ಸಂಕನವಾಡಿ, ಮಾಂಜರಿ, ಎಕ್ಸಂಬಾ, ಚಿಂಚುಣಿ, ಕಲ್ಲೋಳ, ಯಡೂರ, ಚಂದೂರ, ಅಂಕಲಿ, ಇಂಗಟಿ, ಮತ್ತು ನನದಿ.

ಹುಕ್ಕೇರಿ ತಾಲೂಕು: ಕಣಗಲೆ, ಕರಜಗೆ, ಬಾಡ, ಹರಗಾಪೂರ, ಹಿಟ್ನೆ, ಶೇಕಿನ ಹೊಸೂರ, ಕೋಯನಕೆಂ, ಹೊನ್ನಿಹಳ್ಳಿ, ಸೋಲಾಪುರ, ಸಂಕೇಶ್ವರ, ಅಂಕಲೆ, ನಿಡಸೋಶಿ, ಕಮತನೂರ, ನೇರಲಿ, ಎಲಿಮುನೋಳಿ, ಹುಕ್ಕೇರಿ, ಯರನಾಳ, ಹೆಬ್ಬಾಳ ಮತ್ತು ಅಮ್ಮಣಗಿ.

ಅಥಣಿ ತಾಲೂಕ: ಕುಸನಾಳ, ಶಹಾಪುರ ಮತ್ತು ಸಿರಗುಪ್ಪಿ.

ಈ ಮೊದಲು ಒಕ್ಕಲಿಗರ ಹಿಡುವಳಿಯ ೨ದಷ್ಟು ಭಾಗದಲ್ಲಿ ಮಾತ್ರ ತಂಬಾಕು ಬೆಳೆಯಿಸಬಹುದೆಂದು ನಿರ್ಬಂಧಿಸಲಾಗಿತ್ತು.

ಹೊಸ ಪ್ರತಿಬಂಧಕಾಜ್ಞೆಯನ್ನು ಮುಂಬಯಿ ಸರಕಾರದ ಗೆಝೆಟಿನ ಭಾಗ ೪-ಬದ ಸಪ್ಟೆಂಬರ ೫, ೧೯೫೭ರ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಲಾಗಿದ್ದು, ಅದು ಆ ತಾರೀಕಿನಿಂದ ಒಂದು ವರುಷದ ವರೆಗೆ ಅಮಲಿನಲ್ಲಿರುವದು.

* * * *

ಒಕ್ಕಲತನ ಹುಟ್ಟುವಳಿ ಪೇಟೆ ನಿಯಮಾವಳಿ ತಿದ್ದುಪಡಿ

ಮುಂಬಯಿ ಒಕ್ಕಲತನ ಹುಟ್ಟುವಳಿ ಪೇಟೆಗಳ ನಿಯಮಾವಳಿ (೧೯೪೧)ಯನ್ವಯ ಲೈಸೆನ್ಸ ನಿರಾಕರಣೆ ರದ್ದತಿ ಹಾಗು ತಡೆ ಹಿಡಿಯುವಿಕೆಯ ಸಂಬಂಧದಲ್ಲಿ ಅನುಸರಿಸಲಾಗುವ ಕ್ರಮ ಮತ್ತು ಇಂಥ ನಿರ್ಣಯ ಅಥವಾ ಆಜ್ಞೆಗಳ ವಿರುದ್ಧ ಮನವಿ ಮಾಡಿಕೊಳ್ಳುವ ಕ್ರಮವನ್ನು ಹಾಕಿಕೊಡಲು ನಿಯಮಾವಳಿಯಲ್ಲಿ ತಿದ್ದುಪಡಿ ಮಾಡಲಾಗಿದ್ದು, ಅದನ್ನು ಮುಂಬಯಿ ಸರಕಾರದ ಗೆಝೆಟಿನ ಭಾಗ ೪-ಬದ ಆಗಸ್ಟ ೨೧ರ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ.

ಈ ತಿದ್ದುಪಡಿಯು ೬೭-ಅ, ಮತ್ತು ೬೫-ಬ ಎಂಬುವ ಎರಡನೆ ಹೊಸ ನಿಯಮಗಳನ್ನೂ ಸೇರಿಸುತ್ತದೆ. ೬೭ ಅ, ನಿಯಮದನ್ವಯ ಇಂಥ ಲೈಸೆನ್ಸು ನಿರಾಕರಣೆ, ರದ್ದತಿ ಇಲ್ಲವೆ ತಡೆ ಹಿಡಿಯುವಿಕೆಯ ಕುರಿತಿರುವ ನಿರ್ಣಯ ಇಲ್ಲವೆ ಆಜ್ಞೆಯನ್ನು ಸಂಬಂಧಿಸಿದವರಿಗೆ ಪ್ರತ್ಯಕ್ಷವಾಗಿ ಇಲ್ಲವೆ ರಜಿಸ್ಟರ್ಡ ಪತ್ರದ ಮೂಲಕ ಕಳಿಸಬೇಕೆಂದಿದೆ. ೬೭-ಬ, ನಿಯಮದನ್ವಯ ಇಂಥ ನಿರ್ಣಯ ಇಲ್ಲವೆ ಆಜ್ಞೆಯ ವಿರುದ್ಧ ಕಲೆಕ್ಟರರು ಇಲ್ಲವೆ ಅವರಿಂದ ಅಧಿಕಾರ ಪಡೆದ ಇತರ ಅಧಿಕಾರಿಗಳ ಕಡೆಗೆ ೩೦ ದಿನಗಳೊಳಗಾಗಿ ಅಪೀಲ ಮಾಡಿಕೊಳ್ಳಲು ಅವಕಾಶ ಒದಗಿಸಲಾಗಿದೆ.

* * * *

ಗ್ರಾಮ ಸುಧಾರಣಾ ಪಾರಿತೋಷಕ

೧೯೫೦-೫೧ರಲ್ಲಿ ಮಾಡಿದ ಗ್ರಾಮಸುಧಾರಣಾ ಕಾರ್ಯಕ್ಕಾಗಿ ಧಾರವಾಡ ಜಿಲ್ಹೆಯ ಶಿರಹಟ್ಟಿ ತಾಲೂಕಿನ ಮಜ್ಜೂರು ಹಾಗು ಗುಂದಗೋಳ ತಾಲೂಕಿನ [illegible] ಎಂಬ ಗ್ರಾಮಗಳಿಗೆ ಅನುಕ್ರಮವಾಗಿ [illegible] ಬಹುಮಾನ, ೧೫೦ ರೂ. ಮತ್ತು [illegible] ರೂ. ದೊರೆತಿವೆ.

ಬಹುಮಾನದ ಹಣವನ್ನು [illegible] ರೊಡನೆ ವಿಚಾರವಿನಿಮಯ ಮಾಡಿ [illegible] ವದು.

* * * *

ತುಂಡು ಹಿಡುವಳಿಗಳ [illegible]

[illegible]

ಮುಂಬಯಿ ತುಂಡು ಹಿಡುವಳಿಗಳ [illegible] ಕಾಯದೆಯನ್ವಯ [illegible] ಗಳನ್ನು ಸಂಯೋಜಿಸಿ [illegible] ಹಾಸಿನ ಹಿಡುವಳಿಗಳನ್ನಾಗಿ [illegible] ಪುರ ಜಿಲ್ಹೆಯಲ್ಲಿ ಕ್ರಮೇಣ [illegible].

ನವೆಂಬರ ೧೯೫೧ರಲ್ಲಿ [illegible] ಪ್ರಾರಂಭಿಸಲಾದ ಕಾರ್ಯ [illegible] ಗಳನ್ನು ಒಳಗೊಂಡಿದ್ದು [illegible] ಹಳ್ಳಿಗಳನ್ನು ಇತ್ತೀಚೆಗೆ ಈ ಕಾರ್ಯಕ್ಕಾಗಿ [illegible] ಲಾಗಿದೆ.

ಅಲ್ಲದೆ [illegible] ಮೂರು ಹಳ್ಳಿಗಳಲ್ಲಿಯ ಕಾರ್ಯ [illegible] ವಾಗಿದ್ದು, ಹೊಲದ ಒಡೆಯರ ಸ್ವಾಧೀನಕ್ಕೆ ಸಂಯೋಜಿ[illegible] ಹಿಡುವಳಿಗಳನ್ನು ಒಪ್ಪಿಸಲಾಗಿದೆ. ಮತ್ತೆ ಮೂರು ಹಳ್ಳಿ[illegible]ಲ್ಲಿಯ ಸಂಯೋಜನ ಕಾರ್ಯ ಮುಗಿದಿದೆಯಾದರೂ ಹೊ[illegible]ದೊಡೆಯರ ಕೆಲ ಸೂಚನೆಗಳ ವಿಚಾರಣೆಯಾಗುವ ವ[illegible] ಅವುಗಳನ್ನು ವಹಿಸಿ ಕೊಡುವ ಕಾರ್ಯವನ್ನು ಮುಂದ[illegible] ಹಾಕಲಾಗಿದೆ.

೧೯ ಹಳ್ಳಿಗಳ ಸಂಬಂಧದ ಕಾರ್ಯದ ಯೋಜ[illegible] ತಯಾರಾಗಿದ್ದು ಮತ್ತೆ ೧೪ ಹಳ್ಳಿಗಳ ಬಗ್ಗೆ ಯೋಜನೆ[illegible] ಸಿದ್ಧತೆ ಮುಗಿಯುತ್ತ ಬಂದಿದೆ.

ಚಿಮ್ಮಲಗಿ, ಮಾಜರಿಕೊಪ್ಪ, ಬಿಸಾಳಕೊ[illegible] ಸಿದನಾಳ, ಹಳೆದೊಳ್ಳಿ ಹಾಗು ಬಳೂತಿ ಈ ಹಳ್ಳಿಗಳ[illegible] ಸಂಯೋಜನ ಕಾರ್ಯವನ್ನು ಈ ವರ್ಷದ ಕೊನೆಯೊ[illegible] ಗಾಗಿ ಕೈಗೆತ್ತಿಕೊಳ್ಳಲಾಗುವದು.

* * * *

ಉತ್ತರ ಕನ್ನಡ ಜಿಲ್ಹೆಯಲ್ಲಿ ವನಮಹೋತ್ಸವ

[illegible] ಹಳ್ಳಿಗಳ [illegible] ಕಾರ್ಯ

ಉತ್ತರ ಕನ್ನಡ ಜಿಲ್ಹೆಯ ಹೊನ್ನಾವರ ತಾಲೂಕಿ[illegible] [illegible] ಹಳ್ಳಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳ[illegible] [illegible] ೧,೦೦೦ ಹಣ್ಣಿನ [illegible] [illegible] ಗಿಡಗಳ ರಕ್ಷಣೆಗಾ[illegible] [illegible].

[illegible] ಹಳ್ಳಿಯ [illegible] ೪೦೦೦ [illegible] [illegible].

[illegible] ೬೦೦೦ [illegible] ಅವುಗಳಲ್ಲಿ [illegible].

* * * *

[illegible]

[illegible]

[illegible]

ಸರಕಾರಿ ಉಗ್ರಾಣ ಇಲ್ಲವೆ ಸರಕಾರವು ಬಾಡಿಗೆ[illegible]ಂದ ಹಿಡಿದ ಖಾಸಗೀ ಉಗ್ರಾಣ ಹಾಗು ಠಾಣೆ ಮತ್ತು [illegible]ರತ ಜಿಲ್ಹೆಯಲ್ಲಿಯ ನಿಯಂತ್ರಿತ ಪ್ರದೇಶದಲ್ಲಿಯ ಎಲ್ಲ [illegible]ಲ್ಲಿನ ಉಗ್ರಾಣಗಳ ಬಗ್ಗೆ ಇರುವ ಈ ಸರಕುಗಳ ಬೇಡಿಕೆಗಳನ್ನು ನಾಗರಿಕ ಪೂರೈಕೆ ಖಾತೆಯು, ಒಕ್ಕಲತನ ಉಕ್ಕು ಹಾಗು ಕಬ್ಬಿಣ ಪೂರೈಕೆ ಅಧಿಕಾರಿ ಮುಂಬಯಿ ಇವರ ಕಡೆಗೆ ಕಳಿಸುವದು. ಉಳಿದ ಖಾಸಗೀ ಬೇಡಿಕೆಗಳನ್ನು ಸಂಬಂಧಿಸಿದ ಜಿಲ್ಹಾ ಗ್ರಾಮ ಸುಧಾರಣ ಮಂಡಳವು ಇತರ ಒಕ್ಕಲತನ ಬೇಡಿಕೆಗಳೊಡನೆ ಪರಿಗಣಿಸಿ ಪೂರೈಸುವದು.

* * * *

ಒಕ್ಕಲತನ ಉದ್ದೇಶಕ್ಕಾಗಿ ಉಕ್ಕು ಹಾಗು ಕಬ್ಬಿಣ

ಒಕ್ಕಲತನ ಉದ್ದೇಶಗಳಿಗಾಗಿ ಬೇಕಾಗಿರುವ ಉಕ್ಕು ಹಾಗು ಕಬ್ಬಿಣದ ಬೇಡಿಕೆ ೫ ಹಂಡ್ರೆಡ್‌ವೇಟಿಗಿಂತ ಹೆಚ್ಚಿಗಿದ್ದರೆ ಹಾಗು ಜಿಲ್ಹಾ ಸಂಗ್ರಹದಿಂದ ಪೂರೈಸಲ್ಪಡದಂತೆ ಇದ್ದರೆ, ಅಂಥ ಎಲ್ಲ ಬೇಡಿಕೆಗಳನ್ನು ಇನ್ನು ಮುಂದೆ ನೇರವಾಗಿ ಮುಂಬಯಿಯಿಂದ ಪೂರೈಸಲಾಗುವದು. ಆದರೆ ಇದು ತಗಡುಗಳಿಗೆ ಅನ್ವಯಿಸುವದಿಲ್ಲ. ಮೇಲ್ಕಾಣಿಸಿದ ಬೇಡಿಕೆಗಳನ್ನು ಮಾತ್ರ ಎಂದಿನಂತೆ ಕಲೆಕ್ಟರ ಹಾಗು ಅಧ್ಯಕ್ಷ ಜಿಲ್ಹಾ ಗ್ರಾಮ ಸುಧಾರಣಾ ಮಂಡಳ ಇವರ ಕಡೆಗೇನೆ ಕಳಿಸಬೇಕು.

* * * *

ಒಕ್ಕಲಿಗರಿಗೆ ಉಕ್ಕು ಹಾಗು ಕಬ್ಬಿಣ

ಒಕ್ಕಲತನ ಉಕ್ಕು ಹಾಗು ಕಬ್ಬಿಣ ಪೂರೈಕೆ ಅಧಿಕಾರಿಗಳು (ಮುಂಬಯಿ) ಕಳೆದ ಆಗಸ್ಟ ತಿಂಗಳಲ್ಲಿ ರಾಜ್ಯದ ಒಕ್ಕಲಿಗರಿಗೆ, ಜಿಲ್ಹಾ ಗ್ರಾಮ ಸುಧಾರಣಾ ಮಂಡಳಗಳ ಮುಖಾಂತರ ಹಂಚುವದಕ್ಕಾಗಿ ಎಂದು ಒಟ್ಟು ೫,೪೨,೨೨೫ ರೂ. ಬೆಲೆ ಬಾಳುವ ೧,೦೫೪ ಟನ್ ಉಕ್ಕು ಹಾಗು ಕಬ್ಬಿಣ, ೭೭ ಪೈಪ ಫಿಟ್ಟಿಂಗ ಮತ್ತು ೬,೪೮೯ ಅಡಿ ಪೈಪಿಂಗಗಳನ್ನು ರಾಜ್ಯದಲ್ಲಿಯ ಬೇರೆ ಬೇರೆ ಹಂಚಿಕೆದಾರರ ಕಡೆಗೆ ಕಳುಹಿಸಿ ಕೊಟ್ಟರು.

* * * *

ಸಹಕಾರಿ ಸಂಸ್ಥೆಗಳಿಗೆ ಸ್ಟಾಂಪ ಕರದಿಂದ ಮುಕ್ತತೆ ಇಲ್ಲ

ಸಹಕಾರಿ ಸಂಘಗಳು ತಮಗೆ ಸಲ್ಲಬೇಕಾದ ಹಣ ಮುಟ್ಟಿದ ಬಗ್ಗೆ ಪಾವತಿ ಕೊಡುವಾಗ, ಸ್ಟಾಂಪ ಕರದಿಂದ ಅವುಗಳಿಗೆ ಮುಕ್ತತೆ ಇಲ್ಲವೆಂಬುದನ್ನು ಸಂಬಂಧಿಸಿದವರೆಲ್ಲ ಗಮನಿಸಬೇಕು. ಇತ್ತೀಚೆಗೆ ಒಂದು ಸಹಕಾರಿ ಸಂಘವು ಇಂಥ ಮುಕ್ತತೆ ಬೇಡಿದ್ದನ್ನು ಅನುಲಕ್ಷಿಸಿ ಸರಕಾರವು ಈ ವಿಷಯವನ್ನು ಸ್ಪಷ್ಟಪಡಿಸ ಬಯಸಿದೆ.

* * * *

ಒಕ್ಕಲತನ ಪ್ರಾತ್ಯಕ್ಷಿಕಾ ಕೇಂದ್ರಗಳು

ಸುರತ ಜಿಲ್ಹೆಯಲ್ಲಿ ೨೫ ಹೊಸ ಒಕ್ಕಲತನ ಪ್ರಾತ್ಯಕ್ಷಿಕಾ ಕೇಂದ್ರಗಳನ್ನು ತೆರೆಯಲಾಗುತ್ತಿದೆ.

* * * *

ಯಾತದ ನೀರಾವರಿಗೆ ಸಹಾಯ

ಕೊಲ್ಹಾಪುರ ಜಿಲ್ಹೆಯ ಹಾತಕಣಲೆ ತಾಲೂಕಿನ ಟಾವರೆ ಸಹಕಾರಿ ಯಾತದ ನೀರಾವರಿ ಸಂಘ ಲಿ. ಇದಕ್ಕೆ ೨,೮೮,೯೫೦ ರೂ. ಸಾಲ ಹಾಗು ೨,೨೪,೬೭೦ ರೂ. ಸಹಾಯಧನ ಕೊಡಮಾಡಲಾಗಿದೆ. ಈ ಸಂಘವು ೨೦೯೨ ಎಕರೆ ಭೂಮಿಗೆ ನೀರುಣಿಸಲಿದೆ.

ಇದರಂತೆಯೆ ದ. ಸಾತಾರೆ ಜಿಲ್ಹೆಯ ವಾಳ್ವಾ ತಾಲೂಕಿನ ಕುಂದಲವಾಡಿಯ ಶ್ರೀ. ಬಜರಂಗ ಬಲಿ ಸಹಕಾರಿ ಯಾತದ ನೀರಾವರಿ ಸಂಘ ಲಿ. ಇದಕ್ಕೆ ೪೫,೯೫೫ ರೂ. ಸಾಲ ಹಾಗು ೪೫,೧೮೫ ರೂ. ಸಹಾಯಧನ ಕೊಡಮಾಡಲಾಗಿದೆ. ಈ ಸಂಘವು ೩೮೦ ಎಕರೆ ಭೂಮಿಗೆ ನೀರುಣಿಸಲಿದೆ.

* * * *

ಅಹಮ್ಮದನಗರ ಜಿಲ್ಹೆಯಲ್ಲಿ ಒಕ್ಕಲತನ ಪ್ರಾತ್ಯಕ್ಷಿಕಾ ಕೇಂದ್ರ

ಅಹಮ್ಮದನಗರ ಜಿಲ್ಹೆಯಲ್ಲಿ ನಾಲ್ಕು ಹೊಸ ಒಕ್ಕಲತನ ಪ್ರಾತ್ಯಕ್ಷಿಕಾ ಕೇಂದ್ರಗಳನ್ನು ತೆರೆಯಲಾಗುವದು.

೧೯೫೨-೫೩ ರ ಬೆಲ್ಲದ ಹುಟ್ಟುವಳಿ ಸ್ಪರ್ಧೆ ಸೇರಲು ಇನ್ನು ಅವಕಾಶವಿಲ್ಲ.

ಕಬ್ಬಿನ ಕೊಯಲಿನ ಕಾಲವು ಸಮೀಪಿಸಿದುದರಿಂದ, ೧೯೫೨-೫೩ ರ ಬೆಲ್ಲದ ಅತ್ಯಧಿಕ ಹುಟ್ಟುವಳಿ ಸ್ಪರ್ಧೆಯಲ್ಲಿ ಇನ್ನು ಮೇಲೆ ಸೇರಲು ಅವಕಾಶವೀಯಲಾಗುವದಿಲ್ಲ.

೧೯೫೩-೫೪ ರ ಸ್ಪರ್ಧೆಯಲ್ಲಿ ಸೇರುದಗಾಗಿ ಕೊನೆಯ ದಿನಾಂಕ ಮಾರ್ಚ ೩೧, ೧೯೫೩ ಇದೆ. ಆ ನಂತರ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶ ದೊರೆಯದು.

ಸರಕಾರದಿಂದ ಪಡೆವ ವಿವಿಧ ಸಾಲಗಳಿಗೆ ಆಕರಿಸಲಾಗುವ ಬಡ್ಡೀ ದ[..]

ಮುಂಬಯಿ ಸರಕಾರವು ಇನ್ನು ಮುಂದೆ ತಾನು ಕೊಡಮಾಡುವ ಎಲ್ಲ ಬಗೆಯ ಸಾಲಗಳಿಗೆ ಈ ಕೆಳಗೆ ಕಾಣಿ[..]ದಂತೆ ಬಡ್ಡೀ ದರಗಳನ್ನು ಹಾಕಿಕೊಟ್ಟಿದೆ. ಈ ಪರಿಷ್ಕೃತ ದರಗಳು ಆಗಸ್ಟ ೨೧, ೧೯೫೨ ರಿಂದ ಅಮಲಿನಲ್ಲಿ ಬಂದಿವೆ.

ಸಾಲ ಕೊಡುವ ಖಾತೆ	ಸಾಲ ಕೊಟ್ಟ ಉದ್ದೇಶ ಇಲ್ಲವೆ ಯೋಜನೆ	ಬಡ್ಡೀ ದರ
ಕಂದಾಯ ಖಾತೆ:	ಮಹಾಪೂರ, ಬೆಂಕಿ ಇಲ್ಲವೆ ಬಿರುಗಾಳಿಗಳಿಂದ ನಾಶವಾದ ಕಟ್ಟಡಗಳನ್ನು ಕಟ್ಟಿಸಿಕೊಳ್ಳಲು ಬಡವರಿಗೆ ಕೊಡುವ ಸಾಲ	ಮೊದಲು ಎರಡು ವರ್ಷಗ[..] ವರೆಗೆ ೪½% ಮುಂದೆ ೫[..]
ಶಿಕ್ಷಣ ಖಾತೆ:	ಎಂಜಿನೀಯರಿಂಗ ಕಾಲೇಜಗಳಲ್ಲಿ ಕಲಿಯುವ ಬಡ ಹಾಗು ಯೋಗ್ಯ ವಿದ್ಯಾರ್ಥಿಗಳಿಗೆ ಕೊಡುವ ಸಾಲ ಶಿಷ್ಯವೃತ್ತಿ (ಈ ಶಿಷ್ಯವೃತ್ತಿಯು ಹಣ ಒಬ್ಬ ವಿದ್ಯಾರ್ಥಿಗೆ ವರುಷಕ್ಕೆ ೭೦೦ ರೂ. ಇದೆ).	೪½%
ಒಕ್ಕಲತನ ಹಾಗು ಅರಣ್ಯ ಖಾತೆ:	[illegible] ಕೊಳ್ಳಲು [illegible] ಕೊಡಲಾಗುವ ಸಾಲ.	೪½%
ಸ್ಥಾನಿಕ ಸ್ವರಾಜ್ಯ ಹಾಗು ಸಾರ್ವಜನಿಕ ಆರೋಗ್ಯ ಖಾತೆ:	ಗ್ರಾಮ ಪಂಚಾಯತಗಳಿಗೆ [illegible] ಕೊಡುವ ಸಾಲ.	೪½%
ಒಕ್ಕಲತನ ಹಾಗು ಅರಣ್ಯ ಖಾತೆ:	ಬೀಳು ಭೂಮಿಗಳಲ್ಲಿಯ [illegible] ಕೊಡುವ ಸಾಲ.	೪½%
ಶಿಕ್ಷಣ ಖಾತೆ:	[illegible]	೪½% (ಸಾಲವನ್ನು ತಿರುಗಿ ಮುಟ್ಟಿ[..]ಸುವ ಸಮಯಕ್ಕೆ)
ಅಭಿವೃದ್ಧಿ ಖಾತೆ:	[illegible]	೪½%
ಅಭಿವೃದ್ಧಿ ಖಾತೆ:	[illegible] (ಅ) [illegible]	೪½%
	(ಬ) [illegible]	೪½%
	(ಕ) [illegible]	[illegible] ಇದ್ದರೆ ೪½% ಇಲ್ಲದಿದ್ದರೆ ೪½%
ಅಭಿವೃದ್ಧಿ ಖಾತೆ:	[illegible]	೪½%

ನವ್ಹೆಂಬರ ತಿಂಗಳದ ಹೊಲಗೆಲಸ

ಸೆಜ್ಜೆ, ಸೇಂಗಾ, ಹೆಸರು, ಉದ್ದು ಮೊದಲಾದ ಮುಂಗಾರಿ ಬೆಳೆಯ ಕೊಯ್ಲು ಮುಗಿದ ಕೂಡಲೆ ಹೊಲಗಳಲ್ಲಿ ನೇಗಿಲು ಹೊಡೆಯಬೇಕು. ಈ ಹೊತ್ತಿನಲ್ಲಿ ಮಣ್ಣಿನಲ್ಲಿ ಸಾಕಷ್ಟು ಹಸಿ ಇರುವದರಿಂದ ನೇಗಿಲು ಹೊಡೆಯುವದು ಸುಲಭವಾಗುವದಲ್ಲದೆ ಮಣ್ಣು ಚೆನ್ನಾಗಿ ಪುಡಿಯಾಗುವದು. ಇದಲ್ಲದೆ ಭೂಮಿ ಮುಂದಿನ ಮುಂಗಾರಿ ಹಂಗಾಮಿನ ವರೆಗೆ ಚೆನ್ನಾಗಿ ಬಿಸಿಲು ತಿನ್ನುವದು. ನೇಗಿಲು ಹೊಡೆಯುವಾಗ ಮೇಲೆದ್ದ ಆಳ ಬೇರುಳ್ಳ ಕರಿಕೆ ಇತ್ಯಾದಿ ಕಸ ಹಾಗು ಕೀಟಗಳ ತತ್ತಿಗಳು ಬಿಸಿಲಿಗೆ ನಾಶವಾಗಿ ಹೋಗುವವು. ತೀವ್ರ ನೇಗಿಲು ಹೊಡೆಯುವದರಿಂದ ಮಣ್ಣು ಚೆನ್ನಾಗಿ ಹದಗೊಳ್ಳುವದಲ್ಲದೆ ಅದರ ಫಲವತ್ತತೆಯೂ ಹೆಚ್ಚುವದು.

ಸಾಕಷ್ಟು ಹಸಿ ಇರುವ ಕೆಲ ಭೂಮಿಗಳಲ್ಲಿ ಕಡಲೆ, ಗೋದಿ ಮೊದಲಾದವುಗಳನ್ನು ಬೆಳೆದುಕೊಳ್ಳಬಹುದು. ಆದರೆ ಇಂಥ ಸಂದರ್ಭದಲ್ಲಿ ನೇಗಿಲು ಹೊಡೆಯಕೂಡದು. ಕೇವಲ ಹರಗಿ ಬಿಡಬೇಕು.

ಬತ್ತ

ಈ ತಿಂಗಳ ಕೊನೆಯೊಳಗಾಗಿ ಬತ್ತದ ಬೆಳೆಯ ಕೊಯ್ಲು ಮುಗಿದಿರುತ್ತದೆ. ಬೆಳೆಯನ್ನು ಒಕ್ಕಿ ಚೆನ್ನಾಗಿ ಸಂಗ್ರಹಿಸಬೇಕು ಇಲ್ಲವೆ ಸರಕಾರಕ್ಕೆ ಮಾರಬೇಕು. ಬತ್ತದ ರಾಶಿ ಮುಗಿದ ಮೇಲೆ ಗದ್ದೆಯಲ್ಲಿ ಸಾಕಷ್ಟು ಹಸಿ ಉಳಿದಿದ್ದರೆ ಅವರೆಯನ್ನು ಎರಡನೆ ಬೆಳೆಯೆಂದು ಬೆಳೆದುಕೊಳ್ಳಬಹುದು.

ಸೆಜ್ಜೆ

ಸೆಜ್ಜೆ ಹಾಗು ಅದರೊಟ್ಟಿಗೆ ಬೆಳೆದ ಮಡಿಕೆ ಉದ್ದು ಮೊದಲಾದ ಅಕ್ಕಡಿ ಕಾಳುಗಳ ಕೊಯ್ಲು ಈಗಾಗಲೆ ಮುಗಿದಿರಬಹುದು. ತೊಗರಿ ಬೆಳೆ ಮಾತ್ರ ಇನ್ನೂ ಹೊಲದಲ್ಲಿ ನಿಂತಿರಬಹುದು. ತೊಗರಿಯನ್ನು ಸಾಲುಗಳಲ್ಲಿ ಬೆಳೆಯಲಾಗಿದ್ದರೆ ಸಾಲುಗಳ ನಡುವೆ ನೇಗಿಲು ಹೊಡೆದು ಹರಗಬೇಕು. ಇದರಿಂದ ಮುಂದಿನ ವರುಷದ ಬೆಳೆಗಳಿಗಾಗಿ ಭೂಮಿಯನ್ನು ಹದಗೊಳಿಸಿದಂತೆಯೂ ಆಗುವದು. ಕೊಯ್ದ ಸೆಜ್ಜೆಯನ್ನು ಒಕ್ಕಿ ತೂರಬೇಕು.

ಜೋಳ

ಮುಂಗಾರಿ ಜೋಳ ಮಾಗಿದಲ್ಲೆಲ್ಲ ಅದನ್ನು ಕೊಯ್ಯಬೇಕು. ಹಿಂಗಾರಿ ಜೋಳ ಬೆಳೆದು ನಿಂತಿರಬಹುದು. ಅವಶ್ಯವೆನಿಸಿದರೆ ಅದರಲ್ಲಿ ಎಡೆ ಹೊಡೆಯಬೇಕು. ಮುಂಗಾರಿ ಕಣಿಕಿ ಜೋಳವನ್ನು ಸಂಪೂರ್ಣ ಒಣಗಿಸಿ ಚೆನ್ನಾಗಿ ಬಣವಿ ಒಟ್ಟಬೇಕು.

ಗೋದಿ

ಅಕ್ಟೋಬರ ತಿಂಗಳ ಮಧ್ಯದಲ್ಲಿ ಬಿತ್ತಿದ ಬೆಳೆ ಚೆನ್ನಾಗಿ ಬೆಳೆದು ನಿಂತಿರಬಹುದು. ಅದಕ್ಕೆ ಯಾವ ಕೆಲಸವೂ ಅವಶ್ಯವಿಲ್ಲ. ನೀರಾವರಿ ಗೋದಿ ಇದ್ದರೆ ಈ ತಿಂಗಳ ಮೊದಲ ವಾರದಲ್ಲಿ ಎರಡನೆ ಸಲ ನೀರು ಹಾಯಿಸಬೇಕು. ಕಸ ಹೆಚ್ಚಾಗಿ ಬೆಳೆದಿದ್ದರೆ ಅದನ್ನು ಕಿತ್ತಬೇಕು. ಮುಂಗಾರಿ ಬೆಳೆಗಳ ರಾಶಿಯಾದ ಮೇಲೆ ಗೋದಿಯನ್ನು ಎರಡನೆ ಬೆಳೆಯೆಂದೂ ಬೆಳೆಯಬಹುದು. ಭೂಮಿಗೆ ನೀರುಣಿಸಿ ಹದ ಮಾಡಿ ಈ ತಿಂಗಳ ಕೊನೆಯೊಳಗಾಗಿ ಗೋದಿಯನ್ನು ಬಿತ್ತಬಹುದು.

ಸೇಂಗಾ

ಸ್ಪ್ಯಾನಿಶ್ ಜಾತಿಯ ಸೇಂಗಾದಂಥ ತೀವ್ರ ಫಲ ಕೊಡುವ ಸೇಂಗಾದ ರಾಶಿ ಅಕ್ಟೋಬರ ತಿಂಗಳ ಕೊನೆಯೊಳಗಾಗಿ ಮುಗಿದಿರಲಿಕ್ಕೇ ಬೇಕು. ದೊಡ್ಡ ಜವಾರ

ಹಾಗು ಪಾಂಡಿಚೇರಿ ಮೊದಲಾದ ತಡವಾಡಿ ಫಲ ಕೊಡುವ ಜಾತಿಯ ಸೇಂಗಾ ರಾಶಿಯನ್ನು ಈ ತಿಂಗಳಲ್ಲಿ ಮಾಡಬೇಕು. ರಾಶಿಯಾದ ಮೇಲೆ ಮಣ್ಣನ್ನು ಸಡಿಲು ಮಾಡಲು ಹಗುರು ನೇಗಿಲು ಹೊಡೆಯಬೇಕು. ಇದಕ್ಕಾಗಿ ಶೊವ್ವೆಲ್ ಕಲ್ಟಿವೇಟರುಗಳನ್ನು ಉಪಯೋಗಿಸಬಹುದು. ಮಣ್ಣನ್ನೆಲ್ಲ ಉದುರಿಸಿ ಸೇಂಗಾ ಆರಿಸಬೇಕು. ಸೊಪ್ಪಿ ಸಹಿತ ಸೇಂಗಾವನ್ನು ಚೆನ್ನಾಗಿ ಒಣಗಿಸಿ ಸಂಗ್ರಹಿಸಬೇಕು ಇಲ್ಲವೆ ಮಾರಬೇಕು.

ಹತ್ತಿ

ಸಪ್ಟೆಂಬರ ತಿಂಗಳಲ್ಲಿ ಬಿತ್ತಿದ ಹತ್ತಿ ಬೆಳೆಯು [illegible] ಬಹುದು. ಎಡೆ ಹೊಡೆಯುವ ಹಾಗು ಕಳೆ ಕಿತ್ತುವ ಕಾರ್ಯವನ್ನು ಬಿಡದೆ ಮುಂದರಿಸಬೇಕು.

ತಂಬಾಕು

ಈ ತಿಂಗಳಲ್ಲಿ ಬೆಳೆ ಸಂಪೂರ್ಣ ಬೆಳೆದಿರಬಹುದು. ಮಗ್ಗಲಿನ ಕುಡಿಗಳನ್ನು ಕತ್ತರಿಸುವ ಕಾರ್ಯವನ್ನು ಮುಂದುವರಿಸಬೇಕು. ಅಂದರೆ ತಂಬಾಕು ಉತ್ತಮ ತರಗತಿಯದಾಗುವದು.

ಕಬ್ಬು

ಆಡಸಲಿ ಕಬ್ಬನ್ನು [illegible] ಕಾರ್ಯವನ್ನು ಮುಂದುವರಿಸಬೇಕು. [illegible] ಹೊಸ ಕಬ್ಬು ನೆಡುವದಕ್ಕಾಗಿ ಭೂಮಿಯನ್ನು [illegible] ಗೊಳಿಸಬೇಕು. ಭೂಮಿಯಲ್ಲಿ [illegible] ಆಳ ನೇಗಿಲು ಹೊಡೆದು ಚಕ್ರಗುಂಟೆಯಿಂದ [illegible] ಗಳನ್ನು ಸಿದ್ಧಗೊಳಿಸಬೇಕು. [illegible] ದಿದ್ದರೆ ಚಕ್ರಗುಂಟೆಯಿಂದ ಒಂದು ಸಲ ಹರಗಿದರೆ ಸಾಕು. ಆ ಮೇಲೆ ಒಂದೆರಡು ಸಲ ಸಾದಾ ಕುಂಟೆಯಿಂದ ಹರಗಬೇಕು. ನಂತರ "ರಿಜ್ಜರ" ಉಪಕರಣದಿಂದ ೪ ಅಡಿ ಅಂತರವುಳ್ಳ ಸಾಲುಗಳನ್ನು ತಯಾರಿಸಬೇಕು.

ಗೆಣಸು

ಮುಂಗಾರಿ ಹಂಗಾಮಿನಲ್ಲಿ ನಟ್ಟ ಬೆಳೆ ಈಗ ಅಗಿಯಲು ಸಿದ್ಧವಾಗಿರಬಹುದು. ಮಾರ್ಚ ತಿಂಗಳಲ್ಲಿ ಬೆಳೆ ಬರಲು ಈಗ ಮತ್ತೆ ಗೆಣಸನ್ನು ನೆಡಬೇಕು. ಗೆಣಸು [illegible] ಮಾರಾಟವಾಗದಿದ್ದರೆ ಅದನ್ನು ಕುದಿಸಿ ಒಣಗಿಸಿ ಸಂಗ್ರಹಿಸಬೇಕು. ಅಂದರೆ ಅದಕ್ಕೆ ಹುಳ ಹತ್ತದಂತೆ ಬಹಳ ದಿನ ಸಂಗ್ರಹಿಸಿಡಲು ಸಾಧ್ಯವಾಗುವದು. ಗೆಣಸು ಒಂದು ಎಕರೆಗೆ [illegible] ಬೆಳೆಗಳಗಿಂತಲೂ ಹೆಚ್ಚು ಆಹಾರವನ್ನು ಒದಗಿಸುವದಲ್ಲದೆ ಉತ್ತಮ ಕಾಯಿಪಲ್ಲೆಯೂ ಆಗಿದೆ.

[illegible] ಫಲ ಬರುವಂತೆ ಬದನೆ, ಚಪ್ಪರ ಬದನೆಗಳನ್ನು ಈ ತಿಂಗಳಲ್ಲಿ ನೆಡಬೇಕು.

ಕ್ಯಾಬೇಜ, ಕಾಲಿಫ್ಲಾವರ ಇ.

[illegible] ತಿಂಗಳಲ್ಲಿ ಸಸಿ ಹಚ್ಚಿರದೆ ಇದ್ದರೆ ಈ ತಿಂಗಳ [illegible] ಸಸಿ ಹಚ್ಚಬೇಕು [illegible] ಬೆಳೆಯು [illegible].

ಉಳ್ಳಿಗಡ್ಡೆ ಹಾಗು ಬಳ್ಳೊಳ್ಳಿ

ಈ ತಿಂಗಳಲ್ಲಿ ಸಸಿ ಹಚ್ಚುವ ಕಾರ್ಯವನ್ನು [illegible].

ಬೇಸಾಯದ ವಾರ್ತೆ

[ಸಪ್ಟೆಂಬರ ೧೯೫೨]

ಮಳೆ—ಬೆಳೆ

ಕಳೆದ ಸಪ್ಟೆಂಬರ ತಿಂಗಳಲ್ಲಿ ಇಡಿ ಮುಂಬಯಿ ರಾಜ್ಯದಲ್ಲೆಲ್ಲ, ಮಳೆಯ ಅಭಾವದಿಂದಾಗಿ ಬೆಳೆಗಳ ಪರಿಸ್ಥಿತಿಯ ಬಗ್ಗೆ ರೈತರೆಲ್ಲ ವಿಶೇಷ ವಿವಂಚನೆಗೀಡಾದರು. ತಿಂಗಳ ಕೊನೆಯ ಅರ್ಧ ಭಾಗದಲ್ಲಿ ಅಲ್ಲಲ್ಲಿ ಅಲ್ಪಸ್ವಲ್ಪ ಮಳೆಯಾದರೂ ಬೆಳೆಗಳಿಗೆ ಸಾಕಾಗುವಷ್ಟು ಹಸಿ ದೊರೆಯಲಿಲ್ಲ. ಅನೇಕ ಭಾಗಗಳಲ್ಲಿ ಬೆಳೆಗಳು ಒಣಗುತ್ತಿದ್ದವೆಂದು ವರದಿಯಾಗಿದೆ. ಕಳೆ ತೆಗೆಯುವದು, ಎಡೆ ಹೊಡೆಯುವದು, ಮುಂಗಾರಿ ಪೈರುಗಳ ಕೊಯ್ಲು ಹಾಗು ಹಿಂಗಾರಿ ಬೆಳೆಗಳ ಬಿತ್ತಿಗೆ ಇವು ರಾಜ್ಯದಲ್ಲಿ ನಡೆದ ಮುಖ್ಯ ಹೊಲಗೆಲಸಗಳಾಗಿದ್ದವು.

ಬೆಳೆ ಸಂರಕ್ಷಣೆ

ಆ ತಿಂಗಳಲ್ಲಿ ಹಲವಾರು ಜಿಲ್ಹೆಗಳಿಂದ ಬೆಳೆಗಳ ರೋಗರುಜಿನ ಹಾಗು ಕ್ರಿಮಿಕೀಟಗಳ ಬಗ್ಗೆ ವರದಿಗಳು ಬಂದವು. ಪುಣೆ ಜಿಲ್ಹೆಯ ಕೆಲ ಭಾಗಗಳಲ್ಲಿ ಬತ್ತಕ್ಕೆ ದೇಟು ಕೊರೆಯುವ ಹುಳ ಹಾಗು ನೀಲ ಕೀಟ ತಗಲಿದ ವರದಿಯಾಗಿದೆ. ಅಹಮ್ಮದನಗರ ಜಿಲ್ಹೆಯ ಕೆಲವೆಡೆಗಳಲ್ಲಿ ಹತ್ತಿಗೆ ಕರೇಹುಳ, ಸೀರು ಹಾಗು ಕಾಯಿಯ ಹುಳಗಳು ಗಂಟುಬಿದ್ದವು. ನಾಸೀಕ ಜಿಲ್ಹೆಯ ಕೆಲ ಭಾಗಗಳಲ್ಲಿ ಬತ್ತಕ್ಕೆ ಬೆಂಕೀ ರೋಗ, ಹಾಗು ಕಬ್ಬಿಗೆ ಗರಿತಿನ್ನುವ ಹುಳ ಮತ್ತು ಜಿಟ್ಟಿಗಳು ತಗಲಿದವು. ಬತ್ತಕ್ಕೆ ರತ್ನಾಗಿರಿ ಜಿಲ್ಹೆಯಲ್ಲಿ ಬೆಂಕೀ ರೋಗ ಹಾಗು ಅಹಮ್ಮದಾಬಾದ ಜಿಲ್ಹೆಯಲ್ಲಿ ಜಿಗಿ ತಗಲಿದವು. ಉತ್ತರ ಸಾತಾರೆ ಜಿಲ್ಹೆಯಲ್ಲಿ ಬತ್ತ ಹಾಗು ಸೆಜ್ಜೆಗಳಿಗೆ ಕೋರೀ ಹುಳಗಳು ತಗಲಿದವೆಂದೂ ಬೆಳಗಾವಿ ಜಿಲ್ಹೆಯಲ್ಲಿ ಜಿಟ್ಟಿ ಹಾಗು ಸೀರುಗಳ ಕಾಟವಾಯಿತೆಂದೂ ವರದಿಯಾಗಿದೆ. ಈ ಎಲ್ಲ ಪ್ರಸಂಗಗಳಲ್ಲಿ ರಾಜ್ಯದ ಒಕ್ಕಲತನ ಖಾತೆಯು ತಾತ್ಕಾಲಿಕವಾಗಿ ನಿಯಂತ್ರಣೋಪಾಯಗಳನ್ನು ಕೈಕೊಂಡಿತು.

ವಿಜಾಪುರ, ಸೊಲ್ಲಾಪುರ ಹಾಗು ನಾಸೀಕ ಜಿಲ್ಹೆಗಳ ಕೆಲ ಭಾಗಗಳಲ್ಲಿ ಮೇವು ಹಾಗು ನೀರಿನ ಕೊರತೆಯೆನಿಸಿತು. ಪಶ್ಚಿಮ ಖಾನದೇಶ, ಅಹಮ್ಮದನಗರ ಬೆಳಗಾವಿ ಹಾಗು ಧಾರವಾಡ ಜಿಲ್ಹೆಗಳಲ್ಲಿ ಮೇವಿನ ಕೊರತೆ ಕಂಡುಬಂದಿತು.

ಬೀಜ ಹಾಗು ಗೊಬ್ಬರದ ಪೂರೈಕೆ

ರಾಜ್ಯದ ಒಕ್ಕಲತನ ಖಾತೆಯು ಆಗಸ್ಟ ತಿಂಗಳಲ್ಲಿ ಆಹಾರ ಧಾನ್ಯಗಳ ೬,೭೮೦ ಟನ್ನು ಸುಧಾರಿಸಿದ ಬೀಜಗಳನ್ನು ಒಕ್ಕಲಿಗರಿಗೆ ಪೂರೈಸಿತೆಂದು ಆ ಖಾತೆಯ ವರದಿಯಿಂದ ತಿಳಿದುಬರುತ್ತದೆ. ಆಹಾರ ಬೆಳೆಗಳಿಗೆ ಹಾಕುವದಕ್ಕಾಗಿ ಖಾತೆಯು ೩,೧೯೫ ಟನ್ ಗೊಬ್ಬರ ಮಿಶ್ರಣವನ್ನೂ ಒಕ್ಕಲಿಗರಿಗೆ ಒದಗಿಸಿತು.

ಕಸುವುಳ್ಳ ಗೊಬ್ಬರ ತಯಾರಿಸುವ ಆಂದೋಲನೆಯ ಪರಿಣಾಮವಾಗಿ ಹಳ್ಳಿಗಳಲ್ಲಿ ೩,೨೧೬ ಹೊಸ ತಿಪ್ಪೆಗೊಬ್ಬರ ಕುಣಿಗಳು ತೋಡಲ್ಪಟ್ಟು ೧,೮೮೦ ಕುಣಿಗಳು ತುಂಬಲ್ಪಟ್ಟವು. ೬,೦೬೦ ಹಳೆಯ ಕುಣಿಗಳೂ ಪುನಃ ತುಂಬಲ್ಪಟ್ಟವು. ಹಳ್ಳಿಗಳಲ್ಲಿ ಸುಮಾರು ೩೦,೦೦೦ ಟನ್ನು ಕಳಿತ ತಿಪ್ಪೆಗೊಬ್ಬರ ಹೊಲಗಳಿಗೆ ಸಾಗಿಸಲು ಸಿದ್ಧವಾಗಿತ್ತು. ಇದಲ್ಲದೆ ಪಟ್ಟಣಗಳಲ್ಲೂ ಮತ್ತೆ ೨೦,೦೦೦ ಟನ್ನು ತಿಪ್ಪೆಗೊಬ್ಬರ ಸಿದ್ಧವಿತ್ತು. ರಾಜ್ಯದ ೨೮ ಹಳ್ಳಿಗಳಲ್ಲಿ ಪದ್ಧತಿಗೊಬ್ಬರ ಸುಧಾರಣೆಯ ಕಾರ್ಯ ಕೊನೆಗೊಂಡಿತು. ಹಾಗು ಬೇರೆ ೩೦೪ ಹಳ್ಳಿಗಳಲ್ಲಿ ಆ ಕಾರ್ಯ ಮುಂದುವರಿದಿತ್ತು.

ಹೊಸ ಬಾವಿಗಳು

ಸರಕಾರದ ಸಹಾಯದಿಂದ ರಾಜ್ಯದ ಒಕ್ಕಲಿಗರು ೧೧೪ ಹೊಸ ಬಾವಿಗಳನ್ನು ತೋಡಿದರು. ಹಾಗು ೩೧ ಹಳೆಯ ಬಾವಿಗಳನ್ನು ದುರಸ್ತಿ ಮಾಡಿದರು. ಈ ಕಾರ್ಯಕ್ಕಾಗಿ ಸರಕಾರವು ತಗಾಯಿ ಸಾಲ ಹಾಗು ಧನ ಸಹಾಯದ ರೂಪದಲ್ಲಿ ೨ ಲಕ್ಷ ರೂ. ಗಿಂತ ಹೆಚ್ಚಿಗೆ ಹಣವನ್ನು ಮಂಜೂರ ಮಾಡಿತು.

ಬೀಳು ಭೂಮಿಗಳ ಸಾಗುವಳಿ ಹಾಗು ಪನಾಹತು ಯೋಜನೆಯನ್ವಯ ಯೋಜನೆಯ ಪ್ರದೇಶದಲ್ಲಿ ೪೫೧

ಎಕರೆ ಭೂಮಿಯನ್ನು ಮೊದಲನೆಯ ಸಲ ನೇಗಿಲ ಕೆಳಗೆ ತರಲಾಯಿತು. ಹಾಗು ೧೪ ಕುಟುಂಬಗಳನ್ನು ಹೊಸದಾಗಿ ನೆಲೆಸಿಸಲಾಯಿತು. ಕ್ರಿಮಿಕೀಟ ಹಾಗು ರೋಗ ರುಜಿನಗಳ ನಿಯಂತ್ರಣೆಗಾಗಿ ೧,೯೦೭ ಪೌಂಡು ಕ್ರಿಮಿನಾಶಕಗಳನ್ನೂ ೩೪೦ ಪೌಂಡು ಗಂಧಕದ ಹುಡಿಯನ್ನೂ ರಾಜ್ಯದ ಒಕ್ಕಲತನ ಖಾತೆಯು ಪೂರೈಸಿತು. ಮಣ್ಣಿನ ಸವಕಳಿಯನ್ನು ತಡೆಗಟ್ಟಿ ಮಣ್ಣಿನಲ್ಲಿಯ ಹಸಿಯ ಸಂರಕ್ಷಣೆಗಾಗಿ ಭೂ ಸಂರಕ್ಷಣ ವಿಭಾಗವು ೧೪೩ ಎಕರೆ ಭೂಮಿಯಲ್ಲಿ ಒಡ್ಡುಗಳನ್ನು ಹಾಕಿತು ಹಾಗು ೩ ಎಕರೆ ಕ್ಷೇತ್ರದಲ್ಲಿಯ ಹಳೆಯ ಒಡ್ಡುಗಳನ್ನು ಭದ್ರಗೊಳಿಸಿತು.

ಪಶುಸಂಪತ್ತಿನ ಸುಧಾರಣೆ

